ಮಂಗಳವಾರ, ಏಪ್ರಿಲ್ 23, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 113 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ–ಅಗಲ
ಕಾರ್ಮಿಕರನ್ನು ಬಾಧಿಸುತ್ತಿದೆ ಹವಾಮಾನ ವೈಪರೀತ್ಯ

ಗರ್ಭಪಾತಕ್ಕೆ ಸುಪ್ರೀಂ ಕೋರ್ಟ್ ಅನುಮತಿ 11

ಜಿಎಸ್‌ಟಿಗೆ ಹೊಸ ಸ್ವರೂಪ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,648	22,336	₹75,580 (ಬೆಂಗಳೂರು)	₹84,900 (ಬೆಂಗಳೂರು)	83.36

ಚುನಾವಣಾ ಆಯೋಗದ ಅನುಮತಿ– ವಾರದೊಳಗೆ ಪರಿಹಾರದ ತೀರ್ಮಾನ: ಕೇಂದ್ರದ ವಾಗ್ದಾನ

ಬರ: ರಾಜ್ಯಕ್ಕೆ ‘ಸುಪ್ರೀಂ’ ನ್ಯಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಬರ ನಿರ್ವಹಣೆಗಾಗಿ ಹಣಕಾಸು ನೆರವು ನೀಡುವ ಸಂಬಂಧ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವಿನ ಜಟಾಪಟಿ ಮತ್ತೊಂದು ಮಜಲು ತಲುಪಿದ್ದು, ನೆರವು ನೀಡುವುದರ ಕುರಿತು ಒಂದು ವಾರದಲ್ಲಿ ನಿರ್ಧಾರ ತೆಗೆದುಕೊಳ್ಳುವುದಾಗಿ ಕೇಂದ್ರ ಸರ್ಕಾರ ಸೋಮವಾರ ಸುಪ್ರೀಂ ಕೋರ್ಟ್‌ನಲ್ಲಿ ವಾಗ್ದಾನ ನೀಡಿದೆ.


ಕೋರ್ಟ್‌ನಲ್ಲಿ ವಿಚಾರಣೆ ಕಾಲಕ್ಕೆ, ‘ಕರ್ನಾಟಕದಲ್ಲಿ ಬರ ನಿರ್ವಹಣೆಗೆ ಹಣಕಾಸು ನೆರವು ನೀಡುವಂತೆ ರಾಜ್ಯ ಸರ್ಕಾರ ಮುಂದಿಟ್ಟಿರುವ ಬೇಡಿಕೆಯನ್ನು ಈಡೇರಿಸಲು ಚುನಾವಣಾ ಆಯೋಗ ಅನುಮತಿ ನೀಡಿದೆ’ ಎಂದು ಕೇಂದ್ರ ಮಾಹಿತಿ ನೀಡಿದೆ. ‘ಇದು ರಾಜ್ಯಕ್ಕೆ ಸಿಕ್ಕಿರುವ ಜಯ’ ಎಂದು ಪ್ರತಿಪಾದಿಸಿರುವ ರಾಜ್ಯ ಸರ್ಕಾರ, ‘ವಾರದೊಳಗೆ ಬರ ಪರಿಹಾರ ಬಿಡುಗಡೆಯಾಗಲಿದ್ದು, ಸುಪ್ರೀಂ ಕೋರ್ಟ್‌ನ ಮಧ್ಯ ಪ್ರವೇಶದಿಂದ ರಾಜ್ಯಕ್ಕೆ ನ್ಯಾಯ ಸಿಕ್ಕಿದೆ’ ಎಂದು ಅಭಿಪ್ರಾಯಪಟ್ಟಿದೆ.

ಬರ ಪರಿಹಾರ ಕೋರಿ ರಾಜ್ಯ ಸರ್ಕಾರ ಹಲವು ಬಾರಿ ಕೇಂದ್ರಕ್ಕೆ ಮನವಿ ಸಲ್ಲಿಸಿತ್ತು. ಅದಕ್ಕೆ ಸ್ಪಂದನ ಸಿಗದೇ ಇದ್ದುದರಿಂದ, ‘ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ತಾರತಮ್ಯ ಮಾಡುತ್ತಿದ್ದು, ರಾಜ್ಯಕ್ಕೆ ದ್ರೋಹ ಎಸಗಿದೆ’ ಎಂದು ರಾಜ್ಯದಲ್ಲಿರುವ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಆಕ್ರೋಶ ವ್ಯಕ್ತಪಡಿಸಿತ್ತು. ಬರಪರಿಹಾರ, ತೆರಿಗೆ ನ್ಯಾಯಕ್ಕಾಗಿ ದೆಹಲಿಯಲ್ಲಿ ಪ್ರತಿಭಟನೆಯನ್ನೂ ಸರ್ಕಾರ ನಡೆಸಿತ್ತು. ವಿಳಂಬವಾಗಿ ಮನವಿ ಸಲ್ಲಿಸಿದ್ದಕ್ಕೆ ಪರಿಹಾರ ನೀಡಲು ಸಾಧ್ಯವಾಗಿಲ್ಲ; ಇದರ ಹಿಂದೆ ಯಾವುದೇ ದುರುದ್ದೇಶವಿಲ್ಲ ಎಂದು ಕೇಂದ್ರ ಸರ್ಕಾರ ಹಲವು ಬಾರಿ ಹೇಳಿತ್ತು. ಬಳಿಕವೂ ‘ಸಂಘರ್ಷ’ ಮುಂದುವರಿದಿತ್ತು.

ಈ ಬೆಳವಣಿಗೆಗಳ ಬಳಿಕ ರಾಜ್ಯ ಸರ್ಕಾರ, ಬರ ಪರಿಹಾರ ಕೊಡಿಸುವಂತೆ ಕೋರಿ ಸುಪ್ರೀಂ ಕೋರ್ಟ್ ಮೊರೆಹೋಗಿತ್ತು. ಸೋಮವಾರ ಈ ಅರ್ಜಿ ವಿಚಾರಣೆಗೆ ಬಂದಿತ್ತು.

10ನೇ ಪುಟ ನೋಡಿ

ರಾಜ್ಯ ಸರ್ಕಾರ ಕೇಳಿದ ಬರ ಪರಿಹಾರದ ವಿವರ



₹18,171.48 ಕೋಟಿ ರಾಜ್ಯ ಸರ್ಕಾರವು ಬರ ಪರಿಹಾರದ ಸಲುವಾಗಿ ಕೇಂದ್ರ ಸರ್ಕಾರದಿಂದ ಕೇಳಿದ ಒಟ್ಟು ನೆರವು

₹4,663.12 ಕೋಟಿ ಬೆಳೆ ನಷ್ಟ ಪರಿಹಾರಕ್ಕೆ ಕೇಳಲಾದ ಮೊತ್ತ

₹363.68 ಕೋಟಿ ಜಾನುವಾರುಗಳಿಗೆ ಶಿಬಿರ, ಮೇವು ಪೂರೈಕೆ ಮತ್ತು ಔಷಧಗಳ ಒದಗಿಸಲು ಕೇಳಲಾದ ಮೊತ್ತ


₹12,577.9 ಕೋಟಿ ಬರದ ತೀವ್ರತೆಗೆ ಗುರಿಯಾದ ಕುಟುಂಬಗಳಿಗೆ ನೆರವು ಒದಗಿಸಲು ಕೇಳಲಾದ ಮೊತ್ತ

₹566.78 ಕೋಟಿ ಬರದ ಸಂದರ್ಭದಲ್ಲಿ ಕುಡಿಯುವ ನೀರು ಒದಗಿಸುವ ಕಾಮಗಾರಿಗೆ ಕೇಳಲಾದ ಮೊತ್ತ




> ನಾವು ಒಕ್ಕೂಟ ವ್ಯವಸ್ಥೆಯಲ್ಲಿದ್ದೇವೆ. ಇದೆಲ್ಲವೂ ಸೌಹಾರ್ದಯುತವಾಗಿ ನಡೆಯಬೇಕು
> **ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಹಾಗೂ ಸಂದೀಪ್ ಮೆಹ್ತಾ ಪೀಠ**

2023–24ನೇ ಸಾಲಿನಲ್ಲಿ ಕರ್ನಾಟಕಕ್ಕೆ ನರೇಗಾ ಯೋಜನೆ ಅಡಿ ಒಟ್ಟು 13 ಕೋಟಿ ಮಾನವ ದಿನಗಳಷ್ಟು (ಎಂಟು ಗಂಟೆಗಳ ಒಂದು ಕೆಲಸವನ್ನು ಒಂದು ಮಾನವ ದಿನ ಎಂದು ಪರಿಗಣಿಸಲಾಗುತ್ತದೆ. 100 ಮಂದಿ ಒಂದೇ ದಿನದಲ್ಲಿ ಎಂಟು ತಾಸು ಕೆಲಸ ಮಾಡಿದರೆ, ಅದನ್ನು 100 ಮಾನವ ದಿನಗಳು ಎಂದು ಪರಿಗಣಿಸಲಾಗುತ್ತದೆ) ಉದ್ಯೋಗವನ್ನು ಕೇಂದ್ರ ಸರ್ಕಾರವು ಹಂಚಿಕೆ ಮಾಡಿತ್ತು. ತೀವ್ರ ಬರದ ಸ್ಥಿತಿ ಇರುವ ಕಾರಣದಿಂದ ರಾಜ್ಯ ಸರ್ಕಾರವು ಈಗಾಗಲೇ 12.40 ಕೋಟಿ ಮಾನವ ದಿನಗಳಷ್ಟು ಉದ್ಯೋಗವನ್ನು ಒದಗಿಸಿದೆ. ಈ ಆರ್ಥಿಕ ವರ್ಷದ ಅಂತ್ಯದವರೆಗೆ ರಾಜ್ಯದ ಜನರಿಗೆ ಉದ್ಯೋಗ ಖಾತರಿಯನ್ನು ಒದಗಿಸಲು ಇನ್ನೂ ಹೆಚ್ಚುವರಿಯಾಗಿ 5 ಕೋಟಿ ಮಾನವ ದಿನಗಳವರೆಗೆ ವಿಸ್ತರಿಸಬೇಕು ಎಂದು ರಾಜ್ಯ ಸರ್ಕಾರ ಮನವಿ ಮಾಡಿತ್ತು.



> 2023ರ ಸೆಪ್ಟೆಂಬರ್‌ನಲ್ಲಿ ಸಲ್ಲಿಸಲಾಗಿದ್ದ ನಮ್ಮ ಮನವಿ ಬಗ್ಗೆ ಕೇಂದ್ರ ಸರ್ಕಾರ ನಿರ್ಧಾರ ಕೈಗೊಳ್ಳದ ಕಾರಣ, ಬರ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದ ವಿರುದ್ಧ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಲಾಗಿತ್ತು. ನ್ಯಾಯ ರಕ್ಷಣೆ ಹಾಗೂ ರಾಜ್ಯದ ಜನರ ಬರ ಪರಿಹಾರಕ್ಕಾಗಿ ನಡೆಸಿದ ಸುದೀರ್ಘ ಹೋರಾಟಕ್ಕೆ ಯಶಸ್ಸು ಸಿಕ್ಕಿದೆ. ಇದೊಂದು ಮೈಲಿಗಲ್ಲು
> **ಸಿದ್ದರಾಮಯ್ಯ,** ಮುಖ್ಯಮಂತ್ರಿ



> ಬರ ಪರಿಹಾರ ಬಿಡುಗಡೆ ಮಾಡದೇ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಈ ರಾಜ್ಯಕ್ಕೆ ಕಾಲಿಡಬಾರದು. ಬಂದರೆ, ಇಲ್ಲಿನ ಜನರೇ ಪ್ರತಿಭಟನೆ ನಡೆಸಲಿದ್ದಾರೆ. ಅವರಿಗೆ ಇಲ್ಲಿ ಒಂದು ಸೀಟೂ ಸಿಗದು. ಮೋದಿ ಮತ್ತು ಶಾ ರಾಜ್ಯಕ್ಕೆ ಅನ್ಯಾಯ ಮಾಡಿದ್ದರು. ಕೊನೆಗೂ ನ್ಯಾಯಕ್ಕೆ ಜಯವಾಗಿದೆ. ಪ್ರಧಾನಿಯ ಅಹಂಕಾರ ಹಾಗೂ ಅವರ ದ್ವೇಷ ರಾಜಕಾರಣ ಸೋತಿದೆ
> **ರಣದೀಪ್ ಸಿಂಗ್ ಸುರ್ಜೇವಾಲಾ**
> ರಾಜ್ಯ ಕಾಂಗ್ರೆಸ್ ಉಸ್ತುವಾರಿ

‘ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮಂಗಳಸೂತ್ರ ಕಸಿಯುತ್ತದೆ’

ವಿಪಕ್ಷಗಳ ಖಂಡನೆ, ದೂರಿನ ಮಧ್ಯೆ ಮೋದಿ ಮತ್ತೆ ವಾಗ್ದಾಳಿ

ಅಲೀಗಢ (ಪಿಟಿಐ): ಸಂಪತ್ತಿನ ಹಂಚಿಕೆಗೆ ಸಂಬಂಧಿಸಿದ ತಮ್ಮ ಹೇಳಿಕೆ ಬಗ್ಗೆ ವಿರೋಧ ಪಕ್ಷಗಳ ಖಂಡನೆ, ಟೀಕೆ, ದೂರುಗಳ ನಡುವೆಯೂ ಪ್ರಧಾನಿ ನರೇಂದ್ರ ಮೋದಿ ಅವರು ತಾವು ಮಾಡಿದ್ದ ಆರೋಪವನ್ನು ಪುನರುಚ್ಚರಿಸಿದ್ದಾರೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಜನರ ಸಂಪತ್ತನ್ನು ಮರುಹಂಚಿಕೆ ಮಾಡುತ್ತದೆ, ಮಂಗಳಸೂತ್ರವನ್ನೂ ಒಳಗೊಂಡಂತೆ ಜನರ ಚಿನ್ನವನ್ನು ಕಸಿದುಕೊಳ್ಳುತ್ತದೆ ಎಂದು ಸೋಮವಾರವೂ ಹೇಳಿಕೆ ನೀಡಿದರು. ಆದರೆ, ಸಂಪತ್ತು ಮುಸ್ಲಿಮರಿಗೆ ಹೋಗುತ್ತದೆ ಎನ್ನುವುದನ್ನು ಈ ಬಾರಿ ಅವರು ಪ್ರಸ್ತಾಪಿಸಲಿಲ್ಲ.

ರಾಜಸ್ಥಾನದ ಚುನಾವಣಾ ರ‍್ಯಾಲಿಯಲ್ಲಿ ಭಾನುವಾರ ಮಾತನಾಡಿದ್ದ ಮೋದಿ, ಕಾಂಗ್ರೆಸ್ ಪಕ್ಷವು ಜನರ ಕಷ್ಟದ ದುಡಿಮೆಯ ಫಲವನ್ನು ನುಸುಳುಕೋರರಿಗೆ ಮತ್ತು ಹೆಚ್ಚು ಮಕ್ಕಳು ಇರುವವರಿಗೆ ನೀಡಲು ಯೋಜಿಸಿದೆ ಎಂದು ಆರೋಪಿಸಿ, ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ 2006ರ ಹೇಳಿಕೆಯೊಂದನ್ನು ಪ್ರಸ್ತಾಪಿಸಿದ್ದರು.

ಮೋದಿ ಹೇಳಿಕೆಯನ್ನು ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳು ತೀವ್ರವಾಗಿ ಖಂಡಿಸಿವೆ. ಪ್ರಧಾನಿ ಮೋದಿ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂದು ಕಾಂಗ್ರೆಸ್ ನಿಯೋಗ ಚುನಾವಣಾ ಆಯೋಗಕ್ಕೆ ದೂರು ನೀಡಿದೆ. ಬಿಜೆಪಿಯು ಪ್ರಧಾನಿ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದು, ‘ಅವರು ಜನರ ಮನಸ್ಸಿನಲ್ಲಿರುವುದನ್ನೇ ಹೇಳಿದ್ದಾರೆ’ ಎಂದಿದೆ.

ಮುಸ್ಲಿಂ ಬಾಹುಳ್ಯದ ಪಶ್ಚಿಮ ಉತ್ತರ ಪ್ರದೇಶದ ಅಲೀಗಢದಲ್ಲಿ ಸೋಮವಾರ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಪ್ರಧಾನಿ, ‘ಪಕ್ಷ ಅಧಿಕಾರಕ್ಕೆ ಬಂದರೆ ಯಾರು ಎಷ್ಟು ದುಡಿಯುತ್ತಾರೆ, ಎಷ್ಟು ಸಂಪತ್ತು ಹೊಂದಿದ್ದಾರೆ ಎನ್ನುವುದನ್ನು ತನಿಖೆ ಮಾಡಿಸುತ್ತೇವೆ ಎಂದು ಕಾಂಗ್ರೆಸ್ ಶಹಜಾದೆ (ರಾಜಕುಮಾರ) ಹೇಳುತ್ತಾರೆ. ಅದಷ್ಟೇ ಅಲ್ಲ, ಸರ್ಕಾರವು ಸಂಪತ್ತನ್ನು ವಶಪಡಿಸಿಕೊಂಡು, ಮರುಹಂಚಿಕೆ ಮಾಡುತ್ತದೆ ಎಂದೂ ಹೇಳಿದ್ದಾರೆ. ಚುನಾವಣಾ ಪ್ರಣಾಳಿಕೆಯಲ್ಲಿ ಅವರು ಇದನ್ನೇ ಹೇಳಿದ್ದಾರೆ’ ಎಂದು ತಿಳಿಸಿದರು.

‘ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷಗಳು ಓಲೈಕೆ ನೀತಿಯಲ್ಲಿ ತೊಡಗಿದ್ದು, ಸಮುದಾಯದ ಸಾಮಾಜಿಕ ಆರ್ಥಿಕ ಅಭಿವೃದ್ಧಿಗಾಗಿ ಏನನ್ನೂ ಮಾಡಿಲ್ಲ’ ಎಂದು ಆರೋಪಿಸಿದರು.

‘ಸುಮ್ಮನೆ ಯೋಚಿಸಿ, ನಮ್ಮ ತಾಯಂದಿರು ಮತ್ತು ಹೆಣ್ಣುಮಕ್ಕಳ ಬಳಿ ಚಿನ್ನ ಇದೆ. ಅದು ‘ಸ್ತ್ರೀಧನ’. ಅದನ್ನು ಪವಿತ್ರ ಎಂದು ಪರಿಗಣಿಸಲಾಗುತ್ತದೆ. ಅದಕ್ಕೆ ಕಾನೂನಿನ ರಕ್ಷಣೆಯೂ ಇದೆ. ಈಗ ಅವರು ಕಾನೂನು ಬದಲಾಯಿಸಲು ಹೊರಟಿದ್ದು, ನಮ್ಮ ತಾಯಂದಿರು ಮತ್ತು ಸಹೋದರಿಯರ ಆಸ್ತಿ ಕಿತ್ತುಕೊಳ್ಳಲು ಹೊರಟಿದ್ದಾರೆ’ ಎಂದು ಹೇಳಿದರು.



ಪ್ರತಿಕ್ರಿಯೆಗೆ ನಕಾರ

ಪ್ರಧಾನಿ ಮೋದಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಲು ಚುನಾವಣಾ ಆಯೋಗವು ಸೋಮವಾರ ನಿರಾಕರಿಸಿದೆ. ‘ನಾವು ಪ್ರತಿಕ್ರಿಯೆಗೆ ನಿರಾಕರಿಸುತ್ತೇವೆ’ ಎಂದು ಆಯೋಗದ ವಕ್ತಾರ ತಿಳಿಸಿದ್ದಾರೆ.

> ಅಧಿಕಾರಕ್ಕಾಗಿ ಸುಳ್ಳು ಹೇಳುವುದು, ವಿಷಯಗಳ ಬಗ್ಗೆ ತಪ್ಪು ಉಲ್ಲೇಖ ಮಾಡುವುದು, ವಿರೋಧಿಗಳ ಬಗ್ಗೆ ಸುಳ್ಳು ಆರೋಪ ಮಾಡುವುದು ಆರ್‌ಎಸ್‌ಎಸ್ ಮತ್ತು ಬಿಜೆಪಿ ತರಬೇತಿಯ ವೈಶಿಷ್ಟ್ಯ
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ



ಗುಕೇಶ್‌ಗೆ ಕಿರೀಟ

ಟೊರಾಂಟೊ (ಪಿಟಿಐ): ಭಾರತದ ಹದಿಹರೆಯದ ಆಟಗಾರ ಡಿ.ಗುಕೇಶ್, ಭಾನುವಾರ ಮುಕ್ತಾಯಗೊಂಡ ಪ್ರತಿಷ್ಠಿತ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯಲ್ಲಿ ಚಾಂಪಿಯನ್ ಆದರು. ಈ ಕಿರೀಟ ಧರಿಸಿದ ಅತಿ ಕಿರಿಯ ಆಟಗಾರನೆಂಬ ಶ್ರೇಯ ಅವರದಾಯಿತು.

17 ವರ್ಷದ ಗುಕೇಶ್, ಹಾಲಿ ವಿಶ್ವ ಚಾಂಪಿಯನ್ ಡಿಂಗ್ ಲಿರೆನ್ (ಚೀನಾ) ಅವರಿಗೆ ಚಾಲೆಂಜರ್ ಆದರು. ವಿಶ್ವನಾಥನ್ ಆನಂದ್ ನಂತರ ಇಲ್ಲಿ ಪ್ರಶಸ್ತಿ ಗೆದ್ದ ಭಾರತದ ಮೊದಲ ಆಟಗಾರ ಎಂಬ ಹಿರಿಮೆಯೂ ಅವರಿಗೆ ಸಂದಿತು.

12ನೇ ಪುಟ ನೋಡಿ

ನೇಹಾ ಹತ್ಯೆ: ಸಿಐಡಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಬ್ಬಳ್ಳಿಯ ವಿದ್ಯಾರ್ಥಿನಿ ನೇಹಾ ಹಿರೇಮಠ (23) ಹತ್ಯೆ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದ್ದು, ಸಿಐಡಿಯ ಎಸ್ಪಿ ವೆಂಕಟೇಶ್ ನೇತೃತ್ವದಲ್ಲಿ ತನಿಖೆ ಆರಂಭವಾಗಿದೆ.

ಹುಬ್ಬಳ್ಳಿಯ ಬಿವಿಬಿ ಕಾಲೇಜು ಕ್ಯಾಂಪಸ್‌ನಲ್ಲಿ ನೇಹಾ ಹಿರೇಮಠ ಅವರನ್ನು ಏ. 18ರಂದು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಆರೋಪಿ ಫಯಾಜ್ ಬಾಬಾಸಾಹೇಬ ಖೊಂಡಾನಾಯಕ್‌ನನ್ನು ಹುಬ್ಬಳ್ಳಿ ವಿದ್ಯಾನಗರ ಪೊಲೀಸರು ಈಗಾಗಲೇ ಬಂಧಿಸಿದ್ದಾರೆ.

‘ನೇಹಾ ಹತ್ಯೆ ಪ್ರಕರಣದ ತನಿಖೆಗಾಗಿ ಎಸ್ಪಿ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿದೆ. ತಂಡದ ಅಧಿಕಾರಿಗಳು ಹುಬ್ಬಳ್ಳಿಗೆ ಹೋಗಿದ್ದಾರೆ. ಘಟನೆ ನಡೆದ ಸ್ಥಳ ಪರಿಶೀಲನೆ ನಡೆಸಲಿದ್ದಾರೆ. ಪ್ರಕರಣದ ಇತರೆ ಮಾಹಿತಿ ಕಲೆಹಾಕಿ, ತನಿಖೆ ಮುಂದುವರಿಸಲಿದ್ದಾರೆ’ ಎಂದು ಸಿಐಡಿ ಡಿಜಿಪಿ ಎಂ.ಎ. ಸಲೀಂ ‘ಪ್ರಜಾವಾಣಿ’ಗೆ ತಿಳಿಸಿದರು.

ಆರೋಪಿ ಕಸ್ಟಡಿ ಸಾಧ್ಯತೆ: ‘ಪ್ರಕರಣದ ಆರೋಪಿ ಫಯಾಜ್‌ನನ್ನು ನ್ಯಾಯಾಲಯದ ಅನುಮತಿ ಪಡೆದು ಸಿಐಡಿ ಅಧಿಕಾರಿಗಳು ಕಸ್ಟಡಿಗೆ ಪಡೆಯುವ ಸಾಧ್ಯತೆ ಇದೆ. ಇದಕ್ಕೆ ಸಂಬಂಧಪಟ್ಟಂತೆ ಕಾನೂನು ಪ್ರಕ್ರಿಯೆ ಶುರುವಾಗಿದೆ’ ಎಂದು ಮೂಲಗಳು ಹೇಳಿವೆ. ‘ನೇಹಾ ಅವರ ಪೋಷಕರು, ಶಿಕ್ಷಕರು, ಕುಟುಂಬಸ್ಥರು, ಸ್ನೇಹಿತರು ಹಾಗೂ ಇತರರನ್ನು ವಿಚಾರಣೆ ನಡೆಸುವ ಸಂಭವವಿದೆ. ಜೊತೆಗೆ, ಆರೋಪಿ ತಂದೆ–ತಾಯಿಯ ವಿಚಾರಣೆ ನಡೆಸುವ ಸಾಧ್ಯತೆ ಇದೆ’ ಎಂದು ತಿಳಿಸಿವೆ.

‘ತ್ವರಿತ ವಿಚಾರಣೆಗೆ ವಿಶೇಷ ಕೋರ್ಟ್’

ಶಿವಮೊಗ್ಗ: ನೇಹಾ ಹಿರೇಮಠ ಅವರ ಕೊಲೆ ಪ್ರಕರಣದ ತ್ವರಿತ ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶಿವಮೊಗ್ಗದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸರ್ಕಾರ ನೇಹಾ ಕುಟುಂಬದ ಪರವಾಗಿದೆ. ಸಚಿವರಾದ ಲಕ್ಷ್ಮೀ ಹೆಬ್ಬಾಳಕರ, ಎಚ್‌.ಕೆ. ಪಾಟೀಲ, ಸಂತೋಷ ಲಾಡ್ ಅವರು ನೇಹಾ ಕುಟುಂಬದವರಿಗೆ ಸಾಂತ್ವನ ಹೇಳಿದ್ದಾರೆ. ನಾನೂ ಹೋಗುತ್ತೇನೆ’ ಎಂದರು.

ಇನ್ನಷ್ಟು ಸುದ್ದಿಗಳು 05

ಸಿಇಟಿ ಲೋಪ: ಪರಿಶೀಲನೆಗೆ 4 ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆದಿದ್ದ ಸಿಇಟಿಯಲ್ಲಿ ಪಠ್ಯಕ್ಕೆ ಹೊರತಾದ ಪ್ರಶ್ನೆಗಳು ಸೇರಿದ್ದನ್ನು ಪರಿಶೀಲಿಸಿ ವರದಿ ನೀಡಲು ಆಯಾ ವಿಷಯವಾರು ತಜ್ಞರನ್ನು ಒಳಗೊಂಡ ನಾಲ್ಕು ಸಮಿತಿಗಳನ್ನು ರಚಿಸಿ ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (ಸಿಇಟಿ) ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಇದೇ ಏ.18 ಮತ್ತು 19ರಂದು ನಡೆಸಿತ್ತು. ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಮತ್ತು ಜೀವಶಾಸ್ತ್ರ ವಿಷಯಗಳ ಪ್ರಶ್ನೆ ಪತ್ರಿಕೆಗಳಲ್ಲಿ ಪಠ್ಯಕ್ಕೆ ಹೊರತಾದ ಶೇ 25ರಷ್ಟು ಪ್ರಶ್ನೆಗಳು ಸೇರಿಕೊಂಡಿವೆ ಎಂದು ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ಆಕ್ಷೇಪ ವ್ಯಕ್ತಪಡಿಸಿದ್ದರು.

ಪಠ್ಯಕ್ಕೆ ಹೊರತಾದ ಪ್ರಶ್ನೆಗಳ ಸಂಖ್ಯೆ ಖಚಿತಪಡಿಸಿಕೊಳ್ಳಲು, ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಲು ಸೂಕ್ತ ಶಿಫಾರಸು ಮಾಡಲು ಆಯಾ ವಿಷಯಗಳಿಗೆ ತಲಾ ಮೂವರು ಸದಸ್ಯರನ್ನು ಒಳಗೊಂಡ ಪ್ರತ್ಯೇಕ ಸಮಿತಿ ರಚಿಸಲಾಗಿದೆ.

> ಪಠ್ಯಕ್ರಮದಿಂದ ಹೊರತಾದ ಪ್ರಶ್ನೆಗಳನ್ನು ಕೈಬಿಟ್ಟು ಪಠ್ಯದ ಪ್ರಶ್ನೆಗಳನ್ನಷ್ಟೇ ಮೌಲ್ಯಮಾಪನ ಮಾಡಿ ಸಿಇಟಿ ಫಲಿತಾಂಶ ಪ್ರಕಟಿಸಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು
> **ಅಶ್ವಿನಿ ಕೆ.ಎಸ್,** ಅಧ್ಯಕ್ಷೆ, ಎಐಡಿಎಸ್‌ಒ

5ನೇ ಪುಟ ನೋಡಿ

ಈಶ್ವರಪ್ಪ ಉಚ್ಚಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗ ಕ್ಷೇತ್ರದಲ್ಲಿ ಬಿಜೆಪಿ ವಿರುದ್ಧ ಬಂಡಾಯವೆದ್ದು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಕೆ.ಎಸ್.ಈಶ್ವರಪ್ಪ ಅವರನ್ನು ಪಕ್ಷದಿಂದ 6 ವರ್ಷಗಳಿಗೆ ಉಚ್ಚಾಟನೆ ಮಾಡಲಾಗಿದೆ.

ನಾಮಪತ್ರ ಹಿಂದಕ್ಕೆ ಪಡೆಯಲು ಸೋಮವಾರ ಕಡೆಯ ದಿನವಾಗಿತ್ತು. ನಾಮಪತ್ರವನ್ನು ಹಿಂದಕ್ಕೆ ಪಡೆಯದ ಕಾರಣ ಬಿಜೆಪಿ ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ್ ಪಾಟೀಲ ಅವರು ಉಚ್ಚಾಟನಾ ಆದೇಶ ಹೊರಡಿಸಿದ್ದಾರೆ.

‘ಪಕ್ಷದ ಸೂಚನೆಯನ್ನು ಕಡೆಗಣಿಸಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಪಕ್ಷದ ಮುಜುಗರಕ್ಕೆ ಕಾರಣರಾಗಿದ್ದೀರಿ. ಇದು ಪಕ್ಷದ ಶಿಸ್ತು ಉಲ್ಲಂಘನೆಯಾಗಿದೆ’ ಎಂದು ಅವರು ಹೇಳಿದ್ದಾರೆ.

ತಮ್ಮ ಪುತ್ರನಿಗೆ ಹಾವೇರಿ ಕ್ಷೇತ್ರದಿಂದ ಟಿಕೆಟ್ ನೀಡಲಿಲ್ಲ ಎಂದು ಮುನಿಸಿಕೊಂಡ ಈಶ್ವರಪ್ಪ, ಶಿವಮೊಗ್ಗ ಕ್ಷೇತ್ರದಲ್ಲಿ ಸಂಸದ ಬಿ.ವೈ. ರಾಘವೇಂದ್ರ ವಿರುದ್ಧ ಕಣಕ್ಕೆ ಇಳಿದಿದ್ದಾರೆ. ತಮಗೆ ಟಿಕೆಟ್ ಸಿಗದೇ ಇರುವುದಕ್ಕೆ ಯಡಿಯೂರಪ್ಪ, ವಿಜಯೇಂದ್ರ ಕಾರಣ ಎಂದು ಟೀಕಾ ಪ್ರಹಾರ ನಡೆಸಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಹೋಟೆಲ್‌ಗೆ ಬಾಂಬ್ ಬೆದರಿಕೆ: ಠಾಣೆಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಲಹಳ್ಳಿ ಎಚ್‌ಎಂಟಿ ಮೈದಾನ ಬಳಿ ಇರುವ ಕದಂಬ ಗಾರ್ಡನಿಯಾ ಹೋಟೆಲ್‌ನಲ್ಲಿ ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಪತ್ರ ಬಂದಿದ್ದು, ಪೊಲೀಸರು ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ತಪಾಸಣೆ ನಡೆಸಿದರು.

‘ಅಂಚೆ ಮೂಲಕ ಠಾಣೆಗೆ ಪತ್ರ ಬಂದಿತ್ತು. ಕದಂಬ ಹೋಟೆಲ್‌ನಲ್ಲಿ ಬಾಂಬ್ ಇಟ್ಟಿರುವುದಾಗಿ ಬರೆಯಲಾಗಿತ್ತು. ಕೂಡಲೇ ಹೋಟೆಲ್‌ಗೆ ಹೋಗಿ ಪರಿಶೀಲಿಸಲಾಯಿತು. ಇದೊಂದು ಹುಸಿ ಬೆದರಿಕೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಇಂಗ್ಲಿಷ್‌ನಲ್ಲಿ ಬರೆದಿದ್ದ ಪತ್ರದಲ್ಲಿ, ಪೊಲೀಸರ ಬಗ್ಗೆ ಅವಾಚ್ಯ ಶಬ್ದಗಳಿಂದ ನಿಂದಿಸಲಾಗಿದೆ. ರಾಮೇಶ್ವರಂ ಕೆಫೆಯಲ್ಲಿ ನಡೆದ ಬಾಂಬ್ ಸ್ಫೋಟದಲ್ಲಿ ನಾನೂ ಭಾಗಿಯಾಗಿದ್ದೆ. ಈಗ ಕದಂಬ ಹೋಟೆಲ್‌ನಲ್ಲಿಯೂ ಬಾಂಬ್ ಇಟ್ಟಿರುವುದು ಕೂಡ ನಾನೇ’ ಎಂಬುದಾಗಿ ಬರೆಯಲಾಗಿತ್ತು’ ಎಂದರು.

ಹೋಟೆಲ್‌ನಲ್ಲಿ ಸೀಮಂತ ಕಾರ್ಯಕ್ರಮ ನಡೆಯುತ್ತಿತ್ತು. ಜನರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಬಾಂಬ್ ಬೆದರಿಕೆ ಪತ್ರದ ವಿಷಯ ತಿಳಿಯುತ್ತಿದ್ದಂತೆ, ಕಾರ್ಯಕ್ರಮದಲ್ಲಿದ್ದವರು ಗಾಬರಿಯಿಂದ ಹೊರಗೆ ಓಡಿದರು. ಸಿಬ್ಬಂದಿ ಸಹ ಹೆದರಿದ್ದರು.

‘ಹೋಟೆಲ್ ಸಿಬ್ಬಂದಿ ಹಾಗೂ ಗ್ರಾಹಕರನ್ನು ಹೋಟೆಲ್‌ನಿಂದ ಹೊರಗೆ ಕಳುಹಿಸಿ ತಪಾಸಣೆ ನಡೆಸಲಾಯಿತು. ಯಾವುದೇ ಅನುಮಾನಾಸ್ಪದ ವಸ್ತು ಸಿಗದಿದ್ದರಿಂದ, ಇದೊಂದು ಹುಸಿ ಬೆದರಿಕೆಯೆಂದು ಘೋಷಿಸಲಾಯಿತು’ ಎಂದು ಪೊಲೀಸ್ ಅಧಿಕಾರಿ ಮಾಹಿತಿ ನೀಡಿದರು.

ವೈದ್ಯರ ನಿರ್ಲಕ್ಷ್ಯದಿಂದ ಸಾವು ಆರೋಪ • ಎಫ್‌ಐಆರ್ ದಾಖಲಿಸಲು ನಿರಾಕರಿಸಿದ್ದ ಪೊಲೀಸರು

ಠಾಣೆ ಮುಂದೆ ಶವ ಇರಿಸಿ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಲ್ಲು ನೋವಿಗೆ ಚಿಕಿತ್ಸೆ ಪಡೆದಿದ್ದ ಕುಮಾರ್ (55) ಎಂಬುವವರು ವೈದ್ಯರ ನಿರ್ಲಕ್ಷ್ಯದಿಂದ ಮೃತಪಟ್ಟಿದ್ದು, ಈ ಬಗ್ಗೆ ದೂರು ನೀಡಿದರೂ ಪೊಲೀಸರು ಎಫ್‌ಐಆರ್ ದಾಖಲಿಸಿಕೊಳ್ಳುತ್ತಿಲ್ಲ’ ಎಂದು ಆರೋಪಿಸಿ ಸುಬ್ರಹ್ಮಣ್ಯನಗರ ಠಾಣೆ ಎದುರು ಮೃತದೇಹ ಇರಿಸಿ ಸಂಬಂಧಿಕರು ಆಕ್ರೋಶ ವ್ಯಕ್ತಪಡಿಸಿದರು.

ಆಸ್ಪತ್ರೆಯ ಸ್ಟ್ರೆಚರ್‌ನಲ್ಲಿ ಮೃತದೇಹವನ್ನು ತಂದಿದ್ದ ಸಂಬಂಧಿಕರು, ಠಾಣೆ ಎದುರು ನಿಲ್ಲಿಸಿದ್ದರು. ‘ವೈದ್ಯರ ನಿರ್ಲಕ್ಷ್ಯದಿಂದ ಮೃತಪಟ್ಟಿರುವ ಕುಮಾರ್ ಕುಟುಂಬಕ್ಕೆ ನ್ಯಾಯ ಒದಗಿಸಬೇಕು’ ಎಂದು ಒತ್ತಾಯಿಸಿದರು.

‘ಸುಬ್ರಹ್ಮಣ್ಯನಗರದ ಕುಮಾರ್, ಹಲ್ಲು ನೋವಿನ ಚಿಕಿತ್ಸೆಗೆಂದು ಇತ್ತೀಚೆಗೆ ದಂತ ವೈದ್ಯರೊಬ್ಬರ ಬಳಿ ಹೋಗಿದ್ದರು. ತಪಾಸಣೆ ನಡೆಸಿದ್ದ ವೈದ್ಯ, ನೋವಿಗೆ ಚಿಕಿತ್ಸೆ ಕೊಟ್ಟಿದ್ದರು. ಆದರೆ, ಮುಖ



ಸುಬ್ರಹ್ಮಣ್ಯನಗರ ಠಾಣೆ ಎದುರು ಕುಮಾರ್ ಅವರ ಮೃತದೇಹ ಇರಿಸಿದ್ದ ಸಂಬಂಧಿಕರು

ಊದಿಕೊಂಡಿತ್ತು. ಎರಡೂ ಕಣ್ಣಿಗೂ ಹಾನಿಯಾಗಿತ್ತು’ ಎಂದು ಸಂಬಂಧಿಕರೊಬ್ಬರು ಹೇಳಿದರು.

‘ಮುಖ ಊದಿಕೊಂಡು ತೀವ್ರ ನೋವು ಅನುಭವಿಸುತ್ತಿದ್ದ ಕುಮಾರ್ ಅವರನ್ನು ಬೇರೊಂದು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆರೋಗ್ಯ ತೀವ್ರ ಹದಗೆಟ್ಟಿದ್ದರಿಂದ ಕುಮಾರ್ ಅವರನ್ನು ಕಿಮ್ಸ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಐಸಿಯುನಲ್ಲಿ ಇರಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ದಂತ ವೈದ್ಯರ ನಿರ್ಲಕ್ಷ್ಯದಿಂದ ಜೀವಕ್ಕೆ ಅಪಾಯ ಉಂಟಾಗಿರುವುದಾಗಿ ವೈದ್ಯರು ಹೇಳಿದ್ದರು. ಹೀಗಾಗಿ, ದಂತ ವೈದ್ಯರ ವಿರುದ್ಧ ದೂರು ನೀಡಲು ಠಾಣೆಗೆ ಹೋಗಿದ್ದೆವು’ ಎಂದು ತಿಳಿಸಿದರು.

‘ಸುಬ್ರಹ್ಮಣ್ಯನಗರ ಠಾಣೆಯ ಪೊಲೀಸರು ವೈದ್ಯರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲು ಹಿಂದೇಟು ಹಾಕಿದ್ದರು. ಯಾವುದೇ ಪ್ರತಿಕ್ರಿಯೆ ಸಹ ನೀಡಲಿಲ್ಲ. 10 ದಿನ ತೀವ್ರ ನಿಗಾ ಘಟಕದಲ್ಲಿದ್ದ ಕುಮಾರ್ ಅವರು ಸೋಮವಾರ ಮೃತಪಟ್ಟಿದ್ದಾರೆ. ವೈದ್ಯರ ವಿರುದ್ಧ ಕ್ರಮ ಕೈಗೊಳ್ಳದ ಪೊಲೀಸರ ವರ್ತನೆಯನ್ನು ಖಂಡಿಸಿ ಮೃತದೇಹವನ್ನು ಠಾಣೆ ಬಳಿ ತಂದಿದ್ದೇವೆ. ವೈದ್ಯರನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಸಂಬಂಧಿಕರು ಒತ್ತಾಯಿಸಿದರು.

ಸ್ಥಳಕ್ಕೆ ಬಂದ ಹಿರಿಯ ಅಧಿಕಾರಿಗಳು, ಕುಮಾರ್ ಸಾವಿನ ಕುರಿತು ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಬಳಿಕವೇ ಸಂಬಂಧಿಕರು, ಮೃತದೇಹವನ್ನು ವಾಪಸು ಕೊಂಡೊಯ್ದು ಅಂತ್ಯಕ್ರಿಯೆ ನೆರವೇರಿಸಿದರು.

‘ವೈದ್ಯಕೀಯ ಮಂಡಳಿಗೆ ಪತ್ರ’

‘ಕುಮಾರ್ ಸಾವಿನ ಬಗ್ಗೆ ಯುಡಿಆರ್ ದಾಖಲಿಸಿಕೊಳ್ಳಲಾಗಿದೆ. ವೈದ್ಯಕೀಯ ಮಂಡಳಿಗೆ ಪತ್ರ ಬರೆಯಲಾಗಿದ್ದು, ಉತ್ತರ ಬಂದ ಬಳಿಕವೇ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಕುಮಾರ್ ಸಾವು ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಕುಮಾರ್ ಅವರಿಗೆ ಮಧುಮೇಹವಿತ್ತು. ಈ ವಿಚಾರ ತಿಳಿಯದ ವೈದ್ಯ, ಚಿಕಿತ್ಸೆ ನೀಡಿದ್ದರು. ಕೆಲ ಹೊತ್ತಿನ ನಂತರ ನೋವು ಹೆಚ್ಚಾಗಿತ್ತು. ಎರಡು ಮಾತ್ರೆ ಕೊಟ್ಟಿದ್ದ ವೈದ್ಯ, ಆಸ್ಪತ್ರೆಗೆ ಕರೆದೊಯ್ಯುವಂತೆ ಹೇಳಿದ್ದರು’ ಎಂದರು.

‘ಆರಂಭದಲ್ಲಿ ಎರಡು ಪ್ರತ್ಯೇಕ ಆಸ್ಪತ್ರೆಗಳಿಗೆ ಕುಮಾರ್ ಅವರನ್ನು ಕರೆದೊಯ್ಯಲಾಗಿತ್ತು. ಬಳಿಕ, ಹೆಚ್ಚಿನ ಚಿಕಿತ್ಸೆಗಾಗಿ ಕಿಮ್ಸ್‌ಗೆ ಸೇರಿಸಲಾಗಿತ್ತು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ’ ಎಂದು ಹೇಳಿದರು.

‘ಪೊಲೀಸರು ಯಾವುದೇ ಕರ್ತವ್ಯಲೋಪ ಎಸಗಿಲ್ಲ. ವೈದ್ಯರ ನಿರ್ಲಕ್ಷ್ಯದ ಬಗ್ಗೆ ಸಂಬಂಧಿಕರು ದೂರು ನೀಡಿದ ದಿನವೇ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಿಸಿಕೊಳ್ಳಲಾಗಿತ್ತು’ ಎಂದು ತಿಳಿಸಿದರು.

‘ಅನಧಿಕೃತ ಕಾರ್ಯಕ್ರಮಕ್ಕೆ ಹಣ ಪಾವತಿಸಬೇಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುಮತಿ ಪಡೆಯದೇ ಕಬ್ಬನ್ ಉದ್ಯಾನದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲು ಹೊರಟಿರುವ ಸಂಸ್ಥೆಯೊಂದು ಜನರಿಂದ ಶುಲ್ಕ ಸಂಗ್ರಹಿಸುತ್ತಿದೆ. ಹಣ ನೀಡಿ ಮೋಸಹೋಗಬಾರದು ಎಂದು ತೋಟಗಾರಿಕೆ ಇಲಾಖೆ ತಿಳಿಸಿದೆ.

‘ಟ್ರೋವ್ ಎಕ್ಸ್‌ಪೀರಿಯನ್ಸ್’ ಹೆಸರಿನ ಸಂಸ್ಥೆಯು ‘ಫಾರೆಸ್ಟ್ ಬಾತಿಂಗ್ ಎಕ್ಸ್‌ಪೀರಿಯನ್ಸ್’ ಎಂಬ ಕಾರ್ಯಕ್ರಮವನ್ನು ಏ. 28ರಂದು ಆಯೋಜಿಸುವುದಾಗಿ ಹೇಳಿದೆ. ಇದಕ್ಕೆ ₹1500 ಶುಲ್ಕ ನಿಗದಿಪಡಿಸಿದೆ. ಈ ಕಾರ್ಯಕ್ರಮಕ್ಕೆ ಇಲಾಖೆಯಿಂದ ಅನುಮತಿ ಪಡೆದಿಲ್ಲ. ಈ ಬಗ್ಗೆ ವಾಯುವಿಹಾರಿಗಳು ಇಲಾಖೆಗೆ ಮೌಖಿಕವಾಗಿ ದೂರು ನೀಡಿದ್ದಾರೆ. ಅದರ ಆಧಾರದಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಪೊಲೀಸ್ ಪ್ರಕರಣ ದಾಖಲಿಸಲಾಗಿದೆ. ಶುಲ್ಕ ಪಾವತಿಸಿ ಯಾರೂ ಮೋಸಹೋಗಬಾರದು ಎಂದು ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.


ಸೂಟ್‌ಕೇಸ್‌ನಲ್ಲಿ ಅನಕೊಂಡ!

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಬ್ಯಾಂಕಾಕ್‌ನಿಂದ ಹತ್ತು ಜೀವಂತ ಅನಕೊಂಡ (ದೊಡ್ಡ ಗಾತ್ರದ ಹೆಬ್ಬಾವು) ಮರಿಗಳನ್ನು ಕಳ್ಳತನದಿಂದ ತಂದಿದ್ದ ಪ್ರಯಾಣಿಕ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೋಮವಾರ ಕಸ್ಟಮ್ಸ್ ಅಧಿಕಾರಿಗಳ ತಪಾಸಣೆ ವೇಳೆ ಸಿಕ್ಕಿ ಬಿದ್ದಿದ್ದಾನೆ.

ವಿಮಾನ ನಿಲ್ದಾಣದಿಂದ ಹೊರ ಹೋಗುವ ಸಮಯದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಪ್ರಯಾಣಿಕನ ಸೂಟ್‌ಕೇಸ್ ಪರಿಶೀಲಿಸಿದಾಗ ಬಿಳಿ ಚೀಲದಲ್ಲಿ ತಂದಿದ್ದ ಹತ್ತು ಜೀವಂತ ಹಾವುಗಳು ಪತ್ತೆಯಾಗಿವೆ.

ಪ್ರಯಾಣಿಕನನ್ನು ಬಂಧಿಸಿ, ಹಾವಿನ ಮರಿಗಳನ್ನು ವಶಕ್ಕೆ ಪಡೆಯಲಾಗಿದೆ. ವನ್ಯ ಜೀವಿಗಳ ಕಳ್ಳಸಾಗಣೆ ನಿಷೇಧ ಕಾಯಿದೆ ಮತ್ತು ಕಸ್ಟಮ್ಸ್ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಬೆಂಗಳೂರು ಕಸ್ಟಮ್ಸ್ ಪ್ರಕಟಣೆಯಲ್ಲಿ ತಿಳಿಸಿದೆ.



ಕಸ್ಟಮ್ಸ್ ಅಧಿಕಾರಿಗಳು ರಕ್ಷಿಸಿರುವ ಅನಕೊಂಡ ಹಾವಿನ ಮರಿಗಳು

ಸುದ್ದಿ 2 ನಿಮಿಷ

ಕೃಷ್ಣಾರೆಡ್ಡಿ ವಿರುದ್ಧದ ಮಾನನಷ್ಟ ಮೊಕದ್ದಮೆ ವಿಚಾರಣೆಗೆ ತಡೆ

ಬೆಂಗಳೂರು: ಚಿಂತಾಮಣಿ ಕ್ಷೇತ್ರದ ಮಾಜಿ ಶಾಸಕ ಜೆಡಿಎಸ್‌ನ ಎಂ. ಕೃಷ್ಣಾರೆಡ್ಡಿ ವಿರುದ್ಧದ ಮಾನನಷ್ಟ ಮೊಕದ್ದಮೆ ವಿಚಾರಣೆಗೆ ಹೈಕೋರ್ಟ್ ತಡೆ ನೀಡಿದೆ.

ನಗರದ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಹೊರಡಿಸಿದ್ದ ಆದೇಶ ರದ್ದು ಕೋರಿ ಕೃಷ್ಣಾರೆಡ್ಡಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ಪೀಠ ಈ ಕುರಿತಂತೆ ಆದೇಶಿಸಿದೆ.



‘ಬನಶಂಕರಿಯ 2ನೇ ಹಂತದ ಭವಾನಿ ಹೌಸಿಂಗ್ ಕೋ ಆಪರೇಟಿವ್ ಸಂಸ್ಥೆ ಮತ್ತು ಇತರೆ 41 ಜನರು, ಕತ್ರಿಗುಪ್ಪೆಯ ಸರ್ವೆ ನಂ.125 ಹಾಗೂ 126ಕ್ಕೆ ಸೇರಿದ 3 ಎಕರೆ 29 ಗುಂಟೆ ಸರ್ಕಾರದ ಜಾಗವನ್ನು ಕಬಳಿಸಿದ್ದಾರೆ. ಇದರ ಮೌಲ್ಯ ಅಂದಾಜು ₹350 ಕೋಟಿಯಷ್ಟಿದೆ’ ಎಂದು ಆರೋಪಿಸಿ ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ 2022ರಲ್ಲಿ ಖಾಸಗಿ ದೂರು ಸಲ್ಲಿಸಿದ್ದರು.

ಈ ಸಂಬಂಧದ ಆರೋಪ ಪ್ರತ್ಯಾರೋಪಗಳು ಮುಂದುವರೆದಿತ್ತು. ದೂರು ಆಧರಿಸಿ ಕೃಷ್ಣಾರೆಡ್ಡಿ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಲು ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಆದೇಶಿಸಿತ್ತು. ಇದನ್ನು ರದ್ದುಪಡಿಸುವಂತೆ ಕೋರಿ ಕೃಷ್ಣಾರೆಡ್ಡಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಕಾರಿನ ಚಕ್ರ ಹರಿದು ಮಗು ಸಾವು

ಬೆಂಗಳೂರು: ಎಚ್‌ಎಸ್‌ಆರ್ ಲೇಔಟ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಅಪಘಾತ ಸಂಭವಿಸಿದ್ದು, ಕಾರಿನ ಚಕ್ರ ಮೈ ಮೇಲೆ ಹರಿದು ಶಾಜಿಯಾ ಎಂಬ ಒಂದೂವರೆ ವರ್ಷದ ಮಗು ಮೃತಪಟ್ಟಿದೆ.

‘ಅಗರದಲ್ಲಿ ಭಾನುವಾರ ರಾತ್ರಿ ನಡೆದಿರುವ ಅಪಘಾತದ ದೃಶ್ಯ ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ತಂದೆಯ ನಿರ್ಲಕ್ಷ್ಯದಿಂದಲೇ ಶಾಜಿಯಾ ಮೃತಪಟ್ಟಿರುವುದು ಗೊತ್ತಾಗಿದೆ. ತಂದೆ ವಿರುದ್ಧ ಪ್ರಕರಣ ದಾಖಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಶಾಜಿಯಾ ಪೋಷಕರು, ಅಗರದಲ್ಲಿ ವಾಸವಿದ್ದಾರೆ. ಭಾನುವಾರ ನಡೆದಿದ್ದ ಸಂಬಂಧಿಕರ ಮದುವೆಗೆಂದು ಕುಟುಂಬಸ್ಥರೆಲ್ಲರೂ ಕಾರಿನಲ್ಲಿ ಹೋಗಿದ್ದರು. ಮದುವೆ ಮುಗಿಸಿ ರಾತ್ರಿ ಮನೆಗೆ ವಾಪಸು ಬಂದಿದ್ದರು. ಶಾಜಿಯಾ ತಂದೆಯೇ ಕಾರು ಚಲಾಯಿಸಿದ್ದರು’ ಎಂದು ತಿಳಿಸಿದರು.


‘ಮನೆ ಎದುರು ತಂದೆ ಕಾರು ನಿಲ್ಲಿಸಿದ್ದರು. ಕಾರಿನಲ್ಲಿದ್ದ ಲಗೇಜು ಇಳಿಸಿ ಮನೆಯೊಳಗೆ ಇರಿಸಲಾಗುತ್ತಿತ್ತು. ಕಾರಿನಿಂದ ಇಳಿದಿದ್ದ ಮಗು, ಬಾಗಿಲು ಬಳಿ ನಿಂತುಕೊಂಡಿತ್ತು. ಅದನ್ನು ತಂದೆ ಗಮನಿಸಿರಲಿಲ್ಲ. ಲಗೇಜು ಇಳಿಸಿದ ನಂತರ, ಕಾರು ಮುಂದಕ್ಕೆ ಚಲಾಯಿಸಿದ್ದರು. ಇದೇ ಸಂದರ್ಭದಲ್ಲಿಯೇ ಮಗುವಿಗೆ ಕಾರು ಡಿಕ್ಕಿ ಹೊಡೆದಿತ್ತು. ಕೆಳಗೆ ಬಿದ್ದ ಮಗುವಿನ ಮೇಲೆಯೇ ಕಾರಿನ ಚಕ್ರ ಹರಿದಿತ್ತು’ ಎಂದು ಹೇಳಿದರು.

ಪತ್ರಕರ್ತ ಕುಮಾರ್ ಬಂಧನಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮವಾಗಿ ಕೋಟ್ಯಂತರ ರೂಪಾಯಿಯನ್ನು ಮೂರನೇ ವ್ಯಕ್ತಿಗೆ ವರ್ಗಾವಣೆ ಮಾಡಿದ ಆರೋಪ ಎದುರಿಸುತ್ತಿರುವ ಕನ್ನಡದ ಸುದ್ದಿ ವಾಹಿನಿ ‘ಬಿ’ ಟಿವಿ ವ್ಯವಸ್ಥಾಪಕ ನಿರ್ದೇಶಕ ಗಂಗಾಧರಪ್ಪ ಮುನೀಂದ್ರ ಕುಮಾರ್ ಅಲಿಯಾಸ್ ಜಿ.ಎಂ. ಕುಮಾರ್ (50) ಅವರಿಗೆ ಸೆಷನ್ಸ್ ನ್ಯಾಯಾಲಯ ನೀಡಿದ್ದ ಜಾಮೀನನ್ನು ರದ್ದುಪಡಿಸಿರುವ ಹೈಕೋರ್ಟ್, ಆರೋಪಿಯನ್ನು ಕೂಡಲೇ ವಶಕ್ಕೆ ಪಡೆದು ಸಂಬಂಧಿಸಿದ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸುವಂತೆ ಸಿಸಿಬಿ ಪೊಲೀಸರಿಗೆ ಆದೇಶಿಸಿದೆ.

ಕುಮಾರ್ ಅವರಿಗೆ ನೀಡಲಾಗಿರುವ ಜಾಮೀನು ಪ್ರಶ್ನಿಸಿ ‘ಬಿ’ ಟಿವಿ ಮೂಲ ಒಡೆತನ ಹೊಂದಿರುವ ಈಗಲ್ ಸೈಟ್ ಮೀಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆ ನಿರ್ದೇಶಕ ಅಶ್ವಿನ್ ಮಹೇಂದ್ರ ಹೈಕೋರ್ಟ್‌ಗೆ ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ. ನಟರಾಜನ್ ಅವರು, ಇದೇ 19ರಂದು ಜಾಮೀನು ರದ್ದುಪಡಿಸಿ ಆದೇಶಿಸಿದ್ದಾರೆ.



ಜಿ.ಎಂ. ಕುಮಾರ್

‘ಆರೋಪಿಯ ಬಂಧನದ ಬಗ್ಗೆ ಕೈಗೊಳ್ಳಲಾದ ಕ್ರಮಗಳ ವರದಿಯನ್ನು ತನಿಖಾಧಿಕಾರಿಯು ವಿಜಯನಗರ ಪೊಲೀಸ್ ಠಾಣೆ ಅಥವಾ ಸಿಸಿಬಿ ಪೊಲೀಸರಿಗೆ ನೀಡಬೇಕು’ ಎಂದು ಆದೇಶದಲ್ಲಿ ವಿವರಿಸಲಾಗಿದೆ. ಅಶ್ವಿನ್ ಮಹೇಂದ್ರ ಪರ ಪಿ.ಉಸ್ಮಾನ್ ವಾದ ಮಂಡಿಸಿದ್ದರು.

ಪ್ರಕರಣವೇನು?: ‘ಬಿ’ಟಿವಿ ಮಾತೃ ಸಂಸ್ಥೆ ಈಗಲ್ ಸೈಟ್ ಮೀಡಿಯಾ ಪ್ರೈವೇಟ್ ಲಿಮಿಟೆಡ್‌ನಿಂದ ಕೋಟ್ಯಂತರ ರೂಪಾಯಿಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ ಆರೋಪದ ಅಡಿ ಕುಮಾರ್ ವಿರುದ್ಧ ಬೆಂಗಳೂರಿನ ವಿಜಯನಗರ ಪೊಲೀಸ್ ಠಾಣೆಯಲ್ಲಿ 2022ರಲ್ಲಿ ದೂರು ದಾಖಲಾಗಿತ್ತು. ಭಾರತೀಯ ದಂಡ ಸಂಹಿತೆಯ ಕಾಯ್ದೆಯಡಿ, ನಂಬಿಕೆಯ ಉಲ್ಲಂಘನೆ ಮತ್ತು ವಂಚನೆ ಆರೋಪಗಳ ಕುರಿತು ತನಿಖೆ ನಡೆಸಿದ್ದ ಪೊಲೀಸರು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಈ ಸಂಬಂಧ ಕುಮಾರ್ ನಿರೀಕ್ಷಣಾ ಜಾಮೀನು ಕೋರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ 2023ರ ಆಗಸ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿ ತಿರಸ್ಕೃತಗೊಂಡಿತ್ತು. ನಂತರ ಪೊಲೀಸರು ಆರೋಪಿಯನ್ನು 2023ರ ನವೆಂಬರ್ 25ರಂದು ಬಂಧಿಸಿದ್ದರು. ಕೋರ್ಟ್ ನ್ಯಾಯಾಂಗ ವಶಕ್ಕೆ ಒಪ್ಪಿಸಿ ಆದೇಶಿಸಿತ್ತು. ಅನಾರೋಗ್ಯದ ಕಾರಣ ನೀಡಿದ್ದ ಆರೋಪಿಯು ಜೈಲುವಾಸದ ಬದಲಿಗೆ ಆಸ್ಪತ್ರೆಗೆ ದಾಖಲಾಗಿದ್ದರು. ಏತನ್ಮಧ್ಯೆ, 56ನೇ ಸೆಷನ್ಸ್ ನ್ಯಾಯಾಲಯ 2023ರ ಡಿಸೆಂಬರ್ 13ರಂದು ಜಾಮೀನು ಮಂಜೂರು ಮಾಡಿತ್ತು.

ಅಪಘಾತ: ಯುವತಿ ಸಜೀವ ದಹನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು–ತುಮಕೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾರು ಹಾಗೂ ಓಮ್ನಿ ನಡುವಿನ ಅಪಘಾತದಲ್ಲಿ, ಓಮ್ನಿಯಲ್ಲಿ ಬೆಂಕಿ ಹೊತ್ತಿಕೊಂಡು ದಿವ್ಯಾ (16) ಎಂಬುವವರು ಸಜೀವ ದಹನವಾಗಿದ್ದಾರೆ. ‘ಮಾದಾವರದಲ್ಲಿರುವ ಟೋಲ್ ಗೇಟ್ ಬಳಿ ಭಾನುವಾರ ರಾತ್ರಿ ಈ ಅವಘಡ ಸಂಭವಿಸಿದೆ. ದಿವ್ಯಾ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಇವರ ಸಂಬಂಧಿಕರಾದ ಮಯಾಂಕ್, ಮಂಜುಳಾ, ಸುನಿತಾ, ತರುಣ್, ಮಹೇಶ್, ನಮನ್ ಹಾಗೂ ಶಾಂತಿಲಾಲ್ ಗಾಯಗೊಂಡಿದ್ದಾರೆ. ಅವರೆಲ್ಲರೂ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಗುಜರಾತ್‌ನ ದಿವ್ಯಾ ಹಾಗೂ ಕುಟುಂಬಸ್ಥರು ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಇವರೆಲ್ಲ ನೆಲಮಂಗಲದಲ್ಲಿರುವ ಸಂಬಂಧಿಕರ ಮನೆಗೆ ಊಟಕ್ಕೆ ಹೋಗಿದ್ದರು. ಓಮ್ನಿಯಲ್ಲಿ ರಾತ್ರಿ ವಾಪಸು ಬರುತ್ತಿದ್ದ ಸಂದರ್ಭದಲ್ಲಿ ಈ ಅವಘಡ ಸಂಭವಿಸಿದೆ’ ಎಂದು ತಿಳಿಸಿದರು.

‘ಓಮ್ನಿಗೆ ಕಾರು ಡಿಕ್ಕಿ ಹೊಡೆದು ಅಪಘಾತ ಸಂಭವಿಸಿತ್ತು. ಇದರಿಂದಾಗಿ ವ್ಯಾನ್‌ನಲ್ಲಿ ಬೆಂಕಿ ಹೊತ್ತಿಕೊಂಡಿತು. ಒಳಗಿದ್ದವರು ಹೊರಗೆ ಬರಲು ಹರಸಾಹಸಪಟ್ಟರು. ವ್ಯಾನ್‌ನಲ್ಲಿಯೇ ಸಿಲುಕಿ ದಿವ್ಯಾ ಮೃತಪಟ್ಟರು’ ಎಂದು ಹೇಳಿದರು.

ಪುನರ್‌ಮನವಿ: ಬಾಲನ್ಯಾಯ ಮಂಡಳಿಗೆ ನಿರ್ದೇಶನ

ಬೆಂಗಳೂರು: ‘ಅಪರಾಧ ಎಸಗಿದ ಸಮಯದಲ್ಲಿ ನಾನು ಅಪ್ರಾಪ್ತ ವಯಸ್ಸಿನವನಾಗಿದ್ದೆ ಎಂದು ಆರೋಪಿಯು ಯಾವುದೇ ಸಮಯದಲ್ಲಾದರೂ ಮನವಿ ಸಲ್ಲಿಸಬಹುದು’ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಆರೋಪವೊಂದರಲ್ಲಿ ಹೊಸಪೇಟೆ ತಾಲ್ಲೂಕಿನ ಕಂಪ್ಲಿಯ ಯುವಕನೊಬ್ಬ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ಈ ಕುರಿತಂತೆ ಆದೇಶಿಸಿದ್ದಾರೆ.

ಅರ್ಜಿದಾರರು, ‘ಅಪರಾಧ ಎಸಗಿದಾಗ ನನಗೆ ವಯಸ್ಸು 15 ವರ್ಷವಾಗಿತ್ತು. ಹಾಗಾಗಿ ನನ್ನನ್ನು ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ ಅಧಿನಿಯಮ–2000) ಅಪರಾಧ ಕಾಯ್ದೆಯಡಿ ವಿಚಾರಣೆಗೆ ಒಳಪಡಿಸಬೇಕು’ ಎಂದು ಕೋರಿದ್ದರು. ಇದನ್ನು ಮಾನ್ಯ ಮಾಡಿರುವ ನ್ಯಾಯಪೀಠ, ಪ್ರಕರಣವನ್ನು ಹೊಸದಾಗಿ ಪರಿಗಣಿಸುವಂತೆ ಬಾಲನ್ಯಾಯ ಮಂಡಳಿಗೆ ನಿರ್ದೇಶಿಸಿದೆ. ಅರ್ಜಿದಾರರ ವಿರುದ್ಧ ಪೋಕ್ಸೊ ಕಾಯ್ದೆಯಡಿ ನಡೆಸಲಾದ ವಿಚಾರಣೆ ಅಮಾನತುಗೊಳಿಸುವಂತೆಯೂ ಆದೇಶಿಸಿದೆ.

ಸಿಇಟಿ ಪರೀಕ್ಷೆಯಲ್ಲಿ ಪಠ್ಯೇತರ ಪ್ರಶ್ನೆಗಳು

ವಿದ್ಯಾರ್ಥಿಗಳಿಂದ ಕೆಇಎ ಮುತ್ತಿಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿಇಟಿಯಲ್ಲಿ ಪಠ್ಯೇತರ ಪ್ರಶ್ನೆಗಳನ್ನು ಕೇಳಿ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಲಾಗಿದ್ದು, ಕೃಪಾಂಕ ನೀಡಬೇಕು’ ಎಂದು ಆಗ್ರಹಿಸಿ ವಿದ್ಯಾರ್ಥಿಗಳು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಮಲ್ಲೇಶ್ವರದ ರಸ್ತೆಗಳಲ್ಲಿ ಮೆರವಣಿಗೆ ನಡೆಸಿದ ವಿದ್ಯಾರ್ಥಿಗಳು, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಚೇರಿ ಎದುರು ಜಮಾಯಿಸಿದ್ದರು. ಕಚೇರಿ ಮುಂಭಾಗದಲ್ಲಿ ಕುಳಿತು ಆಕ್ರೋಶ ವ್ಯಕ್ತಪಡಿಸಿದರು.

ಕೆಇಎ ವಿರುದ್ಧ ಘೋಷಣೆ ಕೂಗಿದ ವಿದ್ಯಾರ್ಥಿಗಳು, ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಸ್ಥಳದಲ್ಲಿದ್ದ ಪೊಲೀಸರು, ‘ಪ್ರತಿಭಟನೆ ನಡೆಸಲು ಅವಕಾಶವಿಲ್ಲ. ಸ್ಥಳದಿಂದ ಹೊರಟು ಹೋಗಿ’ ಎಂದರು. ಇದೇ ವಿಚಾರವಾಗಿ ವಿದ್ಯಾರ್ಥಿಗಳು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು.

ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದ್ದಂತೆ ಎಬಿವಿಪಿ ಮುಖಂಡರು ಹಾಗೂ ಕೆಲವು ವಿದ್ಯಾರ್ಥಿಗಳನ್ನು ವಶಕ್ಕೆ ಪಡೆದ ಪೊಲೀಸರು, ಬಿಎಂಟಿಸಿ ಬಸ್‌ನಲ್ಲಿ ಸ್ಥಳದಿಂದ ಕರೆದೊಯ್ದು, ಕೆಲ ಗಂಟೆಗಳ ಬಳಿಕ ಎಲ್ಲರನ್ನೂ ಬಿಟ್ಟು ಕಳುಹಿಸಿದ್ದಾರೆ.

‘ಕೆಇಎ ವತಿಯಿಂದ ಏಪ್ರಿಲ್ 18 ಹಾಗೂ 19ರಂದು ಸಿಇಟಿ ನಡೆದಿದೆ. ಭೌತ ವಿಜ್ಞಾನ, ರಸಾಯನ ವಿಜ್ಞಾನ, ಗಣಿತ ಹಾಗೂ ಜೀವ ವಿಜ್ಞಾನ ವಿಷಯಗಳಲ್ಲಿ ಪಠ್ಯೇತರ ಪ್ರಶ್ನೆಗಳನ್ನು ಕೇಳಲಾಗಿದೆ. ಪಠ್ಯಕ್ಕೆ ಅನುಗುಣವಾಗಿ ತಯಾರಿ ನಡೆಸಿದ್ದ ರಾಜ್ಯದ ವಿದ್ಯಾರ್ಥಿಗಳಿಗೆ ಅನ್ಯಾಯ ಆಗಿದೆ’ ಎಂದು ಪ್ರತಿಭಟನಕಾರರು ಆರೋಪಿಸಿದರು.

‘ಕೆಇಎ ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿಯಿಂದ ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ. ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಚುನಾವಣೆಗೆ ಹೆಚ್ಚು ಒತ್ತು ನೀಡಿದ್ದು, ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಚಿಂತಿಸುತ್ತಿಲ್ಲ’ ಎಂದು ಪ್ರತಿಭಟನನಿರತರು ಆರೋಪಿಸಿದರು. ಅಧಿಕಾರಿಗಳು ವಿದ್ಯಾರ್ಥಿಗಳ ಜೀವನದ ಜೊತೆ ಆಟವಾಡುತ್ತಿದ್ದಾರೆ. ಅವೈಜ್ಞಾನಿಕವಾಗಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿದ್ದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಪರೀಕ್ಷೆ ಬರೆದಿರುವ ಎಲ್ಲರಿಗೂ ಕೃಪಾಂಕ ನೀಡಬೇಕು’ ಎಂದು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ವಿದ್ಯಾರ್ಥಿಗಳು ಒತ್ತಾಯಿಸಿದರು.

ಮುಖ್ಯಾಂಶಗಳು

- ಎಬಿವಿಪಿ ನೇತೃತ್ವದಲ್ಲಿ ನಡೆದ ಪ್ರತಿಭಟನೆ
- ಪೊಲೀಸರು ಮತ್ತು ವಿದ್ಯಾರ್ಥಿಗಳ ನಡುವೆ ಮಾತಿನ ಚಕಮಕಿ
- ‘ಕೆಇಎ ಬೇಜವಾಬ್ದಾರಿಯಿಂದ ವಿದ್ಯಾರ್ಥಿಗಳಿಗೆ ತೊಂದರೆ’



ಮಲ್ಲೇಶ್ವರದಲ್ಲಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಚೇರಿಗೆ ಸೋಮವಾರ ಮುತ್ತಿಗೆ ಹಾಕಲು ಯತ್ನಿಸಿದ ವಿದ್ಯಾರ್ಥಿಗಳನ್ನು ಪೊಲೀಸರು ವಶಕ್ಕೆ ಪಡೆದು ಕರೆದೊಯ್ದರು – ಪ್ರಜಾವಾಣಿ ಚಿತ್ರ



ನಮ್ಮ ಮೆಟ್ರೊ ನೀಲಿ ಮಾರ್ಗ: 2026ರಲ್ಲಿ ರೈಲುಗಳ ಸಂಚಾರ ಆರಂಭ

ವಿಮಾನ ನಿಲ್ದಾಣಕ್ಕೆ 'ವೇಗದ ಮೆಟ್ರೊ'

• ಬಾಲಕೃಷ್ಣ ಪಿ.ಎಚ್.

ಪ್ರಜಾವಾಣಿ ವಿಶೇಷ

ಬೆಂಗಳೂರು: ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸಲಿರುವ ನಮ್ಮ ಮೆಟ್ರೊ 'ನೀಲಿ' ಮಾರ್ಗದಲ್ಲಿ ಓಡಾಡುವ ರೈಲು, ಉಳಿದ ಮಾರ್ಗಗಳಿಗಿಂತ ವೇಗವಾಗಿ ಚಲಿಸಲಿದೆ. ಇದರಿಂದ ಪ್ರಯಾಣಿಕರ ಸಮಯ ಉಳಿತಾಯವಾಗಲಿದೆ.

ಪ್ರಸ್ತುತ ನಮ್ಮ ಮೆಟ್ರೊದ ನೇರಳೆ ಮತ್ತು ಹಸಿರು ಮಾರ್ಗಗಳಲ್ಲಿ ರೈಲುಗಳು ಗಂಟೆಗೆ 34 ಕಿ.ಮೀ. ವೇಗದಲ್ಲಿ ಚಲಿಸುತ್ತಿವೆ. ಈ ವರ್ಷದ ಅಂತ್ಯದೊಳಗೆ ಆರಂಭ ಗೊಳ್ಳಲಿರುವ ಹಳದಿ ಮಾರ್ಗ ಮತ್ತು ಮುಂದಿನ ವರ್ಷ ಆರಂಭಗೊಳ್ಳಲಿರುವ ಗುಲಾಬಿ ಮಾರ್ಗದಲ್ಲಿ ಸಂಚರಿಸಲಿರುವ ಮೆಟ್ರೊಗಳ 'ಸರಾಸರಿ ವಾಣಿಜ್ಯ ವೇಗ'(ಆವರೇಜ್ ಕರ್ಮಿಷಿಯಲ್ ಸ್ಪೀಡ್) ಗಂಟೆಗೆ 34 ಕಿ.ಮೀ. ಇರಲಿದೆ. 2026ರಲ್ಲಿ ಆರಂಭಗೊಳ್ಳಲಿರುವ ನೀಲಿ ಮಾರ್ಗದಲ್ಲಿ ಮಾತ್ರ ಸರಾಸರಿ ವಾಣಿಜ್ಯ ವೇಗ ಗಂಟೆಗೆ 50 ಕಿ.ಮೀ. ಇರುವಂತೆ ಯೋಜನೆ ರೂಪಿಸಲಾಗಿದೆ.

ಅತಿ ಹೆಚ್ಚು ವಾಹನದಟ್ಟಣೆಯ ಪ್ರದೇಶಗಳಲ್ಲಿ ಒಂದಾಗಿರುವ ಹೊರ ವರ್ತುಲ ರಸ್ತೆಯ (ಒಆರ್‌ಆರ್) ದಟ್ಟಣೆ ಕಡಿಮೆ ಮಾಡುವಲ್ಲಿಯೂ 'ನೀಲಿ' ಮಾರ್ಗ ಪ್ರಮುಖ ಪಾತ್ರ ವಹಿಸಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರ ರೇಷ್ಮೆ ಮಂಡಳಿಯಿಂದ (ಸಿಎಸ್‌ಬಿ) ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗಿನ (ಕೆಐಎ) ನೀಲಿ ಮಾರ್ಗವನ್ನು ಎರಡು ಹಂತಗಳಲ್ಲಿ ನಿರ್ಮಿಸಲಾಗುತ್ತಿದೆ. ಸಿಎಸ್‌ಬಿಯಿಂದ ಕೆ.ಆರ್.ಪುರವರೆಗಿನ ಮೊದಲ ಹಂತದ (2ಎ) ಕಾಮಗಾರಿ 2021ರಲ್ಲಿ ಆರಂಭಗೊಂಡಿದ್ದರೆ, ಕೆ.ಆರ್.ಪುರದಿಂದ ಕೆಐಎ ವರೆಗಿನ ಎರಡನೇ ಹಂತ (2ಬಿ) 2022ರಲ್ಲಿ ಶುರುವಾಗಿದೆ. ಮೊದಲ ಹಂತದಲ್ಲಿ ಮೆಟ್ರೊ ನಿಲ್ದಾಣಗಳ ನಡುವಿನ ಅಂತರ ಕಡಿಮೆ ಇರುವುದರಿಂದ, ಭಾರಿ ವೇಗದಲ್ಲಿ ಮೆಟ್ರೊ ರೈಲು ಸಂಚರಿಸುವುದು ಕಷ್ಟ. ಆದರೂ ಈಗಿರುವ ಮೆಟ್ರೊ ರೈಲುಗಳ ವೇಗಕ್ಕಿಂತ ಹೆಚ್ಚು ಇರಲಿದೆ.

ಎರಡನೇ ಹಂತದಲ್ಲಿ ನಿಲ್ದಾಣಗಳ ನಡುವಿನ ಅಂತರ ಹೆಚ್ಚಿರುವುದರಿಂದ ಗಂಟೆಗೆ 70 ಕಿ.ಮೀ. ವೇಗದವರೆಗೂ ಚಲಿಸುವ ಸಾಧ್ಯತೆ ಇದೆ. ಎರಡೂ ಹಂತಗಳು ಸೇರಿದರೆ ಗಂಟೆಗೆ ಸರಾಸರಿ ವೇಗ 50 ಕಿ.ಮೀ. ಇರಲಿದೆ ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಯಶವಂತ್ ಚವಾಣ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಎರಡು ಹಂತಗಳು ಸೇರಿ 58.19 ಕಿ.ಮೀ. ಉದ್ದದ ಮಾರ್ಗ ಇದಾಗಿದ್ದು, 32 ನಿಲ್ದಾಣಗಳಿವೆ. ಅದರಲ್ಲಿ ಕೇಂದ್ರ ರೇಷ್ಮೆ ಮಂಡಳಿಯಿಂದ ಹೆಬ್ಬಾಳದ ವರೆಗಿನ 29 ಕಿ.ಮೀ. ವ್ಯಾಪ್ತಿಯಲ್ಲಿ 22 ಮೆಟ್ರೊ ನಿಲ್ದಾಣಗಳಿದ್ದರೆ, ಅಲ್ಲಿಂದ ವಿಮಾನ ನಿಲ್ದಾಣದವರೆಗೆ 29 ಕಿ.ಮೀ. ವ್ಯಾಪ್ತಿಯಲ್ಲಿ ಕೇವಲ 10 ಮೆಟ್ರೊ ನಿಲ್ದಾಣಗಳು ಇರಲಿವೆ. ಈ ವ್ಯಾಪ್ತಿಯಲ್ಲಿಯೇ ರೈಲು 'ಎಕ್ಸ್‌ಪ್ರೆಸ್' ವೇಗದಲ್ಲಿ ಚಲಿಸಲಿದೆ ಎಂದು ಅವರು ವಿವರಿಸಿದರು.

ನೀಲಿ ಮಾರ್ಗವು ಕೇಂದ್ರ ರೇಷ್ಮೆ ಮಂಡಳಿಯಲ್ಲಿ ಹಳದಿ ಮಾರ್ಗವನ್ನು, ಕೃಷ್ಣರಾಜಪುರದಲ್ಲಿ (ಕೆ.ಆರ್.ಪುರ) ನೇರಳೆ ಮಾರ್ಗವನ್ನು, ನಾಗವಾರದಲ್ಲಿ ಗುಲಾಬಿ ಮಾರ್ಗವನ್ನು ಸಂಧಿಸುವುದರಿಂದ ಬೇರೆ ಬೇರೆ ಕಡೆಗಳಿಂದ ವಿಮಾನ ನಿಲ್ದಾಣಕ್ಕೆ ಪ್ರಯಾಣಿಸುವವರಿಗೂ ಉಪಯೋಗವಾಗಲಿದೆ. ಅಲ್ಲದೇ ಪ್ರಸ್ತಾವನೆ ಹಂತದಲ್ಲಿರುವ 'ಕೆಂಪು' ಮತ್ತು 'ಕಿತ್ತಳೆ' ಮಾರ್ಗಗಳು ಕೂಡ ನೀಲಿ ಮಾರ್ಗವನ್ನು ಸಂಧಿಸಲಿವೆ.



ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ನಿರ್ಮಾಣ ಹಂತದಲ್ಲಿರುವ ನಮ್ಮ ಮೆಟ್ರೊ ನೀಲಿ ಮಾರ್ಗ –ಪ್ರಜಾವಾಣಿ ಚಿತ್ರ

ಬೇಗ ಆರಂಭಿಸಿ, ದಟ್ಟಣೆ ತಪ್ಪಿಸಿ

ಹೊರವರ್ತುಲ ರಸ್ತೆಯಲ್ಲಿ ಮಾರತ್‌ಹಳ್ಳಿ–ಬೆಳ್ಳಂದೂರು ನಡುವೆ ಸಾವಿರಕ್ಕೂ ಹೆಚ್ಚು ಕಂಪನಿಗಳಿವೆ. ಪ್ರತಿ ಕಂಪನಿಯಲ್ಲಿ ಸಾವಿರಾರು ಉದ್ಯೋಗಿಗಳಿದ್ದಾರೆ. ಈ ರಸ್ತೆಯಲ್ಲಿ ಸದಾ ವಾಹನದಟ್ಟಣೆ ಹೆಚ್ಚಿರುತ್ತದೆ. ಇಲ್ಲಿಂದ ವಿಮಾನ ನಿಲ್ದಾಣಕ್ಕೆ ಹೋಗಬೇಕಿದ್ದರೆ ಅರ್ಧ ದಿನ ರಜೆ ಹಾಕಿಯೇ ಹೊರಡಬೇಕು. ಈ ಮಾರ್ಗದಲ್ಲಿ ಮೆಟ್ರೊ ರೈಲು ಸಂಚಾರ ಆರಂಭಗೊಂಡರೆ ದಟ್ಟಣೆ ಕಡಿಮೆಯಾಗಲಿದೆ. ಆದರೆ, ಎರಡು ವರ್ಷಗಳಿಂದ ಇಲ್ಲಿನ ಮೆಟ್ರೊ ಕಾಮಗಾರಿ ಬಹಳ ನಿಧಾನವಾಗಿ ನಡೆಯುತ್ತಿದೆ. ಕಾಮಗಾರಿಗೆ ವೇಗ ನೀಡಿ ಬೇಗ ಪೂರ್ಣಗೊಳಿಸಬೇಕು.

ಸೃಜನ್ ಪಿ., ಖಾಸಗಿ ಕಂಪನಿ ಉದ್ಯೋಗಿ



ಸೃಜನ್ ಪಿ.

ನೀಲಿ ಮಾರ್ಗದ ನಿಲ್ದಾಣಗಳು

ಕೇಂದ್ರ ರೇಷ್ಮೆ ಮಂಡಳಿ, ಎಚ್‌ಎಸ್‌ಆರ್ ಬಡಾವಣೆ, ಅಗರ, ಇಬ್ಬಲೂರು, ಬೆಳ್ಳಂದೂರು, ಕಾಡುಬೀಸನಹಳ್ಳಿ, ಕೋಡಿಬೀಸನಹಳ್ಳಿ, ಮಾರತ್‌ಹಳ್ಳಿ, ಇಸ್ರೊ, ದೊಡ್ಡನೆಕ್ಕುಂದಿ, ಡಿಆರ್‌ಡಿಒ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಸರಸ್ವತಿ ನಗರ, ಕೃಷ್ಣರಾಜಪುರ, ಕಸ್ತೂರಿನಗರ, ಹೊರಮಾವು, ಎಚ್‌ಆರ್‌ಬಿಆರ್ ಬಡಾವಣೆ, ಕಲ್ಯಾಣ ನಗರ, ಎಚ್‌ಬಿಆರ್ ಬಡಾವಣೆ, ನಾಗವಾರ, ವೀರಣ್ಣಪಾಳ್ಯ, ಕೆಂಪಾಪುರ, ಹೆಬ್ಬಾಳ, ಕೊಡಿಗೇಹಳ್ಳಿ, ಜಕ್ಕೂರು ಕ್ರಾಸ್, ಜಕ್ಕೂರು ಪ್ಲಾಂಟೇಶನ್, ಯಲಹಂಕ, ಬಾಗಲೂರು ಕ್ರಾಸ್, ಬೆಟ್ಟಹಲಸೂರು, ಚಿಕ್ಕಜಾಲ, ದೊಡ್ಡಜಾಲ, ವಿಮಾನ ನಿಲ್ದಾಣ ನಗರ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣ.

'ಎಂಜಿನ್ ಬೇ ಡೋರ್' ತಂತ್ರಜ್ಞಾನ ವರ್ಗಾವಣೆ

ಬೆಂಗಳೂರು: ತೇಜಸ್ ಎಂಕೆ 1 ಎ ಲಘು ಯುದ್ಧ ವಿಮಾನಕ್ಕೆ 'ಎಂಜಿನ್ ಬೇ ಡೋರ್' ತಯಾರಿಸುವ ತಂತ್ರಜ್ಞಾನವನ್ನು ಸಿಎಸ್‌ಐಆರ್–ಎನ್‌ಎಎಲ್, ಹಿಂದೂಸ್ತಾನ್ ಏರೋನಾಟಿಕಲ್ ಸಂಸ್ಥೆಗೆ (ಎಚ್‌ಎಎಲ್) ವರ್ಗಾವಣೆ ಮಾಡಿದೆ.

ಸಿಎಸ್‌ಐಆರ್– ಎನ್‌ಎಎಲ್ ನಿರ್ದೇಶಕ ಡಾ. ಅಭಯ್ ಎ ಪಾಶಿಲ್ಕರ್ ಅವರು ಎಚ್‌ಎಎಲ್ ಹೆಲಿಕಾಪ್ಟರ್ ಕಾಂಪ್ಲೆಕ್ಸ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅನ್ಬುವೇಲನ್ ಅವರಿಗೆ ತಂತ್ರಜ್ಞಾನ ವರ್ಗಾವಣೆ ಪತ್ರ ಹಸ್ತಾಂತರಿಸಿದರು.

ನಿಗಮ: ತಾತ್ಕಾಲಿಕ ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ (ಕಿಯೊನಿಕ್ಸ್) ಸೇರಿದಂತೆ ವಿವಿಧ ನಿಗಮಗಳಲ್ಲಿನ ಖಾಲಿ ಹುದ್ದೆಗಳ ಭರ್ತಿಗೆ ನಡೆಸಿದ್ದ ಲಿಖಿತ ಪರೀಕ್ಷೆಯ ತಾತ್ಕಾಲಿಕ ಅಂಕ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸೋಮವಾರ ಪ್ರಕಟಿಸಿದೆ.

ಆರು ನಿಗಮ- ಮಂಡಳಿಗಳ ವಿವಿಧ ವೃಂದದ ಹುದ್ದೆಗಳ ನೇಮಕಾತಿಗೆ ನಡೆದ ಪರೀಕ್ಷೆಯಲ್ಲಿ 6,17,961 ಅಭ್ಯರ್ಥಿಗಳು ಪಡೆದ ಅಂಕಗಳನ್ನು ಪಟ್ಟಿ ಒಳಗೊಂಡಿದೆ.

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ 41 ಹುದ್ದೆ, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ 386, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ 186, ಎಂಎಸ್‌ಐಎಲ್‌ನ 72, ಕಿಯೋನಿಕ್ಸ್‌ನ 26, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ 14 ಹುದ್ದೆಗಳು ಸೇರಿದಂತೆ ವಿವಿಧ ವೃಂದದ ಒಟ್ಟು 725 ಹುದ್ದೆಗಳಿಗೆ ಪರೀಕ್ಷೆ ನಡೆಸಲಾಗಿತ್ತು.

ಈ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆಗಳು ಇದ್ದಲ್ಲಿ ಏ.29ರ ಒಳಗೆ ಇ-ಮೇಲ್ (kea2023exam@gmail.com) ಮೂಲಕ ಸಲ್ಲಿಸಬೇಕು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಹೇಳಿದ್ದಾರೆ.

ಹರ್ಷಿತಾಗೆ ಎರಡನೇ ರ‍್ಯಾಂಕ್

ದೊಡ್ಡಬಳ್ಳಾಪುರ: ಯಲಹಂಕ ಉಪನಗರದಲ್ಲಿನ ಸಿ.ಈ.ಎಸ್.ಫ್ಯಾಷನ್ ತಾಂತ್ರಿಕ ವಿದ್ಯಾಲಯದ ಕೆ.ಆರ್. ಹರ್ಷಿತಾ ಬೆಂಗಳೂರು ನಗರ ವಿಶ್ವವಿದ್ಯಾಲಯ ಫ್ಯಾಷನ್ ಡಿಸೈನರ್ ಪದವಿ ಪರೀಕ್ಷೆಯಲ್ಲಿ ಎರಡನೇ ರ‍್ಯಾಂಕ್ ಪಡೆದಿದ್ದಾರೆ.



ಕೆ.ಆರ್.ಹರ್ಷಿತಾ

ಐಐಎಸ್‌ಸಿ, ಸಿಜಿಡಬ್ಲ್ಯುಬಿಯೊಂದಿಗೆ ಎಐ ತಂತ್ರಜ್ಞಾನ ಅಳವಡಿಕೆ

ಅಂತರ್ಜಲ ಕಾರ್ಯಪಡೆ ರಚನೆ

ಪ್ರಜಾವಾಣಿ ವಾರ್ತೆ


ಜಲ ಮಂಡಳಿ

ಬೆಂಗಳೂರು: ನಗರದಲ್ಲಿ ಅಂತರ್ಜಲದ ಮೇಲೆ ನಿಗಾವಹಿಸಲು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ವಿಜ್ಞಾನಿಗಳು ಹಾಗೂ ಕೇಂದ್ರ ಅಂತರ್ಜಲ ಮಂಡಳಿ (ಸಿಜಿಡಬ್ಲ್ಯುಬಿ), ಕರ್ನಾಟಕ ರಾಜ್ಯ ಅಂತರ್ಜಲ ಪ್ರಾಧಿಕಾರದ ಪ್ರತಿನಿಧಿಗಳೊಂದಿಗೆ 'ಅಂತರ್ಜಲ ಕಾರ್ಯಪಡೆ' ರಚಿಸಲಾಗುವುದು ಎಂದು ಜಲಮಂಡಳಿ ಅಧ್ಯಕ್ಷ ಡಾ. ವಿ. ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ಜಲಮಂಡಳಿಯ ಕೇಂದ್ರ ಕಚೇರಿಯಲ್ಲಿ ಸೋಮವಾರ ಐಐಎಸ್‌ಸಿ, ಸಿಜಿಡಬ್ಲ್ಯುಬಿಯ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ಈ ಕಾರ್ಯಪಡೆ ಮೂಲಕ ನಗರದ ಅಂತರ್ಜಲ ಮಟ್ಟದ ಮೇಲೆ ನಿಗಾವಹಿಸಲಾಗುವುದು. ನಿರಂತರವಾಗಿ ದತ್ತಾಂಶಗಳ ಕ್ರೋಢೀಕರಣ, ವಿಶ್ಲೇಷಣೆ ಮೂಲಕ ಉತ್ತಮ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

ಬೆಂಗಳೂರು ನಗರದಲ್ಲಿ ನೀರಿನ ಕೊರತೆ ಎದುರಾಗಲು ಅಂತರ್ಜಲ ಮಟ್ಟ ಕಡಿಮೆಯಾಗಿರುವುದೇ ಪ್ರಮುಖ ಕಾರಣ. ಅಂತರ್ಜಲ ಮಟ್ಟ ಯಾವ ಹಂತದಲ್ಲಿದೆ, ಯಾವ ಯಾವ ಪ್ರದೇಶಗಳಲ್ಲಿ ನೀರಿನ ಲಭ್ಯತೆ ಹೆಚ್ಚಾಗಿದೆ ಎಂಬ ಮಾಹಿತಿ ಸಾಂಪ್ರದಾಯಿಕ ವ್ಯವಸ್ಥೆಯಿಂದ ದೊರೆಯುತ್ತಿಲ್ಲ. ಹೀಗಾಗಿ, ಐಐಎಸ್‌ಸಿ ವಿಜ್ಞಾನಿಗಳು, ಸಿಜಿಡಬ್ಲ್ಯುಬಿ ಮತ್ತು ಕರ್ನಾಟಕ ಅಂತರ್ಜಲ ಪ್ರಾಧಿಕಾರದ ಜೊತೆಗೂಡಿ 'ಎಐ ಬೇಸ್ಡ್ ಅಡ್ವಾನ್ಸ್ಡ್ ಗ್ರೌಂಡ್ ವಾಟರ್ ಮಾನಿಟರಿಂಗ್ ಸಿಸ್ಟಮ್' ಅನ್ನು ಜಲಮಂಡಳಿ ಅಳವಡಿಸಿಕೊಳ್ಳಲಿದೆ ಎಂದು ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.



ಐಐಎಸ್‌ಸಿ ವಿಜ್ಞಾನಿಗಳು ತಂತ್ರಜ್ಞಾನದ ನಿರ್ಮಾಣ ಮತ್ತು ಅಳವಡಿಕೆಯ ಮುಂದಾಳತ್ವ ವಹಿಸಲಿದ್ದಾರೆ. ಮಾಹಿತಿ ಸಂಗ್ರಹ, ದತ್ತಾಂಶದ ವಿಶ್ಲೇಷಣೆ ಸೇರಿದಂತೆ ಅಗತ್ಯ ಮಾಹಿತಿಯ ಕ್ರೋಢೀಕರಣ ಹಾಗೂ ವರದಿ ನೀಡಲಿದೆ ಎಂದರು.

ಈಗ ಜಲ ಮರುಪೂರಣ ವ್ಯವಸ್ಥೆಯನ್ನು ಅಳವಡಿಸುವಾಗ ಹೆಚ್ಚಿನ ತಾಂತ್ರಿಕ ಮಾಹಿತಿಯನ್ನು ಒಳಗೊಂಡ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತಿಲ್ಲ. ಇದಕ್ಕೆ ಮಾಹಿತಿಯ ಕೊರತೆಯೇ ಕಾರಣ. ಹೊಸ ವ್ಯವಸ್ಥೆಯ ಅಳವಡಿಕೆಯಿಂದ ಯಾವ ಪ್ರದೇಶದಲ್ಲಿ ಮರುಪೂರಣ ಪ್ರಮಾಣ ಹೆಚ್ಚಾಗುತ್ತಿದೆ ಎಂಬ ಮಾಹಿತಿ ದೊರೆಯಲಿದೆ. ಇದೇ ರೀತಿ ಕೆರೆಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸುವ ಪರಿಣಾಮಕಾರಿ ಕ್ರಮಗಳ ಬಗ್ಗೆಯೂ ಮಾಹಿತಿ ದೊರೆಯಲಿದೆ ಎಂದು ಹೇಳಿದರು.

ಸಭೆಯಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊ. ಶೇಖರ್ ಎಂ, ಸಹ ಪ್ರಾಧ್ಯಾಪಕ ಎಲ್.ಎನ್ ರಾವ್, ಸಿಜಿಡಬ್ಲ್ಯುಬಿ ಪ್ರಾದೇಶಿಕ ನಿರ್ದೇಶಕ ಜ್ಯೋತಿ ಕುಮಾರ್, ವಿಜ್ಞಾನಿಗಳಾದ ಎಚ್.ಪಿ ಜಯಪ್ರಕಾಶ್ ಮತ್ತು ರಾಹುಲ್ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ವಿಶ್ವ ಪುಸ್ತಕ ಮತ್ತು ಕೃತಿಸ್ವಾಮ್ಯ ದಿನಾಚರಣೆ, ವಾರ್ಷಿಕ ಪ್ರಶಸ್ತಿ ಪ್ರದಾನ: ಅತಿಥಿಗಳು: ಕೆ.ಎನ್. ಗಣೇಶಯ್ಯ, ಎಂ.ಎಸ್. ಆಶಾದೇವಿ, ಬೈರಮಂಗಲ ರಾಮೇಗೌಡ, ವಸುಂಧರಾ ಭೂಪತಿ, ಪ್ರಕಾಶ್ ಕಂಬತ್ತಳ್ಳಿ, ಪ್ರಶಸ್ತಿ ಪುರಸ್ಕೃತರು: ನಿಂಗರಾಜ್ ಚಿತ್ತಣ್ಣನವರ್, ರೂಪಾ ಮತ್ತಿಕೆರೆ, ಆಯೋಜನೆ: ಕರ್ನಾಟಕ ಪ್ರಕಾಶಕರ ಸಂಘ, ಬಿಎಂಶ್ರೀ ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿಎಂಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ವಿಶ್ವ ಪುಸ್ತಕ ದಿನಾಚರಣೆ: ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ನಿಡಸಾಲೆ ಪುಟ್ಟಸ್ವಾಮಯ್ಯ, ಅತಿಥಿ: ವೂಡೇ ಪಿ. ಕೃಷ್ಣ, ಸನ್ಮಾನಿತರು: ಸು. ರುದ್ರಮೂರ್ತಿಶಾಸ್ತ್ರಿ, ರೂಪಾ ಮತ್ತಿಕೆರೆ, ಸಿ. ಮಾಯಣ್ಣ, ಆರ್. ರಾಮಕೃಷ್ಣ, ಆಯೋಜನೆ: ಕರ್ನಾಟಕ ಕನ್ನಡ ಬರಹಗಾರ ಮತ್ತು ಪ್ರಕಾಶಕರ ಸಂಘ, ಸ್ಥಳ: ಶೇಷಾದ್ರಿಪುರಂ ಕಾಲೇಜು, ಬೆಳಿಗ್ಗೆ 10.45

ಕ್ಯಾಂಟೀನ್ ಕಾರಂತರಿಗೆ ಸಾಂಸ್ಕೃತಿಕ ಬೀಳ್ಕೊಡುಗೆ: ಆಯೋಜನೆ: ಬೆಂಗಳೂರು ರಂಗಕಲಾವಿದರ ವಿವಿಧೋದ್ದೇಶ ಸಹಕಾರ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರದ ಕ್ಯಾಂಟೀನ್ ಆವರಣ, ಸಂಜೆ 5

ರಾಮನವಮಿ ಸಂಗೀತೋತ್ಸವ–2024: ವಿಶೇಷ ಕರ್ನಾಟಕ ಸಂಗೀತ ಕಛೇರಿ: ಗಿರಿಜಾಶಂಕರ್ ಸುಂದರೇಶನ್, ನಿಶಾಂತ್ ಚಂದ್ರನ್, ಬಿ.ಎಸ್. ಪ್ರಶಾಂತ್, ಕಿರಣ್ ಕುಮಾರ್, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 4.45ರಿಂದ

ಶ್ರೀರಾಮೋತ್ಸವ: ಸತ್ಯನಾರಾಯಣ ಪೂಜೆ, ಆಯೋಜನೆ ಹಾಗೂ ಸ್ಥಳ: ಜಯರಾಮ ಸೇವಾ ಮಂಡಳಿ, 1ನೇ ಮುಖ್ಯರಸ್ತೆ, 8ನೇ ಬಡಾವಣೆ, ಜಯನಗರ, ಸಂಜೆ 6.30

ಬೆಂಗಳೂರು ಕರಗ ಶಕ್ತ್ಯೋತ್ಸವ: ಧರ್ಮರಾಯಸ್ವಾಮಿ ಮಹಾರಥೋತ್ಸವ, ಆಯೋಜನೆ ಮತ್ತು ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ, ತಿಗಳರಪೇಟೆ, ರಾತ್ರಿ 12.30

ರಾಗಿ ಮುದ್ದೆ, ಇಡ್ಲಿ, ಬಿಸಿಬೇಳೆ ಬಾತ್‌ಗೆ ಸಿಕ್ಕಿಲ್ಲ ಅನುಮತಿ; ಹೊಸ ಕ್ಯಾಂಟೀನ್ ನಿರ್ಮಾಣಕ್ಕೂ ಮೌನ

ಇಂದಿರಾ ಕ್ಯಾಂಟೀನ್: ಈಡೇರದ ಭರವಸೆ

• ಆರ್. ಮಂಜುನಾಥ್



ಇಂದಿರಾ ಕ್ಯಾಂಟೀನ್ (ಸಾಂದರ್ಭಿಕ ಚಿತ್ರ)

ಮತ ಮಂಥನ

ಬೆಂಗಳೂರು: ಬಡವರ ಜೇಬಿಗೆ ಹೊರೆಯಾಗದಂತೆ ಹಸಿವನ್ನು ತಣಿಸುವ 'ಇಂದಿರಾ ಕ್ಯಾಂಟೀನ್'ಗಳನ್ನು ಬಿಜೆಪಿ ಕಡೆಗಣಿಸಿ, ದೂಳು ಹಿಡಿಯುವಂತೆ ಮಾಡಿತ್ತು. ತನ್ನದೇ ಯೋಜನೆ ಎಂದು ಅದನ್ನು ಪ್ರಚಾರದ ಸರಕಾಗಿ ಮಾಡಿಕೊಂಡಿದ್ದ ಕಾಂಗ್ರೆಸ್, ಹೊಸ ರೂಪ ನೀಡುವ ಪ್ರಕ್ರಿಯೆ ಮಾತುಗಳನ್ನಾಡಿದ್ದರೂ ಅದು ಇನ್ನೂ ಕಾರ್ಯಗತವಾಗಿಲ್ಲ.

ತಮಿಳುನಾಡಿನ 'ಅಮ್ಮ ಕ್ಯಾಂಟೀನ್' ಮಾದರಿಯಲ್ಲಿ ರಾಜ್ಯದಲ್ಲೂ ಕಡಿಮೆ ದರದಲ್ಲಿ ಆಹಾರ ಒದಗಿಸಲು 2017ರಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು ಕಾಂಗ್ರೆಸ್ ನಾಯಕಿ ದಿವಂಗತ 'ಇಂದಿರಾಗಾಂಧಿ ಹೆಸರಿನಲ್ಲಿ 'ಇಂದಿರಾ ಕ್ಯಾಂಟೀನ್' ಆರಂಭಿಸಿದರು. ಬೆಂಗಳೂರು ಅಲ್ಲದೆ ರಾಜ್ಯದ ವಿವಿಧ ನಗರಗಳಲ್ಲಿ ಈ ಕ್ಯಾಂಟೀನ್‌ಗಳು ತೆರೆದುಕೊಂಡವು. ಆದರೆ, ಆರಂಭದಲ್ಲಿದ್ದ ಉತ್ಸಾಹ ವರ್ಷ ಕಳೆದಂತೆ ಕರಗುತ್ತಾ ಬಂದಿತು. 'ಇಂದಿರಾ ಕ್ಯಾಂಟೀನ್'ಗಳಲ್ಲಿನ ಆಹಾರದ ಗುಣಮಟ್ಟವೂ ಕುಸಿಯಿತು.

ಕಾಂಗ್ರೆಸ್ ನೇತೃತ್ವದ ಸರ್ಕಾರ ಹೋಗಿ ಬಿಜೆಪಿ ನೇತೃತ್ವದ ಸರ್ಕಾರ ಬಂದ ಮೇಲೆ ಬೆಂಗಳೂರು ವ್ಯಾಪ್ತಿಯಲ್ಲಿನ 'ಇಂದಿರಾ ಕ್ಯಾಂಟೀನ್'ಗಳು ಸೊರಗಿದವು. ದೂಳು ಹಿಡಿದವು. ಸೇವಾ ಸಂಸ್ಥೆಗಳ ನೆರವಿನಿಂದ ಕೆಲವರಿಗೆ ಗುತ್ತಿಗೆ ನೀಡಲಾಗಿದ್ದ ಕ್ಯಾಂಟೀನ್‌ಗಳಲ್ಲಿ ಆಹಾರ ನೀಡುವ ಸಂಖ್ಯೆಯೂ ಕಡಿಮೆಯಾದವು. ಬಿಬಿಎಂಪಿ ಸರ್ಕಾರ ಅನುದಾನ ನೀಡಲಿಲ್ಲ. ಹೀಗಾಗಿ, ತಾನೇ ನಿರ್ವಹಿಸಬೇಕಿದ್ದ 'ಇಂದಿರಾ ಕ್ಯಾಂಟೀನ್'ಗಳನ್ನು ಸರ್ಕಾರದ ಅನುದಾನದ ಕೊರತೆ ನೆಪವೊಡ್ಡಿ ಪಾಲಿಕೆ ಸುಮ್ಮನಾಯಿತು. ಸರ್ಕಾರ ಒದಗಿಸದ ಬಾಬ್ತು ಹೆಸರು ಬದಲಿಸಲು ಮುಂದಾಯಿತು. ಕಾಂಗ್ರೆಸ್ ನಾಯಕರು ಆಗಾಗ ಧ್ವನಿ ಎತ್ತಿದ್ದಾಗ ವಿಷಯ ಬದಿಗೆ ಸರಿಯಿತು.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಇದೇ 'ಇಂದಿರಾ ಕ್ಯಾಂಟೀನ್' ಚುನಾವಣಾ ವಿಷಯವಾಯಿತು. ಕಾಂಗ್ರೆಸ್ ನಾಯಕರು ಇದನ್ನು ಹೆಚ್ಚಾಗಿಯೇ ಪ್ರಚಾರಕ್ಕೆ ಬಳಸಿಕೊಂಡರು. 'ನಮ್ಮ ನಾಯಕಿ ಇಂದಿರಾಗಾಂಧಿ ಹೆಸರಿನ ಕ್ಯಾಂಟೀನ್ ಅನ್ನು ಬಿಜೆಪಿಯವರು ಮುಚ್ಚಿದರು. ಹಸಿದವರಿಗೆ ಹೊಟ್ಟೆತುಂಬಾ ಅನ್ನ ನಾವು ಕೊಡುತ್ತೇವೆ' ಎಂದರು. ಅಧಿಕಾರಕ್ಕೆ ಬಂದ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆದಿಯಾಗಿ ಎಲ್ಲವರೂ 'ಇಂದಿರಾ ಕ್ಯಾಂಟೀನ್'ಗೆ ಮರುಜೀವ, ಹೊಸ ರೂಪ, ಹೊಸ ಮೆನು, ಗುಣಮಟ್ಟದ ಆಹಾರ ನೀಡುವುದಾಗಿ ಹೇಳಿದರು. ಬಜೆಟ್‌ನಲ್ಲೂ ಘೋಷಿಸಲಾಯಿತು. ಆದರೆ, ಬಿಬಿಎಂಪಿ ವ್ಯಾಪ್ತಿಯಲ್ಲಿ ಹೊಸ ಮೆನುವಿನೊಂದಿಗೆ ಆರಂಭವಾಗಲು ಸರ್ಕಾರದ ಇನ್ನೂ ಅನುಮತಿ ನೀಡಿಲ್ಲ.

ನಗರದಲ್ಲಿ ವಾರ್ಡ್‌ಗೊಂದು, ದೊಡ್ಡ ವಾರ್ಡ್‌ಗಳಲ್ಲಿ ಎರಡು–ಮೂರು 'ಇಂದಿರಾ ಕ್ಯಾಂಟೀನ್' ಆರಂಭಿಸಲು ಬಿಬಿಎಂಪಿಗೆ ಸರ್ಕಾರ ಸೂಚನೆ ನೀಡಿತು. 169 'ಇಂದಿರಾ ಕ್ಯಾಂಟೀನ್'ಗಳಲ್ಲಿ ಬೆರಳೆಣಿಕೆಯಷ್ಟು ಮಾತ್ರ ಕಾರ್ಯನಿರ್ವಹಿಸುತ್ತಿದ್ದವು. ಎಲ್ಲವನ್ನೂ ದುರಸ್ತಿ ಮಾಡಲಾಯಿತು. ಹೊಸ ಕ್ಯಾಂಟೀನ್ ನಿರ್ಮಿಸಲು, ರಾಗಿ ಮುದ್ದೆ, ಇಡ್ಲಿ, ಬಿಸಿಬೇಳೆ ಬಾತ್, ಮಂಗಳೂರು ಬನ್ಸ್ ಸೇರಿದಂತೆ ಹೊಸ ಮೆನುವಿನೊಂದಿಗೆ ಕಾರ್ಯಾರಂಭ ಮಾಡುವ ಟೆಂಡರ್ ಅನ್ನೂ ಬಿಬಿಎಂಪಿ ಅಂತಿಮಗೊಳಿಸಿತ್ತು. 'ಇದಕ್ಕೆ ಅನುಮತಿ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಿಕೊಂಡಿದೆ. ಜನವರಿಯಲ್ಲಿ ಮನವಿ ಸಲ್ಲಿಸಿದ್ದರೂ ಅನುಮತಿ ಇನ್ನೂ ಸಿಕ್ಕಿಲ್ಲ.

ಹೊಸ ಟೆಂಡರ್‌ನಲ್ಲಿ ಹೊಸ ಮೆನುವಿನ ಆಹಾರ ಸರಬರಾಜು ಮಾಡಲು ಹಾಗೂ ಹೊಸ ಕ್ಯಾಂಟೀನ್ ನಿರ್ಮಿಸಲು, ₹132 ಕೋಟಿ ವೆಚ್ಚ ಮಾಡಲು ರಾಜ್ಯ ಸರ್ಕಾರದ ಅನುಮತಿ ಕಾಯುತ್ತಿರುವ ಬಿಬಿಎಂಪಿ, ಹಳೆಯ ಗುತ್ತಿಗೆಯನ್ನೇ ಮುಂದುವರಿಸಿ, ಹಳೆಯ ರೀತಿಯಲ್ಲೇ ಆಹಾರ ನೀಡುತ್ತಿದೆ. 'ಗುಣಮಟ್ಟ, ಸ್ವಚ್ಛತೆ ಇಲ್ಲ' ಎಂಬ ದೂರು ಮುಂದುವರಿದಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಒಂದು 'ಇಂದಿರಾ ಕ್ಯಾಂಟೀನ್' ಆರಂಭಿಸಿದ್ದು ಬಿಟ್ಟರೆ ಸರ್ಕಾರ ಇನ್ನೇನು ಮಾಡಿಲ್ಲ. 'ಇಂದಿರಾ ಕ್ಯಾಂಟೀನ್'ಗಳನ್ನು ನಿರ್ವಹಿಸಲು 2017ರಲ್ಲಿ ₹50 ಕೋಟಿ ಅನುದಾನ ಬಿಬಿಎಂಪಿಗೆ ಸಿಕ್ಕದ್ದೇ ಕೊನೆ. ಆ ನಂತರ ಯಾವ ರೀತಿಯ ಅನುದಾನವೂ ಈ ಬಾಬ್ತಿನಲ್ಲಿ ಪಾಲಿಕೆಗೆ ಬಂದಿಲ್ಲ.

ಇಂದಿರಾ ಕ್ಯಾಂಟೀನ್‌ಗಳ ಎಲ್ಲೆಲ್ಲಿ ಎಷ್ಟು ವೆಚ್ಚ?

ವಲಯ	ಸಂಖ್ಯೆ+ಮೊಬೈಲ್	ವೆಚ್ಚ
ಪಶ್ಚಿಮ, ದಾಸರಹಳ್ಳಿ	45+5	₹36.48 ಕೋಟಿ
ಪೂರ್ವ, ಯಲಹಂಕ	51+14	₹35.92 ಕೋಟಿ
ಬೊಮ್ಮನಹಳ್ಳಿ, ಮಹದೇವಪುರ, ಆರ್‌.ಆರ್‌. ನಗರ	46	₹31.13 ಕೋಟಿ
ದಕ್ಷಿಣ	35+6	₹29.23 ಕೋಟಿ

ದರ ಪಟ್ಟಿ

ಉಪಾಹಾರ (ಬೆಳಿಗ್ಗೆ 7ರಿಂದ 10)–ಪ್ಲೇಟ್‌ಗೆ ₹5

ಮಧ್ಯಾಹ್ನದ ಊಟ (ಮಧ್ಯಾಹ್ನ 1ರಿಂದ 3)–ಪ್ಲೇಟ್‌ಗೆ ₹10

ರಾತ್ರಿ ಊಟ (ಸಂಜೆ 7.30ರಿಂದ ರಾತ್ರಿ 9)–ಪ್ಲೇಟ್‌ಗೆ ₹10

'ಪ್ರಜಾಪ್ರಭುತ್ವದ ಉಳಿವಿಗೆ ಕಾಂಗ್ರೆಸ್ ಬೆಂಬಲಿಸಿ'

ಪ್ರಜಾವಾಣಿ ವಾರ್ತೆ

ಯಲಹಂಕ: ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಉಳಿವಿಗಾಗಿ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಕೋಮುವಾದಿ ಬಿಜೆಪಿಯನ್ನು ಬಹಿಷ್ಕರಿಸಿ, ಬಡವರ ಪರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿರುವ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕು ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿಯ ಅಧ್ಯಕ್ಷ ವಿ. ನಾಗರಾಜ್ ಹೇಳಿದರು.

'ಚುನಾವಣೆಗಿಂತ ಹೆಚ್ಚಾಗಿ ನಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕಾಗಿದೆ. ಅದಕ್ಕಾಗಿ ಈ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಈ ಕಾರಣದಿಂದ ಸಮಿತಿಯಡಿಯಲ್ಲಿ 12 ಸಂಘಟನೆಗಳು ಒಟ್ಟಾಗಿ ಈ ನಿರ್ಧಾರ ಕೈಗೊಂಡಿದ್ದೇವೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಿಜೆಪಿ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಗಳು ಈಡೇರಿಲ್ಲ. ರೈತರ ಆದಾಯ ದ್ವಿಗುಣಗೊಳ್ಳಲಿಲ್ಲ. ಜನರ ಖಾತೆಗೆ ₹ 15 ಲಕ್ಷ ಬರಲಿಲ್ಲ. ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿಯಾಗಲಿಲ್ಲ. ರೈತ ವಿರೋಧಿ ಕಾಯ್ದೆ ಜಾರಿಗೆ ತಂದಿದ್ದನ್ನು ವಿರೋಧಿಸಿ ಹೋರಾಟ ಮಾಡಿ 700 ರೈತರು ಜೀವ ಕಳೆದುಕೊಂಡರು. ಈ ಸರ್ಕಾರ ದಲಿತರನ್ನು, ಪ್ರಗತಿಪರ ಚಿಂತಕರು ಮತ್ತು ಹೋರಾಟಗಾರರು, ಅಂಬೇಡ್ಕರ್ ವಾದವನ್ನು ಒತ್ತಿಹೇಳಿದ ಅನೇಕರನ್ನು ಜೈಲಿಗೆ ಕಳುಹಿಸಿದೆ ಎಂದು ಎಚ್ಚರಿಸಿದರು.

ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ದಲಿತ, ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗಗಳ ಜನರ ಬದುಕು ಇನ್ನಷ್ಟು ಶೋಚನೀಯ ಸ್ಥಿತಿ ತಲುಪಲಿದೆ. ಸಂವಿಧಾನವನ್ನು ಬದಲು ಮಾಡಲು ಹೊರಟಿರುವವರು ಮತ್ತೆ ಅಧಿಕಾರಕ್ಕೆ ಬರದಂತೆ ಎಂದು ವಿ. ನಾಗರಾಜ್ ಅವರು ತಿಳಿಸಿದರು.

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ರವಿಕುಮಾರ್, ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಯೋಜಕ ರಾಮುಗೊಂಡನಹಳ್ಳಿ ರಮೇಶ್, ದಲಿತ ಮುಖಂಡರಾದ ಎಸ್.ಮಾರುತಿ, ರಾಮಣ್ಣ, ಸುರೇಶ್ ಮೈಲ್ಲಾಜಯ್ಯ, ಮಂಜುನಾಥ್, ಶ್ರೀಧರ್, ಹನುಮಂತಕುಮಾರ್, ಕಿನ್ನಣ್ಣ ಭಾಗವಹಿಸಿದ್ದರು.

ಮೋದಿ ಎದುರು ನಡುಗುವ ಬಿಜೆಪಿ ಸಂಸದರು: ಸಿದ್ದರಾಮಯ್ಯ ವ್ಯಂಗ್ಯ

ಪ್ರಜಾವಾಣಿ ವಾರ್ತೆ



ರಾಜರಾಜೇಶ್ವರಿನಗರದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಸುರೇಶ್ ಪರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮತಯಾಚನೆ ನಡೆಸಿದರು

ರಾಜರಾಜೇಶ್ವರಿ ನಗರ: 'ರಾಜ್ಯಕ್ಕೆ ಸಿಗಬೇಕಾದ ಅನುದಾನ, ಯೋಜನೆಗಳನ್ನು ಕೇಳಿ ಪಡೆಯದ, ನರೇಂದ್ರ ಮೋದಿ ಎದುರು ನಡುಗುತ್ತ ಮಂಡಿಯೂರಿ ಕುಳಿತುಕೊಳ್ಳುವ ಬಿಜೆಪಿ ಸಂಸದರನ್ನು ಸೋಲಿಸುವ ಮೂಲಕ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕು' ಎಂದು ಮತದಾರರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದರು.

ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಪರ ಇಲ್ಲಿ ಮತಯಾಚನೆ ಮಾಡಿ ಮಾತನಾಡಿದ ಅವರು, 'ಭ್ರಷ್ಟ, ಜನ ವಿರೋಧಿ, ರೈತರ ವಿರೋಧಿ ಬಿಜೆಪಿಗೆ ತಕ್ಕ ಪಾಠ ಕಲಿಸಿ' ಎಂದರು.

'ಬೆಂಗಳೂರು ನಗರದ ನೀರಿನ ಹಾಹಾಕಾರಕ್ಕೆ, ಟ್ಯಾಂಕರ್ ನೀರಿನ ಸೃಷ್ಟಿಗೆ, ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಅನುಮತಿ ನೀಡದ ನರೇಂದ್ರ ಮೋದಿಯವರೇ ನೇರ ಕಾರಣ. ಮತಕೋಸ್ಕರ ಇಷ್ಟೊಂದು ಸುಳ್ಳು ಹೇಳುವ ಪ್ರಧಾನಿ ಹಿಂದೆಂದೂ ಇರಲಿಲ್ಲ. ಮುಂದೆಯೂ ಬರುವುದಿಲ್ಲ' ಎಂದು ವ್ಯಂಗ್ಯವಾಡಿದರು.

ಕೆಪಿಸಿಸಿ ವಕ್ತಾರೆ ಎಚ್. ಕುಸುಮಾ ಮಾತನಾಡಿ, 'ಕಾಂಗ್ರೆಸ್ ಸರ್ಕಾರ ಬಡವರು, ಶ್ರಮಿಕರು, ಮಧ್ಯಮ ವರ್ಗದವರು, ರೈತರಿಗೆ ಗ್ಯಾರಂಟಿ ಯೋಜನೆ ನೀಡಿದೆ. ಆದರೆ, ಕೇಂದ್ರದ ಬಿಜೆಪಿ ಸರ್ಕಾರ ದೊಡ್ಡ ಉದ್ಯಮಿಗಳ ಲಕ್ಷಾಂತರ ಕೋಟಿ ಸಾಲವನ್ನು ಮನ್ನಾ ಮಾಡಿದೆ. ಈ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸುವ ಅಭಿವೃದ್ಧಿಗೆ ಕೈಜೋಡಿಸಿ' ಎಂದರು.

ಡಿ.ಕೆ. ಸುರೇಶ್ ಮಾತನಾಡಿ, 'ನನಗೆ ಕೂಲಿ ಕೊಡಿ. ನನ್ನ ಪ್ರಾಣ ಒತ್ತೆ ಇಟ್ಟು ಮೇಕೆದಾಟು, ಮಹದಾಯಿ ಯೋಜನೆ, ರಾಜ್ಯಕ್ಕೆ ಸಿಗಬೇಕಾಗಿರುವ ಹಲವು ಯೋಜನೆಗಳು ಮತ್ತು ನಮ್ಮ ಪಾಲಿನ ಅನುದಾನವನ್ನು ತರುತ್ತೇನೆ' ಎಂದು ಭರವಸೆ ನೀಡಿದರು.

ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತರಾಯಪ್ಪ, ಮಾಜಿ ಉಪಮೇಯರ್ ಬಿ.ಎಸ್. ಪುಟ್ಟರಾಜು, ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್, ಮುಖಂಡ ರಾಜೇಶ್ ಗೂಳಿಗೌಡ ಮಾತನಾಡಿದರು. ವಿಧಾನ ಪರಿಷತ್ ಸದಸ್ಯರಾದ ಎಸ್. ರವಿ, ಸಲೀಂ ಅಹಮದ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ. ರಾಜ್ ಕುಮಾರ್, ಕಾರ್ಮಿಕ ಘಟಕದ ಅಧ್ಯಕ್ಷ ಪುಟ್ಟಸ್ವಾಮಿ ಗೌಡ, ಪಾಲಿಕೆ ಮಾಜಿ ಸದಸ್ಯರಾದ ವೇಲು ನಾಯಕ್, ಜಿ. ಮೋಹನ್ ಕುಮಾರ್ ಇದ್ದರು.

'ಬಿಜೆಪಿಯಿಂದ ಹಣ ಅಕ್ರಮ ಸಾಗಣೆ'

ಬೆಂಗಳೂರು: 'ತೇಜಸ್ವಿ ಸೂರ್ಯ ಕಣದಲ್ಲಿರುವ ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ಬಿಜೆಪಿಯವರು ಅಕ್ರಮವಾಗಿ ಹಣ ಸಾಗಣೆ ಮಾಡಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆರೋಪಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಎಲ್ಲ ಕಡೆ ಹಂಚಲು ಬಿಜೆಪಿಯವರು ತೆಗೆದುಕೊಂಡು ಹೋಗುತ್ತಿದ್ದ ₹2 ಕೋಟಿಯನ್ನು ಚುನಾವಣಾ ಅಧಿಕಾರಿಗಳು ಕಾಟನ್ ಪೇಟೆಯಲ್ಲಿ ಜಪ್ತಿ ಮಾಡಿದ್ದರು. ಹಲವು ಕಡೆ ಬಿಜೆಪಿಯವರು ಸುಮಾರು ಹಣ ಸಾಗಿಸಿದ್ದಾರೆ' ಎಂದು ದೂರಿದರು.

'ಜಪ್ತಿ ಮಾಡಿರುವ ಹಣ ವಶ ಪಡಿಸಿಕೊಂಡಿರುವ ಪ್ರಕರಣವನ್ನು ಅಧಿಕಾರಿಗಳ ಮೂಲಕ ಮುಚ್ಚಿ ಹಾಕಲು ಬಿಜೆಪಿಯತ್ನಿಸುತ್ತಿದೆ. ಈ ವಿಚಾರದಲ್ಲಿ ಪ್ರತಿಯೊಂದು ಕ್ಷೇತ್ರದ ಮೇಲೆ ನಾವು ಗಮನ ಕೊಟ್ಟಿದ್ದೇವೆ. ತನಿಖೆ ವಿಚಾರದಲ್ಲಿ ನಾವು ಮಧ್ಯಪ್ರವೇಶಿಸುವುದಿಲ್ಲ. ಚುನಾವಣಾ ಆಯೋಗ ಈ ವಿಷಯವನ್ನು ನೋಡಿಕೊಳ್ಳಲಿದೆ' ಎಂದರು.

ರಾಜೀವ್ ಗೌಡ ಜನರ ನಾಡಿಮಿಡಿತ ಬಲ್ಲವರು: ಶಿವಕುಮಾರ್ ಅಭಿಮತ

ಪ್ರಜಾವಾಣಿ ವಾರ್ತೆ



ಬಾಗಲಗುಂಟೆಯಲ್ಲಿ ನಡೆದ ರೋಡ್ ಶೋದಲ್ಲಿ ಎಂ.ವಿ. ರಾಜೀವ್ ಗೌಡ ಪರ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತಯಾಚಿಸಿದರು

ಪೀಣ್ಯ ದಾಸರಹಳ್ಳಿ: 'ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ವಿ. ರಾಜೀವ್ ಗೌಡ, ಬಿಜೆಪಿ ಅಭ್ಯರ್ಥಿಯಂತೆ ಚಿಕ್ಕಮಗಳೂರಿನಿಂದ ವಲಸೆ ಬಂದವರಲ್ಲ. ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದು, ಇಲ್ಲಿನ ಜನರ ನಾಡಿಮಿಡಿತ ಬಲ್ಲವರು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕ್ಷೇತ್ರ ವ್ಯಾಪ್ತಿಯ ಟಿ. ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಬಾಗಲಗುಂಟೆ ಗ್ರಾಮದಲ್ಲಿ ನಡೆದ ರೋಡ್ ಶೋ ಉದ್ದೇಶಿಸಿ ಮಾತನಾಡಿದ ಅವರು, 'ರಾಜೀವ್ ಗೌಡ ಅವರ ತಂದೆ ಮತ್ತು ದೊಡ್ಡಪ್ಪ ಕೂಡ ಇಲ್ಲಿನ ಹೈನುಗಾರಿಕೆ ಮತ್ತು ರೇಷ್ಮೆ ಕೃಷಿ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ' ಎಂದರು.

'ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಪ್ರಣಾಳಿಕೆಯಲ್ಲಿ ಘೋಷಿಸಿರುವಂತೆ ಐದು ಮಹತ್ವದ ಗ್ಯಾರಂಟಿ ಯೋಜನೆಗಳನ್ನು ನಮ್ಮ ಸರ್ಕಾರ ಈಗಾಗಲೇ ಜಾರಿಗೆ ತಂದಿದೆ. ಕಳೆದ 10 ತಿಂಗಳ ಅವಧಿಯಲ್ಲಿ ಗ್ಯಾರಂಟಿ ಯೋಜನೆಯ ಫಲಾನುಭವಿಗಳ ಆರ್ಥಿಕ ಪರಿಸ್ಥಿತಿ ತಕ್ಕ ಮಟ್ಟಿಗೆ ಸುಧಾರಿಸಿದೆ' ಎಂದರು.

'ದೇಶದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ, ಕಡುಬಡತನದಲ್ಲಿರುವ ಕುಟುಂಬಗಳಿಗೆ ತಲಾ ₹1 ಲಕ್ಷ ನೀಡುತ್ತೇವೆಂದು ಪಕ್ಷದ ನಾಯಕ ರಾಹುಲ್ ಗಾಂಧಿ ಘೋಷಿಸಿದ್ದಾರೆ. ಜೊತೆಗೆ, ಯುವಕರಿಗಾಗಿ 'ಯುವ ನ್ಯಾಯ್', ಮಹಿಳೆಯರಿಗೆ 'ನಾರಿ ನ್ಯಾಯ್', ರೈತರಿಗೆ 'ಕಿಸಾನ್ ನ್ಯಾಯ್', ಕಾರ್ಮಿಕರಿಗೆ 'ಶ್ರಮಿಕ್ ನ್ಯಾಯ್' ಮೂಲಕ ಐದು ಪ್ರಮುಖ ಗ್ಯಾರಂಟಿ ಯೋಜನೆ ಜಾರಿಗೊಳಿಸಲು ಕೂಡ ತೀರ್ಮಾನಿಸಲಾಗಿದೆ. ಈಗಾಗಲೇ ಜಾರಿಯಲ್ಲಿರುವ ನಮ್ಮ5 ಗ್ಯಾರಂಟಿಗಳ ಜೊತೆಗೆ ರಾಹುಲ್ ಗಾಂಧಿಯವರ ಗ್ಯಾರಂಟಿ ಯೋಜನೆಗಳು ಕೂಡ ರಾಜ್ಯದ ಮನೆಮನೆಗಳಿಗೆ ತಲುಪಲಿವೆ' ಎಂದರು.

ಬಾಗಲಗುಂಟೆಯಿಂದ ಆರಂಭವಾದ ರೋಡ್ ಶೋ ಮಲ್ಲಸಂದ್ರ, ದಾಸರಹಳ್ಳಿ, ಚೊಕ್ಕಸಂದ್ರ, ಪೀಣ್ಯ 2ನೇ ಹಂತ ಸುಂಕದಕಟ್ಟೆವರೆಗೂ ನಡೆಯಿತು. ರೋಡ್ ಶೋಗೂ ಮೊದಲು ಬಾಗಲಗುಂಟೆ ಗ್ರಾಮ ದೇವತೆ ಮಾರಮ್ಮ ದೇವಸ್ಥಾನಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು.

ಮಾಜಿ ಶಾಸಕ ಮಂಜುನಾಥ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ವಾಜೀದ್, ಕಾಂಗ್ರೆಸ್ ನಾಯಕರಾದ ಅಕ್ಕೈ ಪದ್ಮಸಾಲಿ, ಎಂ. ಕೀರ್ತನ್ ಕುಮಾರ್, ಕೆ. ನಾಗಭೂಷಣ್, ಹರೀಶ್ ಪಾರ್ಥ, ಬಿ.ಎಂ. ಜಗದೀಶ್, ಸಲೀಂ ಅಹಮದ್, ಹನುಮಂತರಾಜು, (ಎಬಿಬಿ) ಮಂಜುನಾಥ್ ಮುಂತಾದವರಿದ್ದರು.

ಎಸ್‌ಎಂಎಸ್ ಮೂಲಕ ಮತದಾನಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಮೊಬೈಲ್ ಧ್ವನಿ ಕರೆ (ಐವಿಆರ್‌ಎಸ್) ಹಾಗೂ ಎಸ್‌ಎಂಎಸ್ ಮೂಲಕ ಮತದಾರರಿಗೆ ಮತ ಚಲಾಯಿಸುವಂತೆ ಮನವಿ ಮಾಡಲಾಗುವುದು ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ತಿಳಿಸಿದರು.

ಲೋಕಸಭಾ ಚುನಾವಣೆಯಲ್ಲಿ ಮತದಾನ ಪ್ರಮಾಣವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಏಪ್ರಿಲ್ 26ರಂದು ಮತದಾನ ಮಾಡಲು ಧ್ವನಿಕರೆ ಹಾಗೂ ಎಸ್‌ಎಂಎಸ್‌ಗಳ ಮೂಲಕವೂ ನೆನಪಿಸಲಾಗುತ್ತಿದೆ ಎಂದು ಹೇಳಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಪಾವತಿಸುವವರ ಮಾಹಿತಿ, ಮೊಬೈಲ್ ಸಂಖ್ಯೆ ಲಭ್ಯವಿದೆ. ಅದರ ಅನುಸಾರ ಎಲ್ಲರಿಗೂ ಐವಿಆರ್‌ಎಸ್ ಹಾಗೂ ಬಲ್ಕ್ ಎಸ್‌ಎಂಎಸ್ ಮೂಲಕ ಸಂದೇಶ ಕಳುಹಿಸಲಾಗುತ್ತದೆ ಎಂದರು.

'ಸಕ್ಷಮ್' ನೋಂದಣಿ: ನಗರ ವ್ಯಾಪ್ತಿಯ ಮತದಾರರ ಪಟ್ಟಿಯಲ್ಲಿರುವ ಅಂಗವಿಕಲರು ಹಾಗೂ ಹಿರಿಯ ನಾಗರಿಕರು 'ಸಕ್ಷಮ್' ತಂತ್ರಾಂಶದ ಮೂಲಕ ಸಾರಿಗೆ ವ್ಯವಸ್ಥೆ ಅವಶ್ಯಕತೆಗೆ ಏಪ್ರಿಲ್ 24ರ ಸಂಜೆ 5ರವರೆಗೆ ಕಾಯ್ದಿರಿಸಿಕೊಳ್ಳಬಹುದು ಎಂದು ಹೇಳಿದರು.



ಅಣ್ಣಾಮಲೈ ಪ್ರಚಾರ

ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷ ಅಣ್ಣಾಮಲೈ ಅವರು ಶಾಸಕ ಎಸ್. ರಘು ಅವರೊಂದಿಗೆ ಸೋಮವಾರ ಸಿ.ವಿ.ರಾಮನ್‌ನಗರದಲ್ಲಿ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪಿ.ಸಿ.ಮೋಹನ್ ಪರ ಬೃಹತ್ ರೋಡ್ ಶೋ ನಡೆಸಿ ಮತಯಾಚಿಸಿದರು.

'ಬಿಜೆಪಿ–ಜೆಡಿಎಸ್ ಮೈತ್ರಿ ಅವಕಾಶವಾದಿತನ'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅನ್ನು ಸೋಲಿಸಲು ಬಿಜೆಪಿ–ಜೆಡಿಎಸ್ ಮೈತ್ರಿ ಮಾಡಿಕೊಂಡಿರುವುದು ಅವಕಾಶವಾದಿತನ' ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಅಭಿಪ್ರಾಯಪಟ್ಟಿದ್ದಾರೆ.

'ಎಚ್.ಡಿ. ಕುಮಾರಸ್ವಾಮಿ ಕಣದಲ್ಲಿರುವ ಮಂಡ್ಯದಲ್ಲಿ ಇತ್ತೀಚೆಗೆ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಮಾತನಾಡಿದ್ದ ರಾಹುಲ್ ಗಾಂಧಿ, ಜೆಡಿಎಸ್ ಬಿಜೆಪಿಯ 'ಬಿ' ತಂಡ ಎಂಬ ತಮ್ಮ ಹಿಂದಿನ ಮಾತನ್ನು ಪುನರುಚ್ಚರಿಸಿದ್ದರು. ಜೆಡಿಎಸ್‌ನ ಅವಕಾಶವಾದಿತನಕ್ಕೆ ಇದಕ್ಕಿಂತ ಬೇರೆ ದೃಷ್ಟಾಂತ ಬೇಕೆ ಎಂದೂ ಪ್ರಶ್ನಿಸಿದರು. ಆದರೆ, ಈ ಆರೋಪವನ್ನು ಅಲ್ಲಗಳೆದಿರುವ ಕುಮಾರಸ್ವಾಮಿ, 'ತಾವು ಅವಕಾಶವಾದಿಗಳೂ ಅಲ್ಲ, ಅಧಿಕಾರಕ್ಕಾಗಿಯೂ ಇಲ್ಲ' ಎಂದು ಸಮರ್ಥಿಸಿಕೊಂಡರು. ಹಾಗಾದರೆ, ಅವಕಾಶವಾದಿತನ ಎಂದರೇನು' ಎಂಬುದಾಗಿ ಪ್ರಶ್ನಿಸಿದ್ದಾರೆ.

'ಕಹಿ ಅನುಭವದ ಹೊರತಾಗಿಯೂ ಜನತಾ ದಳ 'ಜಾತ್ಯತೀತ'ದ ಮೈತ್ರಿಯ 2024ರ ಪ್ರಸ್ತಾವವನ್ನು ಬಿಜೆಪಿ ಒಪ್ಪಿಕೊಂಡು, ಅದೂ ತನ್ನ ಅವಕಾಶವಾದಿತನವನ್ನು ಮೆರೆದಿದೆ. ದೇವೇಗೌಡರು ಈ ಮೈತ್ರಿಕೂಟವನ್ನು 'ಪಕ್ಷದ ಉಳಿವಿಗಾಗಿ' ಎಂದು ಸಮರ್ಥಿಸಿಕೊಂಡು, 'ಜೆಡಿಎಸ್ ಅಧಿಕಾರದಾಹಿಯಲ್ಲ, ಅವಕಾಶವಾದಿತನ ಮಾಡುವುದಿಲ್ಲ. ಇದರಲ್ಲಿ ಸ್ವಾರ್ಥ ಏನೂ ಇಲ್ಲ. ನಾನೇ ಈ ನಿರ್ಧಾರ ಮಾಡಿದೆ' ಎಂದು ವಿವರಣೆ ನೀಡಿದರು.

ಅಂದರೆ, ಇದು ಅವರ ಮೊದಲ ಹಾಗೂ ಪ್ರಾಮಾಣಿಕ ತಪ್ಪೊಪ್ಪಿಗೆ! ಇದರ ಅರ್ಥ, ಅವರಿಗೆ 'ಗುರಿ' ಮುಖ್ಯವಾಗಿತ್ತು, 'ಮಾರ್ಗ' (ಬಿಜೆಪಿಯ ಕೋಮುವಾದ) ಮುಖ್ಯವಾಗಲಿಲ್ಲ, ಅದು ಜೆಡಿಎಸ್‌ನ ಕಸದ ಬುಟ್ಟಿಗೆ ಸೇರಿತು' ಎಂದಿದ್ದಾರೆ.

'ರಾಜ್ಯದ ಸಮಸ್ಯೆಗಳನ್ನು ಪರಿಹರಿಸುವ ದೃಷ್ಟಿಯಿಂದ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿದ್ದೇವೆ. ನೀರಾವರಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ನನ್ನ ಏಕಮಾತ್ರ ಗುರಿಯಾಗಿದೆ' ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಜನ ಇದನ್ನು ನಂಬುವರೆ? ಕರ್ನಾಟಕಕ್ಕೆ ಸಹಾಯವಾಗುವಂತೆ ಕಾವೇರಿ ವಿವಾದವನ್ನು ನಿಭಾಯಿಸುವ ಅವಕಾಶವನ್ನು ದೇವೇಗೌಡರು ಪ್ರಧಾನಿಯಾಗಿದ್ದಾಗ ಕಳೆದುಕೊಂಡರು' ಎಂದೂ ಚಂದ್ರಶೇಖರ್ ಅವರು ಹೇಳಿದ್ದಾರೆ.

ಚುನಾವಣಾ ಕರ್ತವ್ಯ: 25ರವರೆಗೆ ಮತದಾನಕ್ಕೆ ಅವಕಾಶ



ಬೆಂಗಳೂರು: ನಗರ ಜಿಲ್ಲಾ ವ್ಯಾಪ್ತಿಯ ಮೂರು ಲೋಕಸಭಾ ಚುನಾವಣೆಯ ವಿಧಾನಸಭೆ ಕ್ಷೇತ್ರಗಳಲ್ಲಿ ಚುನಾವಣಾ ಕರ್ತವ್ಯದಲ್ಲಿರುವವರು ಏಪ್ರಿಲ್ 25ರವರೆಗೆ ಮತದಾನ ಮಾಡಬಹುದು.

ಚುನಾವಣಾ ಕರ್ತವ್ಯದಲ್ಲಿ ನಿರತರಾದ ಮತದಾರರಿಗಾಗಿ ಮತದಾನ ಸೌಲಭ್ಯ ಕೇಂದ್ರಗಳನ್ನು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಸ್ಥಾಪಿಸಲಾಗಿದೆ. ಆ ಕೇಂದ್ರಗಳಲ್ಲಿ ಮತದಾನ ಮಾಡಬಹುದು. ಮನೆಗೆ ಅಂಚೆ ಮೂಲಕ ಅಂಚೆಪತ್ರ ಕಳುಹಿಸಲಾಗುವುದಿಲ್ಲ ಎಂದು ಚುನಾವಣಾಧಿಕಾರಿ ತಿಳಿಸಿದ್ದಾರೆ. ಎರಡನೇ ತರಬೇತಿಯ ನಂತರ ಮತಗಟ್ಟೆ ಅಧಿಕಾರಿಗಳಿಗೆ ಯಾವ್ಯಾವ ವಿಧಾನಸಭಾ ಕ್ಷೇತ್ರಗಳೆಂಬುದು ಆದೇಶದಲ್ಲಿ ತಿಳಿಸಲಾಗಿದೆ. ಯಾವ ವಿಧಾನಸಭಾ ಕ್ಷೇತ್ರಕ್ಕೆ ನಿಯೋಜನೆಗೊಂಡಿರುತ್ತಾರೋ ಅದೇ ವಿಧಾನಸಭಾ ಕ್ಷೇತ್ರದಲ್ಲಿರುವ ಮತದಾನ ಸೌಲಭ್ಯ ಕೇಂದ್ರಗಳಿಗೆ ತೆರಳಿ ಅಂಚೆ ಮತ ಪತ್ರ ಮೂಲಕ ಮತ ಚಲಾಯಿಸಬಹುದು ಎಂದಿದ್ದಾರೆ.

'ಪಾಕಿಸ್ತಾನ ಪರ ಘೋಷಣೆ ಸುಳ್ಳು'

ಪ್ರಜಾವಾಣಿ ವಾರ್ತೆ

ಕುದೂರು: ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಅವರ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಪಾಕಿಸ್ತಾನ ಪರ ಘೋಷಣೆಯನ್ನು ಕೂಗಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದ ಎಫ್ಎಸ್ಎಲ್ ವರದಿ ಬಂದಿದ್ದು, ಪ್ರಚಾರದಲ್ಲಿ ದೇಶ ವಿರೋಧಿ ಘೋಷಣೆಯನ್ನು ಕೂಗಿಲ್ಲ ಎಂದು ವರದಿ ಹೇಳಿದೆ.


ಮಾಗಡಿ ತಾಲ್ಲೂಕಿನ ತಿಪ್ಪಸಂದ್ರ ಗ್ರಾಮದಲ್ಲಿ ಏ. 19ರಂದು ಈ ಘಟನೆ ನಡೆದಿತ್ತು. 'ಬಾಲಕೃಷ್ಣ ಕೀ ಜೈ' ಎಂದು ಕೂಗಿದ್ದ ಘೋಷಣೆಯನ್ನು 'ಪಾಕಿಸ್ತಾನ್ ಕೀ ಜೈ' ಎಂದು ತಿರುಚಿ, ಸುಳ್ಳು ಸುದ್ದಿ ಹಬ್ಬಿಸಲಾಗಿದೆ ಎಂದು ಕಾಂಗ್ರೆಸ್ ಕಾರ್ಯಕರ್ತರಾದ ರಾಮಚಂದ್ರಯ್ಯ ಎಂಬುವರು ನೀಡಿದ ದೂರಿನ ಮೇರೆಗೆ ಐದು ಜನರ ವಿರುದ್ಧ ಪ್ರಕರಣವನ್ನು ದಾಖಲಿಸಲಾಗಿತ್ತು.

ಜೊತೆಗೆ ಚುನಾವಣಾ ಫ್ಲೈಯಿಂಗ್ ಸ್ಕ್ವಾಡ್ ಸಹ ಘೋಷಣೆ ಕುರಿತು ಠಾಣೆಗೆ ದೂರು ಕೊಟ್ಟಿತ್ತು.

'ದೇಶ ವಿರೋಧಿ ಘೋಷಣೆ ಆರೋಪಕ್ಕೆ ಸಂಬಂಧಿಸಿದಂತೆ ಸೋಮವಾರ ಸಂಜೆ ಎಫ್ಎಸ್ಎಲ್ ವರದಿ ಬಂದಿದ್ದು, ಅದರಲ್ಲಿ ರಾಮಚಂದ್ರಯ್ಯ ಎಂಬ ಕಾಂಗ್ರೆಸ್ ಕಾರ್ಯಕರ್ತ 'ಬಾಲಕೃಷ್ಣ ಕೀ ಜೈ' ಎಂದು ಕೂಗಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ತಿಳಿಸಿದ್ದಾರೆ.

ಅಸಹಾಯಕ ತಂದೆಯಾದ ದೇವೇಗೌಡ: ದೇವನೂರ

ಪ್ರಜಾವಾಣಿ ವಾರ್ತೆ



ಮಂಡ್ಯ: 'ನಿಯಂತ್ರಣ ತಪ್ಪಿದ ಮಗನಿಗಾಗಿ ಎಚ್.ಡಿ.ದೇವೇಗೌಡರು ಅಸಹಾಯಕ ತಂದೆಯಂತೆ ಕಾಣಿಸುತ್ತಿದ್ದಾರೆ. ಎಲ್ಲಿ ಬಿದ್ದು ಪೆಟ್ಟು ಮಾಡಿಕೊಳ್ಳುತ್ತಾನೋ ಎಂಬ ಭೀತಿಯಿಂದ ಇಳಿ ವಯಸ್ಸಿನಲ್ಲೂ ಮಗನ ಹಿಂದೆ ಧಾವಿಸುತ್ತಿದ್ದಾರೆ' ಎಂದು ಚಿಂತಕ ದೇವನೂರ ಮಹಾದೇವ ಸೋಮವಾರ ಹೇಳಿದರು.

'ಕುಮಾರಸ್ವಾಮಿ ಅವರು 2006ರಲ್ಲಿ ಎಲ್ಲರನ್ನೂ ಧಿಕ್ಕರಿಸಿ ಬಿಜೆಪಿ ಜೊತೆಗೆ ಸೇರಿ ಮುಖ್ಯಮಂತ್ರಿಯಾದಾಗಲೂ ದೇವೇಗೌಡರು ಹೀಗೆಯೇ ನಡೆದುಕೊಂಡಿದ್ದರು. 'ನಾನೇನ್ ಮಾಡ್ಲಪ್ಪ, ನನ್ ಮಗ ಮಾತು ಕೇಳ್ತಿಲ್ಲ, ಎಲ್ಲಿ ಎಡವಟ್ಟು ಮಾಡಿಕೊಂಡು ಜೈಲು ಸೇರುತ್ತಾನೋ ಎಂಬ ಭಯ ನನಗೆ' ಎಂದು ಆಗ ಭೀತಿ ವ್ಯಕ್ತಪಡಿಸಿದ್ದರಂತೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಅವರು ಹೇಳಿದರು.

'2023ರ ಚುನಾವಣೆಯಲ್ಲಿ ನನ್ನನ್ನೂ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಬಿಜೆಪಿ ಸೋಲಿಸುವವರಿಗೆ ಮತ ಕೊಡಿ ಎಂದು ಕೇಳಿಕೊಂಡಿದ್ದೆವು. ಆಗ ನಮ್ಮ ಬೆಂಬಲ ಕೆಲವು ಕಡೆಗಳಲ್ಲಿ ಜೆಡಿಎಸ್‌ಗೂ ಇತ್ತು. ಆದರೆ ಈಗ ಚುನಾವಣೆಗೂ ಮೊದಲೇ ಬಿಜೆಪಿ–ಜೆಡಿಎಸ್ ಕೂಡುವಳಿಯಾಗಿರುವುದರಿಂದ ಬಿಜೆಪಿ ಜೊತೆಗೆ ಜೆಡಿಎಸ್ ಪಕ್ಷವನ್ನೂ ಸೋಲಿಸಿ ಎನ್ನುತ್ತಿದ್ದೇವೆ' ಎಂದರು.

'ತೆನೆ ಹೊತ್ತ ಮಹಿಳೆಯರ ಚಿತ್ರದಲ್ಲಿ ಕಾಯಕ ಜೀವಿಯ ಘನತೆ ಇತ್ತು. ಆದರೆ ಬಿಜೆಪಿ ಸಹವಾಸ ಮಾಡಿದ ಕೂಡಲೇ ಜಾತ್ಯತೀತ ಪದ ಕಳಚಿ ಬಿದ್ದಿದ್ದು ಹೊರೆಯ ತೆನೆಗಳನ್ನು ಬಿಜೆಪಿ ಕತ್ತರಿಸಿಕೊಂಡಿದೆ, ಕಾಯಕ ಜೀವಿಯಾಗಿದ್ದ ಮಹಿಳೆ ಸೇವಕಿಯಾಗಿದ್ದಾಳೆ. ಮೋದಿ ಅವರು 2047ಕ್ಕೆ ಕನಸು ಕಾಣುತ್ತಿರುವ ವಿಕಸಿತ ಭಾರತ, ಹಿಂದುತ್ವ ಭಾರತ ಇದೇ ಆಗಿದೆ' ಎಂದರು.

'2047ರ ವೇಳೆಗೆ ದೇವರ ಸಾಕ್ಷಾತ್ಕಾರಕ್ಕಾಗಿ ಮೋದಿಯವರು ಹೆಜ್ಜೆ ಇಡಲಿದ್ದಾರೆ. ಅದಕ್ಕೆ ಅಡೆ-ತಡೆಯೊಡ್ಡುವ ಸಂವಿಧಾನವನ್ನು ಬುಡಮೇಲು ಮಾಡಲಿದ್ದಾರೆ. ಒಕ್ಕೂಟ ವ್ಯವಸ್ಥೆ, ಸ್ವಾಯತ್ತ ಸಂಸ್ಥೆಗಳನ್ನು ಹಾಳು ಮಾಡಲಿದ್ದಾರೆ. ಇಂತಹ ಅನರ್ಥಗಳಿಗೆ ಜೆಡಿಎಸ್ ಸಾಥ್ ಕೊಡುತ್ತಿದೆ. ಹೀಗಾಗಿ ಬಿಜೆಪಿ– ಜೆಡಿಎಸ್ ಎರಡೂ ಸೋಲಬೇಕು, ಆಗ ಮಾತ್ರ ಬಹುತ್ವ ಭಾರತದ ಸಹನೆ, ಸಹಬಾಳ್ವೆ, ನ್ಯಾಯ ಮತ್ತು ಸಮಾನತೆ ಉಳಿಯಲಿವೆ' ಎಂದು ಹೇಳಿದರು.

ಬರ ಪರಿಹಾರ: ಇಂದು ಕಾಂಗ್ರೆಸ್ ಪ್ರತಿಭಟನೆ

ಬೆಂಗಳೂರು: ಸುಪ್ರೀಂ ಕೋರ್ಟ್‌ಗೆ ನೀಡಿದ ಭರವಸೆಯಂತೆ ರಾಜ್ಯಕ್ಕೆ ಬರ ಪರಿಹಾರ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ವಿಧಾನಸೌಧದ ಆವರಣದಲ್ಲಿರುವ ಗಾಂಧಿ ಪ್ರತಿಮೆ ಮುಂಭಾಗದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ನಾಯಕರು ಮಂಗಳವಾರ ಪ್ರತಿಭಟನೆ ನಡೆಸಲಿದ್ದಾರೆ.

ಬೆಳಿಗ್ಗೆ 9.30ಕ್ಕೆ ನಡೆಯಲಿರುವ ಈ ಪ್ರತಿಭಟನೆಯಲ್ಲಿ ಸಚಿವರು, ಶಾಸಕರು ಭಾಗವಹಿಸಲಿದ್ದಾರೆ.ಬರ ಪರಿಹಾರ ಬಿಡುಗಡೆ ಮಾಡುವಂತೆ ರಾಜ್ಯ ಸರ್ಕಾರ 2023ರ ಸೆಪ್ಟೆಂಬರ್‌ನಲ್ಲಿಯೇ ಕೇಂದ್ರಕ್ಕೆ ಮನವಿ ಸಲ್ಲಿಸಿತ್ತು. ಆದರೆ, ಕೇಂದ್ರ ಸರ್ಕಾರ ಮನವಿಗೆ ಸ್ಪಂದಿಸದ ಕಾರಣ ಸರ್ಕಾರವು ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು. ಬರ ನಿರ್ವಹಣೆಗೆ ಹಣಕಾಸು ನೆರವು ನೀಡುವಂತೆ ಕರ್ನಾಟಕ ಸರ್ಕಾರ ಮುಂದಿಟ್ಟಿರುವ ಬೇಡಿಕೆಯನ್ನು ಈಡೇರಿಸಲು ಚುನಾವಣಾ ಆಯೋಗ ಅನುಮತಿ ನೀಡಿದೆ ಎಂದು ಕೇಂದ್ರ ಸರ್ಕಾರವು ಸೋಮವಾರ ಸುಪ್ರೀಂ ಕೋರ್ಟ್‌ಗೆ ಹೇಳಿದೆ.

ಈ ಹಿನ್ನೆಲೆಯಲ್ಲಿ ತಕ್ಷಣ ಬರ ಪರಿಹಾರ ಬಿಡುಗಡೆ ಮಾಡಬೇಕು ಆಗ್ರಹಿಸಿ ಪ್ರತಿಭಟನೆ ನಡೆಸಲು ಕಾಂಗ್ರೆಸ್ ನಾಯಕರು ಮುಂದಾಗಿದ್ದಾರೆ.

ಹುಕ್ಕಾ ನಿಷೇಧ ಎತ್ತಿ ಹಿಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಹುಕೋಟಿ ಮೊತ್ತದ ವಹಿವಾಟು ಹೊಂದಿದೆ' ಎಂದೇ ಅಂದಾಜಿಸಲಾಗಿರುವ ಹುಕ್ಕಾ ಮತ್ತು ಹುಕ್ಕಾ ಬಾರ್‌ಗಳನ್ನು ನಿಷೇಧಿಸಿದ್ದ ರಾಜ್ಯ ಸರ್ಕಾರದ ಆದೇಶವನ್ನು ಪ್ರಶ್ನಿಸಿದ್ದ ಎಲ್ಲ ರಿಟ್ ಅರ್ಜಿಗಳನ್ನು ಹೈಕೋರ್ಟ್ ವಜಾ ಮಾಡಿ ಮಹತ್ವದ ತೀರ್ಪು ನೀಡಿದೆ.

ಈ ಸಂಬಂಧ ಆರ್.ಭರತ್ ಸೇರಿದಂತೆ ಹತ್ತಕ್ಕೂ ಹೆಚ್ಚು ಅರ್ಜಿದಾರರು ಸಲ್ಲಿಸಿದ್ದ ಅರ್ಜಿಗಳನ್ನು ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪ್ರಕಟಿಸಿತು.

'ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ ಜಾಹೀರಾತು ನಿಷೇಧ ಮತ್ತು ವ್ಯಾಪಾರ, ವಹಿವಾಟು, ಉತ್ಪಾದನೆ, ಪೂರೈಕೆ ಮತ್ತು ಹಂಚಿಕೆ ಕಾಯ್ದೆ–2003 (ಸಿಒಟಿಪಿ ಕಾಯ್ದೆ) ಕೇಂದ್ರ ಸರ್ಕಾರದ ಕಾನೂನಾಗಿದ್ದು, ಹುಕ್ಕಾ ನಿಷೇಧಿಸಲು ರಾಜ್ಯ ಸರ್ಕಾರಕ್ಕೆ ಯಾವುದೇ ಅಧಿಕಾರವಿಲ್ಲ. ಆಹಾರ ಪೂರೈಸದ ನಿರ್ದಿಷ್ಟ ಸ್ಥಳಗಳಲ್ಲಿ ಹುಕ್ಕಾ ಸೇದಲು ಅವಕಾಶವಿದೆ' ಎಂಬ ಅರ್ಜಿದಾರರ ಪರ ವಕೀಲರ ವಾದವನ್ನು ನ್ಯಾಯಪೀಠ ತಳ್ಳಿ ಹಾಕಿದೆ.

'ಸಿಒಟಿಪಿಎ ಸಿಗರೇಟುಗಳಿಗೆ ಸಂಬಂಧಿಸಿ ಕಾಯ್ದೆಯಾಗಿದ್ದು, ಹುಕ್ಕಾಗೂ ಇದಕ್ಕೂ ಸಂಬಂಧವಿಲ್ಲ. ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಹುಕ್ಕಾಕ್ಕೆ ನಿಷೇಧ ವಿಧಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ. ಸಂವಿಧಾನದ 47ನೇ ವಿಧಿಯ ಅನ್ವಯ ಸಾರ್ವಜನಿಕ ಆರೋಗ್ಯ ಸುಧಾರಿಸಲು ಸೂಕ್ತ ಕ್ರಮ ಕೈಗೊಳ್ಳುವ ಹೊಣೆಗಾರಿಕೆ ಹೊಂದಿದೆ' ಎಂಬ ರಾಜ್ಯ ಸರ್ಕಾರದ ಪರ, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರ ಪ್ರತಿವಾದವನ್ನು ನ್ಯಾಯಪೀಠ ಎತ್ತಿ ಹಿಡಿದಿದೆ.

'ಒಂದು ದಂ ಹುಕ್ಕಾ ಸೇವನೆ 10 ಸಿಗರೇಟುಗಳನ್ನು ಸೇದಿದಷ್ಟೇ ಅಪಾಯ' ಎಂಬ ಅಂಶದ ಮೇಲೆ ಬೆಳಕು ಚೆಲ್ಲಿರುವ ನ್ಯಾಯಪೀಠ, 'ತಂಬಾಕು ಉತ್ಪನ್ನ ಬಳಸದ ಹರ್ಬಲ್ ಹುಕ್ಕಾ ಸೇದಲು ನಿಷೇಧ ಹೇರಬಾರದು' ಎಂಬ ಅರ್ಜಿದಾರರ ವಾದವನ್ನು ಸಾರಾಸಗಟಾಗಿ ತಳ್ಳಿ ಹಾಕಿದೆ.

'ರಾಜ್ಯದಲ್ಲಿ ಹತ್ತು ವರ್ಷಕ್ಕೂ ಹೆಚ್ಚು ಕಾಲದಿಂದ ಹುಕ್ಕಾ ವಹಿವಾಟು ನಡೆಯುತ್ತಿದೆ. ತಂಬಾಕು ಉತ್ಪಾದಕರು ಸರ್ಕಾರಕ್ಕೆ ತೆರಿಗೆ ಪಾವತಿಸುತ್ತಾರೆ. ಆದರೆ, ಹುಕ್ಕಾ ವಹಿವಾಟು ನಡೆಸುವವರು ಯಾವುದೇ ತೆರಿಗೆ ಪಾವತಿಸುವುದಿಲ್ಲ' ಎಂಬ ಸರ್ಕಾರದ ನಿರ್ಧಾರವನ್ನು ಬೆಂಬಲಿಸಿದ ವಕೀಲರ ವಾದವನ್ನು ಮನ್ನಿಸಿದೆ.

ನ್ಯಾ. ನಾಗಪ್ರಸನ್ನ ದಾಖಲೆ ವಿಲೇವಾರಿ



ನ್ಯಾ. ಎಂ. ನಾಗಪ್ರಸನ್ನ

ಬೆಂಗಳೂರು: ಹೈಕೋರ್ಟ್ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ಒಂದು ದಿನದ ಕಲಾಪದ ಅವಧಿಯಲ್ಲಿ ವಿವಿಧ ಪ್ರಕಾರಗಳ 608 ಅರ್ಜಿಗಳನ್ನು ವಿಲೇವಾರಿ ಮಾಡುವ ಮೂಲಕ ಕರ್ನಾಟಕ ಹೈಕೋರ್ಟ್‌ನಲ್ಲಿ ಹೊಸ ದಾಖಲೆ ಬರೆಯುವತ್ತ ಹೆಜ್ಜೆ ಇಟ್ಟಿದ್ದಾರೆ.

ಹೈಕೋರ್ಟ್‌ನಲ್ಲಿ ಸದ್ಯ ಮತ್ತೊಬ್ಬ ಹಿರಿಯ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಂತೆಯೇ ಕ್ಷಿಪ್ರಗತಿಯ ಅರ್ಜಿಗಳ ವಿಲೇವಾರಿಯಲ್ಲಿ ನ್ಯಾಯಮೂರ್ತಿ ನಾಗಪ್ರಸನ್ನ ಅವರೂ ಇದೀಗ ಹೊಸ ದಾಖಲೆ ನಿರ್ಮಿಸಿದ್ದಾರೆ. ನ್ಯಾಯಮೂರ್ತಿ ನಾಗಪ್ರಸನ್ನ ಅವರಿದ್ದ ಬೆಂಗಳೂರು ಪೀಠದಲ್ಲಿ ಸೋಮವಾರ ನಿಗದಿಯಾಗಿದ್ದ ಕಾಸ್ ಲಿಸ್ಟ್ ಪುಟಗಳ ಸಂಖ್ಯೆಯೇ 127 ಇತ್ತು. ಲಿಸ್ಟ್‌ನಲ್ಲಿ ನಮೂದಾಗಿದ್ದ ಎಲ್ಲಾ 608 ಅರ್ಜಿಗಳನ್ನೂ ದಿನದ ಕಲಾಪದ ಅವಧಿಯಲ್ಲಿ ವಿಲೇವಾರಿ ಮಾಡಿದರು. ಕಾಯ್ದಿರಿಸಿದ್ದ 36 ಅರ್ಜಿಗಳ ಮೇಲಿನ ತೀರ್ಪು ಪ್ರಕಟಿಸಿದರು.

'ಹೈಕೋರ್ಟ್‌ನಲ್ಲಿ ಇತರೆ ನ್ಯಾಯಮೂರ್ತಿಗಳ ವಿಲೇವಾರಿ ಪ್ರಮಾಣ ವರ್ಷದಕ್ಕೆ ಸರಾಸರಿ 750 ಅರ್ಜಿಗಳಷ್ಟಿದೆ' ಎಂಬ ಅಂದಾಜಿದ್ದು, ನ್ಯಾ. ನಾಗಪ್ರಸನ್ನ ಕಳೆದ 15 ವಾರಗಳಲ್ಲಿ 2 ಸಾವಿರ ಅರ್ಜಿಗಳನ್ನು ವಿಲೇವಾರಿ ಮಾಡಿದ ಹೆಗ್ಗಳಿಕೆ ಹೊಂದಿದ್ದಾರೆ.

ಇಂದು ರಾತ್ರಿ 'ಬೆಂಗಳೂರು ಕರಗ': ಭರದ ಸಿದ್ಧತೆ

ನಗರದಲ್ಲಿ ಹಸಿ ಕರಗದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಪಂಗಿ ಕೆರೆಯ ಶಕ್ತಿ ಪೀಠದಲ್ಲಿ ಭಾನುವಾರ ತಡರಾತ್ರಿಯಿಂದ ಹಸಿ ಕರಗದ ಪೂಜಾ ವಿಧಿವಿಧಾನಗಳು ನಡೆದವು. ಸೋಮವಾರ ನಸುಕಿನಲ್ಲಿ ಹಸಿ ಕರಗ ಮೆರವಣಿಗೆ ಮೂಲಕ ಧರ್ಮರಾಯಸ್ವಾಮಿ ದೇವಸ್ಥಾನಕ್ಕೆ ತಲುಪಿತು.

ಸಂಪ್ರದಾಯದ ಪ್ರಕಾರ, ಧಾರ್ಮಿಕ ಆಚರಣೆಗಳು ಸಂಪಂಗಿ ಕೆರೆಯಲ್ಲಿರುವ ಶಕ್ತಿಪೀಠದಲ್ಲಿ ವಿಜೃಂಭಣೆಯೊಂದಿಗೆ ನಡೆದವು. ಭಾನುವಾರ ಬೆಳಿಗ್ಗೆಯಿಂದಲೇ ಸಿದ್ಧತೆಗಳು ನಡೆದು, ಸಂಜೆಯಿಂದಲೇ ವೀರಕುಮಾರರು ಆಗಮಿಸಿದ್ದರು. ಭಾನುವಾರ ತಡರಾತ್ರಿ ಪೂಜೆಗಳು ಆರಂಭವಾಗಿ, ಮುಂಜಾನೆ ಹಸಿ ಕರಗ ಸಿದ್ಧಗೊಂಡಿತು.

ವಿಶೇಷ ಪೂಜೆಯ ನಂತರ, ಹೂವಿನ ವೇಷಭೂಷಣದೊಂದಿಗೆ ಸಿದ್ಧರಾದ ಅರ್ಚಕ ಎ. ಜ್ಞಾನೇಶ್ ಒಂದು ಕೈಯಲ್ಲಿ ಕತ್ತಿ ಹಿಡಿದು, ಸೊಂಟದಲ್ಲಿ ಹಸಿ ಕರಗವನ್ನು ಹೊತ್ತು ಸಾಗಿದರು.

ಸಂಪಂಗಿ ಕೆರೆಯ ನಂತರ ಹಡ್ಸನ್ ವೃತ್ತದತ್ತ ಸಾಗಿ ಬಿಬಿಎಂಪಿಯಲ್ಲಿರುವ ಆದಿಶಕ್ತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿತು. ನಂತರ, ಧರ್ಮರಾಯಸ್ವಾಮಿ ದೇವಸ್ಥಾನವನ್ನು ತಲುಪಿತು.

ಮಂಗಳವಾರ ರಾತ್ರಿ ಹೂವಿನ ಕರಗ: ಪ್ರಸಿದ್ಧ ದ್ರೌಪದಿದೇವಿ ಕರಗ ಶಕ್ತ್ಯೋತ್ಸವ ಮಂಗಳವಾರ ತಡರಾತ್ರಿ ಧರ್ಮರಾಯ ಸ್ವಾಮಿ ದೇವಸ್ಥಾನದಿಂದ ಹೊರಡಲಿದೆ.

ಗಣಪತಿ ಮತ್ತು ಮುತ್ಯಾಲಮ್ಮ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ಹಲಸೂರು ಪೇಟೆಯ ಆಂಜನೇಯ ಸ್ವಾಮಿ, ರಾಮ ದೇವಾಲಯ, ನಗರ್ತಪೇಟೆ, ಕಬ್ಬನ್‌ಪೇಟೆ, ಗಾಣಿಗರ ಪೇಟೆ, ದೊಡ್ಡಪೇಟೆಯಿಂದ ಕೆ.ಆರ್. ಮಾರುಕಟ್ಟೆ ತಲುಪಲಿದೆ. ಮಸ್ತಾನ್ ಸಾಬ್ ದರ್ಗಾಕ್ಕೆ ಭೇಟಿ ನೀಡಿ, ಅಲ್ಲಿಂದ ಬಳೇಪೇಟೆ ಹಳೇಗರಡಿ, ಅಣ್ಣಮ್ಮನ ದೇವಾಲಯ, ಕಿಲಾರಿ ರಸ್ತೆ, ಯಲಹಂಕ ಗೇಟ್, ಅವೆನ್ಯೂ ರಸ್ತೆ, ಕುಂಬಾರಪೇಟೆ, ಗೊಲ್ಲರಪೇಟೆ, ತಿಗಳರ ಪೇಟೆಗಳಲ್ಲಿ ಸಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.



ಸಂಪಂಗಿ ಕೆರೆಯಿಂದ ಧರ್ಮರಾಯಸ್ವಾಮಿ ದೇವಸ್ಥಾನದವರೆಗೆ ಸೋಮವಾರ ಮುಂಜಾನೆ ಸಾಗಿದ ಹಸಿ ಕರಗದ ಮೆರವಣಿಗೆಯಲ್ಲಿ ಭಾಗವಹಿಸಿದ್ದ ವೀರಕುಮಾರರು



ಹಸಿ ಕರಗ ಹೊತ್ತು ಸಾಗಿದ ಕರಗದ ಪೂಜಾರಿ ಎ. ಜ್ಞಾನೇಂದ್ರ

ಕರಗ ಉತ್ಸವ: ವಾಹನ ಸಂಚಾರ ನಿರ್ಬಂಧ

ಕರಗ ಉತ್ಸವ ನಿಮಿತ್ತ ನಗರದ ಹಲವು ರಸ್ತೆಗಳಲ್ಲಿ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ. ಪರ್ಯಾಯ ಮಾರ್ಗಗಳ ಮೂಲಕ ವಾಹನ ಸಂಚಾರಕ್ಕೆ ಸಂಚಾರ ಪೊಲೀಸರು ವ್ಯವಸ್ಥೆ ಕಲ್ಪಿಸಿದ್ದಾರೆ.

'ಏ. 23, 24ರಂದು ಉತ್ಸವ ನಡೆಯಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳುವುದರಿಂದ ಕೆಲ ರಸ್ತೆಗಳಲ್ಲಿ ವಾಹನ ಸಂಚಾರ ಹಾಗೂ ನಿಲುಗಡೆ ನಿರ್ಬಂಧಿಸಲಾಗಿದೆ' ಎಂದು ಸಂಚಾರ ಪೊಲೀಸರು ಹೇಳಿದ್ದಾರೆ.

ಸಂಚಾರ ನಿರ್ಬಂಧಿಸಿರುವ ರಸ್ತೆಗಳು

- ಸಿಟಿ ಮಾರುಕಟ್ಟೆ ವೃತ್ತದಿಂದ ಮೈಸೂರು ಬ್ಯಾಂಕ್ ವೃತ್ತದವರೆಗಿನ ಅವೆನ್ಯೂ ರಸ್ತೆ
- ಮೆಡಿಕಲ್ ಕಾಲೇಜು ಕಡೆಯಿಂದ ಸಿಟಿ ಮಾರುಕಟ್ಟೆ ವೃತ್ತ
- ಎಸ್.ಜೆ.ಪಿ ರಸ್ತೆಯಿಂದ ಎನ್.ಆರ್. ವೃತ್ತ

ವಾಹನ ನಿಲುಗಡೆ ನಿರ್ಬಂಧಿಸಿರುವ ಸ್ಥಳಗಳು

ಪಿ.ಕೆ.ಲೈನ್, ಒಟಿಸಿ ರಸ್ತೆ, ಎಸ್.ಪಿ ರಸ್ತೆ, ಕಬ್ಬನ್ ಪೇಟೆ ರಸ್ತೆ, ಸುಣ್ಣಕಲ್ ಪೇಟೆ ರಸ್ತೆ, ಮಾರುಕಟ್ಟೆ ವೃತ್ತ, ಅವೆನ್ಯೂ ರಸ್ತೆ, ಎಸ್.ಜೆ.ಪಿ ರಸ್ತೆ.

ಬಿಸಿಲಿನ ತಾಪಕ್ಕೆ ವೃದ್ಧ ಸಾವು

ಪ್ರಜಾವಾಣಿ ವಾರ್ತೆ

ರಾಯಚೂರು: ತಾಲ್ಲೂಕಿನ ಕಡಗಂ ದೊಡ್ಡಿಯಲ್ಲಿ ಬಿಸಿಲಿನ ತಾಪದಿಂದ ಬಳಲಿ ವೃದ್ಧರೊಬ್ಬರು ಸೋಮವಾರ ಮೃತಪಟ್ಟಿದ್ದಾರೆ.

ಕಡಗಂದೊಡ್ಡಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಈ ವೃದ್ಧ ಭಿಕ್ಷೆ ಬೇಡಿ ಜೀವನ ನಡೆಸುತ್ತಿದ್ದ. ಬಿಸಿಲಿನಿಂದ ಬಳಲಿ ಮೃತಪಟ್ಟಿದ್ದಾರೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ರಾಯಚೂರಿನಲ್ಲಿ ಸೋಮವಾರ ಗರಿಷ್ಠ 41 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ.

ಅಪಘಾತ: ಗುರುಲಿಂಗ ಶಿವಾಚಾರ್ಯರ ಸಾವು

ಆಳಂದ: ಪಟ್ಟಣದ ಬಸ್ ಘಟಕ ಮುಂಭಾಗದ ರಸ್ತೆಯಲ್ಲಿ ಸೋಮವಾರ ಎರಡು ಕಾರುಗಳ ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ ಬಂಗರಗಾ ಗ್ರಾಮದ ಚರಂತೇಶ್ವರ ಹಿರೇಮಠದ ಪೀಠಾಧಿಪತಿ ಗುರುಲಿಂಗ ಶಿವಾಚಾರ್ಯರು (44) ಮೃತಪಟ್ಟಿದ್ದಾರೆ.

ಕಾರಿನಲ್ಲಿದ್ದ ಕಿಣಿಸುಲ್ತಾನ ಮಠದ ಶಿವಶಾಂತಲಿಂಗ ಸ್ವಾಮೀಜಿಗೆ ಗಾಯಗಳಾಗಿದ್ದು, ಆಳಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮಕ್ಕಳೊಂದಿಗೆ ಬೆರೆಯಿರಿ ಬೆಳೆಯಿರಿ

ರಮ್ಯಾ ಶ್ರೀಹರಿ

ನಾವು ಸಾಮಾನ್ಯವಾಗಿ ಮಕ್ಕಳಿಗೆ ಶಾಲೆಯಿಂದ ಸಿಗುವ ಬೇಸಿಗೆ ರಜೆಯ ಸಮಯವನ್ನು ಮಕ್ಕಳು ಶಾಲೆಯಲ್ಲಿ ಕಲಿಯಲಾಗದ್ದನ್ನು ಕಲಿಸಲೆಂದೋ ಅಥವಾ ಅವರ ಹವ್ಯಾಸಗಳನ್ನು ಬೆಳೆಸಲೆಂದೋ ಉಪಯೋಗಿಸಬೇಕೆಂದು ಯೋಚಿಸುತ್ತೇವೆ. ಮಕ್ಕಳು ಕಲಿಯುವುದು, ಪೋಷಕರು ಕಲಿಸುವುದು ಎಂಬ ಸಿದ್ಧಸೂತ್ರವನ್ನು ಅನುಸರಿಸಲು ಮುಂದಾಗುತ್ತೇವೆ. ಆದರೆ ಪೋಷಕರೂ ಪೋಷಕತ್ವ ಎನ್ನುವ ಕಲೆಯನ್ನು / ವಿಜ್ಞಾನವನ್ನು ಪ್ರಾಯೋಗಿಕವಾಗಿ ಕಲಿಯುತ್ತಿರುವ ವಿದ್ಯಾರ್ಥಿಗಳೇ ಹೌದು ಎನ್ನುವುದನ್ನು ಮರೆತೇಬಿಡುತ್ತೇವೆ. ಈ ಬೇಸಿಗೆ ರಜೆಯನ್ನು, ಎಂದಿನ ಬೇಸಿಗೆ ರಜೆಯ ಕಾರ್ಯಕ್ರಮಗಳಾದ ಪ್ರವಾಸ, ಬೇಸಿಗೆ ಶಿಬಿರಗಳು ಮುಂತಾದವನ್ನು ಬದಿಗಿಟ್ಟು ಸ್ವಲ್ಪ ವಿನೂತನವಾಗಿ ಪೋಷಕರಾಗಿ ನಾವೇನು ಕಲಿತಿದ್ದೇವೆ, ಅದು ನಮ್ಮ ಮಕ್ಕಳ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಉಂಟುಮಾಡುತ್ತಿದೆ ಎನ್ನುವುದನ್ನು ಪರಾಮರ್ಶಿಸಲು ಉಪಯೋಗಿಸಬಹುದು.

ಇಂದು ಹಿಂದೆಂದಿಗಿಂತಲೂ ಪೋಷಕತ್ವದ ಬಗೆಗಿನ ಅರಿವು ಹೆಚ್ಚಾಗುತ್ತಿದೆ. ಈಗ ಪೋಷಕರಾಗಿರುವವರು ತಮ್ಮ ಬಾಲ್ಯದಲ್ಲಿ ತಮ್ಮೊಟ್ಟಿಗೆ ನಡೆದ್ದದ್ದೇನು ಎನ್ನುವ ವಿಮರ್ಶೆಗೆ ಹೆಚ್ಚು ಹೆಚ್ಚು ತೆರೆದುಕೊಳ್ಳುತ್ತಾ, ತಮ್ಮ ಮತ್ತು ತಮ್ಮ ಪೋಷಕರ ನಡುವಿನ ಸಂಘರ್ಷಗಳನ್ನು ಹೊಸ ರೀತಿಯಲ್ಲಿ ವ್ಯಾಖ್ಯಾನಿಸುತ್ತಿದ್ದಾರೆ. ಆರ್ಥಿಕ, ಸಾಮಾಜಿಕ, ತಾಂತ್ರಿಕ ಬದಲಾವಣೆಗಳೊಟ್ಟಿಗೆ ಪೋಷಕತ್ವದ ಪರಿಕಲ್ಪನೆಯೂ, ಕುಟುಂಬದ ರಚನೆ ಮತ್ತು ಸ್ವರೂಪವೂ ಬದಲಾಗುತ್ತಿದೆ. ಪೋಷಕರು ಮತ್ತು ಮಕ್ಕಳ ನಡುವಿನ ಸಂಬಂಧವನ್ನು ಬದಲಾಗುತ್ತಿರುವ ಕಾಲಕ್ಕೆ ತಕ್ಕಂತೆ ಕಂಡುಕೊಳ್ಳುವುದೂ ಮುಖ್ಯವಾಗುತ್ತದೆ.


ಮಕ್ಕಳನ್ನು ಬೆಳೆಸುವ ರೀತಿ, ಮಕ್ಕಳ ಆಂತರಿಕ ಬೆಳವಣಿಗೆ ಇವುಗಳನ್ನು ಗಮನದಲ್ಲಿಟ್ಟುಕೊಂಡು ಸ್ವಲ್ಪ ಪ್ರಯೋಗಗಳನ್ನು ಮಾಡಿ ಕೆಲವು ಮಾರ್ಪಾಟುಗಳನ್ನು ಮಾಡಿಕೊಳ್ಳಲು ಈ ಬೇಸಿಗೆ ರಜೆ ಸಕಾಲ. ಅದಕ್ಕೆ ಪೂರಕವಾಗಬಹುದಾದ ಕೆಲವು ವಿಷಯಗಳನ್ನು ಚರ್ಚಿಸೋಣ.



- ಎಲ್ಲಕ್ಕಿಂತಲೂ ಮೊದಲು ಮಕ್ಕಳೊಂದಿಗೆ ನಕ್ಕು ನಲಿಯುತ್ತಾ, ಮಕ್ಕಳ ಮನಸ್ಸನ್ನು ಅರಳಿಸುತ್ತಾ ಅವರೊಂದಿಗೆ ಆತ್ಮೀಯತೆಯನ್ನು ಸಾಧಿಸುವುದು ಮುಖ್ಯ. ಮಕ್ಕಳಿಗೆ ಇಷ್ಟವಿಲ್ಲದ ಚಟುವಟಿಕೆಗಳನ್ನು ಮಾಡುವಂತೆ ಅವರನ್ನು ಒತ್ತಾಯಿಸುವುದನ್ನು ಬಿಟ್ಟು, ಅವರ ಇಷ್ಟದ ಕೆಲಸಗಳಲ್ಲಿ ನಾವು ತೊಡಗಬಹುದೇ ಎಂದು ಅವರನ್ನು ಕೇಳಬಾರದೇಕೆ? ಮಕ್ಕಳ ಜೊತೆ ಕೂಡಿ ಮಾಡುವ ಚಟುವಟಿಕೆಯಲ್ಲಿ ಅವರನ್ನು ಗದರಿಸುವುದು, ತಮ್ಮ ಆದೇಶದಂತೆಯೇ ನಡೆಯಬೇಕು ಎನ್ನುವುದು - ಇಂಥವನ್ನೆಲ್ಲಾ ಮಾಡದೇ, ಮಕ್ಕಳ ಅಭಿಪ್ರಾಯಕ್ಕೆ ಬೆಲೆಕೊಡುವುದನ್ನು ಅಭ್ಯಾಸಮಾಡಿಕೊಳ್ಳಬಹುದು. ತನ್ನ ಮಾತಿಗೆ, ಆಲೋಚನೆಗೆ ಅವಕಾಶವಿದೆ, ಮೌಲ್ಯವೂ ಇದೆ ಎಂದು ನಂಬುವ ಮಕ್ಕಳಲ್ಲಿ ಆತ್ಮಗೌರವವೂ ಹೆಚ್ಚಿರುತ್ತದೆ.
- ಮಕ್ಕಳು ಮತ್ತು ಪೋಷಕರು ಸ್ನೇಹಿತರಂತೆ ಇರಬೇಕೆನ್ನುವುದು ನಿಜ. ಆದರೆ ಸ್ನೇಹಿತರ ನಡುವೆಯೂ ಗಡಿಗಳು (boundaries) ಇರಲೇಬೇಕಲ್ಲವೇ? ಪೋಷಕರು ವಯಸ್ಕರು, ಜವಾಬ್ದಾರಿಯುತ ಸ್ಥಾನದಲ್ಲಿರುವವರು; ಮಕ್ಕಳಿಗೆ ಪೋಷಕರ ಜವಾಬ್ದಾರಿಯಿರುವುದಿಲ್ಲ. ಮಕ್ಕಳನ್ನು ತಕ್ಕಮಟ್ಟಿಗೆ ಪೋಷಕರು ನಿರ್ದೇಶಿಸಬೇಕು, ಮಕ್ಕಳು ಹೇಳಿದಂತೆಲ್ಲಾ ಕುಣಿಯಲಾಗುವುದಿಲ್ಲ. ಹಾಗೆಯೇ ಮಕ್ಕಳಿಗೂ ಸ್ವಾತಂತ್ರ್ಯ ಬೇಕು. ಮಕ್ಕಳು ಮತ್ತು ಪೋಷಕರ ನಡುವಿನ ಗಡಿಗಳು ಹೀಗೆ ದಿನದಿನವೂ ಒಂದಲ್ಲ ಒಂದು ರೀತಿಯಲ್ಲಿ ನಮ್ಮ ಬದುಕಿನಲ್ಲಿ ಪ್ರಾಧಾನ್ಯವನ್ನು ಪಡೆದುಕೊಳ್ಳುತ್ತಿರುತ್ತವೆ. ಈ ಗಡಿಗಳನ್ನು ಸೃಜಿಸುವ, ಮೀರುವ, ಮೀರದೇ ಇರುವ ಎಲ್ಲ ಪ್ರಯತ್ನಗಳ ಬಗೆಗೂ ಪೋಷಕರು ಆಲೋಚಿಸಬೇಕು.
- ಪೋಷಕರು ತಮ್ಮ ಜೀವನದ ಎಲ್ಲಾ ವಿವರಗಳನ್ನು ಮಕ್ಕಳ ಮುಂದೆ ತೆರೆದಿಡಲಾಗುವುದಿಲ್ಲ. ಆದರೆ ತಮ್ಮ ನೋವು, ಸಂಕಟ, ಸಂತೋಷ, ನೆನಪು ಯಾವುದನ್ನೂ ತೆರೆದಿಡದೇ ಇದ್ದರೆ ಮಕ್ಕಳ ಹೃದಯಕ್ಕೆ ಪೋಷಕರು ಹತ್ತಿರವಾಗುವುದು ಹೇಗೆ? ಹಾಗೆಯೇ ಮಕ್ಕಳು ತಂದೆ–ತಾಯಿಯ ಲೋಕದಲ್ಲೇ ಕಳೆದುಹೋಗದೆ ತಮ್ಮ ಪ್ರತ್ಯೇಕತೆಯನ್ನು ಕಂಡುಕೊಳ್ಳಬೇಕೆಂಬ ಎಚ್ಚರವೂ ಅಗತ್ಯ. ಪೋಷಕರು ತಮ್ಮ ಮಿತಿಗಳನ್ನರಿತು, ಮಕ್ಕಳ ವಯಸ್ಸು, ತಿಳಿವಳಿಕೆ ಇವುಗಳನ್ನು ಆಧರಿಸಿ ತಕ್ಕಮಟ್ಟಿಗಿನ 'ತಮ್ಮನ್ನು ತಾವು ತೆರೆದಿಟ್ಟುಕೊಳ್ಳುವ ಪ್ರಯತ್ನವನ್ನು' (self disclosure) ಮಾಡುತ್ತಾ ಮಕ್ಕಳೂ ಅವರ ಅಂತರಾಳದ ಮಾತುಗಳನ್ನಾಡಲು ಪ್ರೋತ್ಸಾಹಿಸಬಹುದು. ಇಷ್ಟವಿದ್ದರೆ ಈ ಮಾತುಕತೆಗಳನ್ನೆಲ್ಲ ಒಂದು 'ಜರ್ನಲ್'ನಲ್ಲಿಯೂ ಬರೆದಿಡಬಹುದು. ಮಕ್ಕಳ ಆಸೆ, ಕನಸುಗಳು, ಸಣ್ಣ ಪುಟ್ಟ ರಹಸ್ಯಗಳು ಎಲ್ಲವನ್ನೂ ಪ್ರೀತಿಯಿಂದ ಅರಿಯುತ್ತಾ ಸಾಗುವ ಪ್ರಯತ್ನವು ಪೋಷಕರಿಗೂ ಚೇತೋಹಾರಿಯಾಗಿರುತ್ತದೆ.
- ನಾವೇನೇ ಕೆಲಸ ಮಾಡಿದರೂ ಅದಕ್ಕೊಂದು 'ಫೀಡ್‌ಬ್ಯಾಕ್' ಎನ್ನುವುದು ಇರುತ್ತದೆ. ಹಾಗಿದ್ದ ಮೇಲೆ ಪೋಷಕತ್ವದ ಬಗೆಗೆ ಒಂದು 'ಫೀಡ್‌ಬ್ಯಾಕ್' ಬೇಡವೇ? ಮಕ್ಕಳೇ ನಾವು ಪೋಷಕರಾಗಿ ಹೇಗಿದ್ದೇವೆ ಎನ್ನುವುದನ್ನು ನಮಗೆ ತಿಳಿಸುತ್ತಲೇ ಇರುತ್ತಾರೆ, ಅವರ ಭಾಷೆಯನ್ನು ತಿಳಿಯುವ ಚಾತುರ್ಯ ನಮಗಿರಬೇಕಷ್ಟೇ. ಮಕ್ಕಳ ಜೊತೆ ಎಲ್ಲವನ್ನೂ ಚರ್ಚಿಸಿ ತಿಳಿಯುವುದು ಕಷ್ಟ, ಏಕೆಂದರೆ ಇನ್ನೂ ಬೆಳವಣಿಗೆಯ ಹಂತಗಳನ್ನು ದಾಟುತ್ತಿರುವ ಮಕ್ಕಳು ತಮ್ಮ ಭಾವನೆಗಳನ್ನು, ಅನಿಸಿಕೆಗಳನ್ನು ಸ್ಪಷ್ಟವಾದ ಮಾತುಗಳಲ್ಲಿ ತಿಳಿಸುವುದು ಅಸಾಧ್ಯ. ಅಷ್ಟೇ ಅಲ್ಲದೆ, ಮಕ್ಕಳಿಗೆ ಭದ್ರತೆಯ ಭಾವವಿಲ್ಲದಾಗ ತಮಗೇನು ಬೇಕು ಎನ್ನುವುದೇ ಗೊತ್ತಾಗುವುದಿಲ್ಲ. ಮಕ್ಕಳ ಭಾವನಾತ್ಮಕ ಅವಶ್ಯಕತೆಗಳನ್ನು ಪೋಷಕರೇ ಗುರುತಿಸಬೇಕು. ಎಲ್ಲಕ್ಕಿಂತಲೂ ಮುಖ್ಯವಾಗಿ ಪೋಷಕರು ತಮ್ಮ ದುಃಖ, ನೋವು, ಕೀಳರಿಮೆ, ಅವಮಾನಗಳನ್ನು ನೀಗಿಸಿಕೊಳ್ಳುವ ಪ್ರಯತ್ನ ಮಾಡದಿದ್ದಾಗ, ಮಕ್ಕಳು ಏನು ಕೇಳುತ್ತಿದ್ದಾರೆ, ಅವರ ನಿರೀಕ್ಷೆಗಳು ಏನು ಎನ್ನುವುದೇ ಪೋಷಕರಿಗೆ ಅರ್ಥವಾಗುವುದಿಲ್ಲ. ನಾವೇ ನಮ್ಮ ಆಲೋಚನೆಗಳಿಂದ ಕಟ್ಟಿಕೊಂಡ ಕಾರಾಗೃಹದಿಂದ ಹೊರಬಂದು ನನ್ನ ಮಗು ನಿಜವಾಗಿಯೂ ಯಾರು? ಅದಕ್ಕೆ ಅನಿಸುತ್ತಿರುವುದೇನು, ಬೇಕಾದ್ದೇನು, ಬೇಡದ್ದೇನು? ಎಂದು ತಿಳಿಯಲು ಹಲವು ವರ್ಷಗಳೇ ಬೇಕು. ಈ ಪ್ರಕ್ರಿಯೆಯಲ್ಲಿ ವಿಶ್ವಾಸವನ್ನು, ತಾಳ್ಮೆಯನ್ನು ಇರಿಸಿಕೊಂಡಾಗ ಮಾತ್ರ ಮಕ್ಕಳ ಭಾಷೆ ಮತ್ತು ಮನಸ್ಸು ಅರ್ಥವಾಗುತ್ತದೆ. ಬೇಸಿಗೆ ರಜೆಯ ಈ ಸಮಯದಲ್ಲಿ ಇಡೀ ದಿನ ಮನೆಯಲ್ಲೇ ಇರುವ ಮಗುವನ್ನು ನಿಧಾನವಾಗಿ, ಸಮಾಧಾನವಾಗಿ ಮಾತನಾಡಿಸುತ್ತಾ, ಅದರ ಕಣ್ಣಿನಲ್ಲಿ ಪ್ರಪಂಚ ಹೇಗೆ ಕಾಣುತ್ತಿದೆ ಎನ್ನುವುದನ್ನು ಕುತೂಹಲದಿಂದ ಗಮನಿಸುವುದನ್ನು ಅಭ್ಯಾಸಮಾಡಿಕೊಳ್ಳಬಹುದು.
- ಮಕ್ಕಳೊಂದಿಗೆ ಮಾತನಾಡುವಾಗ ನನ್ನ ದೇಹಭಾಷೆ, ಹಾವಭಾವ, ದನಿ, ಧಾಟಿ ಎಲ್ಲವೂ ಮಕ್ಕಳ ಮೇಲಿನ ಪ್ರೀತಿ, ಅಭಿಮಾನ, ಗೌರವಗಳನ್ನು ಪ್ರತಿಬಿಂಬಿಸುವಂತೆಯೇ ನೋಡಿಕೊಳ್ಳುವೆ ಎನ್ನುವ 'ಛಾಲೆಂಜ್' ಅನ್ನು ಪೋಷಕರು ತಮಗೆ ತಾವೇ ಕೊಟ್ಟುಕೊಳ್ಳಬಹುದು.
- ಮಾನಸಿಕ ಆರೋಗ್ಯದ ಬಗೆಗೆ ಇತ್ತೀಚೆಗೆ ಜಾಗೃತಿ ಹೆಚ್ಚುತ್ತಿದೆ. ಜಾಗೃತಿಯ ಈ ಅಲೆಯಲ್ಲಿ ಮಕ್ಕಳನ್ನೂ (ಅವರ ತಿಳಿವಳಿಕೆಯ ಮಿತಿಯಲ್ಲಿ) ತೊಡಗಿಸುವುದು ಕ್ಷೇಮ. ಮಾನಸಿಕ ಆರೋಗ್ಯದ ಬಗೆಗೆ ಮಕ್ಕಳಿಗೆ ಬೇಕಾದ ಪ್ರಾಥಮಿಕಗಳನ್ನು ತಿಳಿಸಿಕೊಡುವ ಕಾರ್ಯಕ್ರಮಗಳಾದ ಭಾವನೆಗಳಿಗೆ ಭಾಷೆ ನೀಡುವ, ಅಭಿನಯಿಸಿ ತೋರಿಸುವ ಚಟುವಟಿಕೆಗಳು; ಕಲೆಯ ಮೂಲಕ, ಕಥೆಗಳ ಮೂಲಕ ಜೀವನದ ವಿವಿಧ ಸಂದರ್ಭಗಳನ್ನು ಗ್ರಹಿಸಿ ಅದರ ಬಗೆಗೆ ಮಾತನಾಡುವುದು; ಮಗುವಿಗೆ ಕ್ಲಿಷ್ಟ ಎನಿಸಿದ ಅಥವಾ ನೋವು ತಂದ ಘಟನೆಗಳ ಬಗೆಗೆ ತನ್ನ ಅನಿಸಿಕೆಗಳನ್ನು ಹಂಚಿಕೊಳ್ಳಲು ಅವಕಾಶ ಮಾಡಿಕೊಡುವುದು - ಇಂತಹ ಮಕ್ಕಳನ್ನು ಒಳಗಿನಿಂದ ಗಟ್ಟಿಗೊಳಿಸುವ ಕೆಲಸ ಮಾಡಲು ಶಾಲೆಯ ಅವಸರವಿರದ ಬೇಸಿಗೆ ರಜೆಯ ಆರಾಮದಾಯಕ ಸಮಯವನ್ನು ಉಪಯೋಗಿಸಬಹುದು. ❖

ಕಡಿಮೆ ರಕ್ತದ ಒತ್ತಡ ಬೇಡ ತಾತ್ಸಾರ

ಡಾ. ಮುರಲೀ ಮೋಹನ್ ಚೂಂತಾರು



ಹೃದಯದಿಂದ ನಿರಂತರವಾಗಿ ರಕ್ತವು ದೇಹದ ಎಲ್ಲಾ ಅಂಗಗಳಿಗೆ ಸರಬರಾಜು ಆಗುತ್ತಲೇ ಇರುತ್ತದೆ. ಹೃದಯದಿಂದ ರಕ್ತ ಹೊರಹಾಕಲ್ಪಟ್ಟ ಮೇಲೆ ರಕ್ತದ ಏಕಮುಖ ಹರಿವು ರಕ್ತನಾಳಗಳ ಒಳಪದರಗಳ ಮೇಲೆ ಹೇರುವ ಒತ್ತಡವನ್ನು 'ರಕ್ತದ ಒತ್ತಡ' ಎಂದು ಕರೆಯಲಾಗುತ್ತದೆ. ಆರೋಗ್ಯವಂತ ಮಧ್ಯವಯಸ್ಕ ಮಹಿಳೆ ಮತ್ತು ಪುರುಷರಲ್ಲಿ ರಕ್ತದ ಒತ್ತಡವು 120/80 ಮಿಲಿ ಮೀಟರ್‌ನಷ್ಟು (ಪಾದರಸ ಕಂಬದ ಎತ್ತರ) ಇರುತ್ತದೆ. ವಯಸ್ಸಾದಂತೆಲ್ಲ 50ರ ಹರೆಯದ ನಂತರ ಸುಮಾರು 130/90 ಮಿಲಿ ಮೀಟರ್‌ನಷ್ಟು ಇರುತ್ತದೆ. ಇದು ವ್ಯಕ್ತಿಯಿಂದ ವ್ಯಕ್ತಿಗೆ ದೇಹದ ತೂಕ, ಎತ್ತರ, ಗಾತ್ರ ಅಂಗಗಳಿಗೆ ಅನುಗುಣವಾಗಿ ಅಲ್ಪಸ್ವಲ್ಪ ಬದಲಾವಣೆ ಇರಲೂಬಹುದು. ಆದರೆ ರಕ್ತದ ಒತ್ತಡ 90/60 ಮಿಲಿ ಮೀಟರ್‌ಗಳಿಗಿಂತಲೂ ಕಡಿಮೆಯಾದಾಗ ಅದನ್ನು 'ಕಡಿಮೆ ರಕ್ತದ ಒತ್ತಡ' ಎಂದು ಕರೆಯುತ್ತೇವೆ.

ಕಡಿಮೆ ರಕ್ತದ ಒತ್ತಡದಿಂದಾಗಿ ದೇಹದ ಪ್ರಮುಖ ಅಂಗಗಳಾದ ಕಿಡ್ನಿ, ಹೃದಯ, ಮಿದುಳು, ಕಣ್ಣು, ಶ್ವಾಸಕೋಶ, ಯಕೃತ್ತು ಮುಂತಾದ ಅಂಗಗಳಿಗೆ ರಕ್ತದ ಸರಬರಾಜಿನಲ್ಲಿ ವ್ಯತ್ಯಯವಾಗಿ ದೀರ್ಘಕಾಲಿಕ ತೊಂದರೆಗಳಿಗೆ ಕಾರಣವಾಗುತ್ತದೆ.

ಕಾರಣಗಳು

- ಅತೀವ ರಕ್ತಸ್ರಾವ.
- ನಿರ್ಜಲೀಕರಣ.
- ಥೈರಾಯಿಡ್ ಗ್ರಂಥಿಯ ಕಾರ್ಯದಕ್ಷತೆಯು ಕ್ಷೀಣಿಸಿದಾಗ. 'ಹೆಪೋಥೈರಾಯಿಡಿಸಮ್' ಎಂಬ ಕಾಯಿಲೆಯಲ್ಲಿ ಕಡಿಮೆ ರಕ್ತದೊತ್ತಡ ಇರುತ್ತದೆ.
- ರಕ್ತದಲ್ಲಿ ತೀವ್ರತರವಾದ ಸೋಂಕು ತಗುಲಿ ದೇಹದೆಲ್ಲೆಡೆ ಸೋಂಕು ಹರಡಿದಾಗ.
- ಮಧುಮೇಹಿಗಳಲ್ಲಿ ಗ್ಲೂಕೋಸ್ ಅಂಶ ಕಡಿಮೆಯಾದಾಗ.
- ಗರ್ಭಾವಸ್ಥೆಯ ಮೊದಲ ತಿಂಗಳಲ್ಲಿ ರಕ್ತದಲ್ಲಿ ಪ್ರೋಜೆಸ್ಟರಾನ್ ಎಂಬ ರಸದೂತ ರಕ್ತನಾಳಗಳನ್ನು ಹಿಗ್ಗಿಸುವುದರಿಂದ ರಕ್ತದೊತ್ತಡ ಕಡಿಮೆಯಾಗುವ ಸಾಧ್ಯತೆ ಇದೆ.
- ವಿಪರೀತ ರಕ್ತಹೀನತೆ.
- ಹೃದಯಾಘಾತವಲ್ಲದೆ ಹೃದಯದ ಮಾಂಸಖಂಡಗಳಿಗೆ ಹಾನಿಯಾದಾಗ.
- ಅತಿಯಾದ ಮದ್ಯಪಾನ ಮತ್ತು ಅತಿಯಾದ ಔಷಧಗಳ ಸೇವನೆ.
- ದೇಹದ ಉಷ್ಣತೆ ಕಡಿಮೆಯಾದಾಗ.
- ರಕ್ತದ ಒತ್ತಡ ಕಡಿಮೆ ಮಾಡುವ ಔಷಧಗಳ ಅತಿಯಾದ ಸೇವನೆ.
- ಮೂತ್ರಪಿಂಡದ ವೈಫಲ್ಯ.

ಲಕ್ಷಣಗಳು

- ಕಣ್ಣು ಮಂಜಾಗುವುದು, ನಡೆದಾಡಲು ಕಷ್ಟವಾಗಬಹುದು, ತಲೆತಿರುಗಿ ಬೀಳುವಂತಾಗುವುದು.
- ವಿಪರೀತ ಸುಸ್ತು.
- ಉಸಿರಾಡಲು ತೊಂದರೆ, ಶರೀರದ ಚರ್ಮ ಬಿಳಿಚಿಕೊಳ್ಳುವುದು, ಮೂರ್ಛೆ ಹೋದಂತೆ ಅನಿಸುವುದು.
- ಬೆವರುವುದು, ವಾಂತಿ ಬಂದಂತಾಗುವುದು.
- ತಲೆನೋವು, ಕುತ್ತಿಗೆ ಹಿಡಿದಂತಾಗುವುದು.
- ಎದೆಯ ಬಳಿ ನೋವು, ತೋಳುಗಳ ಸುತ್ತ ನೋವು.
- ಹೃದಯದ ಬಡಿತದಲ್ಲಿ ಏರುಪೇರಾಗಬಹುದು.
- ಸಕಾಲದಲ್ಲಿ ಸೂಕ್ತ ಚಿಕಿತ್ಸೆ ನೀಡದಿದ್ದಲ್ಲಿ, ಅಪಸ್ಮಾರ ಉಂಟಾಗಿ, ಪ್ರಜ್ಞೆ ತಪ್ಪಬಹುದು.

ತಾತ್ಕಾಲಿಕ ಚಿಕಿತ್ಸೆ

ತಲೆ ಸುತ್ತಿದಾಗ ತಕ್ಷಣವೇ ನೀರಿಗೆ ಸ್ವಲ್ಪ ಗ್ಲೂಕೋಸ್ ಮತ್ತು ಉಪ್ಪನ್ನು ಬೆರೆಸಿ ಸೇವಿಸತಕ್ಕದ್ದು. ಉಪ್ಪಿನ ಬಿಸ್ಕತ್ ತಿನ್ನಬೇಕು. ಸಾಕಷ್ಟು ಪ್ರಮಾಣದಲ್ಲಿ ನೀರು ಮತ್ತು ದ್ರವಾಹಾರವನ್ನು ಸೇವಿಸಬೇಕು. ತಕ್ಷಣವೇ ವೈದ್ಯರನ್ನು ಸಂದರ್ಶಿಸಬೇಕು; ರಕ್ತದೊತ್ತಡ ಕಡಿಮೆಯಾಗಲು ಕಾರಣ ತಿಳಿದು ಚಿಕಿತ್ಸೆಯನ್ನು ಪಡೆಯತಕ್ಕದ್ದು.

ತಡೆಗಟ್ಟುವುದು ಹೇಗೆ?

- ಪ್ರತಿ ಆರು ತಿಂಗಳಿಗೊಮ್ಮೆ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳಬೇಕು. ತಲೆ ಸುತ್ತುವುದು, ಉಸಿರಾಟದ ತೊಂದರೆ ಸುಸ್ತು ಇದ್ದಲ್ಲಿ ತಕ್ಷಣವೇ ವೈದ್ಯರನ್ನು ಕಾಣಬೇಕು.
- ಸಾಕಷ್ಟು ಪ್ರಮಾಣದಲ್ಲಿ ಉಪ್ಪು, ಲವಣಾಂಶವಿರುವ ಆಹಾರ ಸೇವಿಸತಕ್ಕದ್ದು. ಸಾಕಷ್ಟು ದ್ರವ್ಯಾಹಾರವನ್ನು ಸೇವಿಸತಕ್ಕದ್ದು.
- ಮದ್ಯಪಾನವನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಮದ್ಯಪಾನದಿಂದಾಗಿ ನಿರ್ಜಲೀಕರಣವಾಗಿ ರಕ್ತದೊತ್ತಡ ಕಡಿಮೆಯಾಗಬಹುದು.
- ರಕ್ತಹೀನತೆ ಕೂಡ ಕಡಿಮೆ ರಕ್ತದೊತ್ತಡಕ್ಕೆ ಪರೋಕ್ಷವಾಗಿ ಕಾರಣವಾಗುತ್ತದೆ. ಸಾಕಷ್ಟು ಪೋಷಕಾಂಶಗಳಿರುವ ಆಹಾರವನ್ನು ಸೇವಿಸಬೇಕು. ❖


ಕೊನೆ ಮಾತು

ಹೃದಯ, ಮಿದುಳು, ಮೂತ್ರಪಿಂಡ, ಯಕೃತ್ತಿಗೆ ನಿರಂತರವಾಗಿ ಆಮ್ಲಜನಕ ಮತ್ತು ಪೋಷಕಾಂಶಗಳು ರಕ್ತದ ಮೂಲಕ ಪೂರೈಕೆಯಾಗುತ್ತವೆ. ಕಡಿಮೆ ರಕ್ತದೊತ್ತಡ ಇದ್ದಲ್ಲಿ, ಸೂಕ್ತ ಪ್ರಮಾಣದಲ್ಲಿ ಪೌಷ್ಟಿಕಾಂಶ ದೊರಕದೇ ಸಾಕಷ್ಟು ತೊಂದರೆಗಳು ಉದ್ಭವಿಸುತ್ತವೆ. ಕಡಿಮೆ ರಕ್ತದೊತ್ತಡ, ಅಧಿಕ ರಕ್ತದೊತ್ತಡದಷ್ಟು ಮಾರಣಾಂತಿಕವಲ್ಲ; ಆದರೆ ನಿಧಾನವಾಗಿ ಅದು ಎಲ್ಲಾ ಅಂಗಗಳನ್ನು ಹಾಳುಗೆಡವಬಹುದು. ಹೀಗಾಗಿ ಕಾಲಕಾಲಕ್ಕೆ ರಕ್ತದೊತ್ತಡವನ್ನು ಪರೀಕ್ಷಿಸಿಕೊಳ್ಳಬೇಕು. ಸಕಾಲದಲ್ಲಿ ಸೂಕ್ತ ಚಿಕಿತ್ಸೆಯನ್ನು ಪಡೆದುಕೊಂಡಲ್ಲಿ ಮುಂದೆ ಬರಬಹುದಾದ ಅನಾಹುತಗಳನ್ನು ತಪ್ಪಿಸಬಹುದು.

ನೀಟ್- ಪಿಯುಸಿ ಪರೀಕ್ಷೆ ದಿಕ್ಸೂಚಿ

NEET PHYSICS

21) In the circuit, $R_1 = R_2$. The value of E and R_1 are …….. (E – EMF, R_1 – resistance)




(a) 180 V; 60 Ω (b) 120 V, 60 Ω
(c) 180 V, 10 Ω (d) none of these

Ans:- d

Expln- Applying Kirchoff's 2nd law in loop ABEFA

$$-IR - (I - 1.5)R + E = 0$$



(…….Contd)

(or) $E = IR + (I - 1.5)R$

$\Rightarrow E = R[2I - 1.5]$ ……….(i)

Now apply KVL in loop ABCDEFA,

$\Rightarrow -IR - 1.5R' + E = 0$

$\Rightarrow E = IR + 1.5R'$ ……….(ii)

Eliminating I from (i) and (ii),

$\Rightarrow \frac{1}{2}\left[\frac{E}{R} + 1.5\right] = I$ [from Eq.(i)]

and $\left[\frac{E - 1.5R'}{R}\right] = I$ [from Eq. (ii)]

So, $\frac{E}{R} + 1.5 = \frac{2}{R}[E - 1.5R']$

So, if R' were known, we could find the correct value.

22) When an additional charge of 2C is given to a capacitor, energy stored in it is increased by 21%. The original charge of the capacitor is ……….

(a) 30C (b) 40 C
(c) 10 C (d) 20 C

Ans:- (d)

Expln– Energy stored by a capacitor, $U = \frac{1}{2}\frac{q^2}{C}$

So, here $U_1 = \frac{1}{2}\frac{q_1^2}{C}$; $U_2 = \frac{1}{2}\frac{q_2^2}{C}$

$\therefore \frac{U_1}{U_2} = \left(\frac{q_1}{q_2}\right)^2 = \left(\frac{q}{q+2}\right)^2$

Given, $\frac{U_2 - U_1}{U_1} = 0.21$

(or) $\frac{U_2}{U_1} = 1.21 \Rightarrow \left(\frac{q}{q+2}\right)^2 = 1.21$

On solving we get $q = 20$ C

23) Masses of three wires of copper are in the ratio of 1 : 3 : 5 and their lengths are in the ratio of 5 : 3 : 1. The ratio of their electrical resistances is

(a) 1 : 3 : 5 (b) 5 : 3 : 1
(c) 1 : 15 : 125 (d) 125 : 15 : 1

Ans:- (d)

Expln- Given, $m_1 : m_2 : m_3 = 1 : 3 : 5$

and $l_1 : l_2 : l_3 = 5 : 3 : 1$

We know that, electrical resistance,

$R = \rho\frac{l}{A}$ and $d = \frac{m}{V} = \frac{m}{Al}$ (or) $A = \frac{m}{dl}$

$\Rightarrow A \; \alpha \; \frac{m}{l}$ ($\because$ density is same for the 3 wires)

$\therefore R_1 : R_2 : R_3 = \frac{l_1}{A_1} : \frac{l_2}{A_2} : \frac{l_3}{A_3}$

(or) $R_1 : R_2 : R_3 = \frac{l_1^2}{m_1} : \frac{l_2^2}{m_2} : \frac{l_3^3}{m_3} = \frac{25}{1} : \frac{9}{3} : \frac{1}{5}$

$\Rightarrow R_1 : R_2 : R_3 = 125 : 15 : 1$

24) A and B are the two radioactive elements. The mixtures of these elements show a total activity of 1200 disintergrations/minute. The half-life of A is 1 day and that of B is 2 days. What will be the total activity after 4 days? (Given, the initial number of atoms in A and B are equal)

(a) 200 dis/min (b) 250 dis/min
(c) 500 dis/min (d) 150 dis/min

Ans:- (d)

Expln– We have, $A = \lambda(N) = \frac{0.693}{T_{1/2}}(N)$

Initial number of atoms in A and B are same

$\therefore A_0 \; \alpha \; \frac{1}{T_{1/2}}$

$\Rightarrow \frac{A_0(A)}{A_0(B)} = \frac{48 \text{ hr}}{24 \text{ hr}} = 2$

Also, $A_0(A) + A_0(B) = 1200$

$\Rightarrow 3A_0(B) = 1200$

$\Rightarrow A_0(B) = 400$ and $A_0(A) = 800$

So, $A(A) = \frac{A_0(A)}{2^2} = \frac{800}{16} = 50$

and $A(B) = \frac{A_0(B)}{(2)^2} = \frac{400}{4} = 100$

Hence, total activity after 4 days is

$= A_0(A) + A_0(B) = 50 + 100 = 150$ dis/min.

25) A Carnot engine has an efficiency of 50% when its source is at a temperature 327°C. The temperature of the sink is:

a) 200° C b) 27° C
c) 15° C d) 100° C

Ans:- . (b)

(b) $\eta = 1 - \frac{T_{sink}}{T_{source}} = 0.5$

$\frac{T_{sink}}{T_{source}} = 0.5$

$\Rightarrow T_{sink} = \frac{1}{2} \times (273 + 327)$

$= \frac{1}{2} \times 600$

$= 300$ K

$= 27$°C

26) The temperature of a gas is –50 °C. To what temperature the gas should be heated so that the rms speed is increased by 3 times?

a) 223 K b) 669 °C
c) 3295 °C d) 3097 K

Ans:- C

II PUC MATHS

DIFFERENTIABILITY

14) If $y = \frac{3x}{x+1}$ find $\frac{d^2y}{dx^2}$.

Soln: - Given $y = \frac{3x}{x+1}$

$$\frac{dy}{dx} = \frac{(x+1)3 - 3x(1)}{(x+1)^2} = \frac{3(x+1-x)}{(x+1)^2}$$

$$\Rightarrow \frac{dy}{dx} = 3(x+1)^{-2}$$

$$\frac{d^2y}{dx^2} = 3(-2)(x+1)^{-3}.1 = -\frac{6}{(x+1)^3}$$

15) State the geometric meaning of $\frac{dy}{dx}$ with reference to a curve $y = f(x)$.

Soln: - $\frac{dy}{dx}$ **represents the slope of the tangent to the curve** $y = f(x)$ **at the point p(x, y).**

16) Find the slope of the tangent for the curve $y = x^3$ at the point (2, 8)

Soln: - Given $y = x^3$

we have $\frac{dy}{dx} = 3x^2$

$$\Rightarrow \therefore \left(\frac{dy}{dx}\right)_{(2,\,8)} = 3(2)^2 = 12$$

$\therefore$ Slope = 12

17) What is the Derivative of Function of a function (Composite function)?

Soln:- Derivative of Function of a function (Composite function) is given by - Chain rule

If y is a function of u, u is a function of x then -

$$\frac{dy}{dx} = \frac{dy}{du} \cdot \frac{du}{dx}$$

18) Differentiate $Cot^3\left(\frac{x}{2}\right)$ **w.r.t 'x'**

Soln :– Let $y = Cot^3\left(\frac{x}{2}\right) = \left[Cot\left(\frac{x}{2}\right)\right]^3$

$$\frac{dy}{dx} = \frac{d}{dx}\left[Cot\left(\frac{x}{2}\right)\right]^3 = 3Cot^2\left(\frac{x}{2}\right).\frac{d}{dx}\left[Cot\left(\frac{x}{2}\right)\right]$$

$$= 3Cot^2\left(\frac{x}{2}\right)\left[-cosec^2\left(\frac{x}{2}\right)\right]\frac{d}{dx}\left(\frac{x}{2}\right)$$

$$= -3Cot^2\left(\frac{x}{2}\right)cosec^2\left(\frac{x}{2}\right).\frac{1}{2}$$

$$= -\frac{3}{2}Cot^2\left(\frac{x}{2}\right)cosec^2\left(\frac{x}{2}\right)$$

19) Differentiate $\frac{1}{\sqrt[3]{2x+3}}$ **w.r.t 'x'**

Soln :– Let $y = \frac{1}{\sqrt[3]{2x+3}} = (2x+3)^{-\frac{1}{3}}$

$$\frac{dy}{dx} = \frac{d}{dx}(2x+3)^{-\frac{1}{3}} = -\frac{1}{3}(2x+3)^{-\frac{1}{3}-1}.\frac{d}{dx}(2x+3)$$

$$= -\frac{1}{3(2x+3)^{\frac{4}{3}}} \times 2 = -\frac{2}{3\sqrt[3]{(2x+3)^4}}$$

20) Differentiate $\sin^n(ax)$ **w.r.t 'x'.**

Soln :– Let $y = \sin^n(ax)$

$$\frac{dy}{dx} = n\sin^{n-1}(ax).\frac{d}{dx}(\sin ax)$$

$$= n\sin^{n-1}(ax).\cos(ax)\frac{d}{dx}(ax)$$

$$= n\sin^{n-1}(ax).\cos(ax)a$$

$$\therefore \frac{dy}{dx} = na\sin^{n-1}(ax).\cos(ax)$$

21) Differentiate $\sqrt{\sin\sqrt{x}}$ **w.r.t x**

Soln :– Let $y = \sqrt{\sin\sqrt{x}}$

$$\frac{dy}{dx} = \frac{1}{2\sqrt{\sin\sqrt{x}}}\frac{d}{dx}\left(\sin\sqrt{x}\right)$$

$$= \frac{1}{2\sqrt{\sin\sqrt{x}}}\cos\sqrt{x}\frac{d}{dx}\left(\sqrt{x}\right)$$

$$= \frac{1}{2\sqrt{\sin\sqrt{x}}}\cos\sqrt{x}\frac{1}{2\sqrt{x}} = \frac{\cos\sqrt{x}}{4\sqrt{x}\sqrt{\sin\sqrt{x}}}$$

22) Differentiate $\log(\sin x).e^{\sqrt{x}}$ w.r.t x

Soln :– Let $y = \log(\sin x).e^{\sqrt{x}}$

$$\frac{dy}{dx} = \log(\sin x).e^{\sqrt{x}}\frac{d}{dx}\left(\sqrt{x}\right) + e^{\sqrt{x}}.\frac{1}{\sin x}.\frac{d}{dx}(\sin x)$$

$$= \log(\sin x).e^{\sqrt{x}}\frac{1}{2\sqrt{x}} + e^{\sqrt{x}}.\frac{1}{\sin x}.\cos x$$

$$\therefore \frac{dy}{dx} = e^{\sqrt{x}}\left[\frac{\log(\sin x)}{2\sqrt{x}} + \cot x\right]$$

23) Differentiate $\log_x(\log x)$ w.r.t x.

Soln: - Let $y = \log_x(\log x)$

$\left[\text{Changing the base to e by } \log_b a = \frac{\log_e a}{\log_e b}\right]$

$$\therefore y = \frac{\log_e(\log x)}{\log_e x}$$

Using the quotient rule,

$$\frac{dy}{dx} = \frac{\log_e x.\frac{1}{\log x}.\frac{1}{x} - \log(\log x).\frac{1}{x}}{(\log_e x)^2}$$

$$\therefore \frac{dy}{dx} = \frac{\frac{1}{x}\left[1 - \log(\log x)\right]}{(\log_e x)^2}$$

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ವಿದ್ಯಾರ್ಥಿನಿ ಕೊಲೆಗೆ ರಾಜ್ಯದಾದ್ಯಂತ ತೀವ್ರ ಆಕ್ರೋಶ; ಬೀದಿಗಿಳಿದು ಹೋರಾಟ

ನೇಹಾ ಹತ್ಯೆ: ಬಿಜೆಪಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಬ್ಬಳಿಯ ವಿದ್ಯಾರ್ಥಿನಿ ನೇಹಾ ಹಿರೇಮಠ ಹತ್ಯೆ ಮತ್ತು ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯವನ್ನು ಖಂಡಿಸಿ ಬಿಜೆಪಿ ಕಾರ್ಯಕರ್ತರು ಸೋಮವಾರ ರಾಜ್ಯದಾದ್ಯಂತ ಬೃಹತ್ ಪ್ರತಿಭಟನೆ ನಡೆಸಿದರು.

ಹುಬ್ಬಳ್ಳಿ–ಧಾರವಾಡ, ಮೈಸೂರು, ಕಾರವಾರ, ಹಾವೇರಿ, ಬೆಳಗಾವಿ, ಬಳ್ಳಾರಿ, ಬಾಗಲಕೋಟೆ, ಕಲಬುರಗಿ, ಚಿತ್ರದುರ್ಗ, ರಾಮನಗರ, ಮಂಡ್ಯ, ವಿಜಯನಗರ, ದಾವಣಗೆರೆ, ಶಿವಮೊಗ್ಗ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಕೆಲವು ಕಡೆಗಳಲ್ಲಿ ಎಬಿವಿಪಿ ಹಮ್ಮಿಕೊಂಡಿದ್ದ ಪ್ರತಿಭಟನೆಗಳಲ್ಲೂ ಬಿಜೆಪಿ ನಾಯಕರು ಪಾಲ್ಗೊಂಡು ಮಾತನಾಡಿದರು.

ಮೈಸೂರಿನಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟಿಸಿದರು. 'ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಲವ್ ಜಿಹಾದ್ ನಡೆಯುತ್ತಿದ್ದರೂ ಏನೂ ನಡೆಯುತ್ತಿಲ್ಲ ಎಂದು ಸರ್ಕಾರ ಕೈಕಟ್ಟಿ ಕುಳಿತಿದೆ' ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ಹುಬ್ಬಳ್ಳಿಯಲ್ಲಿ ಬಿಜೆಪಿ ಕಾರ್ಯಕರ್ತರು ಹಳೇಹುಬ್ಬಳ್ಳಿ ಇಂಡಿಪಂಪ್ ವೃತ್ತದಲ್ಲಿ ಶಾಸಕ ಮಹೇಶ್ ಟೆಂಗಿನಕಾಯಿ ನೇತೃತ್ವದಲ್ಲಿ ಪ್ರತಿಭಟಿಸಿದರು. ಕೊಲೆ ಆರೋಪಿ ಫಯಾಜ್‌ಗೆ ಗಲ್ಲು ಶಿಕ್ಷೆ ವಿಧಿಸಲೇಬೇಕು. ಸರ್ಕಾರ ಕೊಲೆಗಡುಕರಿಗೆ ರಕ್ಷಣೆ ನೀಡುತ್ತಿದೆ ಎಂದು ಆರೋಪಿಸಿದ ಕಾರ್ಯಕರ್ತರು ವೃತ್ತದ ಮಧ್ಯೆ ಧರಣಿ ನಡೆಸಿದರು.

ಹಾವೇರಿಯಲ್ಲಿ ಎಬಿವಿಪಿ ನಡೆಸಿದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ರಾಜ್ಯದ ಪೊಲೀಸರ ಮೇಲೆ ನಂಬಿಕೆ ಇಲ್ಲ ಎಂದು ನೇಹಾ ತಂದೆ ಹೇಳಿದ್ದಾರೆ. ಸರ್ಕಾರದ ನಡವಳಿಕೆಯಿಂದ ಬೇಸತ್ತ ಅವರು, ಪ್ರಕರಣದ ತನಿಖೆಯನ್ನು ಸಿಬಿಐಗೆ ಕೊಡಬೇಕು ಎಂದಿದ್ದಾರೆ. ಈ ಪ್ರಕರಣವನ್ನು ಸಿಬಿಐಗೆ ವಹಿಸಿ, ನೇಹಾಗೆ ನ್ಯಾಯ ಸಿಗುವವರೆಗೂ ನಾವು ಹೋರಾಟ ನಿಲ್ಲಿಸುವುದಿಲ್ಲ' ಎಂದು ಎಚ್ಚರಿಸಿದರು.

ಕಾರವಾರದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರು, ಮುಖ್ಯಮಂತ್ರಿ ಮತ್ತು ಗೃಹ ಸಚಿವರ ವಿರುದ್ಧ ಹರಿಹಾಯ್ದರಲ್ಲದೇ, ನೇಹಾ ಹತ್ಯೆಯ ಆರೋಪಿಗೆ ಗಲ್ಲು ಶಿಕ್ಷೆ ನೀಡಬೇಕು ಎಂದು ಒತ್ತಾಯಿಸಿದರು.



ಹುಬ್ಬಳ್ಳಿಯ ವಿದ್ಯಾರ್ಥಿನಿ ನೇಹಾ ಹಿರೇಮಠ ಹತ್ಯೆ ಖಂಡಿಸಿ ಮೈಸೂರಿನ ಗಾಂಧಿಚೌಕದಲ್ಲಿ ಸೋಮವಾರ ಬಿಜೆಪಿ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿದರು

ಮಹಿಳಾ ಮೋರ್ಚಾ ಪ್ರತಿಭಟನೆ ಇಂದು

ನೇಹಾ ಹತ್ಯೆ ಖಂಡಿಸಿ ಮಹಿಳಾ ಮೋರ್ಚಾ ವತಿಯಿಂದ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಮಂಗಳವಾರ ಸಂಜೆ 6ಕ್ಕೆ ಮೊಂಬತ್ತಿ ಬೆಳಗಿ ಪ್ರತಿಭಟನೆ ನಡೆಸಲಾಗುವುದು ಎಂದು ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಸಿ.ಮಂಜುಳಾ ತಿಳಿಸಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಹಿಂದೂಗಳ ಮೇಲಿನ ದೌರ್ಜನ್ಯ ದಿನೇ ದಿನೇ ಹೆಚ್ಚುತ್ತಿದೆ. ಸಿ.ಎಂ ಮತ್ತು ಸಚಿವರು ತನಿಖೆಗೂ ಮೊದಲೇ ಕ್ಷುಲ್ಲಕ ಹೇಳಿಕೆ ಕೊಟ್ಟು ತನಿಖೆ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ವಿವಿಧೆಡೆ ಮಳೆ, ಸಿಡಿಲಬ್ಬರ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದ ವಿವಿಧೆಡೆ ಸೋಮವಾರ ಉತ್ತಮ ಮಳೆಯಾಗಿದ್ದು, ಬಿಸಿಲಿನಿಂದ ಬಸವಳಿದಿದ್ದ ಜನರಿಗೆ ತಂಪಿನ ಅನುಭವ ನೀಡಿದೆ. ಕೆಲವೆಡೆ ಮಳೆ ಅಬ್ಬರ ಹೆಚ್ಚಿದೆ. ಸಿಡಿಲಿಗೆ ಮೂವರು ಮೃತಪಟ್ಟಿದ್ದಾರೆ. ಒಂದು ಎತ್ತು, ಏಳು ಕುರಿಗಳು ಸತ್ತಿವೆ.

ಕೊಪ್ಪಳ ವರದಿ: ಕೊಪ್ಪಳದಲ್ಲಿ ಅರ್ಧ ಗಂಟೆಗೂ ಹೆಚ್ಚು ಹೊತ್ತು ಬಂದ ಮಳೆ ಜನರ ಸಂಭ್ರಮಕ್ಕೆ ಕಾರಣವಾಯಿತು. ಯಲಬುರ್ಗಾ ತಾಲ್ಲೂಕಿನ ಕೋನಸಾಗರದಲ್ಲಿ ಸಿಡಿಲು ಬಡಿದು ಕುರಿ ಮೇಯಿಸುತ್ತಿದ್ದ ಶ್ರೀನಿವಾಸ ಗೊಲ್ಲರ (16) ಮೃತಪಟ್ಟಿದ್ದಾರೆ.

ತಾಲ್ಲೂಕಿನ ಅರಕೇರದಲ್ಲಿ ರಾಮಣ್ಣ ಬಿನ್ನಿ ಅವರಿಗೆ ಸೇರಿದ ಒಂದು ಎತ್ತು, ಏಳು ಕುರಿ ಮೃತಪಟ್ಟಿವೆ.

ಬೀದರ್ ವರದಿ: ಬೀದರ್, ಭಾಲ್ಕಿ, ಔರಾದ್, ಹುಮನಾಬಾದ್ ತಾಲ್ಲೂಕಿನಲ್ಲಿ ಅರ್ಧಗಂಟೆಗೂ ಹೆಚ್ಚು ಕಾಲ ಗಾಳಿ ಸಮೇತ ಬಿರುಸಿನ ಮಳೆಯಾಗಿದೆ. ಭಾಲ್ಕಿ ತಾಲ್ಲೂಕಿನ ನಿಟ್ಟೂರ (ಬಿ) ಗ್ರಾಮದಲ್ಲಿ ಸಿಡಿಲಿಗೆ ರೈತ ಸುನಿಲ್ ವಿಜಯಕುಮಾರ ಮಗರೆ (32) ಮೃತಪಟ್ಟಿದ್ದಾರೆ.

ಕಲಬುರಗಿ ವರದಿ: ಜಿಲ್ಲೆಯ ಆಳಂದ ತಾಲ್ಲೂಕಿನ ದೇವಂತಗಿ ಗ್ರಾಮದಲ್ಲಿ ಚಂದ್ರಕಾಂತ ಬಸವರಾಜ ಭಜಂತ್ರಿ (12) ಸಿಡಿಲು ಬಡಿದು ಮೃತಪಟ್ಟರು. ಜಿಲ್ಲೆಯಲ್ಲಿ ಕಮಲಾಪುರ, ಕಾಳಗಿ, ಚಿಂಚೋಳಿ ಸೇರಿ ಇತರೆಡೆಯೂ ಸಾಧಾರಣ ಮಳೆಯಾಗಿದೆ.

ರಾಯಚೂರು ಜಿಲ್ಲೆಯ ಹಟ್ಟಿ–ಚಿನ್ನದಗಣಿ ಹಾಗೂ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿಯಲ್ಲಿ ಸಾಧಾರಣ ಮಳೆಯಾಗಿದೆ.

ಚಿತ್ರದುರ್ಗ ವರದಿ: ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಬಿರುಸಿನ ಮಳೆಯಾಯಿತು. ಬೆಳಿಗ್ಗೆಯಿಂದಲೇ ಬಿಸಿಲಿತ್ತು. ಮಧ್ಯಾಹ್ನ 3.30ರ ಸುಮಾರಿಗೆ ದಟ್ಟ ಮೋಡ ಕವಿದು ಮಳೆ ಸುರಿಯಿತು.

ನಾಯಕನಹಟ್ಟಿಯಲ್ಲಿ 45 ನಿಮಿಷ ಮಳೆಯಾಗಿದ್ದು, ತಂಪೆರೆಯಿತು. ರಾಮದುರ್ಗದಲ್ಲಿ ಸಿಡಿಲು ಬಡಿದು ಮರದ ಕೆಳಗೆ ನಿಂತಿದ್ದ ಮಂಜುನಾಥ, ರಾಮು ಅವರಿಗೆ ಸುಟ್ಟ ಗಾಯಗಳಾಗಿವೆ. ಸಮೀಪದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗಿದೆ.

ಮಡಿಕೇರಿ ವರದಿ: ಕೊಡಗು ಜಿಲ್ಲೆಯ ಮಡಿಕೇರಿ, ಸುಂಟಿಕೊಪ್ಪ, ಗೋಣಿಕೊಪ್ಪಲು, ವಿರಾಜಪೇಟೆ, ಸಿದ್ದಾಪುರ ಭಾಗಗಳಲ್ಲಿ ಸುಮಾರು 30 ನಿಮಿಷ ಬಿರುಸಿನ ಮಳೆಯಾಯಿತು. ಬಾಡುತ್ತಿದ್ದ ಕಾಫಿ ತೋಟಗಳು ನಳನಳಿಸುವಂತಾಯಿತು.

ಸುಂಟಿಕೊಪ್ಪ ಹೋಬಳಿ ವ್ಯಾಪ್ತಿಯ ಹೊರೂರು, ಮಾದಾಪುರ, ಚೆಟ್ಟಳ್ಳಿ, ದೇವರಪುರ, ತಿತಿಮತಿ, ಅತ್ತೂರು, ಭದ್ರಗೋಳ, ಅರುವತ್ತೊಕ್ಲು, ಕೈಕೇರಿ ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗಿದೆ.

ಹುಬ್ಬಳ್ಳಿ ವರದಿ: ಉತ್ತರ ಕರ್ನಾಟಕದ ಧಾರವಾಡ, ಬಳ್ಳಾರಿ, ವಿಜಯಪುರ ಮತ್ತು ಬೆಳಗಾವಿ ಜಿಲ್ಲೆಗಳ ವಿವಿಧೆಡೆ ಗುಡುಗು, ಮಿಂಚು, ಬಿರುಗಾಳಿ ಸಹಿತ ಮಳೆಯಾಯಿತು. ಬಳ್ಳಾರಿ ಜಿಲ್ಲೆಯಲ್ಲಿ ಕೆಲವೆಡೆ ಆಲಿಕಲ್ಲು ಸಹಿತ ಮಳೆಯಾಗಿದೆ.

ಗದಗ ಜಿಲ್ಲೆಯ ರೋಣ ತಾಲ್ಲೂಕಿನ ವಿವಿಧೆಡೆಯೂ ಭಾರಿ ಗಾಳಿ ಸಹಿತ ಆಲಿಕಲ್ಲು ಮಳೆಯಾಗಿದೆ. ಹಲವೆಡೆ ತಗಡಿನ ಚಾವಣಿ ಹಾರಿವೆ.

ವಿಜಯಪುರ ಜಿಲ್ಲೆಯ ಚಡಚಣ ತಾಲ್ಲೂಕಿನಾದ್ಯಂತ ಬಿರುಗಾಳಿ ಸಹಿತ ಮಳೆಯಾಗಿದ್ದು, 50ಕ್ಕೂ ಹೆಚ್ಚು ಪತ್ರಾಸ್ ಮನೆಗಳಿಗೆ ಹಾನಿಯಾಗಿದೆ.

ಪಟ್ಟಣದ ಎಂಜಿಎಸ್ ಐಟಿಐ ಕಾಲೇಜಿನಲ್ಲಿ ಕೊಠಡಿಗೆ ಮಳೆ ನೀರು ಹರಿದಿದ್ದು, ಕಂಪ್ಯೂಟರ್, ಕಾಗದ ಪತ್ರಗಳು ಹಾಳಾಗಿವೆ. ವಿವಿಧೆಡೆ ಪತ್ರಾಸ್ ಮನೆ ಹಾನಿಯಾಗಿದೆ. ಮರಗಳು ಉರುಳಿವೆ. ನಿಂಬೆ ಗಿಡಗಳಿಗೂ ಹಾನಿಯಾಗಿದೆ.

ತ್ವರಿತಗತಿಯ ತನಿಖೆ: ಪರಮೇಶ್ವರ

ತುಮಕೂರು: ಪ್ರಕರಣದ ತನಿಖೆಯನ್ನು ತ್ವರಿತಗತಿಯಲ್ಲಿ ನಡೆಸಲು ಸಿಐಡಿಗೆ ಸೂಚಿಸಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 10ರಿಂದ 12 ದಿನಗಳಲ್ಲಿ ಸರ್ಕಾರಕ್ಕೆ ತನಿಖಾ ವರದಿ ಸಲ್ಲಿಸುವಂತೆ ಸಿಐಡಿ ಅಧಿಕಾರಿಗಳಿಗೆ ಸೂಚಿಸಲಾಗಿದೆ. ತನಿಖಾಧಿಕಾರಿಗಳ ತಂಡ ಸೋಮವಾರ ಹುಬ್ಬಳ್ಳಿಗೆ ತೆರಳಿದ್ದು, ತನಿಖೆ ಕೈಗೆತ್ತಿಕೊಂಡಿದೆ. ನೇಹಾ ಕೊಲೆಯ ಹಿಂದೆ ಇನ್ನೂ ನಾಲ್ವರು ಇದ್ದಾರೆ ಎಂದು ಅವರ ಕುಟುಂಬದವರು ಹೇಳಿದ್ದಾರೆ. ಆ ಬಗ್ಗೆಯೂ ತನಿಖೆ ನಡೆಸುವಂತೆ ನಿರ್ದೇಶನ ನೀಡಲಾಗಿದೆ. ತನಿಖೆ ನಂತರ ಸತ್ಯಾಂಶ ಹೊರ ಬರಲಿದ್ದು, ನೊಂದ ಕುಟುಂಬಕ್ಕೆ ನ್ಯಾಯ ಸಿಗಲಿದೆ ಎಂದರು.

ನೇಹಾ ಕೊಲೆ ವಿಚಾರವನ್ನು ಬಿಜೆಪಿಯವರು ರಾಜಕೀಯಕ್ಕೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಚುನಾವಣೆಯಲ್ಲಿ ಸೋಲಿನ ಭೀತಿಯಿಂದ ಈ ವಿಚಾರ ಮುಂದಿಟ್ಟುಕೊಂಡು ರಾಜಕಾರಣ ಮಾಡುತ್ತಿದ್ದಾರೆ. ಹಾಗಾಗಿ ಸತ್ಯವನ್ನು ಹೊರ ತರುವ ಸಲುವಾಗಿ ಸಿಐಡಿ ತನಿಖೆಗೆ ವಹಿಸಲು ನಿರ್ಧರಿಸಲಾಗಿದೆ ಎಂದು ಸ್ಪಷ್ಟಪಡಿಸಿದರು. 'ನನಗೆ ಬಂದ ಪ್ರಾಥಮಿಕ ವರದಿ ಆಧರಿಸಿ ಹೇಳಿಕೆ ನೀಡಿದ್ದೆ. ಈ ಬಗ್ಗೆ ವಿದ್ಯಾರ್ಥಿಯ ತಂದೆ– ತಾಯಿಗೆ ನೋವಾಗಿದ್ದರೆ ವಿಷಾದವನ್ನೂ ವ್ಯಕ್ತಪಡಿಸಿದ್ದೇನೆ. ಆದರೆ ಅದೇ ಹೇಳಿಕೆ ಮುಂದಿಟ್ಟುಕೊಂಡು ಕಟುವಾಗಿ ಟೀಕಿಸುವುದು, ನಿಂದಿಸುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ' ಎಂದು ಪರಮೇಶ್ವರ ಅಸಮಾಧಾನ ವ್ಯಕ್ತಪಡಿಸಿದರು.

ಸಿಬಿಐ ತನಿಖೆಗೆ ಒಪ್ಪಿಸಿ: ಈಶ್ವರಪ್ಪ

ಹುಬ್ಬಳ್ಳಿ: 'ಇಡೀ ದೇಶ ವಿದ್ಯಾರ್ಥಿನಿ ನೇಹಾ ಕೊಲೆ ಖಂಡಿಸುತ್ತಿದೆ. ಇಂತಹ ಸಂದರ್ಭದಲ್ಲಿ ಸುಮ್ಮನಿದ್ದರೆ ರಾಜ್ಯ ಸರ್ಕಾರ ತಪ್ಪಿತಸ್ಥ ಸ್ಥಾನದಲ್ಲಿ ನಿಲ್ಲಬೇಕಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕಣ್ಣೊರೆಸುವ ತಂತ್ರವಾಗಿ ಪ್ರಕರಣವನ್ನು ಸಿಐಡಿಗೆ ಒಪ್ಪಿಸಿದ್ದಾರೆ' ಎಂದು ಕೆ.ಎಸ್. ಈಶ್ವರಪ್ಪ ಆರೋಪಿಸಿದ್ದಾರೆ.

ನೇಹಾ ಹಿರೇಮಠ ಅವರ ಮನೆಗೆ ಭೇಟಿ ನೀಡಿದ ಅವರು, 'ಸಿಐಡಿ ತನಿಖೆಯಿಂದ ಈ ಪ್ರಕರಣಕ್ಕೆ ಯಾವುದೇ ಪರಿಹಾರ ಸಿಗಲ್ಲ. ಸಿಬಿಐಗೆ ಒಪ್ಪಿಸಿದರೆ ಮಾತ್ರ ನ್ಯಾಯ ಸಿಗಲಿದೆ' ಎಂದರು.

'ಪೊಲೀಸ್ ಕಮಿಷನರ್ ಅಮಾನತಿಗೆ ಆಗ್ರಹ'

ರಾಜಾರೋಷವಾಗಿ ಓಡಾಡುತ್ತಿರುವ ಆರೋಪಿಗಳು: ನ್ಯಾಯ ಸಿಗಲ್ಲ ಎಂದ ಮೃತಳ ತಂದೆ ನಿರಂಜನಯ್ಯ ಹಿರೇಮಠ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಮಗಳ ಕೊಲೆ ಪ್ರಕರಣದ ಉಳಿದ ಆರೋಪಿಗಳನ್ನು ಪೊಲೀಸರು ಬಂಧಿಸದೆ, ರಾಜಾರೋಷವಾಗಿ ಓಡಾಡಲು ಬಿಟ್ಟಿದ್ದಾರೆ. ಪೊಲೀಸ್ ಕಮಿಷನರ್ ಅವರನ್ನು ಅಮಾನತು ಮಾಡಬೇಕು' ಎಂದು ನೇಹಾ ತಂದೆ ನಿರಂಜನಯ್ಯ ಹಿರೇಮಠ ಆಗ್ರಹಿಸಿದರು.

'ಪೊಲೀಸ್ ಕಮಿಷನರ್ ಅವರಿಂದ ನಮ್ಮ ಕುಟುಂಬಕ್ಕೆ ನ್ಯಾಯ ಸಿಗುವ ಭರವಸೆ ಇಲ್ಲ. ಮಗಳನ್ನು ಚಾಕು ಇರಿದು ಕೊಲೆ ಮಾಡಿದ ಸಿಸಿಟಿವಿ ದೃಶ್ಯಾವಳಿ ಜೊತೆಗೆ ಸಾಕ್ಷಿಗಳು ಇದ್ದಾರೆ. ಅವುಗಳನ್ನು ಆಧರಿಸಿ ಫಯಾಜ್‌ನನ್ನು ಎನ್‌ಕೌಂಟರ್ ಮಾಡಬೇಕಿತ್ತು. ಅದನ್ನು ಬಿಟ್ಟು ತನಿಖೆ ಮಾಡುತ್ತಿದ್ದೇವೆ ಎನ್ನುತ್ತ ಕಾಲ ವಿಳಂಬ ಮಾಡುತ್ತಿದ್ದಾರೆ' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಕೆಲ ರಾಜ್ಯಗಳಲ್ಲಿ ಇಂಥ ಆರೋಪಿಗಳನ್ನು ಮುಖ್ಯಮಂತ್ರಿ ಆದೇಶವಿಲ್ಲದೆ, ಎನ್‌ಕೌಂಟರ್ ಮಾಡುತ್ತಾರೆ. ಗುಂಡಿಕ್ಕಿ ಕೊಲ್ಲುತ್ತಾರೆ. ಇಲ್ಲಿಯೂ ಹಾಗೆ ಮಾಡಬೇಕಿತ್ತು. ಅಂತಹ ಕಾನೂನು ನಮ್ಮಲ್ಲೂ ಜಾರಿಗೆ ಬರಬೇಕು. ಪ್ರಕರಣದ ತನಿಖೆಯನ್ನು ಮುಖ್ಯಮಂತ್ರಿ ಸಿಐಡಿಗೆ ಒಪ್ಪಿಸಿದ್ದು ಸ್ವಾಗತಾರ್ಹ. ಸಿಐಡಿ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ, ಆರೋಪಿಗೆ ಗಲ್ಲುಶಿಕ್ಷೆಯಾಗುವಂತೆ ಮಾಡಬೇಕು' ಎಂದು ಹೇಳಿದರು.

> **ಕೊಲೆಯಾದ ವಿದ್ಯಾರ್ಥಿನಿ ಬೇರೆ ಕೋಮಿನವಳಾಗಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವಳ ಮನೆಗೆ ತೆರಳಿ ಸಾಂತ್ವನ ಹೇಳುತ್ತಿದ್ದರು. ಹಿಂದೂ ಆಗಿದ್ದಕ್ಕೆ ಅವರು ಬಂದಿಲ್ಲ**
> **ಮಹೇಶ ಟೆಂಗಿನಕಾಯಿ,** ಶಾಸಕ

ಪರಿಹಾರಕ್ಕೆ ಒತ್ತಾಯ (ಮಂಗಳೂರು ವರದಿ): ವಿದ್ಯಾರ್ಥಿನಿ ನೇಹಾ ಕುಟುಂಬಕ್ಕೆ ರಾಜ್ಯ ಸರ್ಕಾರ ಪರಿಹಾರ ಘೋಷಿಸಬೇಕು ಎಂದು ಸಂಸದ ನಳಿನ್ ಕುಮಾರ್ ಕಟೀಲ್ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇರಳದ ವಯನಾಡ್‌ನಲ್ಲಿ ಆನೆ ತುಳಿತಕ್ಕೆ ಒಳಗಾಗಿ ಸಾವಿಗೀಡಾದ ವ್ಯಕ್ತಿಯ ಕುಟುಂಬಕ್ಕೆ ಕರ್ನಾಟಕ ಸರ್ಕಾರ ಪರಿಹಾರ ಕೊಟ್ಟಿದೆ. ಅದು ಒಳ್ಳೆಯ ಕಾರ್ಯ. ನೇಹಾ ಕುಟುಂಬಕ್ಕೆ ಪರಿಹಾರ ನೀಡಲು ತಡಮಾಡಬಾರದು ಎಂದರು.

ಕಾಂಗ್ರೆಸ್ ಸರ್ಕಾರ, ವಿಶೇಷವಾಗಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಬಂದಾಗಲೆಲ್ಲ ರಾಜ್ಯದಲ್ಲಿ ಆತಂಕದ ಸ್ಥಿತಿ ನಿರ್ಮಾಣ ಆಗುತ್ತದೆ. ರಸ್ತೆಯಲ್ಲಿ ಪಾಕಿಸ್ತಾನ ಜಿಂದಾಬಾದ್ ಕೂಗುತ್ತಿದ್ದವರು ಈ ಬಾರಿ ವಿಧಾನಸೌಧದ ಒಳಗೂ ಕಾಲಿಟ್ಟಿದ್ದಾರೆ. ಇಂಥ ಮನಸ್ಥಿತಿಯವರನ್ನು ಬಂಧಿಸುವಂತೆ ಒತ್ತಾಯಿಸಿದಾಗ ಉಡಾಫೆಯಾಗಿ ಮಾತನಾಡುತ್ತಾರೆ. ಇದು ಹಿಂದೂಗಳ ಹತ್ಯೆಗೆ ಕಾರಣವಾಗುತ್ತದೆ ಎಂದು ನಳಿನ್ ದೂರಿದರು.



ಹುಬ್ಬಳ್ಳಿಯಲ್ಲಿ ಸೋಮವಾರ ಅಂಜುಮನ್ ಶಿಕ್ಷಣ ಸಂಸ್ಥೆ ವಿದ್ಯಾರ್ಥಿನಿಯರು ನೇಹಾ ಕೊಲೆ ಖಂಡಿಸಿ ಪ್ರತಿಭಟನಾ ಮೆರವಣಿಗೆ ನಡೆಸಿದರು

'ಚೊಂಬಿನಲ್ಲಿ ಹಿಂದೂಗಳ ರಕ್ತ ತುಂಬಿದೆ'

ತುಮಕೂರು: ಕಾಂಗ್ರೆಸ್ ನೀಡಿರುವ ಜಾಹೀರಾತಿನ ಚೊಂಬಿನಲ್ಲಿ ಹಿಂದೂಗಳ ರಕ್ತ ತುಂಬಿಕೊಂಡಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಹಿಂದೂಗಳ ರಕ್ತಕ್ಕೆ ಬೆಲೆ ಇಲ್ಲವಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಕಿಡಿಕಾರಿದರು.

ನಗರದಲ್ಲಿ ಸೋಮವಾರ ಹುಬ್ಬಳ್ಳಿ ವಿದ್ಯಾರ್ಥಿನಿ ನೇಹಾ ಕೊಲೆ ಖಂಡಿಸಿ ಬಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದರು.

ಜಾಹೀರಾತಿನಲ್ಲಿರುವುದು ಖಾಲಿ ಚೊಂಬು ಅಲ್ಲ. ಚೊಂಬಿನ ತುಂಬಾ ರಕ್ತ ತುಂಬಿದೆ. ಚೊಂಬಿನಿಂದ ಹಿಂದೂಗಳ ರಕ್ತ ತುಂಬಿ ಚೆಲ್ಲುತ್ತಿರುವುದು ಅದರ ಪ್ರತೀಕವಾಗಿದೆ. ಇದಕ್ಕೆ ಪ್ರತಿಯಾಗಿ 'ಕಾಂಗ್ರೆಸ್ ಬಂದ್ರೆ ಡೇಂಜರ್' ಎಂದು ಬಿಜೆಪಿಯಿಂದಲೂ ಜಾಹೀರಾತು ನೀಡಲಾಗಿದೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲ ಕೊಲೆ, ಸುಲಿಗೆ ಹೆಚ್ಚಾಗಿವೆ. ಗೂಂಡಾ ರಾಜ್ಯ ಮಾಡಲು ಹೊರಟಿದೆ. ಮುಸ್ಲಿಂ ಭಯೋತ್ಪಾದಕರು ಏನು ಮಾಡಿದರೂ ರಕ್ಷಣೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಜೈ ಶ್ರೀರಾಮ್ ಘೋಷಣೆ ಕೂಗುವುದು ಸಹ ಅಪರಾಧವಾಗಿದೆ ಎಂದು ಅವರು ಟೀಕಿಸಿದರು.

ಮುಸ್ಲಿಂ ಯುವಕರಿಗೆ ತರಬೇತಿ ಕೊಟ್ಟು, ಹಿಂದೂ ಯುವತಿಯರನ್ನು ಪ್ರೀತಿಸುವ ನಾಟಕವಾಡಿ, ಲವ್ ಜಿಹಾದ್ ನಡೆಸುವಂತೆ ಹೇಳಿಕೊಡಲಾಗುತ್ತಿದೆ. ಇದಕ್ಕಾಗಿ ಹೊರಗಿನಿಂದ ಹಣ ಬರುತ್ತಿದೆ. ಲವ್ ಜಿಹಾದ್‌ನಿಂದಲೇ ಹುಬ್ಬಳ್ಳಿ ವಿದ್ಯಾರ್ಥಿನಿ ನೇಹಾ ಕೊಲೆ ನಡೆದಿದ್ದು, ಅದನ್ನು ಮುಚ್ಚಿ ಹಾಕುವ ಪ್ರಯತ್ನದಲ್ಲಿ ಸರ್ಕಾರ ತೊಡಗಿದೆ ಎಂದರು.

'ತಪಾಸಣೆಗಾಗಿ ವೈದ್ಯಕೀಯ ಮಂಡಳಿ ರಚಿಸಿ'

ಮುಖ್ಯಮಂತ್ರಿ ಕೇಜ್ರಿವಾಲ್ ಆರೋಗ್ಯದ ಕುರಿತು ಇ.ಡಿಯಿಂದ ಸುಳ್ಳು ಮಾಹಿತಿ: ಎಎಪಿ ಆರೋಪ

ನವದೆಹಲಿ (ಪಿಟಿಐ): 'ಏಮ್ಸ್‌ನ ತಜ್ಞ ವೈದ್ಯರ ಜೊತೆ ಸಮಾಲೋಚನೆ ನಡೆಸಲು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಅವಕಾಶ ಮಾಡಿಕೊಡಲಾಯಿತು ಎಂದು ಜಾರಿ ನಿರ್ದೇಶನಾಲಯವು (ಇ.ಡಿ) ನ್ಯಾಯಾಲಯದಲ್ಲಿ ಸುಳ್ಳು ಹೇಳಿದೆ' ಎಂದು ಸಚಿವೆ ಆತಿಶಿ ಅವರು ಸೋಮವಾರ ಆರೋಪಿಸಿದ್ದಾರೆ. ಇದರ ಬೆನ್ನಲ್ಲೇ, ಕೇಜ್ರಿವಾಲ್ ಅವರಿಗೆ ಅಗತ್ಯವಿರುವ ವೈದ್ಯಕೀಯ ಚಿಕಿತ್ಸೆ ನಿರ್ಧರಿಸುವ ಸಲುವಾಗಿ ವೈದ್ಯಕೀಯ ಮಂಡಳಿ ರಚಿಸಲು ಏಮ್ಸ್‌ಗೆ ದೆಹಲಿ ಹೈಕೋರ್ಟ್ ನಿರ್ದೇಶಿಸಿದೆ.

ತಮ್ಮ ವೈದ್ಯರ ಜೊತೆ ಪ್ರತಿದಿನ 15 ನಿಮಿಷಗಳ ಸಮಯ ಸಮಾಲೋಚನೆ ನಡೆಸಲು ಮತ್ತು ಇನ್ಸುಲಿನ್ ಒದಗಿಸಲು ಅವಕಾಶ ಮಾಡಿಕೊಡಬೇಕೆಂದು ತಿಹಾರ ಜೈಲಿನಲ್ಲಿರುವ ಕೇಜ್ರಿವಾಲ್ ಅವರು ಶುಕ್ರವಾರ ಅರ್ಜಿ ಸಲ್ಲಿಸಿದ್ದರು. ಅರ್ಜಿ ತಿರಸ್ಕರಿಸಿದ ವಿಶೇಷ ನ್ಯಾಯಾಧೀಶರು, ಸೋಮವಾರ ಈ ನಿರ್ದೇಶನ ನೀಡಿದರು.

'ಕೇಜ್ರಿವಾಲ್ ಅವರಿಗೆ ವೈದ್ಯರು ಸೂಚಿಸಿರುವ ಆಹಾರ ಪಟ್ಟಿಗೂ, ಅವರಿಗೆ ನೀಡಲಾದ ಆಹಾರಕ್ಕೂ ವ್ಯತ್ಯಾಸವಿದೆ. ಇದು ಗೊತ್ತಿದ್ದೂ ಅವರಿಗೆ ಅಂತಹ ಆಹಾರ ಪೂರೈಸಲು ಬಿಟ್ಟಿದ್ದಾದರೂ ಏಕೆ, ಅದನ್ನು ತಡೆಯಲು ಏನು ಕ್ರಮ ಕೈಗೊಳ್ಳಲಾಯಿತು? ಎಂದು ಜೈಲಿನ ಅಧಿಕಾರಿಗಳು ಸ್ಪಷ್ಟಪಡಿಸಿಲ್ಲ. ಏಮ್ಸ್‌ನ ವೈದ್ಯಕೀಯ ಮಂಡಳಿಯು ತಪಾಸಣೆ ನಡೆಸಿ, ಅವರಿಗೆ ಇನ್ಸುಲಿನ್ ಅಗತ್ಯ ಇದೆಯೇ ಇಲ್ಲವೇ ಎನ್ನುವುದರ ಕುರಿತು ಶೀಘ್ರ ವರದಿ ಸಲ್ಲಿಸಬೇಕು' ಎಂದು ಹೈಕೋರ್ಟ್ ನಿರ್ದೇಶಿಸಿತು.

ಇ.ಡಿಯಿಂದ ಸುಳ್ಳು ಹೇಳಿಕೆ–ಎಎಪಿ: 'ಕೇಜ್ರಿವಾಲ್ ಅವರಿಗೆ ವೈದ್ಯಕೀಯ ಸಮಾಲೋಚನೆ ನೀಡಿದ್ದ ಏಮ್ಸ್ ವೈದ್ಯರು ಅವರಿಗೆ ಇನ್ಸುಲಿನ್ ಅಗತ್ಯವಿಲ್ಲ ಎಂದು ಹೇಳಿದ್ದಾರೆ. ಜೊತೆಗೆ ಅವರಿಗಾಗಿ ಪಥ್ಯಾಹಾರ ಪಟ್ಟಿ ಸಿದ್ಧಪಡಿಸಿದ್ದಾರೆ ಎಂದು ನ್ಯಾಯಾಲಯಕ್ಕೆ ಇ.ಡಿ ಸುಳ್ಳು ಹೇಳಿದೆ. ಕೇಜ್ರಿವಾಲ್ ಅವರಿಗೆ ಸಮಾಲೋಚನೆ ನೀಡಿದವರು ವೈದ್ಯರೇ ಅಲ್ಲ. ಅವರು ಕೇವಲ ಆಹಾರ ತಜ್ಞರು ಎಂದು ಇ.ಡಿ ಹೇಳಿದೆ' ಎಂದು ಸುದ್ದಿಗೋಷ್ಠಿಯಲ್ಲಿ ಆತಿಶಿ ಹೇಳಿದರು.

ಕೇಜ್ರಿವಾಲ್ ಪತ್ರ: ಅರವಿಂದ ಕೇಜ್ರಿವಾಲ್ ಅವರು ತಿಹಾರ ಜೈಲು ವರಿಷ್ಠಾಧಿಕಾರಿಗೆ ಸೋಮವಾರ ಪತ್ರ ಬರೆದು, ತಮ್ಮ ದೇಹದಲ್ಲಿ ಸಕ್ಕರೆ ಮಟ್ಟವು ಹೆಚ್ಚಾಗಿದ್ದು, ಪ್ರತಿದಿನ ಇನ್ಸುಲಿನ್ ನೀಡುವಂತೆ ಕೋರಿದ್ದಾರೆ ಎಂದು ಎಎಪಿ ಮೂಲಗಳು ತಿಳಿಸಿವೆ.

ದೆಹಲಿ ಸಿ.ಎಂಗೆ ಜಾಮೀನು ಕೋರಿದ್ದ ವಿದ್ಯಾರ್ಥಿಗೆ ₹ 75,000 ದಂಡ


ನವದೆಹಲಿ (ಪಿಟಿಐ): ಅರವಿಂದ ಕೇಜ್ರಿವಾಲ್ ಅವರಿಗೆ ವಿಶೇಷ ಮಧ್ಯಂತರ ಜಾಮೀನು ನೀಡಬೇಕು ಎಂದು ಕೋರಿ ಸಾರ್ವಜನಿಕ ಹಿತಾಸಕ್ತಿ (ಪಿಐಎಲ್) ಅರ್ಜಿ ಸಲ್ಲಿಸಿದ್ದ ಕಾನೂನು ವಿದ್ಯಾರ್ಥಿಯೊಬ್ಬರಿಗೆ ದೆಹಲಿ ಹೈಕೋರ್ಟ್ ₹ 75 ಸಾವಿರ ದಂಡ ವಿಧಿಸಿದೆ.

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ದೆಹಲಿ ಮುಖ್ಯಮಂತ್ರಿಗೆ ವಿಶೇಷ ಮಧ್ಯಂತರ ಜಾಮೀನು ನೀಡಲು ಸಾಧ್ಯವಿಲ್ಲ ಎಂದು ಪ್ರಭಾರ ಮುಖ್ಯ ನ್ಯಾಯಮೂರ್ತಿ ಮನಮೋಹನ್ ಅವರಿದ್ದ ನ್ಯಾಯಪೀಠ ಹೇಳಿದೆ.

'ವಿ ದಿ ಪೀಪಲ್ ಆಫ್ ಇಂಡಿಯಾ' ಹೆಸರಿನಲ್ಲಿ ಪಿಐಎಲ್ ಸಲ್ಲಿಸಿರುವ ನಾಲ್ಕನೇ ವರ್ಷದ ಕಾನೂನು ವಿದ್ಯಾರ್ಥಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿರುವ ನ್ಯಾಯಪೀಠ, 'ಅರ್ಜಿದಾರರು ತರಗತಿಗೆ ಹಾಜರಾಗುತ್ತಿದ್ದಾರೆಯೇ? ಅವರು ಕಾನೂನಿನ ನಿಯಮಗಳನ್ನು ಪಾಲಿಸುವಂತೆ ಕಾಣುತ್ತಿಲ್ಲ' ಎಂದು ತರಾಟೆಗೆ ತೆಗೆದುಕೊಂಡಿತು.

ಕಾನೂನು ರೀತ್ಯ ಪರಿಹಾರ ಕಂಡುಕೊಳ್ಳಲು ಕೇಜ್ರಿವಾಲ್‌ಗೆ ಅವಕಾಶಗಳಿವೆ. ಅದಕ್ಕೂ ಮಿಗಿಲಾಗಿ, ಕೇಜ್ರಿವಾಲ್ ಪರವಾಗಿ ಅರ್ಜಿ ಸಲ್ಲಿಸಲು ಅರ್ಜಿದಾರರಿಗೆ 'ಪವರ್ ಆಫ್ ಅಟಾರ್ನಿ' ಇಲ್ಲ ಎಂದು ಹೇಳಿದೆ.

ಮೇ 15ರಂದು ಅರ್ಜಿ ವಿಚಾರಣೆ



ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ತಮ್ಮ ವಿರುದ್ಧ ಜಾರಿ ನಿರ್ದೇಶನಾಲಯ ಹೊರಡಿಸಿರುವ ಸಮನ್ಸ್ ಪ್ರಶ್ನಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಮೇ 15ರಂದು ನಡೆಸಲು ದೆಹಲಿ ಹೈಕೋರ್ಟ್ ಪಟ್ಟಿಮಾಡಿದೆ.

ಒತ್ತಾಯದ ಕ್ರಮಗಳಿಂದ ರಕ್ಷಣೆ ನೀಡುವಂತೆ ಕೇಜ್ರಿವಾಲ್ ಅವರು ಸಲ್ಲಿಸಿದ್ದ ಅರ್ಜಿ ತಿರಸ್ಕರಿಸಿದ್ದ ಹೈಕೋರ್ಟ್, ಇ.ಡಿ ಸಲ್ಲಿಸಿರುವ ಪ್ರತಿಕ್ರಿಯೆಗೆ ಪ್ರತಿಸವಾಲು ಹಾಕಲು ಕೇಜ್ರಿವಾಲ್ ಅವರಿಗೆ ಅವಕಾಶ ನೀಡಿತ್ತು.

ಹಣ ಅಕ್ರಮ ವರ್ಗಾವಣೆ ತಡೆ ನೀತಿ (ಪಿಎಂಎಲ್‌ಎ) ಅಡಿ ಕೇಜ್ರಿವಾಲ್ ಅವರ ವಿರುದ್ಧ ಆರಂಭಿಕ ಕ್ರಮಗಳನ್ನು ತೆಗೆದುಕೊಳ್ಳಲಾಗಿಲ್ಲ ಎಂದು ಇ.ಡಿ. ಹೈಕೋರ್ಟ್‌ಗೆ ಪ್ರತಿಕ್ರಿಯಿಸಿತ್ತು. ಆ ಹೇಳಿಕೆ ವಿರುದ್ಧವೇ ಪ್ರತಿಸವಾಲು ಹಾಕುವುದಾಗಿ ಕೇಜ್ರಿವಾಲ್ ಪರ ವಕೀಲ ಹೇಳಿದ್ದಾರೆ.

ವೆಂಕಯ್ಯ ನಾಯ್ಡುಗೆ 'ಪದ್ಮವಿಭೂಷಣ' ಪ್ರದಾನ

ನವದೆಹಲಿ (ಪಿಟಿಐ): ಮಾಜಿ ಉಪ ರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು, ಸುಲಭ್ ಇಂಟರ್ ನ್ಯಾಷನಲ್‌ನ ಸಂಸ್ಥಾಪಕ ಬಿಂದೇಶ್ವರ ಪಾಠಕ್ ಸೇರಿದಂತೆ ವಿವಿಧ ಕ್ಷೇತ್ರದ ಗಣ್ಯರಿಗೆ ರಾಷ್ಟ್ರಪತಿ ಭವನದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 'ಪದ್ಮ' ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.

ಬಿಂದೇಶ್ವರ ಪಾಠಕ್ ಅವರಿಗೆ ಮರಣೋತ್ತರವಾಗಿ ಹಾಗೂ ಭರತನಾಟ್ಯ ಕಲಾವಿದೆ ಪದ್ಮಾ ಸುಬ್ರಹ್ಮಣ್ಯಂ, ವೆಂಕಯ್ಯ ನಾಯ್ಡು ಅವರಿಗೆ ಪದ್ಮವಿಭೂಷಣ ಪ್ರದಾನ ಮಾಡಲಾಯಿತು.

ನಟ ಮಿಥುನ್ ಚಕ್ರವರ್ತಿ, ಗಾಯಕಿ ಉಷಾ ಉತ್ಥುಪ್, ಉತ್ತರ ಪ್ರದೇಶದ ಮಾಜಿ ರಾಜ್ಯಪಾಲ ರಾಮ ನಾಯೀಕ ಹಾಗೂ ಕೈಗಾರಿಕೋದ್ಯಮಿ ಸತೀಶ್ ಜಿಂದಾಲ್ ಅವರಿಗೆ ಪದ್ಮಭೂಷಣ ಪುರಸ್ಕಾರವನ್ನು ರಾಷ್ಟ್ರಪತಿ ಪ್ರದಾನ ಮಾಡಿದರು.

ಉಪ ರಾಷ್ಟ್ರಪತಿ ಜಗದೀಪ ಧನಕರ್, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ವಿದೇಶಾಂಗ ಸಚಿವ ಎಸ್.ಜೈಶಂಕರ್ ಉಪಸ್ಥಿತರಿದ್ದರು.



ರಾಷ್ಟ್ರಪತಿ ಭವನದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ದ್ರೌಪದಿ ಮುರ್ಮು ಅವರು ಮಾಜಿ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರಿಗೆ 'ಪದ್ಮವಿಭೂಷಣ' ಪ್ರದಾನ ಮಾಡಿದರು ಪಿಟಿಐ ಚಿತ್ರ

ಬಿಸಿಗಾಳಿ: ಕಾರ್ಯಪಡೆ ರಚಿಸಿದ ಆಯೋಗ

ನವದೆಹಲಿ: ಲೋಕಸಭಾ ಚುನಾವಣೆಯ ಮೊದಲ ಹಂತದಲ್ಲಿ ಬಿಸಿಗಾಳಿಯ ಮತದಾನದ ಪ್ರಮಾಣದ ಮೇಲೆ ಪ್ರಭಾವ ಬೀರಿರುವ ಸಾಧ್ಯತೆ ಇರುವ ಕಾರಣ, ಮತದಾನದ ಪ್ರತಿ ಹಂತಕ್ಕೂ ಐದು ದಿನ ಮೊದಲು ಆರೋಗ್ಯ ಹಾಗೂ ವಾತಾವ ರಣದಲ್ಲಿನ ಆರ್ದ್ರತೆಯ ಮೇಲೆ ಅದರ ಪರಿಣಾಮದ ಬಗ್ಗೆ ಪರಿಶೀಲಿಸಲು ಕೇಂದ್ರ ಚುನಾವಣಾ ಆಯೋಗವು ಕಾರ್ಯಪಡೆಯೊಂದನ್ನು ರಚಿಸಿದೆ.

ಏಪ್ರಿಲ್ 26ರಂದು ನಡೆಯಲಿರುವ ಎರಡನೆಯ ಹಂತದ ಮತದಾನದ ವೇಳೆ ಬಿಸಿಗಾಳಿಯ ಪ್ರಭಾವವು ತೀರಾ ಕಳವಳಪಡಬೇಕಾದ ಮಟ್ಟದಲ್ಲಿ ಇರುವುದಿಲ್ಲ ಎಂದು ಭಾರತೀಯ ಹವಾಮಾನ ಇಲಾಖೆಯ ಮಹಾನಿರ್ದೇಶಕರು ಹೇಳಿದ್ದಾರೆ.

ಅಂಕಗಳ ಸಾಮಾನ್ಯೀಕರಣ ಪ್ರಕ್ರಿಯೆ ಇಲ್ಲ: ಯುಜಿಸಿ ಮುಖ್ಯಸ್ಥ

ನವದೆಹಲಿ (ಪಿಟಿಐ): ಪದವಿ ಹಂತದಲ್ಲಿ ವಿಶ್ವವಿದ್ಯಾಲಯ ಪ್ರವೇಶಕ್ಕಾಗಿನ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಯುಇಟಿ–ಯುಜಿ) ಹಾಗೂ ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ (ಎನ್‌ಇಟಿ) 'ಅಂಕಗಳ ಸಾಮಾನ್ಯೀಕರಣ' ಪ್ರಕ್ರಿಯೆಯನ್ನು ಈ ವರ್ಷದಿಂದ ಕೈಬಿಡಲಾಗುತ್ತದೆ ಎಂದು ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗದ (ಯುಜಿಸಿ) ಮುಖ್ಯಸ್ಥ ಜಗದೀಶ್ ಕುಮಾರ್ ಹೇಳಿದ್ದಾರೆ.

ಇವೆರಡಕ್ಕೂ, ವಿಷಯವೊಂದಕ್ಕೆ ಒಂದೇ ಪಾಳಿಯಲ್ಲಿ ಪರೀಕ್ಷೆ ನಡೆಸಲಾಗುತ್ತದೆ. ಹೀಗಾಗಿ ಅಂಕಗಳ ಸಾಮಾನ್ಯೀಕರಣವು ಈ ವರ್ಷದಿಂದ ಅಗತ್ಯವಿಲ್ಲ ಎಂದು ಅವರು ತಿಳಿಸಿದ್ದಾರೆ. ವಿದ್ಯಾರ್ಥಿಯೊಬ್ಬನ ಅಂಕವನ್ನು ಪರಿಷ್ಕರಿಸಿ, ಅದನ್ನು ಇನ್ನೊಬ್ಬ ವಿದ್ಯಾರ್ಥಿಯ ಅಂಕದ ಜೊತೆ ಹೋಲಿಸಲು ಸೂಕ್ತವಾಗುವಂತೆ ಮಾಡುವುದನ್ನು 'ಅಂಕಗಳ ಸಾಮಾನ್ಯೀಕರಣ' ಎಂದು ಕರೆಯಲಾಗುತ್ತದೆ.

ಒಂದೇ ವಿಷಯದ ಮೇಲಿನ ಪರೀಕ್ಷೆಯನ್ನು ಹಲವು ಅವಧಿಗಳಲ್ಲಿ, ಬೇರೆ ಬೇರೆ ಪ್ರಶ್ನೆಪತ್ರಿಕೆಗಳೊಂದಿಗೆ ನಡೆಸಿದಾಗ ಈ ಪ್ರಕ್ರಿಯೆ ಅಗತ್ಯವಾಗುತ್ತದೆ. ಆದರೆ, ಈ ಪ್ರಕ್ರಿಯೆಯು ಪರೀಕ್ಷೆಗಳಲ್ಲಿ ತಾವು ತೋರುವ ಸಾಧನೆಯ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುತ್ತಿದೆ ಎಂದು ವಿದ್ಯಾರ್ಥಿಗಳು ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ.

'ವಿದ್ಯಾರ್ಥಿಗಳಿಗೆ ಮೊದಲ ಆಯ್ಕೆಯ ಪರೀಕ್ಷಾ ಕೇಂದ್ರವನ್ನು ಸಾಧ್ಯವಾದಷ್ಟು ಮಟ್ಟಿಗೆ ಒದಗಿಸುವ ಉದ್ದೇಶದಿಂದ ನಾವು ಈ ಮೊದಲು ಒಂದೇ ವಿಷಯ ಕುರಿತ ಪರೀಕ್ಷೆಯನ್ನು ಎರಡು–ಮೂರು ದಿನಗಳಲ್ಲಿ ನಡೆಸಬೇಕಿತ್ತು. ಆದರೆ ಈ ವರ್ಷ ಒಎಂಆರ್ ಮಾದರಿಯನ್ನು ಅಳವಡಿಸಿಕೊಂಡಿರುವ ಕಾರಣ, ಶಾಲೆ ಮತ್ತು ಕಾಲೇಜುಗಳಲ್ಲಿ ಭಾರಿ ಸಂಖ್ಯೆಯಲ್ಲಿ ಪರೀಕ್ಷಾ ಕೇಂದ್ರಗಳು ಲಭ್ಯವಾಗಲಿವೆ. ಆಗ ನಮಗೆ ಇಡೀ ದೇಶದಲ್ಲಿ ಪರೀಕ್ಷೆಯನ್ನು ಒಂದೇ ದಿನ ನಡೆಸಲು ಆಗಲಿದೆ' ಎಂದು ಅವರು ವಿವರಿಸಿದ್ದಾರೆ.

ಒಂದೇ ವಿಷಯಕ್ಕೆ ಪರೀಕ್ಷೆಯನ್ನು ಹಲವು ದಿನಗಳಲ್ಲಿ ನಡೆಸಿದಾಗ ಅಂಕಗಳ ಸಾಮಾನ್ಯೀಕರಣದ ಅಗತ್ಯ ಇರುತ್ತದೆ. ಅದು ವೈಜ್ಞಾನಿಕ ವಿಧಾನವೂ ಹೌದು ಎಂದು ಅವರು ಹೇಳಿದ್ದಾರೆ.

ತಂದೆ, ಮಲತಾಯಿ, ತಮ್ಮನ ಹತ್ಯೆಗೆ ₹ 65 ಲಕ್ಷ ನೀಡಲು ಒಪ್ಪಿದ್ದ ಆರೋಪಿ

ನಾಲ್ವರ ಹತ್ಯೆ: ಮಗನಿಂದಲೇ ಸುಪಾರಿ

ಪ್ರಜಾವಾಣಿ ವಾರ್ತೆ

ಗದಗ: ಇಲ್ಲಿನ ಗದಗ ಬೆಟಗೇರಿ ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ ಮನೆಯಲ್ಲೇ ಅವರ ಪುತ್ರ ಸೇರಿ ನಾಲ್ವರನ್ನು ಬರ್ಬರವಾಗಿ ಹತ್ಯೆ ಮಾಡಿದ್ದ ಪ್ರಕರಣವನ್ನು ಭೇದಿಸಿರುವ ಪೊಲೀಸರು, ಎಂಟು ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ. ಆಸ್ತಿ ಮಾರಲು ವಿರೋಧ ವ್ಯಕ್ತಪಡಿಸಿದ್ದಕ್ಕೆ ಸಿಟ್ಟಿಗೆದ್ದು ಸ್ವಂತ ಮಗನೇ ತಂದೆ, ಮಲತಾಯಿ ಮತ್ತು ಮಲತಮ್ಮನ ಹತ್ಯೆಗೆ ಸುಪಾರಿ ನೀಡಿದ್ದ ಎಂಬ ಅಂಶ ಬಹಿರಂಗಗೊಂಡಿದೆ.

ಏಪ್ರಿಲ್ 19ರಂದು ಮಧ್ಯರಾತ್ರಿ ನಗರದ ದಾಸರಓಣಿಯಲ್ಲಿ ಸುನಂದಾ ಬಾಕಳೆ ಅವರ ಪುತ್ರ ಕಾರ್ತಿಕ್ (28), ಪರುಶುರಾಮ (58), ಲಕ್ಷ್ಮಿಬಾಯಿ (50) ಮತ್ತು ಆಕಾಂಕ್ಷಾ (17) ಎಂಬುವರ ಕೊಲೆಯಾಗಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ವಿನಾಯಕ ಬಾಕಳೆ (31), ಫೈರೋಜ್ (29), ಜಿಶಾನ್ (24), ಮಹಾರಾಷ್ಟ್ರದ ಸುಪಾರಿ ಕೊಲೆಗಡುಕರಾದ ಸಾಹಿಲ್ ಖಾಜಿ (19), ಸೊಹೇಲ್ (19), ಸುಲ್ತಾನ್ ಶೇಖ್ (23), ಮಹೇಶ್ ಸಾಳೋಂಕೆ (21) ಮತ್ತು ವಾಹಿದ್ ಬೇಪಾರಿ (21) ಎಂಬ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಪ್ರಕಾಶ್ ಬಾಕಳೆ ಮೊದಲನೇ ಪತ್ನಿ ದಿವಂಗತ ರುಕ್ಮಿಣಿ ಅವರ ಪುತ್ರ ವಿನಾಯಕ ಬಾಕಳೆ ತನ್ನ ತಂದೆ, ಮಲತಾಯಿ ಸುನಂದಾ ಬಾಕಳೆ ಹಾಗೂ ಅವರ ಮಗ ಕಾರ್ತಿಕ್ ಬಾಕಳೆ ಹತ್ಯೆಗೆ ಸಂಚು ರೂಪಿಸಿ 'ಫೈರೋಜ್ ಆ್ಯಂಡ್ ಗ್ಯಾಂಗ್'ಗೆ ₹65 ಲಕ್ಷಕ್ಕೆ ಸುಪಾರಿ ನೀಡಿದ್ದ. ಆದರೆ, ಕೊಲೆಯಾದ ದಿನ ಪ್ರಕಾಶ್ ಬಾಕಳೆ ಮನೆಯಲ್ಲಿ ಉಳಿದಿದ್ದ ಬಾಕಳೆ ಸಂಬಂಧಿಕರಾದ ಕೊಪ್ಪಳದ ಪರುಶುರಾಮ, ಲಕ್ಷ್ಮಿಬಾಯಿ ಮತ್ತು ಆಕಾಂಕ್ಷಾ ಕೂಡ ಹತರಾದರು' ಎಂದು ಬೆಳಗಾವಿ ಉತ್ತರ ವಲಯ ಐಜಿಪಿ ವಿಕಾಶ್ ಕುಮಾರ್ ವಿಕಾಶ್ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಪ್ರಕಾಶ್ ಬಾಕಳೆ ಅವರು ವಿನಾಯಕ ಬಾಕಳೆ ಹೆಸರಿನಲ್ಲಿ ಸಾಕಷ್ಟು ಆಸ್ತಿ ಮಾಡಿದ್ದರು. 5 ತಿಂಗಳ ಹಿಂದೆ ವಿನಾಯಕ ಬಾಕಳೆ ತಂದೆಯ ಗಮನಕ್ಕೆ ತಾರದೇ ಮೂರು ಆಸ್ತಿಗಳನ್ನು ಮಾರಿದ್ದ. ಇದನ್ನು ಆಕ್ಷೇಪಿಸಿ ಪ್ರಕಾಶ್ ಬಾಕಳೆ, ತಮ್ಮ ಗಮನಕ್ಕೆ ತಾರದೇ ಯಾವುದೇ ಆಸ್ತಿಯನ್ನು ಮಾರುವುದು ಬೇಡ ಎಂದಿದ್ದರು. ಇದರಿಂದ ತಂದೆ ಮತ್ತು ಮಗನ ನಡುವೆ ವೈಮನಸ್ಸು ಬೆಳೆದು, ಇಷ್ಟೆಲ್ಲ ಕೃತ್ಯಕ್ಕೆ ಕಾರಣವಾಯಿತು' ಎಂದು ಅವರು ವಿವರಿಸಿದರು.

₹65 ಲಕ್ಷಕ್ಕೆ ಸುಪಾರಿ: 'ಮೂವರ ಹತ್ಯೆಗೆ ವಿನಾಯಕ ಬಾಕಳೆ ಗದುಗಿನ ರಾಜೀವ್ ಗಾಂಧಿ ನಗರ ನಿವಾಸಿ, ಬಳಕೆಯಾದ ಕಾರುಗಳ ಮಾರಾಟದ ಏಜೆಂಟ್ ಫೈರೋಜ್ ಸಂಪರ್ಕಿಸಿದ್ದ. ಅದರಂತೆ ಫೈರೋಜ್‌ಗೆ ₹ 65 ಲಕ್ಷ ಕೊಡುವುದಾಗಿ ಹೇಳಿ, ಮೀರಜ್‌ನ ಐವರು ಸುಪಾರಿ ಹಂತಕರನ್ನು ಕೃತ್ಯಕ್ಕೆ ಒಪ್ಪಿಸಿದ್ದ. ಅವರಿಗೆ ಮುಂಗಡವಾಗಿ ₹10 ಲಕ್ಷ ಕೊಡಬೇಕಿತ್ತು. ವಿನಾಯಕ ಬಾಕಳೆ ಫೈರೋಜ್‌ಗೆ ₹2 ಲಕ್ಷ ಮುಂಗಡ ನೀಡಿದ್ದ. ಹತ್ಯೆಯ ಬಳಿಕ ಇದು ದರೋಡೆ ಎಂದು ಬಿಂಬಿಸಲು ಮನೆಯಲ್ಲಿನ ಎಲ್ಲಾ ಚಿನ್ನಾಭರಣ, ಹಣ ಒಯ್ಯಲು ಸೂಚಿಸಲಾಗಿತ್ತು. ಆದರೆ, ಪೊಲೀಸರು ಬರುವರು ಎಂಬ ಭೀತಿಯಿಂದ ಹಂತಕರು ಬೇಗನೇ ಅಲ್ಲಿಂದ ಪರಾರಿಯಾದರು' ಎಂದರು.

> **ಗದಗ ಎಸ್‌.ಪಿ. ನೇಮಗೌಡ ನೇತೃತ್ವದ ತಂಡ ಕೊಲೆ ನಡೆದ 72 ಗಂಟೆಗಳಲ್ಲಿ ಪ್ರಕರಣ ಭೇದಿಸಿದ್ದು, ಕಾರ್ಯಾಚರಣೆ ಮೆಚ್ಚಿ ಡಿಜಿ ₹5 ಲಕ್ಷ ಬಹುಮಾನ ಘೋಷಿಸಿದ್ದಾರೆ**
> **ವಿಕಾಶ್ ಕುಮಾರ್ ವಿಕಾಶ್,** ಐಜಿಪಿ, ಬೆಳಗಾವಿ ಉತ್ತರ ವಲಯ

ರೈಲು ತಪ್ಪಿದ್ದೇ ಜೀವಕ್ಕೆ ಮುಳುವಾಯಿತು

ಏಪ್ರಿಲ್ 18ರ ರಾತ್ರಿ ಪ್ರಕಾಶ್ ಬಾಕಳೆ ಅವರ ಮನೆಯಲ್ಲೇ ಜನ್ಮದಿನ ಆಚರಿಸಿಕೊಂಡಿದ್ದ ಕೊಪ್ಪಳದ ಲಕ್ಷ್ಮಿಬಾಯಿ ಅವರು ಪತಿ ಪರುಶುರಾಮ ಮತ್ತು ಪುತ್ರಿ ಆಕಾಂಕ್ಷಾಳಿಂದ ಉಡುಗೊರೆ ಸ್ವೀಕರಿಸಿದ್ದರು. ಕೊಪ್ಪಳಕ್ಕೆ ಹೋಗಲು ರೈಲು ತಪ್ಪಿದ್ದರಿಂದ ನಿಲ್ದಾಣದಿಂದ ವಾಪಸಾಗಿ, ಮೂವರು ಪ್ರಕಾಶ್ ಬಾಕಳೆ ಮನೆಯಲ್ಲಿ ಉಳಿದಿದ್ದರು. ಆದರೆ, ಸುಪಾರಿ ಹಂತಕರಿಂದ ಮೂವರು ಕೊಲೆಗೀಡಾದರು. ಅಂದೇ ಕೊಪ್ಪಳಕ್ಕೆ ಹೋಗಿದ್ದರೆ, ಜೀವ ಉಳಿಯುತಿತ್ತು.

ಕಿರುಕುಳ: ಯುವತಿಗೆ ಆತ್ಮಹತ್ಯೆಗೆ ಯತ್ನ

ಬಸವಕಲ್ಯಾಣ (ಬೀದರ್ ಜಿಲ್ಲೆ): ಮುಸ್ಲಿಂ ಸಮುದಾಯದ ಯುವಕರು ತಮ್ಮದೇ ಸಮುದಾಯದ ಯುವತಿಗೆ ವಿವಿಧ ರೀತಿಯ ಕಿರುಕುಳ ನೀಡಿದ್ದರಿಂದ ಯುವತಿ ಮೈಗೆ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆ ತಾಲ್ಲೂಕಿನ ಗೌರ ಗ್ರಾಮದಲ್ಲಿ ನಡೆದಿದೆ.

'ಗೌರ ಗ್ರಾಮದಿಂದ ಪ್ರತಿದಿನ ಬಸವ ಕಲ್ಯಾಣ ನಗರಕ್ಕೆ ಟೈಲರಿಂಗ್ ಕೆಲಸಕ್ಕಾಗಿ ಹೋಗಿ ಬರುತ್ತಿದ್ದ ಯುವತಿಗೆ, ಯುವಕರು ದಿನಾಲೂ ಪೀಡಿಸುತ್ತಿದ್ದರು. ಏ.17ರಂದು ಆಕೆಯನ್ನು ಅಟೊದಲ್ಲಿ ಕೂರಿಸಿಕೊಂಡು ಗೌರ ಗ್ರಾಮಕ್ಕೆ ಕರೆದೊಯ್ದಿದ್ದಾರೆ. ಮಾರ್ಗ ಮಧ್ಯದಲ್ಲಿ ಆಕೆಗೆ ಮೊಬೈಲ್ ಸಂಖ್ಯೆ ನೀಡುವಂತೆ ಒತ್ತಾಯಿಸಿ ಕಿರುಕುಳ ನೀಡಿದ್ದಾರೆ. ಏ.18ರಂದು ಮನೆಯಲ್ಲಿ ಯಾರೂ ಇಲ್ಲದಿದ್ದಾಗ ಮೈಮೇಲೆ ಸೀಮೆ ಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿದ್ದಾಳೆ. ನೋವು ತಾಳಲಾರದೆ ಬೆಂಕಿ ಆರಿಸಿಕೊಂಡಿದ್ದಾಳೆ. ಗಾಯಗೊಂಡ ಯುವತಿಯನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಎಸ್ಪಿ ಚನ್ನಬಸವಣ್ಣ ಎಸ್.ಎಲ್. 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಅಜ್ಜಿ ನೀಡಿದ ದೂರಿನ ಮೇರೆಗೆ ಹುಲಸೂರ ಠಾಣೆಯಲ್ಲಿ ಏ.21ರಂದು ಪ್ರಕರಣ ದಾಖಲಾಗಿದೆ. ಖದೀರ್, ಬಿಲಾಲ್, ತೌಸೀಫ್, ಮುಜಾಫರ್, ಗೌಸ್ ಒಳಗೊಂಡು 10ರಿಂದ 15 ಜನರು ನನ್ನ ಮೊಮ್ಮಗಳನ್ನು ಚುಡಾಯಿಸಿದ್ದರಿಂದ ಅವಮಾನ ತಾಳದೆ ಆತ್ಮಹತ್ಯೆಗೆ ಯತ್ನಿಸಿದ್ದಾಳೆ ಎಂದು ದೂರಿನಲ್ಲಿ ತಿಳಿಸಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

ಸಿಇಟಿ ಲೋಪ: ಪರಿಶೀಲನೆಗೆ 4 ಸಮಿತಿ

ಒಂದನೇ ಪುಟದಿಂದ...

'ಪಠ್ಯಕ್ಕೆ ಹೊರತಾದ ಪ್ರಶ್ನೆಗಳಿಂದಾಗಿ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ಮರು ಪರೀಕ್ಷೆ ನಡೆಸಬೇಕು. ಇಲ್ಲವೇ ಕೃಪಾಂಕ ನೀಡಬೇಕು ಎಂದು ಹಲವು ಸಂಘಟನೆಗಳು, ವಿದ್ಯಾರ್ಥಿಗಳು, ಕಾಲೇಜು ಆಡಳಿತ ಮಂಡಳಿಗಳು ಮನವಿ ಸಲ್ಲಿಸಿವೆ. ಒಂದು ವಾರದಲ್ಲಿ ತಜ್ಞರ ಸಮಿತಿಗಳಿಂದ ವರದಿ ಪಡೆದು ವಿದ್ಯಾರ್ಥಿಗಳ ಹಿತಾಸಕ್ತಿಗೆ ಅನುಗುಣವಾಗಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಎಂ.ಎಸ್. ಶ್ರೀಕರ್ ಹೇಳಿದ್ದಾರೆ.

ಪ್ರಶ್ನೆಗಳಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕೆಇಎಯು ವಿದ್ಯಾರ್ಥಿಗಳಿಗೆ ಏ. 27ರವರೆಗೆ ಅವಕಾಶ ನೀಡಿದೆ. ಈ ಸಂಬಂಧ ವಿಸ್ತೃತ ವರದಿ ಸಲ್ಲಿಸುವಂತೆ ಕೆಇಎಗೂ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in




ಸುಭಾಷಿತ

ಕುದಿಯುವವರು ಕುದಿಯಲಿ, ಉರಿಯುವವರು ಉರಿಯಲಿ, ನಿನ್ನ ಪಾಡಿಗೆ ನೀನಿರು. ಕುದಿಯುವವರು ಆವಿಯಾಗುತ್ತಾರೆ, ಉರಿಯುವವರು ಬೂದಿಯಾಗುತ್ತಾರೆ.

–ಸಿದ್ಧೇಶ್ವರ ಸ್ವಾಮೀಜಿ

ಸಿಇಟಿ: ವಿಳಂಬವಿಲ್ಲದೆ ಪರಿಹಾರ ಸೂತ್ರ ಪ್ರಕಟಿಸಿ

ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಪ್ರಶ್ನೆಪತ್ರಿಕೆಗಳು ಉಂಟು ಮಾಡಿರುವ ಗೊಂದಲದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಹಾಗೂ ಪದವಿಪೂರ್ವ ಶಿಕ್ಷಣ ನಿರ್ದೇಶನಾಲಯದ ನಡುವೆ ಸಂವಹನದ ಕೊರತೆ ಸ್ಪಷ್ಟವಾಗಿ ಕಾಣಿಸುತ್ತಿದೆ. ಏಪ್ರಿಲ್ 18 ಮತ್ತು 19ರಂದು ನಡೆದ ಸಿಇಟಿ ಪ್ರಶ್ನೆಪತ್ರಿಕೆಗಳಲ್ಲಿ 59 ಪ್ರಶ್ನೆಗಳು ಪಠ್ಯಕ್ರಮಕ್ಕೆ ಹೊರತಾಗಿದ್ದುದು ವಿದ್ಯಾರ್ಥಿಗಳು ಹಾಗೂ ಪೋಷಕರನ್ನು ಸಹಜವಾಗಿಯೇ ಆತಂಕಕ್ಕೆ ದೂಡಿದೆ. ಪಠ್ಯಕ್ರಮಕ್ಕೆ ಹೊರತಾದ ಪ್ರಶ್ನೆಗಳು ಪರೀಕ್ಷಾರ್ಥಿಗಳನ್ನು ಗಾಬರಿ ಮತ್ತು ಗೊಂದಲಕ್ಕೀಡು ಮಾಡಿದ್ದು, ಆ ಪ್ರಶ್ನೆಗಳನ್ನು ಬಿಡಿಸುವ ಪ್ರಯತ್ನದಲ್ಲಿ ಸಮಯ ವ್ಯರ್ಥವಾಗಿದೆ. ಈ ಮೊದಲು ಕೂಡ ಸಿಇಟಿಯಲ್ಲಿ ಒಂದೆರಡು ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಗೊಂದಲಗಳು ತಲೆದೋರಿರುವುದಿದೆ. ಅಂಥ ಸಂದರ್ಭಗಳಲ್ಲಿ ಕೃಪಾಂಕಗಳನ್ನು ನೀಡುವ ಮೂಲಕ ವಿದ್ಯಾರ್ಥಿಗಳಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಲಾಗುತ್ತಿತ್ತು. ಆದರೆ, ಈ ಬಾರಿಯ ಸಿಇಟಿಯಲ್ಲಿ ಸುಮಾರು ನಾಲ್ಕನೇ ಒಂದು ಭಾಗದಷ್ಟು ಪ್ರಶ್ನೆಗಳು ಪಠ್ಯಕ್ರಮಕ್ಕೆ ಹೊರತಾಗಿದ್ದು, ಇಷ್ಟೊಂದು ಪ್ರಶ್ನೆಗಳಿಗೆ ಕೃಪಾಂಕ ನೀಡುವುದು ಪರೀಕ್ಷಾ ಪ್ರಕ್ರಿಯೆಯನ್ನೇ ಅಣಕಿಸಿದಂತಾಗುತ್ತದೆ. ಸದ್ಯದ ಸಂದರ್ಭದಲ್ಲಿ ಮರುಪರೀಕ್ಷೆ ನಡೆಸುವುದು ಕೂಡ ವಿದ್ಯಾರ್ಥಿಗಳ ಮನಃಸ್ಥಿತಿಯ ಮೇಲೆ ಪ್ರತಿಕೂಲ ಪರಿಣಾಮ ಬೀರಬಲ್ಲದು. 2022–24ರ ಸಾಲಿನಲ್ಲಿ ಪ್ರಥಮ ಹಾಗೂ ದ್ವಿತೀಯ ಪಿಯುಸಿ ಪಠ್ಯಕ್ರಮಗಳನ್ನು ಪರಿಷ್ಕರಿಸಲಾಗಿದ್ದು, ಬದಲಾದ ಪಠ್ಯಕ್ಕೆ ಅನುಗುಣವಾಗಿ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸದಿರುವುದೇ ಈ ಎಲ್ಲ ಸಮಸ್ಯೆಗೆ ಕಾರಣವಾಗಿದೆ.



ಪರೀಕ್ಷೆ ಬರೆದಿರುವ ಲಕ್ಷಾಂತರ ವಿದ್ಯಾರ್ಥಿಗಳ ಆತಂಕವನ್ನು ತಕ್ಷಣ ನಿವಾರಿಸಬೇಕು. ಇಂತಹ ಪ್ರಮಾದಗಳು ಪುನರಾವರ್ತನೆ ಆಗದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು

ವಿವಾದಾಸ್ಪದ ಪ್ರಶ್ನೆಪತ್ರಿಕೆಗಳಿಗೆ ಸಂಬಂಧಿಸಿದಂತೆ ಪದವಿಪೂರ್ವ ಶಿಕ್ಷಣ ನಿರ್ದೇಶನಾಲಯ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ನಡುವೆ ತಾಳಮೇಳ ಸರಿಯಿಲ್ಲದಿರುವುದು ಸ್ಪಷ್ಟವಾಗಿ ಕಾಣಿಸುತ್ತಿದೆ. 2023ರ ಜೂನ್‌ನಲ್ಲೇ ಪಠ್ಯ ಪರಿಷ್ಕರಣೆ ಕುರಿತಂತೆ ಉಭಯ ಸಂಸ್ಥೆಗಳ ನಡುವೆ ಮಾಹಿತಿ ವಿನಿಮಯ ನಡೆದಿದೆ; ಕೆಇಎ ಗಮನಕ್ಕೆ ತಂದ ನಂತರವೇ ಪರಿಷ್ಕೃತ ಪಠ್ಯಕ್ರಮದಂತೆ ಮಕ್ಕಳಿಗೆ ಸಿಇಟಿ ಮಾರ್ಗದರ್ಶನ ನೀಡುವಂತೆ ಪಿಯು ನಿರ್ದೇಶಕರು ಸುತ್ತೋಲೆ ಹೊರಡಿಸಿದ್ದಾರೆ ಎನ್ನಲಾಗಿದೆ. ಇಷ್ಟೆಲ್ಲ ಪ್ರಕ್ರಿಯೆಗಳ ನಂತರವೂ ಹಳೆಯ ಪಠ್ಯಕ್ರಮದಂತೆ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿರುವ ಪರೀಕ್ಷಾ ಪ್ರಾಧಿಕಾರದ ನಡವಳಿಕೆ ಬೇಜವಾಬ್ದಾರಿಯಿಂದ ಕೂಡಿದೆ. ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ನಿರ್ಧರಿಸುವ ಪರೀಕ್ಷೆಯನ್ನು ನಡೆಸುವುದಕ್ಕೆ ಸಂಬಂಧಿಸಿದ ಈ ನಿರ್ಲಕ್ಷ್ಯ ಗಂಭೀರವಾದುದು. ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸುವಲ್ಲಿ ಉಂಟಾಗಿರುವ ಲೋಪದ ಹೊಣೆ ಪರೀಕ್ಷಾ ಪ್ರಾಧಿಕಾರದ್ದೇ ಆದರೂ ವಿದ್ಯಾರ್ಥಿಗಳಿಗೆ ಆಗಿರುವ ಅನನುಕೂಲದ ಹೊಣೆಯನ್ನು ಪದವಿಪೂರ್ವ ಶಿಕ್ಷಣ ನಿರ್ದೇಶನಾಲಯವೂ ಹೊರಬೇಕಾಗುತ್ತದೆ. ರಾಜ್ಯದ ಹಂತದಲ್ಲಿ ಆಗಿರುವ ಪಠ್ಯ ಪರಿಷ್ಕರಣೆಯ ಕಾರಣದಿಂದಾಗಿ, ರಾಜ್ಯಕ್ಕೆ ಸೀಮಿತವಾದ ಸಿಇಟಿ ಬರೆಯುವ ಮಕ್ಕಳಿಗೆ ಕಡಿತಗೊಂಡ ಪಠ್ಯ ಹಾಗೂ ರಾಷ್ಟ್ರೀಯ ಮಟ್ಟದ 'ನೀಟ್' ಬರೆಯುವ ವಿದ್ಯಾರ್ಥಿಗಳಿಗೆ ಕಡಿತಗೊಳ್ಳದ ಪೂರ್ಣಪ್ರಮಾಣದ ಪಠ್ಯ ಎನ್ನುವಂತಾಗಿದೆ. ಇದರಿಂದಾಗಿ, ಒಂದೇ ತರಗತಿಯಲ್ಲಿ ಎರಡು ಪಠ್ಯಕ್ರಮಗಳನ್ನು ಬೋಧಿಸುವ ಒತ್ತಡ ಹಾಗೂ ಗೊಂದಲ ಉಪನ್ಯಾಸಕರದ್ದಾಗಿದೆ. ಇವೆಲ್ಲ ಗೊಂದಲಗಳು ಪ್ರಸಕ್ತ ಸಿಇಟಿ ಪರೀಕ್ಷೆಗಳಲ್ಲಿನ ಎಡವಟ್ಟುಗಳಿಗೆ ಕಾರಣವಾದಂತಿವೆ. ಸಿಇಟಿ ಪ್ರಶ್ನೆಗಳಿಗೆ ಸಂಬಂಧಿಸಿದ ಆಕ್ಷೇಪಗಳ ಪರಿಶೀಲನೆಗೆ ವಿಷಯವಾರು ತಜ್ಞರ ನಾಲ್ಕು ಸಮಿತಿಗಳನ್ನು ಉನ್ನತ ಶಿಕ್ಷಣ ಇಲಾಖೆಯು ನೇಮಿಸಿದೆ. ಸಿಇಟಿ ಬರೆದಿರುವ ಮೂರು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳ ಆತಂಕವನ್ನು ಪರಿಹರಿಸುವ ದಿಸೆಯಲ್ಲಿ ವಿಳಂಬವಿಲ್ಲದೆ ಸೂಕ್ತ ಪರಿಹಾರವನ್ನು ಈ ಸಮಿತಿಗಳು ಶಿಫಾರಸು ಮಾಡಬೇಕು. ಸಮಿತಿಗಳ ಶಿಫಾರಸುಗಳ ಆಧಾರದಲ್ಲಿ ಸರ್ಕಾರವು ವಿದ್ಯಾರ್ಥಿಗಳ ಹಿತಾಸಕ್ತಿ ರಕ್ಷಣೆಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು. ಹಾಗೆಯೇ ಇಷ್ಟೆಲ್ಲ ಗೊಂದಲಕ್ಕೆ ಕಾರಣರಾಗಿರುವವರ ವಿರುದ್ಧ ಸೂಕ್ತ ಕ್ರಮ ಜರುಗಿಸುವುದೂ ಅಗತ್ಯ. ಇಂತಹ ಪ್ರಮಾದಗಳು ಪುನರಾವರ್ತನೆಗೊಳ್ಳದಂತೆ ನೋಡಿಕೊಳ್ಳದೇ ಹೋದರೆ ಸಿಇಟಿ ಪ್ರಕ್ರಿಯೆಯೇ ನಗೆಪಾಟಲಿಗೀಡಾದೀತು.

ದಿನದ ಟ್ವೀಟ್

ಅರಿವು ಮೂಡಿಸಬೇಕಿದೆ



ಒಂದು ದಿನಕ್ಕೆ ಸರಾಸರಿ 85 ಬಾಲಕಿಯರು ನಮ್ಮ ರಾಜ್ಯದಲ್ಲಿ ಗರ್ಭಿಣಿಯರಾಗುತ್ತಿದ್ದಾರೆ. ವಸತಿಶಾಲೆಗಳು ಸೇರಿದಂತೆ ವಿವಿಧ ಕಡೆ ಮಕ್ಕಳಿಗೆ ಲೈಂಗಿಕ ಶಿಕ್ಷಣದ ಅರಿವು ಮೂಡಿಸಬೇಕಿದೆ.

ಮಂಜುನಾಥ ಬಿ., ಸಹಾಯಕ ಪ್ರಾಧ್ಯಾಪಕ

ಕಿಡಿನುಡಿ



ನನ್ನ ದೇಶಕ್ಕಾಗಿ ಸೇವೆ ಸಲ್ಲಿಸಲು ಉತ್ಸುಕನಾಗಿ ಅಮೆರಿಕದಿಂದ ವಾಪಸಾದೆ. ಆರ್ಥಿಕವಾಗಿ ಸ್ವಾವಲಂಬಿಯಾದೆ. ನನ್ನದೇ ವಿಶೇಷ ಮಾರ್ಗದಲ್ಲಿ ದೇಶಸೇವೆ ಮಾಡಲು ಗಿಡ ನೆಡುವ ಎನ್‌ಜಿಒ ಸ್ಥಾಪಿಸಿದೆ... ವಲಸೆ ಹೋಗುವ ಆಯ್ಕೆ ಎಂದಿಗೂ ನನ್ನ ಮುಂದೆ ಇದೆ. ಭಾರತದ ಸ್ಥಿತಿ ದಿನದಿಂದ ದಿನಕ್ಕೆ ಹದಗೆಡುತ್ತಿದೆ. ಪ್ರಧಾನಿಯವರ ನಿನ್ನೆಯ ಭಾಷಣ ನನ್ನ ಭರವಸೆಗೆ ಮತ್ತಷ್ಟು ಹೊಡೆತ ನೀಡಿದೆ. ಆದರೆ ಇನ್ನಷ್ಟು ದಿನಗಳ ಕಾಲ ನಾನು ಭರವಸೆಯನ್ನು ಉಳಿಸಿಕೊಳ್ಳುತ್ತೇನೆ ಮತ್ತು ನನಗಾಗಿ ಬಹಳಷ್ಟನ್ನು ನೀಡಿರುವ ಈ ದೇಶಕ್ಕಾಗಿ ಸೇವೆ ಮುಂದುವರಿಸುತ್ತೇನೆ...

ಮನೋಜ್ ಅರೋರ, ಲೇಖಕ, ಆರ್ಥಿಕ ಸಲಹೆಗಾರ

25 ವರ್ಷಗಳ ಹಿಂದೆ

ಶುಕ್ರವಾರ, 23-4-1999

- **ಸರ್ಕಾರ ರಚನೆ; ಸೋನಿಯಾಗೆ ಮುಲಾಯಂ ಸಿಂಗ್ ಅಡ್ಡಿ**

ನವದೆಹಲಿ, ಏ. 22– ಕಾಂಗ್ರೆಸ್ ಮತ್ತು ಕಾಂಗ್ರೆಸ್ಸೇತರ ವಿರೋಧ ಪಕ್ಷಗಳಲ್ಲಿ ಒಮ್ಮತಾಭಿಪ್ರಾಯ ಮೂಡದೇ ಇರುವುದರಿಂದ, ನೂತನ ಪರ್ಯಾಯ ಸರ್ಕಾರ ರಚನೆಯ ಅನಿಶ್ಚಿತತೆ ಮುಂದುವರಿದಿದೆ. ಕಾಂಗ್ರೆಸ್ಸೇತರ ರಂಗದ ನೇತೃತ್ವದಲ್ಲಿ ಇಲ್ಲವೇ ಸಮ್ಮಿಶ್ರ ಸರ್ಕಾರ ರಚನೆಯ ಬೇಡಿಕೆಗೆ ಮುಲಾಯಂ ಸಿಂಗ್ ಯಾದವ್ ಹಟ ಹಿಡಿದಿರುವುದರಿಂದ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ.

ಈ ಮಧ್ಯೆ, ಲೋಕತಾಂತ್ರಿಕ ಮೋರ್ಚಾದ ರಾಷ್ಟ್ರೀಯ ಜನತಾದಳದ ನಾಯಕ ಲಾಲೂ ಪ್ರಸಾದ್ ಯಾದವ್ ತಮ್ಮ 17 ಮಂದಿ ಸದಸ್ಯರ ಬೆಂಬಲವನ್ನು ಮತ್ತು ಎಐಎಡಿಎಂಕೆ ನಾಯಕಿ ಜಯಲಲಿತಾ ಅವರು ತಮ್ಮ 18 ಸದಸ್ಯರ ಬೆಂಬಲದ ಪತ್ರಗಳನ್ನು ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರಿಗೆ ಇಂದು ನೀಡಿದರು.

ಈ ಇಬ್ಬರು ಧುರೀಣರು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಸರ್ಕಾರ ರಚಿಸುವುದಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ರಾಷ್ಟ್ರಪತಿ ಅವರಿಗೆ ನೀಡಿರುವ ಪತ್ರಗಳ ನಕಲುಗಳನ್ನು ಜಯಲಲಿತಾ ಮತ್ತು ಲಾಲೂ ಅವರು ಸೋನಿಯಾ ಗಾಂಧಿ ಅವರಿಗೂ ನೀಡಿದ್ದಾರೆ. ಸಿಪಿಐ ಮತ್ತು ಸಿಪಿಎಂ ಕೂಡ ಕಾಂಗ್ರೆಸ್ ನೇತೃತ್ವದ ಸರ್ಕಾರಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿವೆ.

50 ವರ್ಷಗಳ ಹಿಂದೆ

ಮಂಗಳವಾರ, 23-4-1974

- **ಶಿಕ್ಷಕರ ಚಳವಳಿ ಮುಕ್ತಾಯ; ಇಂದಿನಿಂದ ಮೌಲ್ಯಮಾಪನ ಆರಂಭ**

ಬೆಂಗಳೂರು, ಏ. 22– ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಹಾಗೂ ಶಿಕ್ಷಣ ಸಚಿವ ಶ್ರೀ ಮಲ್ಲಿಕಾರ್ಜುನ ಸ್ವಾಮಿ ವಿಶ್ವಾಸ ಮತ್ತು ಕಳಕಳಿಯಿಂದ ನೀಡಿದ ಆಶ್ವಾಸನೆಯನ್ನು ಅನುಸರಿಸಿ, ಇಂದು ರಾತ್ರಿ 10:15ರ ಸಮಯದಲ್ಲಿ ವಿಧಾನಪರಿಷತ್ ಸದಸ್ಯ ಶ್ರೀ ಮಳ್ಳೂರು ಆನಂದರಾವ್ ಅವರು ತಮ್ಮ ಅನಿರ್ದಿಷ್ಟ ಕಾಲದ ಉಪವಾಸವನ್ನು ನಿಲ್ಲಿಸಿದರು.

ಕಳೆದ ಏಳು ದಿನಗಳಿಂದ ಮೌಲ್ಯಮಾಪನ ಬಹಿಷ್ಕಾರ ಚಳವಳಿ ನಡೆಸುತ್ತಿದ್ದ ಮಾಧ್ಯಮಿಕ ಶಿಕ್ಷಣ ಅಧ್ಯಾಪಕರು ಚಳವಳಿಯನ್ನು ನಿಲ್ಲಿಸಿ ನಾಳೆಯಿಂದ ಮೌಲ್ಯಮಾಪನ ಕೆಲಸಕ್ಕೆ ಹಾಜರಾಗಲು ನಿರ್ಧರಿಸಿದರು.

- **ರಾಜಕೀಯಕ್ಕಾಗಿ ಚಳವಳಿ ಬಳಕೆ**

ಬೆಂಗಳೂರು, ಏ. 22– ಶಿಕ್ಷಕರ ಚಳವಳಿಯನ್ನು ಶಿಕ್ಷಕರ ಮುಖಾಂತರ ರಾಜಕೀಯ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ಶಿಕ್ಷಣ ಸಚಿವ ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ ಅವರು ಇಂದು ವಿಧಾನಸಭೆಯಲ್ಲಿ ಆಪಾದಿಸಿದರು. 'ಮುಖಂಡರ ಇಂಥ ಕೆಲಸಕ್ಕೆ ಬೆಂಬಲ ನೀಡಿದರೆ ನಿಮ್ಮ ವೃತ್ತಿಗೇ ದೋಷ' ಎಂದು ಶಿಕ್ಷಕರಿಗೆ ಸ್ಪಷ್ಟಪಡಿಸಿದ ಸಚಿವರು, 'ಒಪ್ಪಂದದ ಪ್ರಕಾರ ಮತ್ತೆ ಮೌಲ್ಯಮಾಪನ ಕೆಲಸ ಪ್ರಾರಂಭ ಮಾಡಿ' ಎಂದು ಮನವಿ ಮಾಡಿದರು.

ಶಿಕ್ಷಕರ ಚಳವಳಿ ಕುರಿತಾದ ನಿಲುವಳಿ ಸೂಚನೆಯ ಮೇಲೆ ನಡೆದ ಚರ್ಚೆಗೆ ಉತ್ತರಿಸಿದ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಅವರು, ಶಿಕ್ಷಕರ ನಿವೃತ್ತಿ ವಯಸ್ಸನ್ನು 58ರಿಂದ 55ಕ್ಕೆ ಇಳಿಸುವ ಬಗ್ಗೆ ಈಗಾಗಲೇ ತೀರ್ಮಾನ ಕೈಗೊಂಡಿರುವುದರಿಂದ ಅದನ್ನು ಮತ್ತೆ ಏರಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರು.

ಮತ ಚಲಾಯಿಸುವವರಲ್ಲಿ ಅರ್ಧ ಭಾಗದಷ್ಟಿರುವ ಮಹಿಳೆಯರ ಪ್ರಶ್ನೆಗಳು ಎಲ್ಲಿವೆ?

ನಾಯಕಿಯರು ಮತ್ತು ಮಹಿಳಾ ಮತದಾರರು



ವಿಶ್ಲೇಷಣೆ

ನಟರಾಜ್ ಹುಳಿಯಾರ್

ಹಿಂದೆಲ್ಲ ರಾಜಕೀಯ ಪಕ್ಷಗಳ ಜನ ಕಾರು, ಜೀಪುಗಳಲ್ಲಿ ಮೈಕ್ ಹಾಕಿಕೊಂಡು ನಡೆಸುತ್ತಿದ್ದ ಚುನಾವಣಾ ಪ್ರಚಾರ ಆರಂಭದ ವಾಕ್ಯ ನಿಮಗೆ ನೆನಪಿರಬಹುದು: 'ಮಾನ್ಯ ಮತದಾರ ಬಾಂಧವರೇ!' ಎಷ್ಟೋ ಸಲ ಈ ಸಂಬೋಧನೆಗಳು 'ಮಾನ್ಯ ಮತಬಾಂಧವರೇ' ಎಂದು ಕೂಡ ಶುರುವಾಗುತ್ತಿದ್ದವು! ಈ ಎರಡೂ ಬಗೆಯ ಸಂಬೋಧನೆಗಳಲ್ಲಿ ಮಹಿಳೆಯರು ಲೆಕ್ಕಕ್ಕೇ ಇರಲಿಲ್ಲ ಎಂಬುದು ಮೇಲ್ನೋಟಕ್ಕೇ ಕಾಣುತ್ತಿತ್ತು. ರಾಜಕೀಯ ಪಕ್ಷಗಳ ಆ ಧೋರಣೆ ಇಂದಿಗೂ ಬದಲಾಗಿಲ್ಲ.

ಆಸ್ಟ್ರೇಲಿಯಾದ ಸ್ತ್ರೀವಾದಿ ಡೇಲ್ ಸ್ಪೆಂಡರ್ ತಮ್ಮ 'ಮ್ಯಾನ್ ಮೇಡ್ ಲ್ಯಾಂಗ್ವೇಜ್' ಪುಸ್ತಕದಲ್ಲಿ, ಪುರುಷರು ನಿರ್ಮಿಸಿದ ಭಾಷೆಯು ಮಹಿಳೆಯರನ್ನು ಹೇಗೆ ಹೊರಗಿಡುತ್ತದೆ ಎಂಬುದನ್ನು ತೋರಿಸಿದ್ದಾರೆ. ಪುರುಷನಿರ್ಮಿತ ಭಾಷೆಯಿಂದಾಗಿ ಕನ್ನಡದಲ್ಲಿ 'ಮತದಾರ' ಎಂಬ ಪದವೇ ಚಾಲ್ತಿಯಲ್ಲಿದೆ, 'ಮತದಾರ್ತಿ' ಎಂಬ ಪದವೇ ಇಲ್ಲ. ಹಿಂದಿಯಲ್ಲೂ 'ಮತದಾತ' ಎಂಬ ಪದವೇ ಇದೆ. ಸಮಾಜದ ಮನಸ್ಸಿನಲ್ಲಿ ಇಲ್ಲದಿರುವುದು ಭಾಷೆಯಲ್ಲಿ ಬರುವುದಿಲ್ಲ. ಆದ್ದರಿಂದಲೇ ರಾಜಕಾರಣಿಗಳ ಬಾಯಲ್ಲೂ ಮಹಿಳಾ ಮತದಾರರ ಅಗತ್ಯಗಳ ಮಾತೇ ಬರುವುದಿಲ್ಲ. ಇದನ್ನು ಸರಿಮಾಡುವ ಮೊದಲ ಹೆಜ್ಜೆಯೆಂದರೆ, ಮಹಿಳೆಯನ್ನು ಅದೃಶ್ಯವಾಗಿಸುವ ಭಾಷೆಯ ಪೂರ್ವಗ್ರಹವನ್ನು ತೊಡೆಯುವುದು.

ಭಾರತದ ಈ ಸಲದ ಲೋಕಸಭಾ ಚುನಾವಣೆಯಲ್ಲಿ ಮತ ಚಲಾಯಿಸುವವರ ಒಟ್ಟು ಸಂಖ್ಯೆ (ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸಿದ ಸಂದರ್ಭದಲ್ಲಿ ನೀಡಿದ ವಿವರದಂತೆ): 96.8 ಕೋಟಿ. ಮಹಿಳಾ ಮತದಾರರು: 47.1 ಕೋಟಿ. ಪುರುಷ ಮತದಾರರು: 49.7 ಕೋಟಿ.

ಅಂದರೆ, ಈ ಚುನಾವಣೆಯಲ್ಲಿ ಅರ್ಧ ಭಾಗದಷ್ಟು ಮಹಿಳಾ ಮತದಾರರ ಮತಗಳಿವೆ! ಆದರೆ ಚುನಾವಣಾ ಪ್ರಣಾಳಿಕೆಗಳಲ್ಲಿ ಈ ಅರ್ಧ ಭಾಗದಷ್ಟು ವರ್ಗದ ಉದ್ಯೋಗಕ್ಕೆ ಸಂಬಂಧಿಸಿದ ಪ್ರಶ್ನೆಗಳೇ ಇಲ್ಲ. ಚುನಾವಣಾ ಭಾಷಣಗಳಲ್ಲಂತೂ ನಾಯಕ, ನಾಯಕಿಯರು ಮಹಿಳೆಯರ ನಿಜವಾದ ಪ್ರಶ್ನೆಗಳನ್ನು ಉದ್ದೇಶಿಸಿ ಮಾತಾಡುವುದೇ ಕಡಿಮೆ. ಅಗ್ಗದ ಭಾವನಾತ್ಮಕ ವಿಷಯಗಳನ್ನಿಟ್ಟುಕೊಂಡು ರಾಜಕೀಯ ಮಾಡಲೆತ್ನಿಸುವಾಗ ಮಾತ್ರ ನಾಯಕರಿಗೆ ಮಹಿಳೆಯರು ನೆನಪಾಗುತ್ತಾರೆ. ಇವರ ಪ್ರಕಾರ ಮಹಿಳೆಯರು ವೋಟಿಗುಂಟು; ಅಧಿಕಾರ, ಅವಕಾಶಕ್ಕಿಲ್ಲ.

ಬಹುತೇಕ ಚುನಾವಣಾ ಸಮೀಕ್ಷೆಗಳಲ್ಲಿ ಕೂಡ ಆಯಾ ಸಲದ ಮತದಾನದ ಒಲವುಗಳನ್ನು ಗುರುತಿಸಲು ಸಂಪರ್ಕಿಸಿದ ಮಹಿಳೆಯರೆಷ್ಟು ಎಂಬ ಅಂಕಿಅಂಶವೇ ಇಲ್ಲ. ಅರ್ಧಭಾಗ ಭಾರತ ಹೇಗೆ ಯೋಚಿಸುತ್ತದೆ, ಹೇಗೆ ಮತ ಹಾಕುತ್ತದೆ ಎಂಬ ಅರಿವಿಲ್ಲದ ಸಮೀಕ್ಷೆಗಳು ಮಹಿಳಾ ಮತದಾರರ ಒಲವು ನಿಲುವುಗಳು, ಅವರ ಬೇಡಿಕೆಗಳು, ನಿರೀಕ್ಷೆಗಳು ಲೆಕ್ಕಕ್ಕೇ ಇಲ್ಲವೆಂಬಂತೆ ವರ್ತಿಸುತ್ತಿವೆ.

ಈ ಪುರುಷಾಹಂಕಾರದ ರಾಜಕೀಯ ಧೋರಣೆ ಸ್ವಾತಂತ್ರ್ಯ ದೊರೆತ ತಕ್ಷಣದಿಂದಲೇ ಶುರುವಾಯಿತು. ಬ್ರಿಟಿಷರ ವಿರುದ್ಧ ಉಪ್ಪಿನ ಸತ್ಯಾಗ್ರಹ ಅಷ್ಟು ದೊಡ್ಡ ಚಳವಳಿಯಾಗಿದ್ದಕ್ಕೆ ಮಹಿಳೆಯರು ಭಾಗಿಯಾಗಿದ್ದು ಕಾರಣವಾಗಿದ್ದನ್ನು ಅನಂತರ ಅಧಿಕಾರ ಹಿಡಿದ ನಾಯಕರು ಮರೆತರು. ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಮಹಿಳೆಯರು, ಕಾಲೇಜು ಹುಡುಗಿಯರು ಭೂಗತ ಹೋರಾಟಗಳಲ್ಲಿ ಭಾಗಿಯಾಗಿದ್ದನ್ನು, ಭೂಗತ ಸ್ವಾತಂತ್ರ್ಯ ಹೋರಾಟಗಾರರನ್ನು ಮನೆಯಲ್ಲಿಟ್ಟುಕೊಂಡು ರಕ್ಷಿಸಿದ್ದನ್ನು, ಆ ಮಹಿಳಾ ರಾಜಕೀಯ ತಯಾರಿಯನ್ನು ದೇಶವೇ ಮರೆಯಿತು.

ಅಷ್ಟೇ ಅಲ್ಲ, ದೇಶದ ಸ್ತ್ರೀ– ಪುರುಷರ ಸ್ವಾತಂತ್ರ್ಯ ಹೋರಾಟದ ಫಲವಾಗಿ ಅಧಿಕಾರ ಹಿಡಿದ ನಾಯಕರಲ್ಲಿ ಬಹುತೇಕರು ಅಂಬೇಡ್ಕರ್ ಅವರು ಹಿಂದೂ ಕೋಡ್ ಬಿಲ್ ಮಂಡಿಸಿ ಮಹಿಳೆಯರಿಗೆ ಆಸ್ತಿಯ ಹಕ್ಕು ದೊರಕಿಸಿಕೊಡಲು ಹೊರಟಾಗ ತಡೆಯೊಡ್ಡಿದ್ದರು. ಜಾತಿ ಮನಸ್ಸು ಲಿಂಗಭೇದದಲ್ಲೂ ತೊಡಗುವುದನ್ನು ಕಂಡಿದ್ದ ಅಂಬೇಡ್ಕರ್ ಮೊದಲು ಜಾತಿವಿನಾಶದ ಕಾರ್ಯಕ್ರಮಗಳನ್ನು ಆರಂಭಿಸಿದರು, ನಂತರ ಮಹಿಳಾ ಸಮಾನತೆಗಾಗಿ ಆಸ್ತಿಯ ಹಕ್ಕಿನ ಮಸೂದೆ ಮಂಡಿಸಿದರು. ಮುಂದೆ ಅದು ಮಹಿಳೆಯರ ರಾಜಕೀಯಾಧಿಕಾರಕ್ಕೂ ಎಡೆ ಮಾಡಿಕೊಡಲಿತ್ತು. ಆ ಮಸೂದೆ ಕಾಯ್ದೆಯಾಗಿದ್ದು ಮುಂದೆ ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರದ ಕಾಲದಲ್ಲಿ; ಅದಕ್ಕೂ ಮೊದಲು ಕರ್ನಾಟಕದಲ್ಲಿ ವೀರಪ್ಪ ಮೊಯಿಲಿ ನೇತೃತ್ವದ ಸರ್ಕಾರದ ಕಾಲದಲ್ಲಿ.

ಆದರೆ ಈ ಹಕ್ಕುಗಳು ದಕ್ಕಿವೆ ಎಂಬುದನ್ನು ಮಹಿಳಾ ಸಮುದಾಯಕ್ಕೆ ಮತ್ತೆ ಮತ್ತೆ ಮನವರಿಕೆ ಮಾಡಿಕೊಡಬಲ್ಲ ನಾಯಕಿಯರಿಗೆ ರಾಜಕೀಯ ವೇದಿಕೆಗಳಲ್ಲಿ ಅವಕಾಶವೇ ಕಡಿಮೆ. ರಾಜಕೀಯ ಸಭೆಗಳಲ್ಲಿ ವೇದಿಕೆಯಲ್ಲಿ ಇರಬೇಕಾದ ಮಹಿಳಾ ಪದಾಧಿಕಾರಿಗಳ ಹೆಸರಿರುತ್ತದೆ. ಆದರೆ, ಪುರುಷ ರಾಜಕಾರಣಿಗಳು ಬಿಟ್ಟ ಅಂಚಿನ ಸೀಟು ಮಾತ್ರ ಮಹಿಳೆಯರಿಗೆ. ಉದ್ಘಾಟನೆಯ ಫೋಟೊಗಳಲ್ಲಿ ಕಾಣಿಸಿಕೊಳ್ಳಲು ಗೂಳಿಯಂತೆ ನುಗ್ಗುವ ಪುರುಷರ ಜೊತೆಗೆ ಮಹಿಳೆಯರು ಹೇಗೆ ಸ್ಪರ್ಧಿಸಬಲ್ಲರು?! ಮಹಿಳೆಯರಿಗೆ ಚುನಾವಣಾ ಭಾಷಣಗಳ ಅವಕಾಶವೂ ಇಲ್ಲ, ಸಭೆಯ ವರದಿಗಳಲ್ಲೂ ಮಹಿಳೆ ಇಲ್ಲ. ಪಕ್ಷವೊಂದರ ಅಖಿಲ ಭಾರತ ಆನ್‌ಲೈನ್ ಮೀಟಿಂಗಿನಲ್ಲೂ ಇದೇ ಸ್ಥಿತಿ. ಪಕ್ಷದ ಅಧ್ಯಕ್ಷರು ಮಹಿಳೆಯರನ್ನು 'ಚುಟುಕಾಗಿ ಮಾತಾಡಿ' ಎನ್ನುತ್ತಿದ್ದರು. ಮಾತಾಡುವ ಮಹಿಳೆಯರ ಸಂಖ್ಯೆ ಕೂಡ ಕಡಿಮೆಯಿತ್ತು.

ಆದರೆ ಚುನಾವಣೆಯ ಸಂದರ್ಭಗಳಲ್ಲಿ ಮಾತ್ರ ಆಣೆ ಪ್ರಮಾಣ, ಕುಂಕುಮ, ವೀಳ್ಯದೆಲೆಗಳ ಮೂಲಕ ಮಾಡುವ ಮತ ಯಾಚನೆಗೆ, ಮಹಿಳೆಯರನ್ನು ಭಾವನಾತ್ಮಕವಾಗಿ ಬ್ಲ್ಯಾಕ್‌ಮೇಲ್ ಮಾಡುವುದಕ್ಕೆ ಮಹಿಳೆಯರೇ ಬೇಕು!



ಇಂಥ ಸಂದರ್ಭಗಳಲ್ಲಿ ಮಹಿಳಾ ಮತದಾರರನ್ನು ಪುರುಷ ಅಭ್ಯರ್ಥಿಯ ಪತ್ನಿಯು ಭಾವನಾತ್ಮಕವಾಗಿ ಸೆಳೆಯಲು ಮುಂದಾದಂತಹ ಉದಾಹರಣೆಗಳಿವೆ.


ಇಡೀ ಸಮಸ್ಯೆಗೆ ಇನ್ನೊಂದು ಮುಖವೂ ಇದೆ. ಬಹುತೇಕ ಮಹಿಳೆಯರು ಅಧಿಕಾರ ರಾಜಕಾರಣದ ಬಗ್ಗೆ ಯೋಚಿಸುವ, ಮಾತಾಡುವ ಆಸಕ್ತಿ ತೋರುವುದಿಲ್ಲ. ಈ ದೃಷ್ಟಿಯಿಂದಲಾದರೂ ನಮ್ಮ ಸ್ತ್ರೀವಾದಿ ಚಿಂತನೆಗಳೊಳಗೆ ಸಮಕಾಲೀನ ರಾಜಕೀಯ ಅಧಿಕಾರದ ಪ್ರಶ್ನೆಗಳು ದೊಡ್ಡ ಮಟ್ಟದಲ್ಲಿ ಬೆಸೆದುಕೊಳ್ಳುವ ಅಗತ್ಯವಿದೆ. ಸ್ತ್ರೀವಾದಿ ಚಿಂತಕಿಯರು ರಾಜಕೀಯದಲ್ಲಿ ಆಸಕ್ತಿಯಿರುವ ಮಹಿಳೆಯರನ್ನು ಉದ್ದೇಶಿಸಿ ಸರಳವಾಗಿ ಮಾತಾಡಬೇಕಾಗುತ್ತದೆ. ಮಹಿಳೆಯರ ಬಗ್ಗೆ ಅಡ್ಡ ಮಾತಾಡುವ ರಾಜಕಾರಣಿಗಳನ್ನು ಎದುರಿಸುವ ತಾತ್ವಿಕ ರೀತಿಗಳನ್ನು ಸಾಮಾಜಿಕ ಚಿಂತಕಿಯರು ರಾಜಕೀಯ ಪಕ್ಷಗಳಲ್ಲಿರುವ ಮಹಿಳೆಯರಿಗೆ ಹೇಳಿಕೊಡಬೇಕಾಗುತ್ತದೆ. ಆದರೆ ಅಷ್ಟಿಷ್ಟು ಪ್ರಗತಿಪರ ಧೋರಣೆಯಿರುವ ರಾಜಕೀಯ ಪಕ್ಷಗಳಲ್ಲಿರುವ ನಾಯಕಿಯರು ಕೂಡ ಸಾಮಾಜಿಕ ಚಿಂತಕಿಯರ ವಲಯಗಳ ಜೊತೆ ನಿರಂತರ ಸಂಪರ್ಕ ಇಟ್ಟುಕೊಂಡಿರುವುದು ಕಡಿಮೆ.

ಇನ್ನು ಚುನಾವಣೆಗಳ ನಂತರದ ಮಂತ್ರಿಮಂಡಲಗಳಲ್ಲಿ ಮಹಿಳೆಯರಿಗೆ ಸಿಗುವ ಸ್ಥಾನ ಹಾಗೂ ಖಾತೆಗಳ ಪರಿ ನೋಡಿದರಂತೂ ಪುರುಷ ರಾಜಕಾರಣಿಗಳ ಲಜ್ಜೆಗೆಟ್ಟ ಸ್ವಾರ್ಥ ಎಲ್ಲರಿಗೂ ಗೊತ್ತಾಗುತ್ತದೆ. ಸದ್ಯದ ಚುನಾವಣಾ ರಾಜಕಾರಣ, ಚುನಾವಣಾ ನಂತರದ ಅಧಿಕಾರ ರಾಜಕಾರಣ ಎರಡೂ ಹೀಗಿರುವಾಗ, 2029ಕ್ಕೆ ಶೇಕಡ 33ರಷ್ಟು ಮಹಿಳಾ ಮೀಸಲಾತಿ ಬರುವ ಹೊತ್ತಿಗೆ ಮಹಿಳೆಯರ ರಾಜಕೀಯ ತಯಾರಿ ಯಾವ ರೀತಿ ಇರಬಲ್ಲದು ಎಂಬ ದೊಡ್ಡ ಪ್ರಶ್ನೆ ನಮ್ಮೆದುರಿಗಿದೆ.

ಈ ಹಿನ್ನೆಲೆಯಲ್ಲಿ ರಾಜಕೀಯ ಅವಕಾಶವಂಚಿತ ಮಹಿಳೆಯರೇ ಒಂದು ವರ್ಗವಾಗಿ ತಮ್ಮ ರಾಜಕೀಯ ಹಕ್ಕುಗಳಿಗಾಗಿ, ಮುನ್ನಡೆಗಾಗಿ ಸಂಘಟಿತರಾಗದಿದ್ದರೆ ಸೂಕ್ತ ಮಹಿಳಾ ಪ್ರಾತಿನಿಧ್ಯ ದಕ್ಕಲಾರದು. ಮಹಿಳಾ ಮತದಾರರು ಎಂಬ ವಿಶಿಷ್ಟ ವರ್ಗವನ್ನು ಬರೀ ಚುನಾವಣೆಗಾಗಿ ಸೃಷ್ಟಿಸಿದರೆ ಪ್ರಯೋಜನವಿಲ್ಲ. ಅವರನ್ನು ನಾಯಕಿಯರನ್ನಾಗಿ ತಯಾರು ಮಾಡುವ ದೊಡ್ಡ ಸವಾಲು ಇಲ್ಲಿದೆ. ಈ ಥರದ ಪ್ರಶ್ನೆಗಳು ಈ ಚುನಾವಣೆಯಲ್ಲಿ ಬಗೆಹರಿಯುವಂಥವಲ್ಲ. ಆದರೆ ಚುನಾವಣಾ ಕಾಲ ಎಲ್ಲರಲ್ಲೂ ಒಂದು ಬಗೆಯ ರಾಜಕೀಯ ಎಚ್ಚರ ಮೂಡಿಸುವ ಕಾಲ. ಈಗಲಾದರೂ ಇಂಥ ಪ್ರಶ್ನೆಗಳನ್ನು ಚರ್ಚೆಗೆ ತರದಿದ್ದರೆ ಮಹಿಳಾ ಮತದಾರರ ರಾಜಕೀಯ ಪ್ರಜ್ಞೆ ಮೊನಚಾಗಲಾರದು.

ಕೊನೆಯದಾಗಿ, ಈಚೆಗೆ ಎರಡು ರಾಜಕೀಯ ಬಿಕ್ಕಟ್ಟುಗಳ ಸಮಯದಲ್ಲಿ ಇದ್ದಕ್ಕಿದ್ದಂತೆ ರಾಜಕೀಯ ಪ್ರವೇಶಿಸಿದ ಇಬ್ಬರು ಉದಯೋನ್ಮುಖ ನಾಯಕಿಯರು ಕುತೂಹಲ ಹುಟ್ಟಿಸುತ್ತಿದ್ದಾರೆ. ಅರವಿಂದ ಕೇಜ್ರಿವಾಲರ ಬಂಧನ ಖಂಡಿಸಲು ದೆಹಲಿಯಲ್ಲಿ ನಡೆದ 'ಇಂಡಿಯಾ' ಮೈತ್ರಿಕೂಟದ ಸಭೆಯಲ್ಲಿ ಹಾಗೂ ಮೊನ್ನೆ ರಾಂಚಿಯ ಚುನಾವಣಾ ಸಭೆಯಲ್ಲಿ ಕೇಜ್ರಿವಾಲ್ ಪತ್ನಿ ಸುನೀತಾ, ಹೇಮಂತ್ ಸೊರೇನ್ ಪತ್ನಿ ಕಲ್ಪನಾ ಇಬ್ಬರೂ ದಿಟ್ಟವಾಗಿ ಮಾತಾಡಿದ್ದಾರೆ. ಇದೊಂದು ರಾಜಕೀಯ ಸ್ಟ್ರ್ಯಾಟಜಿಯೇ ಇರಬಹುದು. ಆದರೂ ಈವರೆಗೆ ಹಿನ್ನೆಲೆಯಲ್ಲೇ ಇದ್ದ ಈ ಇಬ್ಬರೂ ವಿದ್ಯಾವಂತ ಮಹಿಳೆಯರು ಚುನಾವಣಾಕಾಲದ ರಾಜಕೀಯ ಬಿಕ್ಕಟ್ಟಿನ ವೇಳೆಯಲ್ಲಿ ತೋರುತ್ತಿರುವ ದಿಟ್ಟತನ, ಮಹಿಳಾ ರಾಜಕೀಯದ ಹೊಸ ಹೆಜ್ಜೆಯೊಂದನ್ನು ರೂಪಿಸಬಲ್ಲದೆ?

ಚುರುಮುರಿ



ಎಡವಟ್ಟಿನ ಕಲೆ

• ಲಿಂಗರಾಜು ಡಿ.ಎಸ್.

ನಮ್ಮೂರಲ್ಲಿ ಕಾಂಗಕ್ಕ, ತೆನೆಯಪ್ಪರ ಮನೆ ಜಗಳ ದಿನಪರ್ತಿ ನಡೀತಿತ್ತು. ಒಬ್ಬರು ಏನನ್ನ ಮಾತಾಡಿದ್ರೆ ಅದಕ್ಕೆ ಇನ್ನೊಬ್ಬರು ನಾಕು ಸೇರಿಸಿ ಬೈಯ್ಯಿತಿದ್ದರು. ದಿನಾ ಒಬ್ಬರನ್ನ ಒಬ್ಬರು ಬೈಯ್ಯದಿದ್ದರೆ ಇಬ್ಬರಿಗೂ ಉಂಡನ್ನ ಅರಗುತ್ತಿರಲಿಲ್ಲ. ಇವರಿಬ್ಬರ ಜಗಳದಲ್ಲಿ ಜನ ನಿಸೂರಾಗಿ ಬದುಕಾಟ ಮಾಡಂಗೇ ಇರಲಿಲ್ಲ. ಈ ಜಗಳಕ್ಕೆ ಕಮಲಕ್ಕನ ಮನೇರು ತೆನೆಯಪ್ಪನ ಪರವಾಗಿ ದಿನಾ ಪುಳ್ಳೆ ಹಾಕಿ ಬೆಂಕಿಯಲ್ಲಿ ನಚ್ಚಗಾಯ್ತಿದ್ರು.

'ಹೆಣ್ಣುಮಕ್ಕಳಿಗೆ ಗೌರವ ಕೊಡದು ಕಲೀಬೇಕು ಕಪ್ಪ? ಕಡದು-ಬಳದು ಮಾತಾಡದು ಬುದ್ಧಿ' ಕಾಂಗಕ್ಕನ ತಮ್ಮ ಚೊಂಬು ಹಿಡಕಂದು ಬೆಳಬೆಳಿಗ್ಗೇಲೆ ರೇಗತಿದ್ದ.

'ನಾವೇನು ಕಂಡೋರ ಆಸ್ತಿ ಹೊಡಕಂದು ದೊಡ್ಡೋರಾಗಿಲ್ಲ ಬ್ರದರ್. ಅದೇಟು ಜನಕೆ ನೀವು ನಾಮ ತೇದಿದ್ದೀರಿ ಅಂತ ಗೊತ್ತದೆ' ಅಂತ ತೆನೆಯಪ್ಪ ಬೋದು ಕೆಡಗತಿದ್ದ.

'ಅಯ್ಯೋ ಬುಡಣ್ಣ, ಕಾಂಗಕ್ಕನ ಮನೆ ಜನಕ್ಕೆ ಉಣ್ಣಕ್ಕಿಕ್ಕಕ್ಕೆ ಅಕ್ಕಿ ಇಲ್ಲ ಅಂತ ಕಾಸು ಕೊಡ್ತಾವ್ರೆ. ಮಾತು ಮಾತಿಗೂ ಕ್ಯಾತೆ ತೆಗದು ಗಾಳಿಗರಾವು ಹಿಡಿದೋರಂಗಾಡ್ತರೆ' ಕಮಲಕ್ಕನ ತಮ್ಮ ಚಿಪ್ಪು ಎಸೆದ.

'ಅಲ್ಲ ಕನ್ರಯ್ಯಾ, ನೀವುನೀವೆ ಸನ್ನಿ ಹಿಡಿದೋರ ಥರ ಹೊಡೆದಾಡತಿದ್ರೆ ಸರೀಕರು ಏನಂದುಕ್ಯಂಬಲ್ಲ. ನಿಮ್ಮ ದಾರಿಗೆ ನೀವೇ ಮುಳ್ಳು ಮುರುಕತಿದ್ದೀರಿ. ರಾಜಕೀಯದ ಕಾರುಬಾರು ಅಂದ್ರೆ ಹಿಂಗೇನಾ? ಎಲೆಕ್ಷನ್ ಮುಗಿದ್ರೆ ಸಾಕಾಗ್ಯದೆ' ಯಂಟಪ್ಪಣ್ಣ ಬೆರಗಾಯ್ತು.

'ಹ್ಞೂಂಕನಣ್ಣೆ, ಇನ್ನೇನು ಕ್ಯಾಮೆ ಇದ್ದದು ರಾಜಕೀಯದೋರಿಗೆ. ಬಾಯಿಚಪಲದ ಜಗಳಕ್ಕೆ ಕಾರಣವೇ ಬೇಕಾಗಿಲ್ಲ. ಬಾಯಿ ತೆಗುದ್ರೆ ಚಂಬಿಂಗ್ ಚಿಪ್ಪಿಂಗ್ ಶುರು ಮಾಡ್ತರೆ. ಜನಕ್ಕೆ ಇದೇ ಇವರ ಕೊಡುಗೆ' ಅಂತಂದ ಚಂದ್ರು.

'ನೋಡಿರ‍್ಲಾ, ರಾಜಕೀಯದಲ್ಲಿ ಎದುರಾಗೋ ಚಂಬು-ಚಿಪ್ಪಿನ ಒಳೇಟುಗಳನ್ನು ತಿಳಿದುಕೊಂಡು ಅವನ್ನು ತಪ್ಪಾಗಿ ಅರ್ಥೈಸಿ ತಪ್ಪು ಪರಿಹಾರಗಳನ್ನು ಕೊಡುವ ಎಡವಟ್ಟಿನ ಕಲೆಯೇ ರಾಜಕೀಯ. ಅದುನ್ನೇ ಈಗ ರಾಜಕಾರಣಿಗಳು ಮಾಡ್ತಿರದು'– ರಾಜಕೀಯಕ್ಕೆ ತುರೇಮಣೆ ಹೊಸ ವಿಶ್ಲೇಷಣೆ ಕೊಟ್ಟರು.

ಸಂಗತ

ಪುಸ್ತಕ 'ಕಾಣೆ' ಆಗಬೇಕಿದೆ!

ಪ್ರತಿವರ್ಷ ಅಪಾರ ಸಂಖ್ಯೆಯಲ್ಲಿ ಪುಸ್ತಕಗಳು ಬಿಡುಗಡೆಯಾಗುತ್ತವಾದರೂ ಓದುಗರ ಗಮನಕ್ಕೆ ಬರುವುದು ಕೆಲವಷ್ಟೇ. ಇದಕ್ಕೆ ಕಾರಣ ಹುಡುಕಬೇಕಿದೆ

• ಸದಾಶಿವ್ ಸೊರಟೂರು

ಬಸ್ಸಿಗಾಗಿ ಕಾಯುತ್ತಾ ನಿಲ್ದಾಣದಲ್ಲಿ ಗೆಳೆಯನೊಂದಿಗಿದ್ದೆ. ಅವನ ಕೈಯಲ್ಲಿ ಐದಾರು ಪುಸ್ತಕಗಳಿದ್ದವು. ಇಬ್ಬರೂ ಶೌಚಕ್ಕೆ ಹೋಗಬೇಕಾಯಿತು. ಅವನು ಪುಸ್ತಕಗಳನ್ನು ಬೆಂಚ್ ಮೇಲೆ ಇಟ್ಟು ಬಂದ. 'ಯಾರಾದರೂ ಕದ್ದುಬಿಟ್ಟರೆ?' ಆಶ್ಚರ್ಯದಿಂದ ಕೇಳಿದೆ. 'ಪುಸ್ತಕಗಳು ಯಾರಿಗೆ ಬೇಕಿದೆ? ಓದಲು ಬರುವವರೇ ಓದ್ತಿಲ್ಲ ಅಂದ್ಮೇಲೆ ಈ ಪುಸ್ತಕಗಳನ್ನು ಯಾರು ಎತ್ತಿಕೊಂಡು ಹೋಗ್ತಾರೆ' ಅಂದ. ನಾವು ಹೋಗಿ ತಿರುಗಿ ಬಂದಮೇಲೂ ಅಲ್ಲಿ ಆ ಪುಸ್ತಕಗಳು ಹಾಗೇ ಇದ್ದವು. ಪುಸ್ತಕಗಳು ಕದಿಯಲು ಕೂಡ ಯೋಗ್ಯವಲ್ಲದ ವಸ್ತುಗಳಾಗಿ ಹೋದವೇ ಅನಿಸಿತು.

ನನ್ನ ಪ್ರೌಢಶಾಲೆಯ ಗುರುಗಳು ಶಾಲಾ ಲೈಬ್ರರಿಯಲ್ಲಿ ಪುಸ್ತಕ ಕಾಣೆಯಾದರೆ ಖುಷಿಪಡುತ್ತಿದ್ದರು. ಪುಸ್ತಕವನ್ನು ಯಾರಾದರೂ ಕದ್ದಿದ್ದಾರೆ ಅಂದರೆ ಅದನ್ನು ಓದುವವರೇ ಕದ್ದಿದ್ದಾರೆ ಅನ್ನುತ್ತಿದ್ದರು. ಒಂದು ಪುಸ್ತಕದ ಆಸೆ ಕೂಡ ಅದೇ ಆಗಿರುತ್ತದೆ, ತನ್ನನ್ನು ಯಾರಾದರೂ ಓದಲಿ ಎಂಬುದು. ಈಗೀಗ ಪುಸ್ತಕಗಳು ಕಾಣೆ ಕೂಡ ಆಗುತ್ತಿಲ್ಲ. ಮುದ್ರಣದ ಘಮ ವರ್ಷಗಳಾದರೂ ಪುಸ್ತಕದೊಳಗೆ ಹಾಗೇ ಉಳಿದುಬಿಟ್ಟಿರುತ್ತದೆ.

ನಮ್ಮ ಈ ಕಾಲದ ಓದು ಅಂದರೆ ಅದು ಪರೀಕ್ಷೆಗೆ ಓದುವುದೇ ಆಗಿದೆ. ಹತ್ತನೇ ತರಗತಿಯ ಹುಡುಗನೊಬ್ಬನಿಗೆ ಶಾಲಾ ಆರಂಭದಲ್ಲಿ ಒಂದು ಕತೆ ಪುಸ್ತಕವನ್ನು ಓದಲು ಕೊಟ್ಟಿದ್ದೆ. ಎರಡನೇ ದಿನಕ್ಕೆ ಅವನ ಪೋಷಕರು ಬಂದರು. 'ನನ್ನ ಮಗ ಬರೀ ಇದೇ ಪುಸ್ತಕ ಹಿಡಿದು ಕೂತಿದ್ದಾನೆ. ಇದರಿಂದ ಏನು ಮಾರ್ಕ್ಸ್ ಬರ್ತಾವಾ?' ಎಂದು ಕೇಳಿದರು. ಓದುಗವರ್ಗವೊಂದು ಸೃಷ್ಟಿಯಾಗುವ ಮೊದಲೇ ಹೀಗೆ ಬಾಡಿ ಹೋಗುತ್ತದೆ.

ಈಗಿನ ಕಾಲದ ಆದ್ಯತೆಗಳು ಬೇರೆ. ಓದು ಒಂದು ಆದ್ಯತೆ ಆಗಿರುವುದು ಬರೀ ಲೇಖಕನಿಗೆ ಮತ್ತು ಒಂದಷ್ಟು ಸಾಹಿತ್ಯದ ಅಭಿರುಚಿ ಇರುವವರಿಗೆ ಮಾತ್ರ. ನಾನು ಒಮ್ಮೆ ಒಂದು ಬಂಡಲ್ ಪುಸ್ತಕ ಖರೀದಿ ಮಾಡಿ ತರುವಾಗ ಕೆಲವರು ನನ್ನನ್ನು ಪಾಪ ಅನ್ನುವಂತೆ ನೋಡುತ್ತಿದ್ದರು. ಎಷ್ಟೊಂದು ಹಣ ವ್ಯರ್ಥ ಮಾಡುತ್ತಿದ್ದಾನೆ ಅನ್ನುವಂತಿತ್ತು ಅವರ ಭಾವ. ಅದಕ್ಕಿಂತ ಒಂದು ಮಸಾಲೆದೋಸೆ ತಿನ್ನುವುದು ಮೇಲು, ಹೊಟ್ಟೆಯಾದರೂ ತುಂಬುತ್ತದೆ ಎಂಬುದು ಅವರ ಅಭಿಪ್ರಾಯ ಆಗಿದ್ದಿರಬಹುದು.

ಓದು ಅಂದರೆ ಅಂಕ, ಓದು ಅಂದರೆ ನೌಕರಿ, ಓದು ಅಂದರೆ ದುಡ್ಡು ಎಂದಾಗಿರುವಾಗ, ಓದು ಅಂದರೆ ನಮ್ಮನ್ನು ನಾವು ಕಂಡುಕೊಳ್ಳುವ ಬಗೆ ಅಂತ ಹೇಳಿದರೆ ಹಾಗೆ ಹೇಳಿದವನನ್ನು ನೋಡಿ ನಕ್ಕಾರು! ಸಮಾಜ ಈಗೀಗ ನೈತಿಕ ಅಧಃಪತನಕ್ಕೆ, ಮೌಲ್ಯಗಳ ಅಧೋಗತಿಗೆ ತಲುಪಿರುವುದಕ್ಕೆ ನಾವು ಪುಸ್ತಕಗಳಿಂದ ವಿಮುಖವಾಗಿರುವ ಕಾರಣವೂ ಒಂದು. ಓದು ತೊರೆದ ನಾಡಿಗೆ ನಿಜಕ್ಕೂ ಭವಿಷ್ಯ ಇದೆಯೇ?

ಪುಸ್ತಕ ಓದುವುದರಿಂದ ಏನು ದಕ್ಕುತ್ತದೆ ಎಂಬುದು ಈಗಿನ ಪೀಳಿಗೆಗೆ ಗೊತ್ತಿಲ್ಲ. ಓದು ಕೊಡುವ ಸುಖದ ಪರಿಚಯ ಇಲ್ಲ. ಅದು ದಯಪಾಲಿಸುವ ಹಲವು ಜಗತ್ತುಗಳ ದರ್ಶನದ ಅರಿವಿಲ್ಲ. ತಮ್ಮೊಳಗೆ ತಮಗೆ ಗೊತ್ತಿಲ್ಲದೇ ಆಗುವ ಬದಲಾವಣೆಯ ಸಾಧ್ಯತೆಯ ಬಗ್ಗೆ ಗೊತ್ತಿಲ್ಲ. ಸಾಧನೆ ಎಂಬುದನ್ನು ಹಣದಲ್ಲಿ ವ್ಯಾಖ್ಯಾನಿಸುವ ಕಾಲದಲ್ಲಿ ಪುಸ್ತಕ ಒದಗಿಸುವ ಜ್ಞಾನ, ಅದು ಕೊಡುವ ನಮ್ಮ ವರ್ತನೆಯಲ್ಲಿನ ಒಂದು ಧನ್ಯತೆ ನಮಗೆ ಬೇಕಾಗಿಲ್ಲ.

ಪುಸ್ತಕ ಓದುವಿಕೆಗೆ ಸಂಬಂಧಿಸಿದಂತೆ ಇನ್ನೊಂದು ಮುಖವಿದೆ. ಪುಸ್ತಕಗಳು ಸರಿಯಾಗಿ ಮಾರಾಟ ಆಗುತ್ತಿಲ್ಲ, ಓದುವವರ ಸಂಖ್ಯೆ ತೀರಾ ಕಮ್ಮಿ ಆಗಿದೆ ಎಂಬ ಮಾತು ಪೂರ್ಣ ಸರಿಯೂ ಅಲ್ಲ ಮತ್ತು ತಪ್ಪು ಕೂಡ ಅಲ್ಲ. ನಮ್ಮಲ್ಲಿ ಉತ್ತಮ ಪುಸ್ತಕಗಳೂ ಇವೆ, ಉತ್ತಮ ಓದುಗರೂ ಇದ್ದಾರೆ (ಅವರ ಸಂಖ್ಯೆ ಕಡಿಮೆ ಇರಬಹುದು). ಆ ಓದುಗನ ಕೈಗೆ ಆ ಪುಸ್ತಕಗಳು ಸರಿಯಾಗಿ ಸಿಗುತ್ತಿಲ್ಲ. ಅದಕ್ಕೆ ಅದರದೇ ಆದ ಕಾರಣಗಳೂ ಇರಬಹುದು.

ಗೋವಾದಿಂದ ಪ್ರಕಾಶನಗೊಂಡ ಕನ್ನಡದ ಒಂದು ಕವನ ಸಂಕಲನ ತರಿಸಿಕೊಳ್ಳಲು ಐದಾರು ತಿಂಗಳು ಕಷ್ಟಪಟ್ಟೆ. ಬರಹಗಾರ ಮತ್ತು ಓದುಗ ಹಾಗೂ ಪುಸ್ತಕ ಮಾರುವವ ಮತ್ತು ಕೊಳ್ಳುವವನ ನಡುವೆ ಸರಿಯಾದ ಸಂಪರ್ಕ ಸಾಧ್ಯವಾಗುತ್ತಿಲ್ಲ. ಎಷ್ಟೋ ಜನ 'ಪುಸ್ತಕವನ್ನು ಆನ್‌ಲೈನ್‌ನಲ್ಲಿ ತರಿಸಿಕೊಳ್ಳುವುದು ಹೇಗೆ?' ಎಂದು ಕೇಳುತ್ತಾರೆ. ಅವರಿಗೆ ಓದುವ ಹಂಬಲವಿದೆ. ತಮಗೆ ಬೇಕಾದ ಪುಸ್ತಕಗಳು ಎಲ್ಲಿ ಸಿಗುತ್ತವೆ ಎಂಬುದು ಗೊತ್ತಾಗುವುದಿಲ್ಲ.



ವರ್ಷಕ್ಕೆ ಲಕ್ಷಾಂತರ ಪುಸ್ತಕಗಳು ಬಿಡುಗಡೆಆಗುತ್ತವೆ. ಓದುಗರ ಗಮನಕ್ಕೆ ಬರುವುದು ಬರೀ ನೂರಾರು ಪುಸ್ತಕಗಳಷ್ಟೇ. ಯಾಕೆ ಹೀಗೆ ಆಗುತ್ತದೆ? ಯೋಚಿಸಬೇಕಾಗಿದೆ. ಓದುಗ ಇತ್ತೀಚೆಗೆ ಕನ್ನಡದಲ್ಲಿ ಒಳ್ಳೆಯ ಪುಸ್ತಕಗಳು ಬರುತ್ತಿಲ್ಲ ಎಂದು ದೂರುತ್ತಿದ್ದಾನೆ. ಇದಕ್ಕೆ ಒಳ್ಳೆಯ ಪುಸ್ತಕಗಳು ಅವನ ಗಮನಕ್ಕೆ ಬರದೇಹೋದುದು ಕಾರಣ ಆಗಿರಬಹುದು.

ಪುಸ್ತಕ ಖರೀದಿಗೆ ಸರ್ಕಾರದಿಂದ ಹಣ ಬಿಡುಗಡೆಯಾಗುತ್ತದೆ. ಜನರು ಅದರಿಂದ ತಮಗೇನೂ ಪ್ರಯೋಜನವಾಗಿಲ್ಲ ಎನ್ನುತ್ತಾರೆ. ಪ್ರಕಾಶಕ ತನಗೆ ನಷ್ಟವಾಯಿತು ಎನ್ನುತ್ತಾನೆ. ಲೇಖಕನೂ ತನಗೆ ಸಿಕ್ಕಿದ್ದು ಪುಡಿಗಾಸು ಅನ್ನುತ್ತಾನೆ. ಯಾಕೆ ಹೀಗಾಗುತ್ತಿದೆ? ಈ ಪುಸ್ತಕ ದಿನದ (ಏ. 23) ನೆವದಲ್ಲಾದರೂ ಇದರ ಬಗ್ಗೆ ಗಂಭೀರ ಚರ್ಚೆಯಾಗಬೇಕು.

ಒಂದು ನೆನಪಿರಲಿ, ಜನ ಪುಸ್ತಕ ಓದಿಲ್ಲ ಎಂದರೆ ಅದರ ನಷ್ಟ ಪ್ರಕಾಶಕನಿಗೆ, ಲೇಖಕನಿಗೆ ಅನ್ನುವುದಕ್ಕಿಂತ ಸಮಾಜಕ್ಕೆ ಅನ್ನುವುದು ಹೆಚ್ಚು ಸರಿ.

ವಾಚಕರ ವಾಣಿ

ಮತದಾರರು ಪ್ರಜ್ಞಾವಂತರಾಗುವುದು ಯಾವಾಗ?

ಚುನಾವಣಾ ಪ್ರಚಾರಕ್ಕೆಂದು ಬರುವ ರಾಷ್ಟ್ರ ನಾಯಕರು ಹಾಗೂ ಸ್ಟಾರ್ ಪ್ರಚಾರಕರ ರೋಡ್ ಶೋ ಸಮಯದಲ್ಲಿ ಅವರು ಚಲಿಸುವ ಮಾರ್ಗದಲ್ಲಿ ಕೆ.ಜಿ.ಗಟ್ಟಲೆ ಹೂವನ್ನು ಸುರಿಯುವುದು, ಬೃಹತ್ ಯಂತ್ರ ಬಳಸಿ ಟನ್‌ಗಟ್ಟಲೆ ಹೂವು, ತೆಂಗಿನಕಾಯಿ, ಸೇಬಿನಂತಹವುಗಳ ಹಾರ ಹಾಕುವುದು, ಚಿಕ್ಕ ಮಕ್ಕಳಿಂದ ಆರತಿ ಬೆಳಗಿಸುವುದು, ಬೀದಿಗಳ ತುಂಬೆಲ್ಲಾ ಫ್ಲೆಕ್ಸ್ ಹಾಕುವುದು, ದಿನಪೂರ್ತಿ ಧ್ವನಿವರ್ಧಕಗಳ ಮೂಲಕ ಕಿರುಚುತ್ತಾ ಪ್ರಚಾರ ಮಾಡುವುದನ್ನು ಬಿಡಬೇಕು.

ರೋಡ್ ಶೋ ಮುಗಿದ ಬಳಿಕ ಸಂಗ್ರಹವಾಗುವ ಕಸದ ರಾಶಿಯ ಬಗ್ಗೆ, ಪರಿಸರ ಮಾಲಿನ್ಯದ ಬಗ್ಗೆ ಚಿಂತಿಸುವ ಹೊಣೆ ಯಾರದು? ಇವೆಲ್ಲಾ ಅಸಂಬದ್ಧ ಸೋಗಲಾಡಿತನವನ್ನು ಪ್ರಜ್ಞಾವಂತರಾದ ಜನ ವಿರೋಧಿಸಬೇಕು. ಹೂವು, ಆರತಿಗಿರುವ ಪಾವಿತ್ರ್ಯವನ್ನು ಭಗವಂತನಿಗೆ ಮಾತ್ರ ಮೀಸಲಿಡಬೇಕು. ರಾಜಕಾರಣಿಗಳನ್ನು ಅತಿಮಾನವ ಶಕ್ತಿಯುಳ್ಳ ದೇವರಂತೆ ಬಿಂಬಿಸುವ ಮನಃಸ್ಥಿತಿ ಸರಿಯೇ? ಜಗತ್ತಿನ ದೊಡ್ಡ ಸಂವಿಧಾನ ಎಂಬ ಹೆಗ್ಗಳಿಕೆ ಇರುವ ದೇಶದಲ್ಲಿ ಈಗಲೂ ಈ ರೀತಿ ಚುನಾವಣಾ ಪ್ರಚಾರ ನಡೆಯುತ್ತದೆ ಎಂದರೆ ಏನರ್ಥ?

ಸುರೇಂದ್ರ ಪೈ, ಭಟ್ಕಳ

ಬದುಕೋಣ, ಬದುಕಿಸೋಣ...

ವಿಶ್ವದ ಅತ್ಯಂತ ದೈತ್ಯ ಉರಗವಾದ ವಾಸುಕಿ ಇಂಡಿಕಸ್ ನಮ್ಮ ಭಾರತ ಉಪಖಂಡದಲ್ಲಿ ಸುಮಾರು 5 ಕೋಟಿ ವರ್ಷಗಳ ಹಿಂದೆ ಬದುಕಿತ್ತು ಎನ್ನುವುದು (ಆಳ-ಅಗಲ, ಪ್ರ.ವಾ., ಏ. 22) ನಮ್ಮ ಭಾರತೀಯರ ಹೆಮ್ಮೆ. ಆದರೆ ವಿಷಾದದ ಸಂಗತಿಯೆಂದರೆ, ಇಂತಹ ಒಂದು ಪ್ರಾಣಿಯು ಹವಾಮಾನ ವೈಪರೀತ್ಯದಿಂದ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿದ್ದು. ವಾಸುಕಿ ಇಂಡಿಕಸ್ ಬದುಕಿದ್ದ ಅವಧಿಗಿಂತ ಎಷ್ಟೋ ವರ್ಷಗಳಷ್ಟು ಹಿಂದೆಯೇ ಡೈನೊಸಾರ್‌ಗಳು ಕೂಡ ಹವಾಮಾನ ವೈಪರೀತ್ಯದ ಕಾರಣದಿಂದಲೇ ಅಳಿದುಹೋದವು. ಈಗಲಾದರೂ ಮಾನವ ಎಚ್ಚೆತ್ತುಕೊಳ್ಳಬೇಕು. ಇಲ್ಲದಿದ್ದರೆ ಇಂತಹ ಅನೇಕ ಪ್ರಾಣಿ ಪಕ್ಷಿಗಳ ಜೊತೆಗೆ ಮಾನವರು ಕೂಡ ಅಳಿದುಹೋಗುವ ಕಾಲ ಬಂದರೆ ಆಶ್ಚರ್ಯವಿಲ್ಲ.

ಭೂಮಿಯ ಮೇಲೆ ಎಲ್ಲ ಜೀವಿಗಳಿಗೂ ಬದುಕುವ ಹಕ್ಕಿದೆ. ಈ ಧರೆ ಬರೀ ಮನುಷ್ಯನ ಸ್ವಾರ್ಥಕ್ಕಾಗಿ ಅಲ್ಲ. ಬದಲಾಗಿ ಎಲ್ಲ ಜೀವಿಗಳಿಗೂ ಸಮಾನವಾಗಿ ಬದುಕುವ ಅವಕಾಶವನ್ನು ಕೊಟ್ಟಿದೆ. ನಾವೂ ಬದುಕೋಣ, ಎಲ್ಲ ಜೀವಿಗಳಿಗೂ ಬದುಕುವ ವಾತಾವರಣವನ್ನು ಉಳಿಸೋಣ.

ರಾಜಶೇಖರ್ ಗುಬ್ಬಿ, ಮನಗೂಳಿ, ಬಸವನಬಾಗೇವಾಡಿ

ಭೇದವಿಲ್ಲದವರು!

ಎಲ್ಲರೂ ಬಿಟ್ಟಿರುವುದು
ಕಂಬಿ ಇಲ್ಲದ ರೈಲೇ
ಕೊಟ್ಟಿರುವುದು ಚೊಂಬು, ಚಿಪ್ಪೇ
ಹಾಕಿರುವುದು ಟೋಪಿಯೇ
ಇಟ್ಟಿರುವುದು ಕಿವಿಗೆ ಹೂವೇ
ಅದಕ್ಕೇ ಬುದ್ಧಿವಂತನೊಬ್ಬ
ಹೇಳಿರುವುದು...
ಇವರೆಲ್ಲಾ ಹಿಟ್ಟಿನ ಗಿರಣಿಗಳಂತೆ
ಯಾವ ಕಾಳು ಹಾಕಿದರೂ
ಒಂದೇಸಮನೆ ಅರೆಯುತ್ತಾರಂತೆ!
ಆದರೂ ನಿರಾಶರಾಗದಿರೋಣ
ತಪ್ಪದೇ ಮತ ಹಾಕಿ
ನೆಮ್ಮದಿಯ ನಾಳೆಯ
ಎದುರು ನೋಡೋಣ!

ಜೆ.ಬಿ.ಮಂಜುನಾಥ, ಪಾಂಡವಪುರ

ಚಿತ್ರದ ಹಿಂದಿನ ಆಶಯ ಮುಖ್ಯ

ಭಾನುವಾರದ (ಏ. 21) ಪ್ರಮುಖ ದಿನಪತ್ರಿಕೆಗಳ ಮುಖಪುಟಗಳಲ್ಲಿ ಕಾಂಗ್ರೆಸ್ ಪಕ್ಷದ ಜಾಹೀರಾತಿನಲ್ಲಿರುವ, ನೋಟು ಕತ್ತರಿಸಿದ ಸ್ಥಿತಿಯಲ್ಲಿರುವ ಚಿತ್ರಕ್ಕೆ ಪತ್ತಂಗಿ ಎಸ್. ಮುರಳಿ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ (ವಾ.ವಾ., ಏ. 22). ಆದರೆ ಆ ಚಿತ್ರವನ್ನು ವಾಚ್ಯವಾಗಿ ಗ್ರಹಿಸಬಾರದು. ಚಿತ್ರ ಅಥವಾ ಹೇಳಿಕೆಗಳ ಆಶಯವನ್ನಷ್ಟೇ ಗ್ರಹಿಸುವುದು ಒಳಿತು.

ಕೇಂದ್ರ ಸರ್ಕಾರವು ಕರ್ನಾಟಕದ ಜನರಿಗೆ ಚೊಂಬು ಕೊಟ್ಟಿದೆ ಎಂಬ ಕೆಪಿಸಿಸಿಯ ಜಾಹೀರಾತನ್ನು ವಾಚ್ಯವಾಗಿ ಗ್ರಹಿಸಿದರೆ, ಪ್ರತಿಯೊಬ್ಬರಿಗೂ ಒಂದೊಂದು ಚೊಂಬು ಕೊಟ್ಟು ಉಪಕಾರ ಮಾಡಿದೆ ಎಂಬ ಅರ್ಥ ಬರುತ್ತದೆ. ಆದರೆ ಆ ಹೇಳಿಕೆಯ ಅರ್ಥ, ಕೇಂದ್ರ ಸರ್ಕಾರ ಜನರಿಗೆ ಯಾವುದೇ ಅನುಕೂಲವನ್ನು ಕಲ್ಪಿಸಿಲ್ಲ ಎಂದಾಗಿರುತ್ತದೆ. ಹಾಗೆಯೇ ಕತ್ತರಿಸಿದ ನೋಟಿನ ಚಿತ್ರವುಳ್ಳ ಜಾಹೀರಾತನ್ನು ನೋಡಿದವರಿಗೆ, ಕೇಂದ್ರಕ್ಕೆ ರಾಜ್ಯವು ಜಿಎಸ್‌ಟಿ ರೂಪದಲ್ಲಿ ಕೊಡುತ್ತಿರುವ ತೆರಿಗೆ ಎಷ್ಟು, ರಾಜ್ಯಕ್ಕೆ ಕೇಂದ್ರದಿಂದ ಬರುತ್ತಿರುವ ತೆರಿಗೆ ಪಾಲು ಎಷ್ಟು ಎಂಬುದು ಸ್ಪಷ್ಟವಾಗುತ್ತದೆ. ಈ ಅರ್ಥಸ್ಪಷ್ಟತೆಗಾಗಿಯಷ್ಟೇ ನೋಟಿಗೆ ಕತ್ತರಿ ಹಾಕಿರುವ ಚಿತ್ರವನ್ನು ಕೊಡಲಾಗಿದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಶಿಕ್ಷಣದ ಗುಣಮಟ್ಟ ಕುಸಿತ: ಯಾರು ಹೊಣೆ?

ಪಠ್ಯೇತರ ಓದು ಒತ್ತಟ್ಟಿಗಿರಲಿ, ಸರಿಯಾದ ಕಾಗುಣಿತವೂ ಗೊತ್ತಿಲ್ಲದ ಭಾಷಾ ಪಂಡಿತರು ಪ್ರಾಧ್ಯಾಪಕರಾಗಿರುವುದು ಶಿಕ್ಷಣದ ಗುಣಮಟ್ಟ ಕುಸಿತಕ್ಕೆ ಕಾರಣ ಎಂಬ ಈರಪ್ಪ ಎಂ. ಕಂಬಳಿ ಅವರ ಅಭಿಪ್ರಾಯವನ್ನು (ವಾ.ವಾ., ಏ. 22) ಒಪ್ಪಲಾಗದು. ಪ್ರಾಧ್ಯಾಪಕ ಅಥವಾ ಉಪನ್ಯಾಸಕ ಹುದ್ದೆಗೆ ಆಯ್ಕೆಯಾಗಬೇಕೆಂದರೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಬೇಕು. ಕಾಗುಣಿತ ಗೊತ್ತಿಲ್ಲದವರು ಆ ಪರೀಕ್ಷೆ ಬರೆದು ಆಯ್ಕೆಯಾಗಲು ಸಾಧ್ಯವೇ? ಸಾಧ್ಯವಾಗುವುದಾದರೆ ಅದು ಆಯ್ಕೆ ಪ್ರಕ್ರಿಯೆಯ ದೋಷ.

ಪಠ್ಯೇತರ ಓದಿಗಾಗಲಿ, ಪಠ್ಯೇತರ ಚಟುವಟಿಕೆಗಳಿಗಾಗಲಿ ಮಹತ್ವ ಕೊಡದ ನಮ್ಮ ಶೈಕ್ಷಣಿಕ ವ್ಯವಸ್ಥೆಯು ಅಂಕಗಳೇ ಮುಖ್ಯ ಎಂದು ವಿದ್ಯಾರ್ಥಿಗಳ ತಲೆಗೆ ತುಂಬಿದೆ. ಅವರು ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಲು, ಶಾಲಾ ಕಾಲೇಜಿನ ಆವರಣವನ್ನು ಸ್ವಚ್ಛವಾಗಿಟ್ಟುಕೊಳ್ಳಲು, ಅಲ್ಲಿ ಗಿಡಗಳನ್ನು ನೆಟ್ಟು ನೀರುಣಿಸಲು, ಸಾಮಾಜಿಕ ಕಳಕಳಿಯ ವ್ಯಕ್ತಿತ್ವ ಬೆಳೆಸಿಕೊಳ್ಳಲು, ಮಾನವೀಯ ಮೌಲ್ಯ ಬೆಳೆಸಿಕೊಳ್ಳಲು ಪ್ರೇರೇಪಿಸದೇ ಇವುಗಳೆಲ್ಲಾ ವ್ಯರ್ಥವೆಂದು ಬಿಂಬಿಸಲಾಗುತ್ತಿದೆ. ಶಿಕ್ಷಣದ ಗುಣಮಟ್ಟ ಕುಸಿತಕ್ಕೆ ಈ ವ್ಯವಸ್ಥೆಯನ್ನು ಹಾಗೂ ವಿದ್ಯಾರ್ಥಿಗಳನ್ನು ಅಂಕ ಉತ್ಪಾದಿಸುವ ಕಾರ್ಖಾನೆಗಳನ್ನಾಗಿ ಮಾಡುತ್ತಿರುವ ಕೆಲವು ಶಿಕ್ಷಣ ಸಂಸ್ಥೆಗಳನ್ನು ಕಾರಣವನ್ನಾಗಿಸಬೇಕೇ ವಿನಾ ಸ್ಪರ್ಧಾತ್ಮಕ ಪರೀಕ್ಷೆ ಬರೆದು ಆಯ್ಕೆಯಾಗಿರುವ ಪ್ರಾಧ್ಯಾಪಕರನ್ನಲ್ಲ.

ರೇವಣ್ಣ ಎಂ.ಜಿ., ಕೃಷ್ಣರಾಜಪೇಟೆ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕಾರ್ಮಿಕರನ್ನು ಬಾಧಿಸುತ್ತಿದೆ ಹವಾಮಾನ ವೈಪರೀತ್ಯ



ಹವಾಮಾನ ವೈಪರೀತ್ಯ ಅಥವಾ ಹವಾಮಾನ ಬದಲಾವಣೆಯ ದುಷ್ಪರಿಣಾಮಗಳಿಗೆ ನೇರವಾಗಿ ಗುರಿಯಾಗುವವರು ಕಾರ್ಮಿಕರು. ವಿಶ್ವದಾದ್ಯಂತ 340 ಕೋಟಿಗೂ ಹೆಚ್ಚು ಕಾರ್ಮಿಕರು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಇವರಲ್ಲಿ 240 ಕೋಟಿಗೂ ಹೆಚ್ಚು ಕಾರ್ಮಿಕರನ್ನು ಅತಿಯಾದ ಉಷ್ಣಾಂಶ, ವಾಯುಮಾಲಿನ್ಯ, ಅತಿನೇರಳ ಕಿರಣಗಳು ಬಾಧಿಸುತ್ತಿವೆ. ಇವುಗಳನ್ನು ನಿಭಾಯಿಸಲು ಸರಿಯಾದ ವ್ಯವಸ್ಥೆ ಇಲ್ಲದ ಕಾರಣ ವಾರ್ಷಿಕ 30 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಅಕಾಲಿಕವಾಗಿ ಸಾಯುತ್ತಿದ್ದಾರೆ. ಇನ್ನು 70–90 ಕೋಟಿಯಷ್ಟು ಕಾರ್ಮಿಕರು ವಿವಿಧ ಅನಾರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಹವಾಮಾನ ವೈಪರೀತ್ಯದ ದುಷ್ಪರಿಣಾಮಗಳ ನಿರ್ವಹಣೆಯತ್ತ ಎಲ್ಲಾ ದೇಶಗಳೂ ಗಮನ ಹರಿಸಬೇಕಾದ ಅನಿವಾರ್ಯ ಇದೆ ಎನ್ನುತ್ತದೆ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ ವರದಿ

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಅತಿನೇರಳೆ ಕಿರಣಗಳು

ಇದು ಸಹ ಹೊರಾಂಗಣದಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ಬಾಧಿಸುವ ಪ್ರಮುಖ ಪ್ರಾಕೃತಿಕ ವಿದ್ಯಮಾನ. ಹವಾಮಾನ ವೈಪರೀತ್ಯದ ಪರಿಣಾಮವಾಗಿ ವಾತಾವರಣದಲ್ಲಿನ ಉಷ್ಣಾಂಶ ಏರಿಕೆಯಾಗುತ್ತಿರುವುದು ಒಂದೆಡೆಯಾದರೆ, ಅದರ ಜತೆಯಲ್ಲಿಯೇ ಸೂರ್ಯನಿಂದ ಬರುವ ಅತಿನೇರಳೆ ಕಿರಣಗಳ ತೀವ್ರತೆ ಹೆಚ್ಚಾಗುತ್ತಿದೆ

ಯಾರ ಮೇಲೆ ಪರಿಣಾಮ

ಬಿಸಿಲಿನಲ್ಲೇ ಕೆಲಸ ಮಾಡುವ ಕಟ್ಟಡ ನಿರ್ಮಾಣ ಕಾರ್ಮಿಕರು, ರಸ್ತೆ–ಹೆದ್ದಾರಿ ನಿರ್ಮಾಣ ಕಾರ್ಮಿಕರು, ಬಂದರು ಕಾರ್ಮಿಕರು ಮತ್ತು ಕೃಷಿ ಕಾರ್ಮಿಕರು

160 ಕೋಟಿ
ವಿಶ್ವದಾದ್ಯಂತ ಅತಿನೇರಳೆ ಕಿರಣಗಳಿಗೆ ಮೈಯೊಡ್ಡಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ

18,960 2023ರಲ್ಲಿ ವಿಶ್ವದಾದ್ಯಂತ ಅತಿನೇರಳ ಕಿರಣಗಳ ನೇರ ದುಷ್ಪರಿಣಾಮಕ್ಕೆ ಬಲಿಯಾದ ಕಾರ್ಮಿಕರ ಸಂಖ್ಯೆ

ಪರಿಣಾಮಗಳು

- ಚರ್ಮ ಕಪ್ಪುಗಟ್ಟುವುದು
- ಕಣ್ಣಿಗೆ ಹಾನಿ ಮತ್ತು ದೃಷ್ಟಿದೋಷ
- ದೇಹದ ರೋಗನಿರೋಧಕ ಶಕ್ತಿ ಕ್ಷೀಣಿಸುವುದು
- ಚರ್ಮದ ಕ್ಯಾನ್ಸರ್

ವಸ್ತುಸ್ಥಿತಿ ಮತ್ತು ಆಗಬೇಕಾದದ್ದು...

- ವಿಶ್ವದ ಬಹುತೇಕ ದೇಶಗಳಲ್ಲಿ ಅತಿನೇರಳ ಕಿರಣಗಳ ಪರಿಣಾಮಗಳಿಗೆ ಕಾರ್ಮಿಕರು ಗುರಿಯಾಗುವುದನ್ನು ತಡೆಯುವ ಕಾನೂನು ಅಥವಾ ನೀತಿಗಳಿಲ್ಲ. ಭಾರತದಲ್ಲೂ ಇಂತಹ ಪ್ರತ್ಯೇಕ ನೀತಿ ಇಲ್ಲ
- ಅತಿನೇರಳೆ ಕಿರಣಗಳಿಂದ ಕಾರ್ಮಿಕರು ಪಾರಾಗಲು ಕೆಲಸದ ಅವಧಿಯಲ್ಲಿ ಮಾರ್ಪಾಡು ಮಾಡುವುದು ಮತ್ತು ಸಾಮಾನ್ಯ ಪಿಪಿಇ ವಸ್ತ್ರಗಳನ್ನು ಧರಿಸಿದರೆ ಸಾಕಾಗುತ್ತದೆ. ಇಂತಹ ಕೆಲಸವನ್ನು ಉದ್ಯಮ ಸಂಸ್ಥೆಗಳು ಮಾಡುವಂತೆ ಸರ್ಕಾರಗಳು ಕ್ರಮ ತೆಗೆದುಕೊಳ್ಳಬೇಕು
- ಅತಿನೇರಳ ಕಿರಣಗಳಿಂದ ಸಂಭವಿಸುವ ಆರೋಗ್ಯದ ಸಮಸ್ಯೆಗಳನ್ನು ವಿಮಾ ಯೋಜನೆಗಳು ಒಳಗೊಳ್ಳಬೇಕು. ಸರ್ಕಾರಗಳೇ ಚಿಕಿತ್ಸೆಯನ್ನು ಒದಗಿಸುವಂತಹ ಕೆಲಸವಾಗಬೇಕು

ಅತಿಯಾದ ಉಷ್ಣಾಂಶ

ಹವಾಮಾನ ಬದಲಾವಣೆಯ ನೇರ ಪರಿಣಾಮವಿದು. ಜಾಗತಿಕ ತಾಪಮಾನ ಏರಿಕೆಯಾಗುತ್ತಿದೆ. ಇದರ ಪರಿಣಾಮವಾಗಿಯೇ ವಿಶ್ವದ ಬಹುತೇಕ ಕಡೆ ದಿನದ ಗರಿಷ್ಠ ಉಷ್ಣಾಂಶ ಏರಿಕೆಯಾಗುತ್ತಿದೆ. ಹೊರಾಂಗಣದಲ್ಲಿ ಕೆಲಸ ಮಾಡುವಂತಹ ಕಾರ್ಮಿಕರು ಇದರ ಪರಿಣಾಮಕ್ಕೆ ಒಳಗಾಗುತ್ತಿದ್ದಾರೆ. ಕೆಲವು ಕ್ಷೇತ್ರಗಳಲ್ಲಿ ಒಳಾಂಗಣದಲ್ಲಿ ದುಡಿಯುವ ಕಾರ್ಮಿಕರೂ ಇವುಗಳ ಪರಿಣಾಮವನ್ನು ಎದುರಿಸಬೇಕಾಗಿದೆ. ಬಿಸಿಲಿಗೆ ಮೈಯೊಡ್ಡಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆಯೇ ಅಧಿಕ ಇರುವ ಕಾರಣ, ಇದರ ದುಷ್ಪರಿಣಾಮಗಳೂ ಹೆಚ್ಚೇ ಇವೆ

ಯಾರ ಮೇಲೆ ಪರಿಣಾಮ

ಕೃಷಿ ಕಾರ್ಮಿಕರು, ನಿರ್ಮಾಣ ಕ್ಷೇತ್ರದ ಕಾರ್ಮಿಕರು, ದುರಸ್ತಿ ಮತ್ತಿತರ ಸೇವೆ ಒದಗಿಸುವವರು, ಸಾರಿಗೆ ಮತ್ತು ಪ್ರವಾಸೋದ್ಯಮ ಕ್ಷೇತ್ರದಲ್ಲಿ ದುಡಿಯುವವರು, ಪೌರ ಕಾರ್ಮಿಕರು

240 ಕೋಟಿ
ಕಾರ್ಮಿಕರು ತೀವ್ರ ಬಿಸಿಲಿಗೆ ಒಡ್ಡಿಕೊಂಡಿದ್ದಾರೆ

2.28 ಕೋಟಿ
ಕಾರ್ಮಿಕರು ತೀವ್ರ ಬಿಸಿಲಿನ ಕಾರಣಕ್ಕೆ ವಿವಿಧ ಅನಾರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ

18,970 ಹಿಂದಿನ ಒಂದು ವರ್ಷದಲ್ಲಿ ತೀವ್ರ ಬಿಸಿಲಿನ ಕಾರಣದಿಂದ ಮೃತಪಟ್ಟ ಕಾರ್ಮಿಕರ ಸಂಖ್ಯೆ

ಪರಿಣಾಮಗಳು

- ಸೂರ್ಯಾಘಾತ, ಸೂರ್ಯಾಘಾತದಿಂದ ಸಾವು
- ನಿರ್ಜಲೀಕರಣ ಮತ್ತು ಅದರಿಂದ ಸಂಭವಿಸುವ ಸಾವು
- ಅತಿಯಾದ ನಿರ್ಜಲೀಕರಣದಿಂದ ಮೂತ್ರಪಿಂಡಕ್ಕೆ ಹಾನಿ
- ಹೃದಯ ಸಂಬಂಧಿ ಸಮಸ್ಯೆಗಳು

ವಸ್ತುಸ್ಥಿತಿ ಮತ್ತು ಆಗಬೇಕಾದದ್ದು...

- ಕೆಲವು ದೇಶಗಳು ತೀವ್ರ ಬಿಸಿಲನ್ನು ಪ್ರಕೃತಿ ವಿಕೋಪ ಎಂದು ಪರಿಗಣಿಸಿವೆ ಮತ್ತು ತೀವ್ರ ಬಿಸಿಲಿನ ಸಂದರ್ಭದಲ್ಲಿ ಕೆಲಸದ ಅವಧಿಯಲ್ಲಿ ಮಾರ್ಪಾಡು ಮಾಡುತ್ತವೆ
- ಆದರೆ ಭಾರತವೂ ಸೇರಿ ವಿಶ್ವದ ಹಲವು ದೇಶಗಳು ತೀವ್ರ ಬಿಸಿಲಿನ್ನು ಪ್ರಕೃತಿ ವಿಕೋಪ ಎಂದು ವರ್ಗೀಕರಣ ಮಾಡಿಲ್ಲ. ಹೀಗಾಗಿ ತೀವ್ರ ಬಿಸಿಲಿನ ಸಂದರ್ಭವನ್ನು ನಿರ್ವಹಿಸುವ ಒಂದು ಸಮಗ್ರ ಕಾರ್ಯಯೋಜನೆಯನ್ನು ಹೊಂದಿಲ್ಲ
- ಭಾರತದಲ್ಲಿ ತೀವ್ರ ಬಿಸಿಲನ್ನು ಪ್ರಕೃತಿ ವಿಕೋಪ ಎಂದು ಪರಿಗಣಿಸುವ ಬಗ್ಗೆ ಚರ್ಚೆ ಈಚೆಗಷ್ಟೇ ಆರಂಭವಾಗಿದೆ

ರಾಸಾಯನಿಕ ಅವಘಡಗಳು

ಕೈಗಾರಿಕೆಗಳಲ್ಲಿ ಬಳಕೆಯಾಗುವ ರಾಸಾಯನಿಕ ವಸ್ತುಗಳು ಅತಿಯಾದ ಉಷ್ಣಾಂಶದಂತಹ ಹವಾಮಾನ ವೈಪರೀತ್ಯಕ್ಕೆ ತೀವ್ರವಾಗಿ ಸ್ಪಂದಿಸುತ್ತವೆ. ಅಂದರೆ ಉಷ್ಣತೆಯ ವಾತಾವರಣದಲ್ಲಿ ರಾಸಾಯನಿಕ ವಸ್ತುಗಳ ರಾಸಾಯನಿಕ ಚಟುವಟಿಕೆಗಳು ತೀವ್ರವಾಗುತ್ತವೆ. ಪರಿಣಾಮವಾಗಿ ಕಾರ್ಖಾನೆಯ ಒಳಾಂಗಣದ ಉಷ್ಣಾಂಶ ಏರುಪೇರಾಗುವುದು, ವಿಷಗಾಳಿ ಹೊರಹೊಮ್ಮುವಂತಹ ಅಪಾಯದ ಸ್ಥಿತಿ ನಿರ್ಮಾಣವಾಗುತ್ತದೆ. ಅವುಗಳ ಪರಿಣಾಮವನ್ನು ಕಾರ್ಮಿಕರೇ ಎದುರಿಸಬೇಕಾಗುತ್ತದೆ. ಕೃಷಿಯಲ್ಲಿ ಬಳಸುವ ಕ್ರಿಮಿನಾಶಕಗಳೂ ಅತಿಯಾದ ಮಳೆ ಮತ್ತು ಅತಿಯಾದ ಬಿಸಿಯ ಸಂದರ್ಭದಲ್ಲಿ ದುಷ್ಪರಿಣಾಮಗಳನ್ನೇ ಉಂಟು ಮಾಡುತ್ತವೆ

ಯಾರ ಮೇಲೆ ಪರಿಣಾಮ

ಉಷ್ಣ ವಿದ್ಯುತ್ ಸ್ಥಾವರಗಳ ಕಾರ್ಮಿಕರು, ಕಲ್ಲಿದ್ದಲು ಗಣಿ ಕಾರ್ಮಿಕರು, ಉಕ್ಕಿನ ಕಾರ್ಖಾನೆಗಳ ಕಾರ್ಮಿಕರು, ಅಪಾಯಕಾರಿ ರಾಸಾಯನಿಕ ವಸ್ತುಗಳನ್ನು ಬಳಸುವ ಕೈಗಾರಿಕೆಗಳ ಕಾರ್ಮಿಕರು, ಕೃಷಿ ಕಾರ್ಮಿಕರು

3 ಲಕ್ಷ
ಈ ಸ್ವರೂಪದ ಅವಘಡಗಳಿಗೆ ಪ್ರತಿ ವರ್ಷ ಬಲಿಯಾಗುತ್ತಿರುವ ಕಾರ್ಮಿಕರ ಅಂದಾಜು ಸಂಖ್ಯೆ

ಪರಿಣಾಮಗಳು

- ವಿಷಗಾಳಿ ಸೇವನೆಯಿಂದ ಸಾವು
- ಕ್ರಿಮಿನಾಶಕಗಳ ಸಂಪರ್ಕಕ್ಕೆ ಬರುವುದರಿಂದ ಉಸಿರಾಟದ ಸಮಸ್ಯೆ, ಸಾವು
- ನರಮಂಡಲದ ಸಮಸ್ಯೆ
- ಶ್ವಾಸಕೋಶದ ಕ್ಯಾನ್ಸರ್ ಮತ್ತು ಚರ್ಮದ ಕ್ಯಾನ್ಸರ್
- ತೀವ್ರ ಉಸಿರಾಟದ ಸಮಸ್ಯೆ
- ಹೃದಯ ಸಂಬಂಧಿ ಕಾಯಿಲೆಗಳು

ವಸ್ತುಸ್ಥಿತಿ ಮತ್ತು ಆಗಬೇಕಾದದ್ದು...

- ಇಂತಹ ಅವಘಡಗಳನ್ನು ತಡೆಗಟ್ಟುವ ಮತ್ತು ಅವು ಸಂಭವಿಸಿದಾಗ ಅವುಗಳನ್ನು ನಿರ್ವಹಿಸಬೇಕಾದ ಕ್ರಮಗಳ ಬಗ್ಗೆ ಬಹುತೇಕ ದೇಶಗಳು ಕಟ್ಟುನಿಟ್ಟಿನ ಕಾನೂನು ಹೊಂದಿವೆ
- ಹವಾಮಾನ ವೈಪರೀತ್ಯದ ಪರಿಣಾಮಗಳು ತೀವ್ರವಾಗುವುದನ್ನು ತಡೆಯಬೇಕಾದ ಅಗತ್ಯವಿದೆ. ಆ ಮೂಲಕ ಇಂತಹ ಅವಘಡಗಳು ಸಂಭವಿಸುವ ಸಾಧ್ಯತೆಯನ್ನು ಕಡಿಮೆ ಮಾಡಬೇಕಿದೆ

ವಾಯು ಮಾಲಿನ್ಯ

ಕೈಗಾರಿಕೆಗಳು, ವಾಹನಗಳು ಮತ್ತು ನಿರ್ಮಾಣ ಚಟುವಟಿಕೆಗಳಿಂದ ವಾಯುಮಾಲಿನ್ಯ ಉಂಟಾಗುತ್ತದೆ ಎಂಬುದು ನಿಜವಾದರೂ, ಹವಾಮಾನ ವೈಪರೀತ್ಯದ ರೂಪವಾದ ಅತಿಉಷ್ಣತೆಯು ವಾಯುಮಾಲಿನ್ಯದ ತೀವ್ರತೆಯನ್ನು ಹೆಚ್ಚಿಸುತ್ತದೆ. ನಗರ ಮತ್ತು ಕೈಗಾರಿಕಾ ಪ್ರದೇಶಗಳಲ್ಲಿ ಹೊರಾಂಗಣದಲ್ಲಿ ಕೆಲಸ ಮಾಡುವ ಕಾರ್ಮಿಕರೇ ವಾಯುಮಾಲಿನ್ಯಕ್ಕೆ ಹೆಚ್ಚು ಗುರಿಯಾಗುತ್ತಾರೆ

ಯಾರ ಮೇಲೆ ಪರಿಣಾಮ

ಟ್ರಕ್–ಬಸ್ ಚಾಲಕ ಮತ್ತು ಕ್ಲೀನರ್, ಲೋಡಿಂಗ್–ಅನ್‌ಲೋಡಿಂಗ್ ಕಾರ್ಮಿಕರು, ನಿರ್ಮಾಣ ಕಾರ್ಮಿಕರು, ತ್ಯಾಜ್ಯ ನಿರ್ವಹಣೆ ಘಟಕಗಳ ಕಾರ್ಮಿಕರು, ಸಂಚಾರ ಪೊಲೀಸರು, ಅಗ್ನಿಶಾಮಕ ಸಿಬ್ಬಂದಿ

160 ಕೋಟಿಯಷ್ಟು ಕಾರ್ಮಿಕರು ವಾಯುಮಾಲಿನ್ಯ ತೀವ್ರವಾಗಿರುವ ಪರಿಸ್ಥಿತಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ

8.6 ಲಕ್ಷ
2022ರಲ್ಲಿ ವಾಯುಮಾಲಿನ್ಯ ಸಂಬಂಧಿ ಆರೋಗ್ಯದ ಸಮಸ್ಯೆಗಳಿಂದ ಅಕಾಲಿಕವಾಗಿ ಮೃತಪಟ್ಟ ಕಾರ್ಮಿಕರ ಸಂಖ್ಯೆ

ಪರಿಣಾಮಗಳು

- ಶ್ವಾಸಕೋಶದ ಕ್ಯಾನ್ಸರ್
- ಉಸಿರಾಟ ಸಂಬಂಧಿ ಕಾಯಿಲೆಗಳು
- ಹೃದಯ ಸಂಬಂಧಿ ಕಾಯಿಲೆಗಳು

ವಸ್ತುಸ್ಥಿತಿ ಮತ್ತು ಆಗಬೇಕಾದದ್ದು...

- ಬಹುತೇಕ ದೇಶಗಳು ಇದನ್ನೊಂದು ಗಂಭೀರ ಸಮಸ್ಯೆ ಎಂದು ಪರಿಗಣಿಸಿವೆ ಮತ್ತು ನಿಯಂತ್ರಣಕ್ಕೆ ಕ್ರಮ ತೆಗೆದುಕೊಂಡಿವೆ. ಆದರೆ ಅವು ಪೂರ್ಣ ಪ್ರಮಾಣದ ಕ್ರಮಗಳಾಗಿರದೆ, ಸಮಸ್ಯೆ ತೀವ್ರವಾದಾಗ ಜಾರಿಗೆ ಬರುವಂತಹ ಕ್ರಮಗಳಷ್ಟೇ ಆಗಿವೆ
- ದೆಹಲಿಯಂತಹ ನಗರಗಳಲ್ಲಿ ವಾಯುಮಾಲಿನ್ಯದ ಮಟ್ಟ ತೀವ್ರವಾದಾಗ ಮಾತ್ರ ನಿರ್ಮಾಣ ಚಟುವಟಿಕೆಗಳನ್ನು ನಿಯಂತ್ರಿಸಲಾಗುತ್ತದೆ, ಪಟಾಕಿ ಸಿಡಿಸುವುದರ ಮೇಲೆ ನಿರ್ಬಂಧ ಹೇರಲಾಗುತ್ತದೆ. ಆದರೆ ವರ್ಷದ ಬೇರೆ ಅವಧಿಯಲ್ಲಿ ಪಟಾಕಿಗಳ ಮೇಲೆ ಯಾವುದೇ ನಿರ್ಬಂಧ ಇರುವುದಿಲ್ಲ. ಇಂತಹ ಕ್ರಮಗಳ ಬದಲಿಗೆ ಒಂದು ಸಮಗ್ರ ನೀತಿಯ ಅವಶ್ಯಕತೆ ಇದೆ

ಇತರ ಪ್ರಾಕೃತಿಕ ವಿಕೋಪಗಳು

ಚಂಡಮಾರುತ, ಪ್ರವಾಹ, ಭೂಕುಸಿತಗಳಂತಹ ಪ್ರಾಕೃತಿಕ ವಿಕೋಪಗಳು ಕಾರ್ಮಿಕರನ್ನು ಮಾತ್ರವಲ್ಲ, ಎಲ್ಲರನ್ನೂ ಬಾಧಿಸುತ್ತವೆ. ಆದರೆ ಇಂತಹ ವಿಕೋಪಗಳು ಸಂಭವಿಸಿದಾಗ ಅವುಗಳಿಗೆ ಹೆಚ್ಚು ಬಲಿಯಾಗುವುದು ಕಾರ್ಮಿಕರೇ ಆಗಿದ್ದಾರೆ. ಇಂತಹ ವಿಕೋಪಗಳು ಎಲ್ಲಾ ಸಮಯದಲ್ಲೂ ಸಂಭವಿಸುತ್ತವೆ. ಆದರೆ ಹವಾಮಾನ ವೈಪರೀತ್ಯವು ಇಂತಹ ವಿಕೋಪಗಳನ್ನು ಹೆಚ್ಚಿಸುತ್ತದೆ.

ಹವಾಮಾನ ವೈಪರೀತ್ಯದ ಪರಿಣಾಮವಾಗಿ ದಿಢೀರ್ ಪ್ರವಾಹ, ಮೇಘಸ್ಫೋಟ, ಅತಿಯಾದ ಮಳೆಯಿಂದ ಭೂಕುಸಿತದಂತಹ ವಿಕೋಪಗಳು ಸಂಭವಿಸುತ್ತವೆ. ಅತಿಯಾದ ಉಷ್ಣಾಂಶದಿಂದ ಕಾಳ್ಗಿಚ್ಚು ಸಂಭವಿಸುತ್ತದೆ. ಅಂತಹ ಸಂದರ್ಭದಲ್ಲಿ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗುವ ಕಾರ್ಮಿಕರು ಮೃತಪಡುತ್ತಿದ್ದಾರೆ ಮತ್ತು ಆರೋಗ್ಯದ ಸಮಸ್ಯೆಗೆ ಒಳಗಾಗುತ್ತಿದ್ದಾರೆ. ಇವುಗಳನ್ನು ತಡೆಯಲು ಸಾಧ್ಯವಿಲ್ಲವಾದರೂ, ಕಾರ್ಮಿಕರು ಬಲಿಯಾಗುವುದನ್ನು ತಡೆಯಲು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯವಿದೆ

20.6 ಲಕ್ಷ
2019–2021ರ ಅವಧಿಯಲ್ಲಿ ವಿಶ್ವದಾದ್ಯಂತ ರಕ್ಷಣಾ ಕಾರ್ಯಾಚರಣೆ ಮತ್ತು ಮೀನುಗಾರಿಕೆ ವೇಳೆ ಪ್ರಾಕೃತಿಕ ವಿಕೋಪಗಳಿಗೆ ಬಲಿಯಾದ ಕಾರ್ಮಿಕರು

ಯಾರ ಮೇಲೆ ಪರಿಣಾಮ: ಮೀನುಗಾರರು, ಗುಡ್ಡಗಾಡು ಪ್ರದೇಶಗಳಲ್ಲಿ ನಿರ್ಮಾಣ ಚಟುವಟಿಕೆಗಳಲ್ಲಿ ತೊಡಗಿರುವ ಕಾರ್ಮಿಕರು, ರಕ್ಷಣಾ ಸಿಬ್ಬಂದಿ, ವೈದ್ಯಕೀಯ ಸಿಬ್ಬಂದಿ, ಅಗ್ನಿಶಾಮಕ ಸಿಬ್ಬಂದಿ, ಅರಣ್ಯ ಇಲಾಖೆ ಸಿಬ್ಬಂದಿ

ಆಧಾರ: ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ

ಸಿನಿ ಬಿಟ್ಸ್

ವೀರ ಮದಕರಿಯ ಜೆರುಶಾ ಈಗ ನಾಯಕಿ

ಕಿಚ್ಚ ಸುದೀಪ್ ನಟನೆಯ ‘ವೀರ ಮದಕರಿ’ ಸಿನಿಮಾದಲ್ಲಿ ಬಾಲನಟಿಯಾಗಿ ನಟಿಸಿದ್ದ ಜೆರುಶಾ ಇದೀಗ ನಾಯಕಿಯಾಗಿ ಚಂದನವನ ಪ್ರವೇಶಿಸುತ್ತಿದ್ದಾರೆ.

‘ಆಕಾಶ್’, ‘ಅರಸು’ ಮುಂತಾದ ಹಿಟ್ ಸಿನಿಮಾಗಳ ನಿರ್ದೇಶಕ ಮಹೇಶ್ ಬಾಬು ನಿರ್ದೇಶಿಸುತ್ತಿರುವ ಹೊಸ ಸಿನಿಮಾದಲ್ಲಿ ಜೆರುಶಾ ನಟಿಸಲಿದ್ದಾರೆ. ಇತ್ತೀಚೆಗಷ್ಟೇ ‘ಅಪರೂಪ’ ಎಂಬ ಸಿನಿಮಾ ಮೂಲಕ ಯುವ ಪ್ರತಿಭೆಗಳನ್ನು ಸ್ಯಾಂಡಲ್‌ವುಡ್‌ಗೆ ಪರಿಚಯಿಸಿದ್ದ ಮಹೇಶ್ ಬಾಬು ಅವರೀಗ ರಕ್ಷಿತ್ ಎಂಬುವವರನ್ನು ನಾಯಕನಾಗಿ ಚಿತ್ರರಂಗಕ್ಕೆ ಪರಿಚಯಿಸುತ್ತಿದ್ದಾರೆ. ‘ಮೆರವಣಿಗೆ’ ಸಿನಿಮಾ ಮೂಲಕ ಐಂದ್ರಿತಾ ರೇ, ‘ಚಿರು’ ಸಿನಿಮಾ ಮೂಲಕ ಕೃತಿ ಕರಬಂದ, ‘ಕ್ರೇಜಿ ಬಾಯ್’ ಮೂಲಕ ಆಶಿಕಾ ರಂಗನಾಥ್ ಹೀಗೆ ಹಲವು ನಟಿಯರನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದ ಹೆಗ್ಗಳಿಕೆ ಮಹೇಶ್ ಬಾಬು ಅವರದ್ದು. ಜೆರುಶಾ ಅವರಿಗೆ ಬಣ್ಣದ ಲೋಕ ಹೊಸದೇನಲ್ಲ. ಬಾಲನಟಿಯಾಗಿ ನಟಿಸಿ, ಜಾಹೀರಾತುಗಳು ಮತ್ತು ರಂಗಭೂಮಿಯಲ್ಲೂ ಜೆರುಶಾ ಸಕ್ರಿಯರಾಗಿದ್ದಾರೆ. ಡ್ಯಾನ್ಸ್ ರಿಯಾಲಿಟಿ ಶೋಗಳಲ್ಲಿ ಕಾಣಿಸಿಕೊಂಡಿರುವ ರಕ್ಷಿತ್‌ಗೆ ಜೋಡಿಯಾಗಿ ಜೆರುಶಾ ಮಿಂಚಲಿದ್ದಾರೆ. ಚಿತ್ರದ ಪ್ರಮುಖ ಪಾತ್ರವೊಂದಕ್ಕೆ ಮತ್ತೊಬ್ಬ ನಟಿಯ ಆಯ್ಕೆಯಲ್ಲಿ ಮಹೇಶ್ ಬಾಬು ತೊಡಗಿದ್ದಾರೆ. ಈ ಚಿತ್ರಕ್ಕೆ ಶೀರ್ಷಿಕೆ ಇನ್ನಷ್ಟೇ ಅಂತಿಮಗೊಳ್ಳಬೇಕಾಗಿದೆ.

ಯೂತ್‌ಫುಲ್ ಎಂಟರ್‌ಟೈನರ್ ಕಥಾಹಂದರದ ಈ ಚಿತ್ರಕ್ಕೆ ಚೇತನ್ ಮತ್ತು ಅನುರಾಗ್ ಬಂಡವಾಳ ಹೂಡಲಿದ್ದಾರೆ. ಚಿತ್ರಕ್ಕೆ ಅನೂಪ್ ಸೀಳಿನ್ ಸಂಗೀತ ಸಂಯೋಜನೆ ಮತ್ತು ಸತ್ಯ ಛಾಯಾಚಿತ್ರಗ್ರಹಣವಿದೆ. ಬೆಂಗಳೂರು ಮತ್ತು ಸುತ್ತಮುತ್ತ ಮೇ ತಿಂಗಳಿನಿಂದ ಚಿತ್ರೀಕರಣ ಪ್ರಾರಂಭವಾಗಲಿದೆ ಎಂದಿದೆ ಚಿತ್ರತಂಡ.


ರಕ್ಷಿತ್, ಜೆರುಶಾ

‘ರಾಮರಸ’ಕ್ಕೆ ಗಿರಿರಾಜ್ ಆ್ಯಕ್ಷನ್ ಕಟ್

‘ಜಟ್ಟ’, ‘ಮೈತ್ರಿ’ ಚಿತ್ರದ ನಿರ್ದೇಶಕ ಬಿ.ಎಂ. ಗಿರಿರಾಜ್ ನಿರ್ದೇಶನದ ಹೊಸ ಚಿತ್ರದ ಶೀರ್ಷಿಕೆ ಅನಾವರಣಗೊಂಡಿದೆ. ಆ್ಯಕ್ಷನ್ ಪ್ರಿನ್ಸ್ ಧ್ರುವ ಸರ್ಜಾ ‘ರಾಮರಸ’ ಎಂಬ ಟೈಟಲ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು.

ನಿರ್ದೇಶಕ ಹಾಗೂ ನಿರ್ಮಾಪಕ ಗುರು ದೇಶಪಾಂಡೆ ತಮ್ಮ ಜಿ ಸಿನಿಮಾಸ್ ಲಾಂಛನದಲ್ಲಿ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ‘ರಾಮರಸ’ ಹಾರಾರ್ ಕಾಮಿಡಿ ಜಾನರ್‌ನ ಚಿತ್ರ. ಜಿ ಅಕಾಡೆಮಿಯ ಹದಿನಾರು ಜನ ಹೊಸ ಪ್ರತಿಭೆಗಳಿಗೆ ತರಬೇತಿ ನೀಡಿ ಈ ಚಿತ್ರದಲ್ಲಿ ನಟಿಸಲು ಅವಕಾಶ ನೀಡಲಾಗಿದೆ ಎಂದಿದ್ದಾರೆ ಬಿ.ಎಂ. ಗಿರಿರಾಜ್.

‘2008ರಲ್ಲಿ ನಿರ್ದೇಶಕನಾಗಿ ಚಿತ್ರರಂಗ ಪ್ರವೇಶಿಸಿದೆ. ನಮ್ಮ ಜಿ ಸಿನಿಮಾಸ್ ಲಾಂಛನದಲ್ಲಿ ನಾನು ನಿರ್ಮಾಣ ಮಾಡುತ್ತಿರುವ ನಾಲ್ಕನೇ ಸಿನಿಮಾ ಇದಾಗಿದೆ. ಕನ್ನಡದ ಖ್ಯಾತ ನಟರೊಬ್ಬರು ಈ ಸಿನಿಮಾದಲ್ಲಿ ನಟಿಸುತ್ತಿದ್ದು, ಅವರೊಂದಿಗೆ ಮಾತುಕತೆ ಅಂತಿಮ ಹಂತದಲ್ಲಿದೆ. ಮೇ ಎರಡನೇ ವಾರದಿಂದ ಚಿತ್ರೀಕರಣ ಆರಂಭವಾಗಲಿದೆ. ಬಿ.ಜೆ.ಭರತ್ ಈಗಾಗಲೇ ‘ರಾಮರಸ’ದ ಎರಡು ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಪುನೀತ್ ಆರ್ಯ ಹಾಡುಗಳನ್ನು ಬರೆದಿದ್ದಾರೆ’ ಎಂದು ಮಾಹಿತಿ ನೀಡಿದರು ಗುರು ದೇಶಪಾಂಡೆ.


ಗಿರಿರಾಜ್ ಹಾಗೂ ಗುರು ದೇಶಪಾಂಡೆ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದೌರ್ಬಲ್ಯ

ನುಡಿ ಬೆಳಗು




ಪಿ. ಚಂದ್ರಿಕಾ

ದೋಣಿ ನಡೆಸುವವನ ಹತ್ತಿರ ಹುಡುಗನೊಬ್ಬ, ‘ನನ್ನ ಗುರುವನ್ನು ಆಚೆಯ ದಡಕ್ಕೆ ತಲುಪಿಸಬೇಕು ಬರುವೆಯಾ?’ ಎಂದು ಕೇಳಿದ. ದೋಣಿ ನಡೆಸುವವ ಕುಶಾಲಿಗೆಂಬಂತೆ, ‘ನಿನ್ನ ಗುರುವೇ ನನ್ನ ಬಂದು ಕೇಳಬಹುದಿತ್ತಲ್ಲ’ ಎಂದ. ಹುಡುಗ ‘ಅವರು ಸರ್ವಶಕ್ತರು, ಪರಮಜ್ಞಾನಿಗಳು ಇಂಥ ಸಣ್ಣಪುಟ್ಟ ವಿಷಯಗಳ ಬಗ್ಗೆ ಮಾತನಾಡುವುದಿಲ್ಲ’ ಎಂದ ಅಹಂಕಾರದಿಂದ. ಈಗ ದೋಣಿಯವನಿಗೆ ತಮಾಷೆ ಎನ್ನಿಸಿ, ‘ಹಾಗಾದರೆ ಅವರಿಗೆ ನನ್ನಂಥ ಅಲ್ಪಜ್ಞಾನಿಯ ದೋಣಿಯ ಆಸರೆ ಯಾಕೆ ಬೇಕು?’ ಹುಡುಗ ಕೋಪದಿಂದ, ‘ಅಯ್ಯಾ ನನ್ನ ಗುರುಗಳನ್ನು ಏನೆಂದು ತಿಳಿದಿದ್ದೀಯೇ? ಹಿಮಾಲಯದಲ್ಲಿ ತಪಸ್ಸು ಮಾಡಿ ಸಾಧನೆ ಮಾಡಿದ್ದಾರೆ. ಅಂಥ ಗುರುವಿನ ಬಗ್ಗೆ ನೀನು ಹೀಗೆಲ್ಲಾ ಮಾತನಾಡುವುದಾ?’ ಎಂದ. ‘ಹೌದೇ ಹಾಗಿದ್ದರೆ ಈ ಚಿಕ್ಕ ನದಿಯನ್ನು ದಾಟುವುದು ಅವರಿಗೆ ಕಷ್ಟದ ಕೆಲಸವಲ್ಲ’ ಎಂದ ದೋಣಿಯವ. ಹುಡುಗನಿಗೆ ಕೋಪಬಂದು, ‘ಅಯ್ಯಾ ನೀನು ಕರೆದೊಯ್ಯದಿದ್ದರೆ ಬೇಡ ನನ್ನ ಗುರು ಬಂದು ನಿನ್ನ ಬೇಡಲಾರರು’ ಎಂದು ಹುಡುಗ ಗುರುವಿನ ಬಳಿಗೆ ಬಂದ. ‘ಗುರುಗಳೇ ನಿಮಗಂತೂ ಈಜು ಬರುತ್ತದೆ, ನನಗೆ ಸ್ವಲ್ಪ ಮಟ್ಟಿಗೆ ಈಜು ಬರುತ್ತದೆ. ಆ ದೋಣಿಯವ ದುರಹಂಕಾರ ತೋರುತ್ತಿದ್ದಾನೆ. ಆಚೆ ದಡಕ್ಕೆ ಹೋಗೋಣ ಬನ್ನಿ’ ಎಂದ.

ಗುರು ‘ನಾನೆಂದೂ ನೀರಿಗಿಳಿದು ಈಜಿಲ್ಲ. ನಾನು ದೋಣಿಯವನನ್ನು ಆಶ್ರಯಿಸಲೇ ಬೇಕು’ ಎಂದರು. ಹುಡುಗನಿಗೆ ಅಚ್ಚರಿ, ‘ನನಗೆ ಈಜುಬಾರದ ಕಾರಣ ದೋಣಿಯವನನ್ನು ಕೇಳುವಂತೆ ಗುರು ಹೇಳುತ್ತಿದ್ದಾರೆ ಎಂದುಕೊಂಡಿದ್ದ. ಆದರೆ ತಮಗೇ ಬರುವುದಿಲ್ಲವಾ?’ ಎನ್ನಿಸಿ ಖೇದವೆನ್ನಿಸಿತು. ದೋಣಿಯವನೊಂದಿಗೆ ಹೇಗೆಲ್ಲ ಮಾತನಾಡಿದೆ ಮತ್ತೆ ಅವನನ್ನು ಕೇಳುವುದು ಬೇಡವೆನ್ನಿಸಿ, ‘ಗುರುಗಳೇ ಬನ್ನಿ ನನ್ನನ್ನು ಹಿಡಿದುಕೊಳ್ಳಿ ಈಜದಿದ್ದರೂ ನಡೆದೂ ಹೋಗಬಹುದು ನದಿಯಲ್ಲಿ ನೀರೂ ಕಡಿಮೆ ನದಿಯೂ ಸಣ್ಣದು’ ಎನ್ನುತ್ತಾನೆ. ಗಿಡದ ಬೇರನ್ನು ಹಿಡಿದು ನೀರಿಗಿಳಿದ ಗುರು ಭಯಗೊಂಡವನಂತೆ ಕಂಡ. ಪರಮಶಕ್ತನಾಗಿದ್ದ ಗುರು ಈಗ ಹುಡುಗನ ಕಣ್ಣಿಗೆ ಅತ್ಯಂತ ದುರ್ಬಲನಂತೆ ಕಂಡ. ನದಿ ದಾಟಲೇಬೇಕು ಬೇರೆ ದಾರಿಯಿಲ್ಲ.

ಮತ್ತೆ ದೋಣಿಯವನ ಬಳಿಗೆ ಬಂದು ಅತ್ಯಂತ ಕೆಳಧ್ವನಿಯಲ್ಲಿ, ‘ಅಯ್ಯಾ ನನ್ನ ಗುರು ಮಹಾಜ್ಞಾನಿ ಆದರೆ ಅವರಿಗೆ ಈಜು ಬರುವುದಿಲ್ಲ. ದಯಮಾಡಿ ಅವರನ್ನು ಆ ದಡಕ್ಕೆ ದಾಟಿಸು’ ಎಂದ. ‘ಅವರು ಹಾಗೆಂದು ಎಂದಾದರೂ ನಿನ್ನ ಬಳಿ ಹೇಳಿದ್ದರೇ?’ ಎಂದ ದೋಣಿಯವ. ‘ಇಲ್ಲ ನಾನೇ ಅವರ ಬಗ್ಗೆ ಅತಿಯಾದ ಹೆಮ್ಮೆಯಲ್ಲಿ ಈ ಮಾತನ್ನು ಹೇಳಿದ್ದು. ಈಜೂ ಬಾರದಷ್ಟು ದುರ್ಬಲ ಎಂದು ಗೊತ್ತಿರಲಿಲ್ಲ’ ಎಂದ ಹುಡುಗ ಮತ್ತಷ್ಟು ಕುಗ್ಗಿ.

ಅವನ ಸ್ಥಿತಿಯನ್ನು ನೋಡಿ ದೋಣಿಯವನು ‘ನದಿಯೊಂದನ್ನು ದಾಟಲಿಲ್ಲವೆಂದ ತಕ್ಷಣ ಗುರುವನ್ನು ದುರ್ಬಲ ಎಂದುಕೊಳ್ಳಬೇಡ. ಎಲ್ಲರಿಗೂ ಎಲ್ಲವೂ ಬರಬೇಕೆಂದೇನೂ ಇಲ್ಲ. ನಿನಗೆ ಅವರ ಬಗ್ಗೆ ಇರುವ ಹೆಮ್ಮೆ ಅವರು ಹೇಳಿದ್ದನ್ನು ಅತ್ಯಂತ ವಿನಯಪೂರ್ವಕವಾಗಿ ಕಲಿಯುವಂತೆ ಮಾಡಿತು. ನಿನ್ನ ಗುರು ನನ್ನ ಕೇಳುವುದು ಬೇಡ, ನಾನು ದಾಟಿಸುತ್ತೇನೆ. ನಾವು ನಂಬಿದವರಲ್ಲಿ ಮಾತ್ರವಲ್ಲ ಎಲ್ಲರಲ್ಲೂ ಒಂದೊಂದು ಶಕ್ತಿ ಇರುತ್ತದೆ ಯಾವುದೂ ಮೇಲಲ್ಲ ಯಾವುದೂ ಕೀಳಲ್ಲ ಎಂದು ಹೇಳಲಿಕ್ಕೆ ನಿನ್ನ ಜೊತೆ ಇಷ್ಟು ಮಾತನಾಡಿದೆ’ ಎಂದು ಆದರಪೂರ್ವಕವಾಗಿ ಗುರುವನ್ನು ತಾನೇ ಸ್ವತಃ ದೋಣಿಗೆ ಹತ್ತಿಸಿಕೊಂಡ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಏಪ್ರಿಲ್ 23, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ಪೂರ್ಣಿಮಾ ಗಂ. 29-19 ನಕ್ಷತ್ರ: ಚಿತ್ತಾ ಗಂ. 22-32 ಯೋಗ: ವಜ್ರ ಗಂ. 28-56 ಕರಣ : ವಿಷ್ಟಿ ಗಂ. 16-26, ಮೇಷ ಮಾಸದ 11 ನೇ ದಿನ, ಮಳೆನಕ್ಷತ್ರ: ಅಶ್ವಿನಿ 3.
ರಾಹುಕಾಲ : ಮಧ್ಯಾಹ್ನ 03-00 - 04-30
ಸೂರ್ಯೋದಯ : 06-16 **ಸೂರ್ಯಾಸ್ತ :** 06-41
ಮುಸ್ಲಿಂ ದಿನಾಂಕ : 13 ಶವ್ವಾಲ್
ದಿನ ವಿಶೇಷ : ಹನುಮ ಜಯಂತಿ ಅದೃಷ್ಟ ಸಂಖ್ಯೆ : 7, 12

ಮೇಷ: ಯಶಸ್ಸು ಹೊಂದಲು ನೀವು ಅನುಸರಿಸುತ್ತಿರುವ ಹಳೆಯ ದಾರಿ ಬಿಟ್ಟು ಉತ್ತಮ ಹಾಗೂ ಹೊಸ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕು. ಒಡಹುಟ್ಟಿದವರನ್ನು ಹೊರಗಿನವರಂತೆ ಕಾಣುವುದು ಸರಿಯಲ್ಲ.

ವೃಷಭ: ತಿಳಿದು ಮಾಡಿದ ತಪ್ಪಿಗೆ ತುಂಬ ವ್ಯಥೆ ಪಡುತ್ತೀರಿ ಹಾಗೂ ಕ್ಷಮೆ ಕೋರಲು ಬಹಳ ಪ್ರಯತ್ನ ಪಡುತ್ತೀರಿ. ಉದ್ಯೋಗ ಬದಲಾವಣೆ ವಿಚಾರದಲ್ಲಿದ್ದ ಗೊಂದಲ ನಿವಾರಿಸಿಕೊಳ್ಳಲಿದ್ದೀರಿ. ಕೀಲು ನೋವನ್ನು ನಿರ್ಲಕ್ಷಿಸುವುದು ಬೇಡ.

ಮಿಥುನ: ನಿಮ್ಮ ದೈನಂದಿನ ಬದುಕಿನಲ್ಲಿರುವ ವ್ಯಕ್ತಿಗಳ ಸಹವಾಸದಿಂದ ಅಪವಾದಗಳಿಗೆ ಒಳಗಾಗಲಿದ್ದೀರಿ. ಹಿಂದಿನ ಕಹಿ ಘಟನೆಗಳನ್ನು ಮರೆಯಲು ಒಳ್ಳೆಯ ಸಮಯ ಸಿಗಲಿದೆ. ಶ್ರದ್ಧೆಯಿಂದ ಕೆಲಸ ಮಾಡಿದರೆ, ಜಯ ಸಿಗಲಿದೆ.

ಕರ್ಕಾಟಕ: ನಿಮ್ಮ ಸ್ವತಂತ್ರ ಆಲೋಚನೆಯಿಂದ ಮಾಡಿದ ಕೆಲಸಗಳೇ ಹೆಚ್ಚಿನ ಗುಣಮಟ್ಟದ್ದಾಗಿರಲಿದ್ದು, ಬೇರೆಯವರ ಕೆಲಸವನ್ನು ನಕಲು ಮಾಡುವ ಪ್ರಯತ್ನ ಬೇಡ. ಸಂಪಾದಿಸಿದ ಹಣವನ್ನು ಸನ್ಮಾರ್ಗದಲ್ಲಿ ಬಳಸಿ.

ಸಿಂಹ: ಇಂದು ಮಕ್ಕಳ ಆಟೋಪಚಾರಗಳನ್ನು ನೋಡಿದ ನಿಮಗೆ ಬಾಲ್ಯದ ನೆನಪು ಕಾಡಲಿದೆ. ಬಹಳ ದಿನಗಳ ನಂತರ ಕ್ರೀಡೆಗಳಲ್ಲಿ ಹೆಚ್ಚಿನ ಸಮಯ ಕಳೆಯುವಿರಿ. ಮನೆಗೆ ಮಕ್ಕಳ ಆಗಮನದಿಂದ ಹೆಚ್ಚಿನ ಸಂತೋಷವಿರಲಿದೆ.

ಕನ್ಯಾ: ನೂತನ ವಾಹನ ಖರೀದಿಯನ್ನು ಸ್ವಲ್ಪ ದಿನ ಮುಂದೂಡುವುದೇ ಒಳಿತು. ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಕ್ಷೇತ್ರಗಳಿಗೆ ಹೋಗಲು ಬಯಸುವ ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶಕರ ನೆರವು ಸಿಗಲಿದೆ.

ತುಲಾ: ಸಂತೋಷದಲ್ಲಿ ಮೈಮರೆಯುವುದರಿಂದ ಕೆಲವು ವಿಷಯಗಳ ಮೇಲೆ ಗಮನ ಕಡಿಮೆಯಾಗಿ ಎಡವಟ್ಟುಗಳು ಆಗಬಹುದು. ವಿವಾದಾತ್ಮಕ ವಿಷಯದಲ್ಲಿ ಮಧ್ಯಪ್ರವೇಶ ಬೇಡ. ಕೆಟ್ಟವರಾಗಲು ಹೆಚ್ಚು ಸಮಯ ಬೇಕಿಲ್ಲ.

ವೃಶ್ಚಿಕ: ಪ್ರತಿದಿನವೂ ಒಂದೇ ರೀತಿಯ ದಿನಚರಿಯಿಂದ ಬೇಸರವಾಗಲಿದೆ. ಬೇರೆಯವರ ಸಂಸಾರವನ್ನು ಟೀಕಿಸುವ ಮೊದಲು ನಿಮ್ಮ ಸಂಸಾರದ ಕುಂದು-ಕೊರತೆಗಳನ್ನು ನಿವಾರಿಸಿಕೊಳ್ಳುವುದು ಉತ್ತಮ.

ಧನು: ನಿಮ್ಮ ಆವೇಶ, ಆಕ್ರೋಶ ವ್ಯಕ್ತಪಡಿಸಲು ಅದಕ್ಕೆ ಕಾರಣರಲ್ಲದ ವ್ಯಕ್ತಿಗಳನ್ನು ಆರಿಸಬೇಡಿ. ಈಗಾಗಲೇ ಶಿಕ್ಷಣ ಮುಗಿಸಿರುವ ಉದ್ಯೋಗ ಆಕಾಂಕ್ಷಿಗಳಿಗೆ ಒಳ್ಳೆಯ ಸುದ್ದಿ ಸಿಗಲಿದೆ. ಮುಖ್ಯ ವ್ಯಕ್ತಿಗಳ ಭೇಟಿಯ ಸಾಧ್ಯತೆ ಇದೆ.

ಮಕರ: ಜ್ಞಾನಿಗಳಿಗೆ ಇಂದು ನಿಮ್ಮ ಪರಂಪರೆ ಉಳಿಸಲು ಯೋಗ್ಯವಾದಂಥ ಶಿಷ್ಯನನ್ನು ಕಂಡುಕೊಳ್ಳುವ ಸಾಧ್ಯತೆ ಇದೆ. ಸರ್ಕಾರಿ ಹುದ್ದೆಯಲ್ಲಿದ್ದು, ಉನ್ನತ ಮಟ್ಟದ ಪದವಿಗೆ ಪ್ರಯತ್ನ ಪಡುತ್ತಿರುವವರಿಗೆ ಶುಭವಾಗಲಿದೆ.

ಕುಂಭ: ನಿಮ್ಮ ಬದಲಾಗುತ್ತಿರುವ ಮನಃಸ್ಥಿತಿಯಿಂದಾಗಿ ನಿಮ್ಮ ನಿಕಟವರ್ತಿಗಳಿಗೆ ಗೋಳು ಎನ್ನಿಸಬಹುದು. ನಿಮ್ಮ ಮಕ್ಕಳ ಅಗತ್ಯಗಳನ್ನು ಪೂರೈಸಿ. ಮನೆಯ ಹಿರಿಯರಿಗೆ ಸರಿಯಾದ ಗೌರವ ಮತ್ತು ಮನ್ನಣೆ ನೀಡಬೇಕು.


ಮೀನ: ದಿನವೂ ದೇವರನ್ನು ಸ್ತುತಿಸಿದ ನಿಮಗೆ ಅದರ ಪುಣ್ಯಫಲಗಳ ಅನುಭವ ನಿಮ್ಮ ಮಕ್ಕಳ ಮೂಲಕ ತಿಳಿಯಲ್ಪಡುತ್ತದೆ. ಒಪ್ಪಂದ ವ್ಯವಹಾರಗಳಿಂದ ವರಮಾನ ಹೆಚ್ಚಲಿದೆ. ಬಡ ವಿದ್ಯಾರ್ಥಿಗೆ ಕೈಲಾದ ಧನ ಸಹಾಯ ಮಾಡಿ.

ಪದಬಂಧ 5659

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಹಾಜರು ಇದ್ದರೂ ಇದು ಅನುಪಸ್ಥಿತಿ! (5)
3. ಮಾಸದ ಕೊನೆಗೆ ಒಂದಾಗಿ ಸೇರಿಸಿದು (3)
5. ಅರಿವು ಇಲ್ಲಿ ಉಲ್ಟಾಪಲ್ಟಾ ಆಗಿದೆ (2)
7. ನೆಲ ಅಥವಾ ಬೆಟ್ಟದಲ್ಲಿ ಕೊರೆದು ಮಾಡಿದ ದಾರಿ (3)
8. ತಪ್ಪಾಗಿ ಭಾವಿಸುವಿಕೆ (5)
11. ಭಾರವಲ್ಲದ್ದು ಇದು (3)
12. ಹಸುಬೆ ಚೀಲದ ಹತ್ತಿರ ಕಾಣಿಸಿದ ಆವಿ (2)
14. ಈತ ಜಿಪುಣನೇ ಬಿಡಿ! (3)
15. ಪ್ರಾರಂಭಕ್ಕೊಂದು ಪರ್ಯಾಯ ಪದ (5)

ಮೇಲಿಂದ ಕೆಳಕ್ಕೆ
1. ತಪ್ಪು ಜಾಗಕ್ಕೆ ಹೋಗುವುದು (4)
2. ಜೋಪಾನ ಎಂದು ಹೀಗೆ ಹೇಳಿ (3)
4. ಸಭೆ ನಡೆಯುತ್ತಿರುವ ಜಾಗ (4)
6. ದಾಯಾದಿಗಳ ಜಗಳ (5)
7. ಉಲ್ಟಾ ಪಲ್ಟಾ ವಾಸಮಾಡು! (3)
8. ವರನು ಹಿಡಿದಿರುವ ಲೋಹ (3)
9. ಕಂದಾಯವನ್ನು ವಸೂಲು ಮಾಡುವುದು (4)
10. ಅವನ ಕೆಟ್ಟ ಸ್ವಭಾವ (4)
13. ಪ್ರಕಾಶ ಇಲ್ಲಿ ಕಾಣುತ್ತಿದೆ (3)



5658ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1. ಉಪವಾಸ 3. ನಡುಮನೆ
5. ತಿಗುರಿ 6. ರಿಕಾಪು
8. ಕದಪು 9. ಅಂಕ
10. ತಾಸು 11. ನಮಿಸು
12. ನಲ್ಗತೆ 14. ಚರಕ
16. ಗ್ರಹಚಾರ 17. ಚಮತ್ಕಾರ

ಮೇಲಿಂದ ಕೆಳಕ್ಕೆ
1. ಉದಾರಿ 2. ಸತಿ
3. ನರಿ 4. ನೆನಪು
7. ಪುಷ್ಟೀಕರಿಸು 8. ಕರತಾಡನ
11. ನಖಾಗ್ರ 13. ತೆಪರ
14. ಚರ 15. ಕಚ

ಸುಡೊಕು 6044

7		5	9					
					2		9	
2		9	3	7		5		4
9		4						2
			4	6	9	1		
	3					9		6
4					8		7	
		1	7			2		3
8		2		5			1	9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6043 ಸುಡೊಕು

2	5	4	6	9	1	7	8	3
6	1	8	4	3	7	9	5	2
7	3	9	2	5	8	4	6	1
4	9	1	3	2	5	8	7	6
3	8	7	1	4	6	5	2	9
5	2	6	8	7	9	1	3	4
1	6	5	9	8	2	3	4	7
9	7	3	5	6	4	2	1	8
8	4	2	7	1	3	6	9	5



ಪ್ರಜಾ ಮತ 2024
ಜನತಂತ್ರದ ಹಬ್ಬ



ಮೊದಲ ಮತದ ಸಂಭ್ರಮ



ರಕ್ಷಿತ್ ಎನ್.ಹರಪನಹಳ್ಳಿ, ಕಾರವಾರ.
ಮೊದಲ ಸಲ ಮತದಾನದ ಹಕ್ಕು ಚಲಾಯಿಸುವ ಖುಷಿಯಿದೆ. ಜವಾಬ್ದಾರಿಯಿಂದ ಮತ ಚಲಾಯಿಸುವೆ. ಜನರ ಕಷ್ಟಗಳಿಗೆ ಸ್ಪಂದಿಸುವವರು ಆಡಳಿತ ನಡೆಸಬೇಕು. ಬಡವರ ಪರ ಕಾಳಜಿಯುಳ್ಳವರು, ರೈತರ ಸಂಕಷ್ಟಗಳಿಗೆ ನೆರವಾಗುವವರು, ಜನಸಾಮಾನ್ಯರ ಬದುಕನ್ನು ಸುಧಾರಿಸುವವರನ್ನು ಜನಪ್ರತಿನಿಧಿಗಳನ್ನಾಗಿ ಆಯ್ಕೆ ಮಾಡಬೇಕು. ಮತದಾನಕ್ಕೆ ಇನ್ನೂ ಕೆಲ ದಿನಗಳಿವೆ. ಯೋಚಿಸಿ ಮತ ಚಲಾಯಿಸುವೆ.



ಜ್ಞಾನಶ್ರೀ ವಿ. ಗಿಡಪ್ಪನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ)
ಮೊದಲ ಬಾರಿಗೆ ಮತದಾನ ಮಾಡುತ್ತಿರುವುದು ಖುಷಿ ಅನಿಸುತ್ತಿದೆ. ಅದರಲ್ಲೂ ಲೋಕಸಭೆಗೆ ಮತದಾನ ಮಾಡುತ್ತಿರುವುದು ಇನ್ನಷ್ಟು ಸಂತಸದ ವಿಷಯ. ಸದೃಢ ರಾಷ್ಟ್ರ ನಿರ್ಮಾಣ, ಪ್ರಜಾಪ್ರಭುತ್ವ ಆಶಯ ಎತ್ತಿ ಹಿಡಿಯಲು ಮತದಾನ ಮೂಲಕ ನನ್ನ ಹಕ್ಕು ಚಲಾಯಿಸುವ ಅವಕಾಶಕ್ಕಾಗಿ ಕಾಯುತ್ತಿದ್ದೇನೆ. ಉತ್ತಮ ರಾಷ್ಟ್ರ ನಿರ್ಮಾಣ ಕನಸು ಹೊತ್ತವರಿಗೆ, ಸಮಗ್ರ ಅಭಿವೃದ್ಧಿಗೆ ನನ್ನ ಮತ.

ಮತ ಆಮಿಷ: ಆಯೋಗದ ವಶ

₹78.75 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹80.41 ಕೋಟಿ
ಮದ್ಯ	₹177.39 ಕೋಟಿ (1.46 ಕೋಟಿ ಲೀ)
ಮಾದಕವಸ್ತು	₹11.24 ಕೋಟಿ (531 ಕೆ.ಜಿ.)
ಚಿನ್ನ	₹57.67 ಕೋಟಿ (108.48 ಕೆ.ಜಿ.)
ಬೆಳ್ಳಿ	₹1.18 ಕೋಟಿ (301.89 ಕೆ.ಜಿ.)

12ರಲ್ಲಿ ನೇರ ಹಣಾಹಣಿ 2 ಕಡೆ ತ್ರಿಕೋನ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಎರಡನೇ ಹಂತದಲ್ಲಿ ಮತದಾನ ನಡೆಯುವ 14 ಲೋಕಸಭಾ ಕ್ಷೇತ್ರಗಳಲ್ಲಿ ನಾಮಪತ್ರ ಹಿಂಪಡೆಯುವ ಅವಧಿ ಸೋಮವಾರ ಪೂರ್ಣಗೊಂಡಿದ್ದು, ಒಟ್ಟು 227 ಮಂದಿ ಕಣದಲ್ಲಿ ಉಳಿದಿದ್ದಾರೆ. 12 ಕ್ಷೇತ್ರಗಳಲ್ಲಿ ಕಾಂಗ್ರೆಸ್–ಬಿಜೆಪಿ ಮಧ್ಯೆ ನೇರ ಹಣಾಹಣಿ ಇದ್ದರೆ, ಎರಡೂ ಪಕ್ಷಗಳು ತಲಾ ಒಂದು ಕ್ಷೇತ್ರದಲ್ಲಿ ಬಂಡಾಯ ಎದುರಿಸುತ್ತಿವೆ.

ಮೇ 7ರಂದು ಮತದಾನ ನಡೆಯಲಿರುವ 14 ಕ್ಷೇತ್ರಗಳಲ್ಲಿ ಏಪ್ರಿಲ್ 12ರಂದು ನಾಮಪತ್ರ ಸಲ್ಲಿಕೆ ಆರಂಭವಾಗಿ, ಏ.19ಕ್ಕೆ ಕೊನೆಗೊಂಡಿತ್ತು. ಒಟ್ಟು 335 ಮಂದಿ ನಾಮಪತ್ರ ಸಲ್ಲಿಸಿದ್ದರು. ಈ ಪೈಕಿ 272 ಅಭ್ಯರ್ಥಿಗಳ ನಾಮಪತ್ರಗಳು ಸ್ವೀಕೃತವಾಗಿದ್ದವು. ಸೋಮವಾರ 45 ಮಂದಿ ನಾಮಪತ್ರಗಳನ್ನು ಹಿಂಪಡೆದರು.

2ನೇ ಹಂತ: 14 ಕ್ಷೇತ್ರಗಳ ಕಣ ಅಂತಿಮ

ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವಿರುದ್ಧ ಬಂಡಾಯ ಸಾರಿ ಕಣಕ್ಕಿಳಿದಿದ್ದ ಶಿರಹಟ್ಟಿ ಫಕೀರೇಶ್ವರ ಮಠದ ದಿಂಗಾಲೇಶ್ವರ ಸ್ವಾಮೀಜಿ ನಾಮಪತ್ರ ವಾಪಸ್ ಪಡೆದಿದ್ದಾರೆ. ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಬಿ.ವೈ. ರಾಘವೇಂದ್ರ ವಿರುದ್ಧ ಬಂಡಾಯ ಎದ್ದಿರುವ ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಕಣದಲ್ಲಿ ಮುಂದುವರಿದಿದ್ದಾರೆ. ದಾವಣಗೆರೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ ವಿರುದ್ಧ ಬಂಡಾಯ ಸಾರಿರುವ ಜಿ.ಬಿ. ವಿನಯಕುಮಾರ್ ಮನವೊಲಿಕೆಗೆ ಮಣಿಯದೇ ಸ್ಪರ್ಧೆಯಲ್ಲಿ ಉಳಿದಿದ್ದಾರೆ.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಸಂಘರ್ಷಕ್ಕೆ ಇಳಿದಿರುವ ಈಶ್ವರಪ್ಪ ಅವರಿಗೆ ಕಬ್ಬು ಹಿಡಿದಿರುವ ರೈತನ ಚಿಹ್ನೆ ದೊರಕಿದೆ.

ಒಳ ಬಂಡಾಯದ ಭೀತಿ: ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳು ಕೆಲವು ಕ್ಷೇತ್ರಗಳಲ್ಲಿ ಒಳ ಬಂಡಾಯದ ಭೀತಿ ಎದುರಿಸುತ್ತಿವೆ. ಪಕ್ಷದ ಕೆಲವು ನಾಯಕರು ಚುನಾವಣಾ ಪ್ರಚಾರದಿಂದ ದೂರ ಉಳಿದಿದ್ದಾರೆ.

ಚಿಕ್ಕೋಡಿ ಕ್ಷೇತ್ರದಲ್ಲಿ ಬಿಜೆಪಿ ಶಾಸಕರಾದ ರಮೇಶ ಜಾರಕಿಹೊಳಿ, ಬಾಲಚಂದ್ರ ಜಾರಕಿಹೊಳಿ, ಪಕ್ಷದ ನಾಯಕರಾದ ರಮೇಶ ಕತ್ತಿ ಮತ್ತು ಪ್ರಭಾಕರ ಕೋರೆ ಅವರು ಅಣ್ಣಾ ಸಾಹೇಬ ಜೊಲ್ಲೆ ಪರ ಪ್ರಚಾರದಿಂದ ದೂರ ಉಳಿದಿದ್ದಾರೆ. ಉತ್ತರ ಕನ್ನಡ ಕ್ಷೇತ್ರದಲ್ಲಿ ಹಾಲಿ ಸಂಸದ ಅನಂತ ಕುಮಾರ ಹೆಗಡೆ ಮತ್ತು ಯಲ್ಲಾಪುರ ಶಾಸಕ ಶಿವರಾಂ ಹೆಬ್ಬಾರ್ ಅವರು ಬಿಜೆಪಿ ಅಭ್ಯರ್ಥಿ ವಿಶ್ವೇಶ್ವರ ಹೆಗಡೆ ಕಾಗೇರಿ ಪರ ಪ್ರಚಾರಕ್ಕೆ ಬರುತ್ತಿಲ್ಲ. ಹೆಬ್ಬಾರ್ ಮಗ ಕಾಂಗ್ರೆಸ್ ಸೇರಿದ್ದಾರೆ.

ಬಾಗಲಕೋಟೆಯಲ್ಲಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ವೀಣಾ ಕಾಶಪ್ಪನವರ ಪಕ್ಷದ ಅಭ್ಯರ್ಥಿ ಸಂಯುಕ್ತಾ ಪಾಟೀಲ ಪರ ಪ್ರಚಾರ ನಡೆಸುತ್ತಿಲ್ಲ.

ಈ ಚುನಾವಣೆ ಯಾರಿಗೆ ಸವಾಲು?

- ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ತಮ್ಮ ಕುಟುಂಬದ ಸದಸ್ಯ ಬಿ.ವೈ. ರಾಘವೇಂದ್ರ ಅವರನ್ನು ಗೆಲ್ಲಿಸಿಕೊಳ್ಳುವುದರ ಜತೆಯಲ್ಲಿ ಲಿಂಗಾಯತ ಮತದಾರರ ಪ್ರಾಬಲ್ಯವಿರುವ ಕ್ಷೇತ್ರಗಳೂ ಸೇರಿದಂತೆ ಹೆಚ್ಚಿನ ಕ್ಷೇತ್ರಗಳಲ್ಲಿ ಬಿಜೆಪಿಯನ್ನು ಗೆಲ್ಲಿಸಿಕೊಳ್ಳುವ ಸವಾಲು
- ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಹಾವೇರಿಯಲ್ಲಿ, ಜಗದೀಶ ಶೆಟ್ಟರ ಬೆಳಗಾವಿಯಲ್ಲಿ ಸ್ಪರ್ಧಿಸಿದ್ದು, ಗೆದ್ದು ಪಕ್ಷದ ವರಿಷ್ಠರ ವಿಶ್ವಾಸ ಉಳಿಸಿಕೊಳ್ಳಬೇಕಿದೆ
- ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ ಧಾರವಾಡದಲ್ಲಿ, ಭಗವಂತ ಖೂಬಾ ಬೀದರ್‌ನಲ್ಲಿ ಕಣದಲ್ಲಿದ್ದು, ತಮ್ಮ ಸಾಧನೆಗಳನ್ನು ಮತದಾರರ ಮುಂದಿಟ್ಟು ಗೆಲ್ಲಬೇಕಾದ ಸವಾಲು
- ಮಕ್ಕಳನ್ನು ಚುನಾವಣಾ ಕಣಕ್ಕಿಳಿಸಿರುವ ರಾಜ್ಯದ ಸಚಿವರಾದ ಸತೀಶ ಜಾರಕಿಹೊಳಿ (ಚಿಕ್ಕೋಡಿ), ಲಕ್ಷ್ಮಿ ಹೆಬ್ಬಾಳ್ಕರ (ಬೆಳಗಾವಿ), ಈಶ್ವರ ಖಂಡ್ರೆ (ಬೀದರ್), ಶಿವಾನಂದ ಪಾಟೀಲ (ಬಾಗಲಕೋಟೆ) ಕಾಂಗ್ರೆಸ್ ಪಕ್ಷವನ್ನು ಗೆಲುವಿನ ದಡ ಮುಟ್ಟಿಸಬೇಕಿದೆ
- ಪತ್ನಿಯನ್ನು ಕಣಕ್ಕಿಳಿಸಿರುವ ಎಸ್.ಎಸ್. ಮಲ್ಲಿಕಾರ್ಜುನ (ದಾವಣಗೆರೆ), ಅಕ್ಕನನ್ನು ಕಣಕ್ಕಿಳಿಸಿರುವ ಮಧು ಬಂಗಾರಪ್ಪ (ಶಿವಮೊಗ್ಗ) ಅವರು ತಮ್ಮ ಎದುರಾಳಿಗಳನ್ನು ಮಣಿಸಿ ತಮ್ಮ ಶಕ್ತಿ ತೋರಿಸಬೇಕಿದೆ
- ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಮ್ಮ ಅಳಿಯನನ್ನು ಕಲುಬುರಗಿಯಲ್ಲಿ ಕಣಕ್ಕೆ ಇಳಿಸಿದ್ದಾರೆ. ಖರ್ಗೆ ಹಾಗೂ ಸಚಿವ ಪ್ರಿಯಾಂಕ್ ಖರ್ಗೆಗೆ ಅವರಿಗೆ ತಮ್ಮ ಸಾಮರ್ಥ್ಯವನ್ನು ಪಣಕ್ಕಿಡುವ ಸವಾಲು ಎದುರಾಗಿದೆ
- ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಸತೀಶ ಜಾರಕಿಹೊಳಿ ಅವರಿಗೆ ಜಿಲ್ಲೆಯ ಎರಡೂ ಕ್ಷೇತ್ರಗಳಲ್ಲಿ 'ಕೈ' ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬರಬೇಕಾದ ಸವಾಲು ಕೂಡ ಇದೆ
- ವಿಧಾನಸಭೆ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನ ಗೆದ್ದಿರುವ ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯನ್ನು ಗೆಲ್ಲುವ ಸವಾಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೂ ಇದೆ

ನೇರ ಹಣಾಹಣಿಯ ಕ್ಷೇತ್ರಗಳು

ಕ್ಷೇತ್ರ	ಬಿಜೆಪಿ	ಕಾಂಗ್ರೆಸ್
ಚಿಕ್ಕೋಡಿ	ಅಣ್ಣಾಸಾಹೇಬ ಜೊಲ್ಲೆ	ಪ್ರಿಯಾಂಕಾ ಜಾರಕಿಹೊಳಿ
ಬೆಳಗಾವಿ	ಜಗದೀಶ ಶೆಟ್ಟರ್	ಮೃಣಾಲ್ ಹೆಬ್ಬಾಳ್ಕರ
ಬಾಗಲಕೋಟೆ	ಪಿ.ಸಿ.ಗದ್ದಿಗೌಡರ	ಸಂಯುಕ್ತಾ ಪಾಟೀಲ
ವಿಜಯಪುರ	ರಮೇಶ ಜಿಗಜಿಣಗಿ	ರಾಜು ಆಲಗೂರ
ಕಲಬುರಗಿ	ಡಾ. ಉಮೇಶ್ ಜಾಧವ್	ರಾಧಾಕೃಷ್ಣ ದೊಡ್ಡಮನಿ
ರಾಯಚೂರು	ರಾಜಾ ಅಮರೇಶ್ವರ ನಾಯಕ	ಜಿ. ಕುಮಾರ ನಾಯಕ
ಬೀದರ್	ಭಗವಂತ ಖೂಬಾ	ಸಾಗರ್ ಖಂಡ್ರೆ
ಕೊಪ್ಪಳ	ಡಾ.ಬಸವರಾಜ್ ಕ್ಯಾವಟರ್	ರಾಜಶೇಖರ ಹಿಟ್ನಾಳ
ಬಳ್ಳಾರಿ	ಬಿ. ಶ್ರೀರಾಮುಲು	ಇ. ತುಕಾರಾಂ
ಹಾವೇರಿ	ಬಸವರಾಜ ಬೊಮ್ಮಾಯಿ	ಆನಂದ ಗಡ್ಡದೇವರಮಠ
ಧಾರವಾಡ	ಪ್ರಲ್ಹಾದ ಜೋಶಿ	ವಿನೋದ್ ಅಸೂಟಿ
ಉತ್ತರ ಕನ್ನಡ	ವಿಶ್ವೇಶ್ವರ ಹೆಗಡೆ ಕಾಗೇರಿ	ಡಾ. ಅಂಜಲಿ ನಿಂಬಾಳ್ಕರ್

ತ್ರಿಕೋನ ಸ್ಪರ್ಧೆಯ ಕ್ಷೇತ್ರಗಳು

ಕ್ಷೇತ್ರ	ಬಿಜೆಪಿ	ಕಾಂಗ್ರೆಸ್	ಬಂಡಾಯ
ದಾವಣಗೆರೆ	ಗಾಯತ್ರಿ ಸಿದ್ದೇಶ್ವರ	ಡಾ.ಪ್ರಭಾ ಮಲ್ಲಿಕಾರ್ಜುನ	ಜಿ.ಬಿ. ವಿನಯಕುಮಾರ್
ಶಿವಮೊಗ್ಗ	ಬಿ.ವೈ. ರಾಘವೇಂದ್ರ	ಗೀತಾ ಶಿವರಾಜ್ ಕುಮಾರ್	ಕೆ.ಎಸ್. ಈಶ್ವರಪ್ಪ

227 ಕಣದಲ್ಲಿ ಉಳಿದ ಒಟ್ಟು ಅಭ್ಯರ್ಥಿಗಳು

206 ಪುರುಷರು | **21** ಮಹಿಳೆಯರು

ಪ್ರಜ್ವಲ್ ರೇವಣ್ಣ ಪರ ಪ್ರಚಾರ ಸಭೆಯಲ್ಲಿ ಬಿ.ಎಸ್. ಯಡಿಯೂರಪ್ಪ

'ಜನಹಿತ ಕಾಯುವಲ್ಲಿ 'ಕೈ' ಸರ್ಕಾರ ವಿಫಲ

ಪ್ರಜಾವಾಣಿ ವಾರ್ತೆ

ಹಳೇಬೀಡು (ಹಾಸನ ಜಿಲ್ಲೆ): 'ರಾಜ್ಯ ಸರ್ಕಾರವು ಜನಹಿತ ಕಾಪಾಡುವಲ್ಲಿ ವಿಫಲವಾಗಿದೆ. ಕಾಂಗ್ರೆಸ್‌ನಿಂದ ಜನ ಬೇಸತ್ತಿದ್ದಾರೆ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಪ್ರತಿಪಾದಿಸಿದರು.

ಇಲ್ಲಿನ ಕಲ್ಪತರು ಶಾಲೆ ಆವರಣದಲ್ಲಿ ಸೋಮವಾರ ಪ್ರಜ್ವಲ್ ರೇವಣ್ಣ ಪರ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿ, 'ಕಾಂಗ್ರೆಸ್ ಸುಳ್ಳು ಭರವಸೆ ಕೊಡುತ್ತಿದೆ. ಅಧಿಕಾರಕ್ಕೆ ಬಂದಾಗಿನಿಂದ ರಾಜ್ಯದಲ್ಲಿ ಹೊಸ ರಸ್ತೆ ನಿರ್ಮಾಣ ಆಗುವುದಿರಲಿ, ರಸ್ತೆ ಗುಂಡಿಯನ್ನೂ ಮುಚ್ಚಿಲ್ಲ. ಕೇಂದ್ರ ಸರ್ಕಾರ ಕೆ.ಜಿ.ಗೆ ₹29ರಂತೆ ಅಕ್ಕಿ ಕೊಡುತ್ತಿದೆ. ಪಡಿತರ ಅಕ್ಕಿ ಕೇಂದ್ರದಿಂದ ಬರುತ್ತಿದ್ದು, ಸಿದ್ದರಾಮಯ್ಯ ರಾಜ್ಯ ಸರ್ಕಾರದ ಅಕ್ಕಿ ಎಂದು ಸುಳ್ಳು ಪ್ರಚಾರ ನಡೆಸುತ್ತಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ 10 ತಿಂಗಳಿನಿಂದ ಯಾವ ಜನೋಪಯೋಗಿ ಕೆಲಸ ಮಾಡಿದೆ' ಎಂದು ಪ್ರಶ್ನಿಸಿದರು.

'ಕೇಂದ್ರ ಸರ್ಕಾರ ಗ್ರಾಮ ಸಡಕ್ ಯೋಜನೆ ಅಡಿಯಲ್ಲಿ ಹಳ್ಳಿಗಳಿಗೆ ರಸ್ತೆ ನಿರ್ಮಿಸಲಾಗುತ್ತಿದೆ. ಜಲಜೀವನ್ ಮಿಷನ್ ಅಡಿ ಮನೆ ಬಾಗಿಲಿಗೆ ನೀರು ಕೊಡುತ್ತಿದೆ. ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿ ಆಗಲಿದ್ದಾರೆ ಎಂಬ ಮಾತು ಎಲ್ಲರಿಂದ ಕೇಳಿ ಬರುತ್ತಿದೆ. ಮೋದಿ ಅವರಿಗೆ ಭಾರತದಲ್ಲಿ ಪ್ರತಿಸ್ಪರ್ಧಿಯೇ ಇಲ್ಲ' ಎಂದು ಹೇಳಿದರು.



ಹಳೇಬೀಡಿನ ಕಲ್ಪತರು ಶಾಲೆ ಆವರಣದಲ್ಲಿ ಸೋಮವಾರ ನಡೆದ ಚುನಾವಣಾ ಪ್ರಚಾರದ ಸಭೆಯನ್ನು ದೇವೇಗೌಡ ಹಾಗೂ ಯಡಿಯೂರಪ್ಪ ಉದ್ಘಾಟಿಸಿದರು

ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಮಾತನಾಡಿ, 'ರಾಜ್ಯದ ಎಲ್ಲ 28 ಲೋಕಸಭಾ ಕ್ಷೇತ್ರದಲ್ಲಿ ಎನ್.ಡಿ.ಎ ಮೈತ್ರಿಕೂಟ ಗೆಲವು ಸಾಧಿಸುವಂತೆ ಎರಡೂ ಪಕ್ಷದವರು ಹೆಜ್ಜೆ ಹಾಕಿದ್ದೇವೆ. ಚಿಕ್ಕಮಗಳೂರಿಗೆ ಕುಡಿಯುವ ನೀರು ಪೂರೈಸಲೆಂದೇ ಯಗಚಿ ಅಣೆಕಟ್ಟೆ ನಿರ್ಮಿಸಲಾಗಿದೆ. ಇದು ನಮ್ಮ ಅಭಿವೃದ್ಧಿ ಕೆಲಸ. ಅಣೆಕಟ್ಟೆಯಿಂದ ಬೇಲೂರು ತಾಲ್ಲೂಕಿನಲ್ಲಿಯೂ ನೀರು ಬಳಸಲು ಅವಕಾಶವಿದೆ' ಎಂದು ಹೇಳಿದರು.

'ರಾಜ್ಯಸಭೆಯಲ್ಲಿ ಇನ್ನೂ ಎರಡು ವರ್ಷ ನನ್ನ ಅಧಿಕಾರವಿದೆ. ನರೇಂದ್ರ ಮೋದಿ ಅವರೊಂದಿಗೆ ಅಭಿವೃದ್ಧಿ ಕೆಲಸ ಮಾಡುತ್ತೇವೆ. ಎಲ್ಲ ಕ್ಷೇತ್ರದಲ್ಲಿಯೂ ಮೈತ್ರಿ ಅಭ್ಯರ್ಥಿ ಗೆಲ್ಲಿಸಲು ಪಣ ತೊಟ್ಟಿದ್ದೇವೆ. ಬಿಜೆಪಿ -ಜೆಡಿಎಸ್ ಕಾರ್ಯಕರ್ತರು ನಿಷ್ಠೆಯಿಂದ ಕೆಲಸ ಮಾಡುತ್ತಿದ್ದಾರೆ' ಎಂದರು.

> ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರವು ಜನಪರವಾಗಿ ಕೆಲಸ ಮಾಡುತ್ತಿಲ್ಲ. ಲೋಕಸಭಾ ಚುನಾವಣೆ ನಂತರ ರಾಜ್ಯ ಸರ್ಕಾರಕ್ಕೆ ಉಳಿಗಾಲವಿಲ್ಲ
> **ಎಚ್.ಡಿ.ದೇವೇಗೌಡ,** ಜೆಡಿಎಸ್ ವರಿಷ್ಠ

> ಕುಮಾರಸ್ವಾಮಿಗೆ ಅವರಿಗೆ ಕೇಂದ್ರದಲ್ಲಿ ಉನ್ನತ ಸ್ಥಾನ ದೊರಕಲಿದ್ದು, ರಾಜ್ಯದ ಅಭಿವೃದ್ಧಿಗೆ ವರದಾನ ಆಗಲಿದೆ
> **ಬಿ.ಎಸ್.ಯಡಿಯೂರಪ್ಪ,** ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

'ಕಾಂಗ್ರೆಸ್ ಬಗ್ಗೆ ಜನರಲ್ಲಿ ಒಳ್ಳೆಯ ಅಭಿಪ್ರಾಯ ಇಲ್ಲ. ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿಯನ್ನು ಜನ ಒಪ್ಪಿಕೊಂಡಿದ್ದಾರೆ. ಉತ್ತಮ ಅಭಿಪ್ರಾಯ ವ್ಯಕ್ತವಾಗಿದೆ' ಎಂದರು.

ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಎಸ್.ಲಿಂಗೇಶ್ ಮಾತನಾಡಿ, 'ರಣಘಟ್ಟ ಯೋಜನೆಗೆ ದೇವೇಗೌಡರು ಮೊದಲು ಆಸಕ್ತಿ ವಹಿಸಿದ್ದರು. ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಹಣ ಬಿಡುಗಡೆ ಮಾಡಿದರು. ಯಡಿಯೂರಪ್ಪ ಮುಖ್ಯಮಂತ್ರಿಯಾದಾಗ ಉಳಿದ ಹಣ ಬಿಡುಗಡೆ ಮಾಡಿ ಕಾಮಗಾರಿಗೆ ಅನುಮೋದನೆ ಕೊಟ್ಟರು. ರಣಘಟ್ಟ ಯೋಜನೆಯ ಕೀರ್ತಿ ದೇವೇಗೌಡರು ಹಾಗೂ ಯಡಿಯೂರಪ್ಪ ಇಬ್ಬರಿಗೂ ಸಲ್ಲುತ್ತದೆ' ಎಂದರು.

ಶಾಸಕ ಎಚ್.ಕೆ.ಸುರೇಶ್ ಮಾತನಾಡಿ, 'ಬೇಲೂರು ತಾಲ್ಲೂಕಿನ ಮಲೆನಾಡಿನ ಕಾಫಿ ಬೆಳೆಗಾರರು ಅನುಭವಿಸುತ್ತಿರುವ ಆನೆ ಸಮಸ್ಯೆ ನಿವಾರಣೆಗೆ ಆನೆ ಕಾರಿಡಾರ್ ನಿರ್ಮಿಸಲು ದೇವೇಗೌಡರು ಹಾಗೂ ನರೇಂದ್ರ ಮೋದಿ ಸಂಕಲ್ಪ ಮಾಡಿದ್ದಾರೆ' ಎಂದರು.

ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸಿದ್ದೇಶ್ ನಾಗೇಂದ್ರ, ತೋ.ಚ.ಅನಂತ ಸುಬ್ಬರಾಯ, ಎ.ಎಸ್.ಆನಂದ್, ಬಿ.ಕೆ. ಚಂದ್ರಕಲಾ, ಭಾರತಿ ಅರುಣ್ ಕುಮಾರ್ ಭಾಗವಹಿಸಿದ್ದರು.

ಸಂವಿಧಾನ ಬದಲಾವಣೆಯೇ ನರೇಂದ್ರ ಮೋದಿ ಆಸೆ: ಖರ್ಗೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಸಂವಿಧಾನ ಬದಲಾಯಿಸುವ ಉದ್ದೇಶದಿಂದಲೇ ಪ್ರಧಾನಿ ಮೋದಿ 400 ಸೀಟು ಗೆಲ್ಲಿಸಿ ಕೊಡಿ ಎಂದು ಹೇಳುತ್ತಿದ್ದಾರೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ನಗರದಲ್ಲಿ ಸೋಮವಾರ ನಡೆದ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಭಾಷಣ ದುದ್ದಕ್ಕೂ ಮೋದಿ ಅವರನ್ನೇ ಗುರಿಯಾಗಿಸಿಕೊಂಡು ಅವರು ಮಾತನಾಡಿದರು.

ಸಂವಿಧಾನ ಬದಲಾವಣೆ ಮಾಡುವುದಿಲ್ಲ ಎನ್ನುವುದಾದರೆ, ಅದರ ವಿರುದ್ಧ ಮಾತನಾಡಿದವರನ್ನು ಯಾಕೆ ಬಿಜೆಪಿಯಿಂದ ಉಚ್ಚಾಟಿಸಿಲ್ಲ. ಮೇಲ್ನೋಟಕ್ಕಷ್ಟೇ ಬದಲಾಯಿಸುವುದಿಲ್ಲ ಎನ್ನುವ ಮೋದಿ ಮನದಾಳದಲ್ಲಿ ಬದಲಾವಣೆ ಬಯಸುತ್ತಿದ್ದಾರೆ ಎಂದರು.

ಮತಕ್ಕಾಗಿ ಮನಬಂದಂತೆ ಹಿಟ್ ಆ್ಯಂಡ್ ರನ್ ಹೇಳಿಕೆ ನೀಡುವ ಮೋದಿ ಒಬ್ಬ ಅಜ್ಞಾನಿ. ಕಾಂಗ್ರೆಸ್ ಪ್ರಣಾಳಿಕೆ ಮುಸ್ಲಿಂ ಲೀಗ್ ಪ್ರಣಾಳಿಕೆಯಂತಿದೆ. ಜಾತಿಗಣತಿ ಮಾಡಿ ಜನರ ಆಸ್ತಿಯನ್ನು ಮುಸ್ಲಿಮರಿಗೆ ಕೊಡುತ್ತಾರೆ ಎಂದಿರುವ ಅವರ ಮಾತುಗಳು ಪ್ರಧಾನಿ ಸ್ಥಾನಕ್ಕೆ ಶೋಭೆ ತರುವುದಿಲ್ಲ ಎಂದರು.

'ಹತ್ತು ವರ್ಷಗಳಿಂದ ಮೋದಿ ಸಂವಿಧಾನದ ಪರವಾಗಿ ನಡೆದುಕೊಂಡಿಲ್ಲ. ರೈತ, ಕಾರ್ಮಿಕ ಹಾಗೂ ಜನ ವಿರೋಧಿ ಮಸೂದೆಗಳ ಕುರಿತು ನಾವು ದನಿ ಎತ್ತಿದರೆ ಅಧಿವೇಶನದಿಂದ ಹೊರ ಹಾಕುತ್ತಾರೆ. ಸಂವಿಧಾನ ಮತ್ತು ಪ್ರಜಾಪ್ರಭುತ್ವಕ್ಕೆ ಮೋದಿ ಕೊಡುವ ಗೌರವ ಇದೇನಾ?' ಎಂದು ಪ್ರಶ್ನಿಸಿದರು.

'ರಾಮಮಂದಿರ ಉದ್ಘಾಟನೆಗೆ ಕಾಂಗ್ರೆಸ್‌ನವರು ಬರಲಿಲ್ಲ ಎಂಬುದನ್ನೇ ಮೋದಿ ಟೀಕಿಸುತ್ತಿದ್ದಾರೆ. ನಾವಿರಲಿ, ಅಲ್ಲಿಗೆ ದೇಶದ ಮೊದಲ ಪ್ರಜೆಯಾದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಕರೆಯದೆ, ಮೋದಿಯೇ ಯಾಕೆ ಹೋಗಿ ಕೂತರು? ಅವರೇನು ಪೂಜಾರಿಯೇ? ಮಂದಿರ ಉದ್ಘಾಟನೆ ಸಂದರ್ಭದಲ್ಲಿ ಎಸ್‌ಸಿ ಮತ್ತು ಎಸ್‌ಟಿಗಳು ಇರಬಾರದೆಂದೇ ಮುರ್ಮು ಅವರನ್ನು ಕರೆಯಲಿಲ್ಲ' ಎಂದು ಹೇಳಿದರು.

'ಸಂಸತ್ತಿನ ನೂತನ ಕಟ್ಟಡದ ಶಂಕುಸ್ಥಾಪನೆಗೂ ಹಿಂದಿನ ದಲಿತ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ಆಹ್ವಾನಿಸಲಿಲ್ಲ. ಉದ್ಘಾಟನೆಗೆ ಈಗಿನ ರಾಷ್ಟ್ರಪತಿ ಮುರ್ಮು ಅವರನ್ನು ಕರೆಯಲಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೊದಲ ಮಾನ್ಯತೆ ಸಿಗಬೇಕಿರುವುದು ರಾಷ್ಟ್ರಪತಿ ಮತ್ತು ಉಪ ರಾಷ್ಟ್ರಪತಿಗೆ. ನಂತರ ಪ್ರಧಾನಿಗೆ. ಆದರೆ, ಸಂಸತ್ ಉದ್ಘಾಟನೆಯಲ್ಲಿ ಮೋದಿ ಪ್ರಜಾಪ್ರಭುತ್ವದ ತತ್ವಗಳನ್ನು ಗಾಳಿಗೆ ತೂರಿದರು' ಎಂದು ವಾಗ್ದಾಳಿ ನಡೆಸಿದರು.



ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಪರವಾಗಿ ಚನ್ನಪಟ್ಟಣದಲ್ಲಿ ಸೋಮವಾರ ನಡೆದ ಪ್ರಚಾರ ಸಭೆಯಲ್ಲಿ ಭಾಗವಹಿಸಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಕಾರ್ಯಕರ್ತರು ಬೃಹತ್ ಹಾರದ ಸ್ವಾಗತ ನೀಡಿದರು. ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಇದ್ದಾರೆ

'ಪ್ರಧಾನಿಗೆ ಸಾಮಾನ್ಯ ಜ್ಞಾನ ಇಲ್ಲ'

ಜಾತಿಗಣತಿ ಮಾಡಿ ಜನರ ಆಸ್ತಿಯನ್ನು ಮುಸ್ಲಿಮರಿಗೆ ಕೊಡುತ್ತಾರೆ ಎಂದು ಪ್ರಧಾನಿ ಹೇಳುತ್ತಾರೆ. ತಾಯಂದಿರಿಗೆ ₹1 ಲಕ್ಷ ಕೊಡುವುದು, ನರೇಗಾ ಕೂಲಿ ₹400 ಏರಿಕೆ, ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಮಾನ್ಯತೆ, ರೈತ ನ್ಯಾಯ, ಮಹಿಳಾ ನ್ಯಾಯ, ಶ್ರಮಿಕ ನ್ಯಾಯ, ಯುವ ನ್ಯಾಯ, ಪಾಲುದಾರಿಕೆ ನ್ಯಾಯ ಇವುಗಳಲ್ಲಿ ಯಾವುದು ಕೇವಲ ಮುಸ್ಲಿಮರ ಪರವಾಗಿದೆ ಎಂದು ಮೋದಿ ಹೇಳಲಿ? ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ತಿಳಿದುಕೊಂಡು ಅವರ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವುದು ಜಾತಿಗಣತಿ ಉದ್ದೇಶ ಎಂಬ ಸಾಮಾನ್ಯ ಜ್ಞಾನ ಅವರಿಗಿಲ್ಲ ಎಂದು ಖರ್ಗೆ ಟೀಕಿಸಿದರು.

> ಕಾಂಗ್ರೆಸ್ ಪ್ರಣಾಳಿಕೆ ಕುರಿತು ಬಹಿರಂಗವಾಗಿ ಎಲ್ಲಿ ಬೇಕಾದರೂ ಚರ್ಚೆ ಮಾಡಲು ನಾನು ಸಿದ್ಧನಿದ್ದೇನೆ. ಮೋದಿ ಸಹ ಬರಲಿ
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

'2004ರ ಫಲಿತಾಂಶ ಪುನರಾವರ್ತನೆ ಆಗಲಿದೆ'

ಪ್ರಜಾವಾಣಿ ವಾರ್ತೆ



ಜೈರಾಂ ರಮೇಶ್

ಬೆಂಗಳೂರು: '2014ರಲ್ಲಿ ನರೇಂದ್ರ ಮೋದಿ ಪರ ಅಲೆ ಇತ್ತು. 2019ರಲ್ಲಿ ಪುಲ್ವಾಮಾ ಸ್ಫೋಟದಿಂದ ಬಿಜೆಪಿಗೆ ಲಾಭವಾಯಿತು. ಈ ಬಾರಿ ಮೋದಿ ಅಲೆ ಇಲ್ಲ. 2004ರ ಚುನಾವಣಾ ಫಲಿತಾಂಶ ಈ ಬಾರಿ ಪುನರಾವರ್ತನೆ ಆಗಲಿದೆ' ಎಂದು ಎಐಸಿಸಿ ಸಂವಹನ ವಿಭಾಗದ ಮುಖ್ಯಸ್ಥ ಜೈರಾಂ ರಮೇಶ್ ಹೇಳಿದರು.

'ಪ್ರಜಾವಾಣಿ' ಜತೆ ಮಾತನಾಡಿದ ಅವರು, 'ನಾನು ಈವರೆಗೆ ಎಂಟು ರಾಜ್ಯಗಳಲ್ಲಿ ಪ್ರವಾಸ ಮಾಡಿದ್ದೇನೆ. ಹಿಂದಿನ ಎರಡು ಲೋಕಸಭಾ ಚುನಾವಣೆಯಲ್ಲಿ ಉತ್ತರ ಭಾರತದಲ್ಲಿ ಬಿಜೆಪಿ ಗರಿಷ್ಠ ಸ್ಥಾನ ಗಳಿಸಿತ್ತು. ಅಲ್ಲಿ ಬಿಜೆಪಿಯ ಗಳಿಕೆ ಕುಸಿಯಲಿದೆ. ದಕ್ಷಿಣ ಭಾರತದಲ್ಲಿ ಬಿಜೆಪಿಯ ಗಳಿಕೆ ತೀರಾ ಕೆಳಕ್ಕೆ ಇಳಿಯಲಿದೆ. ಹೀಗಾಗಿ 'ಇಂಡಿಯಾ' ಮೈತ್ರಿಕೂಟ ಸ್ಪಷ್ಟ ಬಹುಮತ ಗಳಿಸಲಿದೆ. 2004ರಂತೆ ಕಾಂಗ್ರೆಸ್ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಲಿದೆ' ಎಂದರು.

ಈಶಾನ್ಯ ರಾಜ್ಯಗಳಲ್ಲಿ ಕಾಂಗ್ರೆಸ್ ಎಲ್ಲಿಯೂ ಅಧಿಕಾರದಲ್ಲಿಲ್ಲ. ಆದರೂ, ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲು ಅಲ್ಲಿನ ಜನರು ನಿರ್ಧರಿಸಿದ್ದಾರೆ. ರಾಜಸ್ಥಾನದಲ್ಲೂ ಹೆಚ್ಚಿನ ಸ್ಥಾನಗಳು ದೊರಕಲಿವೆ. ತಮಿಳುನಾಡು ಮತ್ತು ಮಹಾರಾಷ್ಟ್ರದಲ್ಲಿ 'ಇಂಡಿಯಾ' ಮೈತ್ರಿಕೂಟ ಮುನ್ನಡೆ ಸಾಧಿಸಲಿದೆ ಎಂದು ಹೇಳಿದರು.

ನರೇಂದ್ರ ಮೋದಿ ಈಗ ಚುನಾವಣಾ ಪ್ರಚಾರದ ಕಾರ್ಯಸೂಚಿ ಬದಲಿಸಿಕೊಂಡಿದ್ದಾರೆ. ಹತ್ತು ವರ್ಷಗಳ ಅವರದ್ದೇ ಆಡಳಿತದ ಕುರಿತು ಮಾತನಾಡುತ್ತಿಲ್ಲ. ಐದಾರು ದಿನಗಳಿಂದ ಅವರು ಮತೀಯ ವಿಚಾರಗಳನ್ನು ಪ್ರಸ್ತಾಪಿಸಿ ಮತಗಳ ಧ್ರುವೀಕರಣಕ್ಕೆ ಪ್ರಯತ್ನಿಸುತ್ತಿದ್ದಾರೆ. ಎನ್‌ಡಿಎ ಮೈತ್ರಿಕೂಟ ಸೋಲು ಕಾಣಲಿದೆ ಎಂಬ ಸುಳಿವು ಪ್ರಧಾನಿಯವರಿಗೆ ಸಿಕ್ಕಿರುವುದಕ್ಕೆ ಇದು ಸಾಕ್ಷಿ ಎಂದರು.

ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಮತ್ತು ಕೇರಳದಲ್ಲಿ ಎಡ ಪಕ್ಷಗಳು ಕಾಂಗ್ರೆಸ್ ವಿರುದ್ಧವೇ ಹೋರಾಟ ನಡೆಸುತ್ತಿವೆ. ಆದರೆ, ತೃಣಮೂಲ ಕಾಂಗ್ರೆಸ್ ಮತ್ತು ಎಡ ಪಕ್ಷಗಳು ಇಂಡಿಯಾ ಮೈತ್ರಿಕೂಟದಲ್ಲೇ ಇವೆ. ಕಾಂಗ್ರೆಸ್ ಪಕ್ಷ 350 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದು, ಶೇಕಡ 50ಕ್ಕಿಂತಲೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲುವು ದೊರಕಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಕನಿಷ್ಠ 17 ಸ್ಥಾನ

'ಕರ್ನಾಟಕದಲ್ಲಿ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿರುವ ಕಾಂಗ್ರೆಸ್ ಸರ್ಕಾರವನ್ನು ಜನರು ಬೆಂಬಲಿಸಲಿದ್ದಾರೆ. ಇಲ್ಲಿ ಕಾಂಗ್ರೆಸ್ ಕನಿಷ್ಠ 17 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಿದೆ' ಎಂದು ಜೈರಾಂ ರಮೇಶ್ ಹೇಳಿದರು.

ಸಿದ್ದರಾಮಯ್ಯ ಪ್ರಚಾರ



ಶ್ರೇಯಸ್ ಪರ ಪ್ರಚಾರ

ಹಾಸನ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಪರವಾಗಿ ಅರಸೀಕೆರೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಪ್ರಚಾರ ನಡೆಸಿದರು. ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಜತೆಗಿದ್ದರು

ಬೊಮ್ಮನಹಳ್ಳಿಯಲ್ಲಿ ಅಮಿತ್ ಶಾ ರೋಡ್ ಶೋ

ಬೆಂಗಳೂರು: ಗೃಹ ಸಚಿವ ಅಮಿತ್ ಶಾ ಅವರು ಮಂಗಳವಾರ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ತೇಜಸ್ವಿ ಸೂರ್ಯ ಅವರ ಪರವಾಗಿ ಬೊಮ್ಮನಹಳ್ಳಿಯಲ್ಲಿ ರೋಡ್‌ಶೋ ನಡೆಸಲಿದ್ದಾರೆ. ಹೊಸೂರು ರಸ್ತೆಯ ಬೊಮ್ಮನಹಳ್ಳಿ ಸರ್ಕಲ್ ಬಳಿ ಇರುವ ವಿವೇಕಾನಂದ ಪ್ರತಿಮೆಯಿಂದ ರಾತ್ರಿ 7ಕ್ಕೆ ರೋಡ್‌ಶೋ ಆರಂಭವಾಗಲಿದೆ. ಆ ಬಳಿಕ ಅವರು ಕೇರಳಕ್ಕೆ ತೆರಳಲಿದ್ದಾರೆ. ತುಮಕೂರು ರೋಡ್ ಶೋ ರದ್ದಾಗಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಬಿಜೆಪಿ ಅಭ್ಯರ್ಥಿಗೆ ಪಾಠ ಕಲಿಸದೇ ಹಾರ ಹಾಕಿಸಿಕೊಳ್ಳಲ್ಲ: ಸ್ವಾಮೀಜಿ

ಸ್ಪರ್ಧೆಯಿಂದ ದಿಂಗಾಲೇಶ್ವರ ಹಿಂದಕ್ಕೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ನಮ್ಮ ಪೀಠದ ಹಿರಿಯ ಸ್ವಾಮೀಜಿ (ಫಕೀರ ಶಿವಯೋಗಿ ಸಿದ್ಧರಾಮ ಸ್ವಾಮೀಜಿ) ಅವರ ಸೂಚನೆ ಮೇರೆಗೆ ಧಾರವಾಡ ಲೋಕಸಭಾ ಕ್ಷೇತ್ರದ ಚುನಾವಣಾ ಕಣದಿಂದ ಹಿಂದಕ್ಕೆ ಸರಿದಿರುವೆ. ಪಕ್ಷೇತರ ಅಭ್ಯರ್ಥಿಯಾಗಿ ಸಲ್ಲಿಸಿದ್ದ ನಾಮಪತ್ರ ವಾಪಸ್ ಪಡೆದಿರುವೆ' ಎಂದು ಶಿರಹಟ್ಟಿ ಭಾವೈಕ್ಯ ಪೀಠದ ದಿಂಗಾಲೇಶ್ವರ ಸ್ವಾಮೀಜಿ ಹೇಳಿದರು.

'ಚುನಾವಣೆಗೆ ಸ್ಪರ್ಧಿಸುವುದು ಹೊರತುಪಡಿಸಿ ನಾನು ಹೇಳಿದ ಎಲ್ಲ ಮಾತುಗಳಿಗೆ ಈಗಲೂ ಬದ್ಧ. ಬಿಜೆಪಿ ಅಭ್ಯರ್ಥಿಗೆ (ಪ್ರಲ್ಹಾದ ಜೋಶಿ) ಪಾಠ ಕಲಿಸುವವರೆಗೆ ಹಾರ ಹಾಕಿಸಿಕೊಳ್ಳಲ್ಲ ಎಂದು ಹೇಳಿದ್ದನ್ನು ಈಗಲೂ ಪಾಲಿಸುವೆ' ಎಂದು ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.


ಕಾಂಗ್ರೆಸ್ ಅಭ್ಯರ್ಥಿಗೆ ಬೆಂಬಲಿಸುವಿರಾ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಯಾವುದೇ ಪಕ್ಷಕ್ಕೂ ನಾನು ಈವರೆಗೆ ಬೆಂಬಲಿಸಿಲ್ಲ. ಒಂದೆರಡು ದಿನಗಳಲ್ಲಿ ಭಕ್ತರು, ಹಿತೈಷಿಗಳ ಸಭೆ ಕರೆದು ತೀರ್ಮಾನಿಸುವೆ' ಎಂದರು.

'ಬಿಜೆಪಿ, ಕಾಂಗ್ರೆಸ್ ಎರಡೂ ಪಕ್ಷಗಳ ಮುಖಂಡರು ನನ್ನನ್ನು ಸಂಪರ್ಕಿಸಿದ್ದರು. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಕೂಡ ನನ್ನ ಜೊತೆ ಮಾತನಾಡಿದ್ದರು' ಎಂದರು.

ಸ್ವಾಮೀಜಿಗೆ ಪೇಮೆಂಟ್ ಆಗಿದೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾಡಿದ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಅವರು ಎಂತಹವರು ಎನ್ನುವುದು ಇಡೀ ರಾಜ್ಯಕ್ಕೆ ಗೊತ್ತಿದೆ. ಅವರ ಪಕ್ಷದ ಮುಖಂಡರನ್ನೇ ಅವರು ಬಿಟ್ಟಿಲ್ಲ. ₹ 2 ಸಾವಿರ ಕೋಟಿ ಕೊಟ್ಟರೆ ಮುಖ್ಯಮಂತ್ರಿ ಸ್ಥಾನ, ₹ 500 ಕೋಟಿ ಕೊಟ್ಟರೆ ಸಚಿವ ಸ್ಥಾನ ಸಿಗುತ್ತದೆ ಎಂದು ಆರೋಪಿಸಿದ್ದರು. ಇಷ್ಟಾದರೂ, ಆ ಪಕ್ಷದವರು ಅವರಿಗೆ ಲಗಾಮು ಹಾಕಿಲ್ಲ. ಅವರು ಒಂದು ರೀತಿ 'ಮಿದುಳು ಇಲ್ಲದ ದೇಹ ಇದ್ದಂತೆ' ಎಂದು ವ್ಯಂಗ್ಯ-ವಾಡಿದರು.

'ಹಣಕ್ಕಾಗಿ ಆಸೆ ಪಡುವವ ನಾನಲ್ಲ. ತಂದೆ-ತಾಯಿ, ಮನೆ ಬಿಟ್ಟು ಬಂದಿರುವೆ. ನನಗೆ ಮದುವೆ ಇಲ್ಲ, ಮಕ್ಕಳೂ ಇಲ್ಲ. ಹಣದ ಅಗತ್ಯವೂ ಇಲ್ಲ. ಮಠದ ಕೆಲಸಕ್ಕೆ ಮಾತ್ರ ಹಣ ಬೇಕೆ ಹೊರತು ಉಳಿದಂತೆ ಯಾವುದಕ್ಕೂ ಬೇಡ. ಕಾಣಿಕೆ, ದೇಣಿಗೆ ರೂಪದಲ್ಲಿ ಭಕ್ತರು ಹಣ ನೀಡಿದ್ದಾರೆ. ಇದು ಹೊರ-ತುಪಡಿಸಿದರೆ ಬೇರಾವುದೇ ವ್ಯಕ್ತಿ ನನಗೆ ಹಣ ಕೊಟ್ಟಿದ್ದನ್ನು ಹೇಳಲಿ ನೋಡೋಣ' ಎಂದು ಅವರು ಸವಾಲು ಹಾಕಿದರು.

ಧಾರವಾಡ ವರದಿ: ದಿಂಗಾಲೇಶ್ವರ ಸ್ವಾಮೀಜಿ ಅವರು ನಾಮಪತ್ರವನ್ನು ತಮ್ಮ ಏಜೆಂಟ್ ಮತ್ತು ಸೂಚಕ ಸಚಿನ್ ಪಾಟೀಲ ಮೂಲಕ ಹಿಂಪಡೆದರು. 'ಸ್ವಾಮೀಜಿ ಅವರ ಪತ್ರ ಕೊಟ್ಟು ನಾಮಪತ್ರ ವಾಪಸ್ ಪಡೆಯಲಾಗಿದೆ' ಎಂದು ಸಚಿನ್ ಪಾಟೀಲ ತಿಳಿಸಿದರು.



> ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿರುದ್ಧ ಧರ್ಮಯುದ್ಧ ಗುರಿ ತಲುಪುವವರೆಗೆ ಮುಂದುವರಿಸುವೆ
> **ದಿಂಗಾಲೇಶ್ವರ ಸ್ವಾಮೀಜಿ,** ಶಿರಹಟ್ಟಿ ಭಾವೈಕ್ಯ ಪೀಠ



> ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರು ದಿಂಗಾಲೇಶ್ವರ ಸ್ವಾಮೀಜಿ ಮನವೊಲಿಸಿದ್ದಾರೆ
> **ಸಂತೋಷ ಲಾಡ್,** ಸಚಿವ

ಶ್ರೀಗಳಿಗೆ ನಾನೇ ಮನವಿ ಮಾಡಿದ್ದೆ

'ಜಾತ್ಯತೀತ ಮತಗಳು ವಿಭಜನೆ ಆಗದಂತೆ ತಡೆಯಲು ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ ನಾಮಪತ್ರ ಹಿಂಪಡೆದು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡುವಂತೆ ದಿಂಗಾಲೇಶ್ವರ ಸ್ವಾಮೀಜಿ ಅವರಿಗೆ ನಾನೇ ಮನವಿ ಮಾಡಿದ್ದೆ' ಎಂದು ಸಿದ್ದರಾಮಯ್ಯ ಹೇಳಿದರು.

ಪ್ರಿಯಾಂಕಾ ಗಾಂಧಿ ಪ್ರಚಾರ ಇಂದು

ಬೆಂಗಳೂರು: ಎಐಸಿಸಿ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಕಾಂಗ್ರೆಸ್ 'ತಾರಾ ಪ್ರಚಾರಕಿ' ಪ್ರಿಯಾಂಕಾ ಗಾಂಧಿ ಅವರು ಪಕ್ಷದ ಅಭ್ಯರ್ಥಿಗಳ ಪರ ರಾಜ್ಯದಲ್ಲಿ ಮಂಗಳವಾರ ಚುನಾವಣಾ ಪ್ರಚಾರ ನಡೆಸಲಿದ್ದಾರೆ.

ಚಿತ್ರದುರ್ಗ ನಗರದ ಹಳೆ ಮಾಧ್ಯಮಿಕ ಶಾಲಾ ಮೈದಾನದಲ್ಲಿ ಮಧ್ಯಾಹ್ನ 3 ಗಂಟೆಗೆ ನಡೆಯಲಿರುವ ಚುನಾವಣಾ ಪ್ರಚಾರ ಸಮಾವೇಶದಲ್ಲಿ ಭಾಗವಹಿಸಲಿರುವ ಪ್ರಿಯಾಂಕಾ, ಸಂಜೆ 6 ಗಂಟೆಗೆ ಬೆಂಗಳೂರಿನ ಎಚ್‌ಎಸ್‌ಆರ್ ಬಡಾವಣೆಯಲ್ಲಿರುವ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದಲ್ಲಿ ನಡೆಯಲಿರುವ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಕೂಡಾ ಈ ಸಮಾವೇಶಗಳಲ್ಲಿ ಭಾಗವಹಿಸಲಿದ್ದಾರೆ.






ಪ್ರಧಾನಿ ವಿರುದ್ಧ ಕ್ರಮಕ್ಕೆ ಚುನಾವಣಾ ಆಯೋಗ, ಸುಪ್ರೀಂ ಕೋರ್ಟ್‌ಗೆ ಒತ್ತಾಯ

ಮೋದಿ ಹೇಳಿಕೆಗೆ ವಿಪಕ್ಷಗಳ ತೀವ್ರ ಖಂಡನೆ

ಕೊಚ್ಚಿ/ನವದೆಹಲಿ (ಪಿಟಿಐ): ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಜನರ ಸಂಪತ್ತನ್ನು ಮುಸ್ಲಿಮರಿಗೆ ಮರುಹಂಚಿಕೆ ಮಾಡುತ್ತದೆ ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆಗೆ ಪಕ್ಷವು ತೀವ್ರ ವಿರೋಧ ವ್ಯಕ್ತಪಡಿಸಿದೆ. ತಮ್ಮ ಪ್ರಣಾಳಿಕೆ ಬಗ್ಗೆ ಮೋದಿ ಅವರಿಗೆ ಅರಿವು ಮೂಡಿಸಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ಭೇಟಿಗೆ ಸಮಯ ಕೋರಿದ್ದಾರೆ ಎಂದು ಕಾಂಗ್ರೆಸ್ ತಿಳಿಸಿದೆ.



ವೇಣುಗೋಪಾಲ್

ಪ್ರಧಾನಿಗೆ ಪಕ್ಷದ ಎಲ್ಲ ಕಾರ್ಯಕರ್ತರು ಮತ್ತು ಲೋಕಸಭಾ ಅಭ್ಯರ್ಥಿಗಳು ಕಾಂಗ್ರೆಸ್ ಪ್ರಣಾಳಿಕೆಯ ಪ್ರತಿಗಳನ್ನು ಕಳುಹಿಸಿಕೊಡುತ್ತಾರೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ತಿಳಿಸಿದ್ದಾರೆ.

'ಮೋದಿ ಅವರು ಪ್ರಧಾನಿ ಹುದ್ದೆಗೆ ತಕ್ಕುದಲ್ಲದ ಹೇಳಿಕೆ ನೀಡಿದ್ದಾರೆ. ಪ್ರಧಾನಿಯಾದವರು ಹೇಗೆ ಎಲ್ಲದರ ಬಗ್ಗೆ ಸುಳ್ಳು ಹೇಳಲು ಮತ್ತು ಸುಳ್ಳು ಸುದ್ದಿ ಹಬ್ಬಿಸಲು ಸಾಧ್ಯ? ಅವರು ದೇಶದಲ್ಲಿ ಅತಿ ಹೆಚ್ಚು ಸುಳ್ಳು ಹೇಳುವವರು ಎನ್ನುವುದು ಸ್ಪಷ್ಟವಾಗಿದೆ' ಎಂದು ಹೇಳಿದರು.

ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಮ್ಮ ಪ್ರಣಾಳಿಕೆಯಲ್ಲಿ ಇಲ್ಲದೇ ಇರುವುದನ್ನು ಹೇಳುವ ಮೂಲಕ ಚುನಾವಣಾ ಲಾಭಕ್ಕಾಗಿ ಕೋಮು ಧ್ರುವೀಕರಣಕ್ಕೆ ಪ್ರಯತ್ನಿಸಿದ್ದಾರೆ' ಎಂದು ಆರೋಪಿಸಿದರು.

ಇದೇ ವೇಳೆ ಅವರು ಚುನಾವಣಾ ಆಯೋಗದ ಬಗ್ಗೆಯೂ ಆಕ್ಷೇಪ ವ್ಯಕ್ತಪಡಿಸಿದರು. 'ಎಲ್ಲದರ ಬಗ್ಗೆಯೂ ಸುಳ್ಳು ಹೇಳುವುದಕ್ಕೆ ಚುನಾವಣಾ ಆಯೋಗವು ಪ್ರಧಾನಿಗೆ ಅನುಮತಿ ನೀಡಿದೆಯೇ? ಪ್ರತಿಯೊಂದರಲ್ಲಿಯೂ ಮಧ್ಯಪ್ರವೇಶ ಮಾಡುವ ಆಯೋಗವು ಈ ವಿಚಾರದಲ್ಲಿ ಮೌನವಾಗಿದೆ. ಮುಕ್ತ, ನ್ಯಾಯಸಮ್ಮತ ಚುನಾವಣೆ ನಡೆಸಬೇಕಾದ ಆಯೋಗ ಮೌನ ತಾಳಿರುವುದೇಕೆ? ದ್ವೇಷ ಭಾಷಣಗಳ ಇತಿಹಾಸದಲ್ಲಿಯೇ ಪ್ರಧಾನಿ ಅತ್ಯಂತ ಕೆಟ್ಟ ದ್ವೇಷ ಭಾಷಣ ಮಾಡಿರುವಾಗ ಆಯೋಗವು ಏನು ಕ್ರಮ ಕೈಗೊಳ್ಳಲಿದೆ ಎನ್ನುವುದನ್ನು ತಿಳಿಯಲು ಬಯಸುತ್ತೇನೆ' ಎಂದು ಅವರು ಹೇಳಿದರು.

> ಪ್ರಣಾಳಿಕೆಯಲ್ಲಿ ಎಲ್ಲಿಯಾದರೂ ಹಿಂದೂ ಮುಸ್ಲಿಂ ಎಂದು ಬರೆದಿದ್ದರೆ ತೋರಿಸಿ ಎಂದು ಪ್ರಧಾನಿಗೆ ಸವಾಲು ಹಾಕುತ್ತೇನೆ. ಇಂಥ ಸಣ್ಣ ಬುದ್ಧಿ ನಿಮ್ಮ ರಾಜಕೀಯ ಮೌಲ್ಯಗಳಲ್ಲಿಯೇ ಇದೆ
> **ಪವನ್ ಖೇರಾ**
> ಕಾಂಗ್ರೆಸ್ ಪ್ರಚಾರ ವಿಭಾಗದ ಮುಖ್ಯಸ್ಥ

> ಮೊದಲ ಹಂತದ ಮತದಾನದ ನಂತರ ಮೋದಿ ನಿರಾಸೆಗೊಂಡಿದ್ದಾರೆ. ಅವರ ಸುಳ್ಳುಗಳ ಮಟ್ಟವು ವಿಪರೀತ ಆಗಿದ್ದು, ಭಯಗೊಂಡಿರುವ ಅವರು ಜನರ ಗಮನ ಬೇರೆಡೆ ಸೆಳೆಯಲು ಬಯಸುತ್ತಿದ್ದಾರೆ
> **ರಾಹುಲ್ ಗಾಂಧಿ**
> ಕಾಂಗ್ರೆಸ್ ನಾಯಕ

> ಮೊದಲ ಹಂತ ಅವರಿಗೆ ಕೆಟ್ಟದಾಗಿತ್ತು ಎನ್ನುವುದು ನಮಗೆ ಗೊತ್ತಾಗುತ್ತಿದೆ. ಪ್ರಧಾನಿ ಅಧಿಕಾರ ಕಳೆದುಕೊಳ್ಳುವ ಆತಂಕ ಮತ್ತು ಹತಾಶೆಯಿಂದ ಮಾನಸಿಕ ಹತೋಟಿ ಕಳೆದುಕೊಂಡಂತೆ ಕಾಣುತ್ತಿದೆ
> **ಜೈರಾಮ್ ರಮೇಶ್**
> ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

> ಇದು ದುಷ್ಟತನ. ಚುನಾವಣಾ ಆಯೋಗದ ಮೌನ ಅದಕ್ಕಿಂತಲೂ ದುಷ್ಟತನ. ಮೋದಿ ಅವರ ಪ್ರಚೋದನಕಾರಿ ಮಾತು ನೀತಿಸಂಹಿತೆ ಮತ್ತು ದ್ವೇಷ ಭಾಷಣದ ಬಗ್ಗೆ ಸುಪ್ರೀಂ ಕೋರ್ಟ್ ನಿರ್ದೇಶನದ ಉಲ್ಲಂಘನೆ. ಕೋರ್ಟ್, ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು, ಮೋದಿ ಅವರಿಗೆ ನ್ಯಾಯಾಲಯದ ನಿಂದನೆಯ ನೋಟಿಸ್ ಜಾರಿ ಮಾಡಿ, ಶಿಕ್ಷೆ ವಿಧಿಸುತ್ತದೆ ಎಂದು ಭಾವಿಸಿದ್ದೇನೆ
> **ಸೀತಾರಾಮ್ ಯೆಚೂರಿ,** ಸಿಪಿಎಂ ಪ್ರಧಾನ ಕಾರ್ಯದರ್ಶಿ

> ಇದು ಯಾವ ರೀತಿಯ ಸಂಸ್ಕೃತಿ? ನೀವು ರಾಮ ಮಂದಿರದ ಬಗ್ಗೆ ಮಾತನಾಡುತ್ತೀರಿ, ಮಂದಿರ ಉದ್ಘಾಟಿಸುತ್ತೀರಿ, ರಾಮನ ಆದರ್ಶಗಳ ಬಗ್ಗೆ ಮಾತನಾಡುತ್ತೀರಿ. ಮತ್ತೊಂದು ಕಡೆ ದ್ವೇಷವನ್ನು ಹರಡುತ್ತೀರಿ.

> ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್, ಸಬ್‌ಕಾ ವಿಶ್ವಾಸ್ ಎಲ್ಲಿದೆ? ನೀವು ದ್ವೇಷದ ಪ್ರತಿಪಾದಕರಾಗಿ ಭಾರತವನ್ನು ಮುನ್ನಡೆಸಲು ಸಾಧ್ಯವಿಲ್ಲ. ಚುನಾವಣಾ ಆಯೋಗ ಮೋದಿ ವಿರುದ್ಧ ಪ್ರಕರಣ ದಾಖಲಿಸಬೇಕು
> **ಕಪಿಲ್ ಸಿಬಲ್,** ರಾಜ್ಯಸಭಾ ಸದಸ್ಯ

> ನರೇಂದ್ರ ಮೋದಿ ಅವರು ಹಾಗೆ ಮಾತನಾಡಲು ಯಾವುದೋ ಪಂಚಾಯಿತಿ ಸದಸ್ಯ ಅಲ್ಲ, ಅವರು ಪ್ರಧಾನಿ. ಎಲ್ಲ ನಾಗರಿಕರ ಜೀವ ಕಾಪಾಡುವ ಜವಾಬ್ದಾರಿ ಅವರ ಮೇಲಿದೆ. ತೆರಿಗೆ ಕಟ್ಟಬೇಕಾದರೆ ಒಂದೇ ಧರ್ಮ, ಭಾಷೆಯವರು ತೆರಿಗೆ ಕಟ್ಟಿರಲ್ಲ. ಸರ್ವರಿಗೂ ಸಮಪಾಲು, ಸಮಬಾಳು ಆಶಯದ ಮೇಲೆ ತೆರಿಗೆ ಹಣ ಹಂಚಬೇಕು
> **ಬಿ.ಕೆ. ಹರಿಪ್ರಸಾದ್,** ವಿಧಾನ ಪರಿಷತ್ ಸದಸ್ಯ

ಚುನಾವಣಾ ಆಯೋಗಕ್ಕೆ 'ಕೈ' ದೂರು

ನವದೆಹಲಿ (ಪಿಟಿಐ): ಪ್ರಧಾನಿ ಮೋದಿ ಅವರ ಹೇಳಿಕೆ ವಿಭಜಕ, ದುರುದ್ದೇಶಪೂರಿತ ಮತ್ತು ನಿರ್ದಿಷ್ಟ ಧಾರ್ಮಿಕ ಸಮುದಾಯವನ್ನು ಗುರಿ ಮಾಡಿಕೊಂಡದ್ದಾಗಿದೆ ಎಂದು ಕಾಂಗ್ರೆಸ್ ಸೋಮವಾರ ಆರೋಪಿಸಿದೆ. ಪ್ರಧಾನಿ ನೀತಿಸಂಹಿತೆ ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿರುವ ಕಾಂಗ್ರೆಸ್ ನಿಯೋಗವು, ಈ ಸಂಬಂಧ ಚುನಾವಣಾ ಆಯೋಗಕ್ಕೆ ದೂರುಗಳನ್ನು ಸಲ್ಲಿಸಿದೆ.

ಕಾಂಗ್ರೆಸ್ ನಿಯೋಗವು ಬಿಜೆಪಿ ವಿರುದ್ಧ 16 ದೂರುಗಳನ್ನು ಸಲ್ಲಿಸಿದ್ದು, ಆಡಳಿತಾರೂಢ ಪಕ್ಷದ ವಿರುದ್ಧ ತಕ್ಷಣವೇ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದೆ. ಈ ವಿಚಾರದಲ್ಲಿ ಆಯೋಗವು ನಿಷ್ಕ್ರಿಯತೆಯಿಂದಿದ್ದರೆ, ಅದು ಆಯೋಗದ ಪರಂಪರೆಗೆ ಕಳಂಕ ತರುತ್ತದೆ ಎಂದು ನಿಯೋಗ ಅಭಿಪ್ರಾಯಪಟ್ಟಿದೆ.

'ಮುಸ್ಲಿಮರಿಗೆ ಮಾನಸಿಕ ಹಿಂಸೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಸ್ಲಿಮರಿಗೆ ಚಿತ್ರಹಿಂಸೆ ನೀಡಿ ಈ ದೇಶ ಬಿಟ್ಟು ಹೋಗಬೇಕು ಎನ್ನುವಂತಹ ವಾತಾವರಣವನ್ನು ಬಿಜೆಪಿ ನಿರ್ಮಾಣ ಮಾಡುತ್ತಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.



ಶಿವಕುಮಾರ್

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಮ್ಮದು ಸರ್ವ ಜನಾಂಗದ ತೋಟ. ಬಿಜೆಪಿಯವರು ಸಂವಿಧಾನ ಬದಲಾವಣೆ ಮಾಡುತ್ತೇವೆ ಎನ್ನುತ್ತಿದ್ದಾರೆ. ನಾವು ಸಂವಿಧಾನದ ಪ್ರಕಾರ ನಡೆಯುತ್ತಿದ್ದೇವೆ. ಆದ ಕಾರಣ, ಯಾವುದೇ ಅಪರಾಧ ಪ್ರಕರಣ ನಡೆದರೂ ಯಾರನ್ನೂ ರಕ್ಷಿಸುವ ಪ್ರಮೇಯವೇ ಇಲ್ಲ' ಎಂದರು.

ರಾಜ್ಯದ ಕಾನೂನು ಸುವ್ಯವಸ್ಥೆ ಹಾಳಾಗಿದೆ' ಎಂದು ಬಿಜೆಪಿ ಪ್ರತಿಭಟನೆ ನಡೆಸುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ, 'ಅವರು ಯಾವ ಕೆಲಸವನ್ನೂ ಮಾಡಿಲ್ಲವಲ್ಲ. ಅದಕ್ಕೆ ಈ ವಿಚಾರದ ಬಗ್ಗೆ ಮಾತನಾಡುತ್ತಿದ್ದಾರೆ. ಈ ರಾಜ್ಯದಲ್ಲಿ ಡಬಲ್ ಎಂಜಿನ್ ಸರ್ಕಾರ ವಿಫಲವಾಗಿದೆ. ಮುಂದೆ ದೊಡ್ಡ ಎಂಜಿನ್ ಕೂಡ ವಿಫಲವಾಗಲಿದೆ. ನಮ್ಮ ಖಾಲಿ ಚೊಂಬು ಜಾಹೀರಾತಿನಿಂದ ಎಚ್ಚರಗೊಂಡಿರುವ ಬಿಜೆಪಿಯವರು ಜಾಹೀರಾತು ನೀಡಿದ್ದಾರೆ. ನಮ್ಮ ಜನರಿಗೆ ಯಾವುದು ಸರಿ, ಯಾವುದು ತಪ್ಪು ಎಂದು ಯೋಚನೆ ಮಾಡುವ ಶಕ್ತಿ, ಪ್ರಜ್ಞೆ ಎರಡೂ ಇದೆ' ಎಂದೂ ಹೇಳಿದರು.

ದ್ವೇಷ ಭಾಷಣ: ಜಾಗೃತ ನಾಗರಿಕರ ಆಕ್ಷೇಪ

ಬೆಂಗಳೂರು: 'ಕಾಂಗ್ರೆಸ್ ಪಕ್ಷವು ದೇಶದ ಸಂಪತ್ತನ್ನು ಮುಸ್ಲಿಮರಿಗೆ ಹಂಚಲಿದೆ. ಭೂಮಿ, ಒಡವೆ- ವಸ್ತು, ಕಡೆಗೆ ಹೆಣ್ಣು ಮಕ್ಕಳ ಮಂಗಳ ಸೂತ್ರವನ್ನು ಸಹ ಅವರಿಗೇ ಕೊಟ್ಟುಬಿಡಲಾಗುತ್ತದೆ ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆ ದ್ವೇಷ ಭಾಷಣದ ಅತ್ಯಂತ ಕೆಟ್ಟ, ಉಗ್ರವಾದ ಮಾದರಿ' ಎಂದು ಜಾಗೃತ ನಾಗರಿಕರು–ಕರ್ನಾಟಕ ಸಂಘಟನೆ ಟೀಕಿಸಿದೆ.

'ಮೋದಿ ಅವರು ಹೀಗೆ ಹೇಳುವ ಮೂಲಕ ಅಲ್ಪ ಸಂಖ್ಯಾತರನ್ನು ಹೀಯಾಳಿಸುವ ಜತೆಗೆ, ಬಹು ಸಂಖ್ಯಾತ ಸಮುದಾಯವನ್ನು ಹೆದರಿಸಿದ್ದಾರೆ. ಮುಸ್ಲಿಮರು ಅತಿ ಹೆಚ್ಚು ಮಕ್ಕಳನ್ನು ಪಡೆಯುವಂಥವರು ಎಂದು ಚುಚ್ಚಿದ್ದಾರೆ. ಇವೆಲ್ಲವೂ ಸತ್ಯಕ್ಕೆ ದೂರವಾದ ಮಾತುಗಳು. ಇಂತಹ ಭಾಷಣಗಳು ಉಂಟು ಮಾಡುವ ಪರಿಣಾಮಗಳನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಚುನಾವಣೆ ಮುಗಿದ ಮೇಲೂ ಇದರ ಗಾಯಗಳು ದಶಕಗಳ ಕಾಲ ಉಳಿಯುತ್ತವೆ' ಎಂದು ಸಂಘಟನೆಯ ಮುಖಂಡರಾದ ಕೆ.ಮರುಳಸಿದ್ಧಪ್ಪ, ಜಿ.ರಾಮಕೃಷ್ಣ, ವಿಜಯಾ, ಎಸ್.ಜಿ.ಸಿದ್ದರಾಮಯ್ಯ, ರಾಜೇಂದ್ರ ಚೆನ್ನಿ, ವಿಮಲಾ.ಕೆ.ಎಸ್, ಮಾವಳ್ಳಿ ಶಂಕರ್, ಜಾಣಗೆರೆ ವೆಂಕಟರಾಮಯ್ಯ, ಬಂಜಗೆರೆ ಜಯಪ್ರಕಾಶ್, ಬಿ.ಶ್ರೀಪಾದ ಭಟ್ ಮತ್ತಿತರರು ಆತಂಕ ವ್ಯಕ್ತಪಡಿಸಿದ್ದಾರೆ.

> ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆ ಕುರಿತು ಮಾಹಿತಿ ಇಲ್ಲ. ಪ್ರಣಾಳಿಕೆ ಕುರಿತು ಸುಳ್ಳು ಹರಡುತ್ತಿರುವ ಅವರಿಗೆ ಚುನಾವಣಾ ಆಯೋಗ ನೋಟಿಸ್ ನೀಡಬೇಕು
> **ಬಿ.ವಿ. ಶ್ರೀನಿವಾಸ್**
> ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ

ಮುಸ್ಲಿಮರ ಮೀಸಲು ರದ್ದು: ಕಿಡಿ

ಪ್ರಜಾವಾಣಿ ವಾರ್ತೆ

ತುಮಕೂರು: 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಎಂಬ ಘೋಷ ವಾಕ್ಯವನ್ನು ಬಿಜೆಪಿಯ ವಿಕಾಸ ಎಂದಷ್ಟೇ ಬದಲಾಯಿಸಿಕೊಳ್ಳಲಿ ಎಂದು ಗೃಹ ಸಚಿವ ಜಿ.ಪರಮೇಶ್ವರ ಸಲಹೆ ಮಾಡಿದ್ದಾರೆ.

ಕೇಂದ್ರದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬಂದರೆ ಮುಸ್ಲಿಮರಿಗೆ ಕೊಡುತ್ತಿರುವ ಶೇ 4ರಷ್ಟು ಮೀಸಲಾತಿ ರದ್ದುಪಡಿಸುವುದಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆಗೆ ನಗರದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಬಿಜೆಪಿಗೆ ಮುಸ್ಲಿಮರ ವೋಟು ಬೇಡವಾಯಿತು. ಈಗ ಅವರೂ ಬೇಡವಾಗಿದ್ದಾರೆ. ಒಂದು ಸಮುದಾಯವನ್ನೇ ವಿರೋಧಿಸುವುದು ಸರಿಯಲ್ಲ ಎಂದು ಹೇಳಿದರು.

ರಾಜ್ಯದಲ್ಲಿ ಪ್ರಚಾರ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಅವರು 'ನಿಮ್ಮ ಮನೆಯ ತಾಳಿ ಕಿತ್ತು ಮುಸ್ಲಿಮರಿಗೆ ಕೊಡುತ್ತಾರೆ' ಎಂದು ಹೇಳಿದ್ದಾರೆ. ಇದು ಮನಸ್ಸಿಗೆ ತೀವ್ರ ನೋವು ತಂದಿದೆ. ಹಿಂದೆ ಪ್ರಧಾನಿಯಾಗಿದ್ದ ಮನಮೋಹನ್ ಸಿಂಗ್ ಅವರು 'ಅಭಿವೃದ್ಧಿ ಫಲ ದೇಶದ ಎಲ್ಲರಿಗೂ ಸಿಗಬೇಕು' ಎಂದು ಹೇಳಿದ್ದರು. ಆದರೆ ಈಗ ಮೋದಿ ಕೆಲವರಿಗೆ ಮಾತ್ರ ಸಿಗಬೇಕು ಎಂದು ಹೇಳುತ್ತಿದ್ದಾರೆ. ಇದರಿಂದ ಮೋದಿ ಮನಃಸ್ಥಿತಿ ಎಂತಹುದು ಎಂಬುದು ಗೊತ್ತಾಗುತ್ತದೆ ಎಂದು ಟೀಕಿಸಿದರು.

ಬಿಜೆಪಿ ವಿರುದ್ಧ ಯತೀಂದ್ರ ವಾಗ್ದಾಳಿ

ಮೈಸೂರು: 'ದೇಶದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ, ಎಲ್ಲ ಮಹಿಳೆಯರು ತಮ್ಮ ಗಂಡಂದಿರು ಹಾಗೂ ಮಕ್ಕಳನ್ನೂ ಕಳೆದುಕೊಳ್ಳುತ್ತಾರೆ' ಎಂದು ವರುಣ ವಿಧಾನಸಭಾ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷ ಡಾ.ಯತೀಂದ್ರ ಸಿದ್ದರಾಮಯ್ಯ ಆರೋಪಿಸಿದರು.

'ಬಿಜೆಪಿಯವರು ಕೋಮುಗಲಭೆ, ದೊಂಬಿ ಮಾಡಿಸಿ ಮಕ್ಕಳು ಸಾಯುವಂತೆ ಮಾಡುತ್ತಾರೆ. ಒಬ್ಬರಿಗೊಬ್ಬರು ಬಡಿದಾಡಿಕೊಳ್ಳುವ ಪರಿಸ್ಥಿತಿ ಸೃಷ್ಟಿಸುತ್ತಾರೆ' ಎಂದು ಸೋಮವಾರ ಇಲ್ಲಿ ದೂರಿದರು.

ಪ್ರಧಾನಿ ಮೋದಿ ವಿರುದ್ಧ ಕಿಮ್ಮನೆ ದೂರು

ತೀರ್ಥಹಳ್ಳಿ: ಪ್ರಧಾನಿ ನರೇಂದ್ರ ಮೋದಿ ಕೋಮು ಸಂಘರ್ಷದ ಸಂಚು ರೂಪಿಸುತ್ತಿದ್ದಾರೆ ಎಂದು ಆರೋಪಿಸಿ ಮಾಜಿ ಸಚಿವ ಕಿಮ್ಮನೆ ರತ್ನಾಕರ ಅವರು ಪ್ರಧಾನಿ ವಿರುದ್ಧ ತಾಲ್ಲೂಕು ಸಹಾಯಕ ಚುನಾವಣಾಧಿಕಾರಿ ಹಾಗೂ ಪೊಲೀಸ್ ಉಪ ಅಧೀಕ್ಷಕರಿಗೆ ಸೋಮವಾರ ದೂರು ನೀಡಿದ್ದಾರೆ. 'ಕಾಂಗ್ರೆಸ್ ಪಕ್ಷ ಗೆದ್ದರೆ ನಿಮ್ಮ ಮಂಗಳಸೂತ್ರವನ್ನು ಕಿತ್ತು ಮುಸ್ಲಿಮರಿಗೆ ಕೊಡುತ್ತದೆ' ಎಂದು ಮೋದಿ ಹೇಳಿದ್ದಾರೆ. ಈ ಮೂಲಕ ಅವರು ದೇಶದಲ್ಲಿ ಕೋಮುದ್ವೇಷ ಹರಡುತ್ತಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ತಿಳಿಸಲಾಗಿದೆ.

'ಕಾಂಗ್ರೆಸ್ ನಾಯಕರು ಆಸ್ತಿ ಹಂಚಲಿ'

ಬೆಂಗಳೂರು: ದೇಶದ ಜನರ ಆಸ್ತಿ ಕಿತ್ತುಕೊಂಡು ಮರುಹಂಚಿಕೆ ಮಾಡುವುದಕ್ಕೂ ಮೊದಲು ಕಾಂಗ್ರೆಸ್ ನಾಯಕರು ತಮ್ಮ ಆಸ್ತಿಯನ್ನು ಹಂಚಿಕೆ ಮಾಡಲಿ ಎಂದು ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಸವಾಲು ಹಾಕಿದರು. 'ಮೊದಲಿಗೆ ಸೋನಿಯಾಗಾಂಧಿ, ರಾಹುಲ್ ಗಾಂಧಿ ಮತ್ತು ಡಿ.ಕೆ.ಶಿವಕುಮಾರ್ ಅವರ ಆಸ್ತಿಯನ್ನು ಹಂಚಿಕೆ ಮಾಡಲಿ ಎಂದರು.



ರೋಡ್ ಶೋ

ಜಮ್ಮು ಮತ್ತು ಕಾಶ್ಮೀರದ ಅನಂತ್‌ನಾಗ್ ಜಿಲ್ಲೆಯಲ್ಲಿ ಸೋಮವಾರ ನಡೆದ ರೋಡ್ ಶೋನಲ್ಲಿ ನ್ಯಾಷನಲ್ ಡೆಮಾಕ್ರಟಿಕ್ ಪ್ರೋಗ್ರೆಸಿವ್ ಆಜಾದ್ ಪಕ್ಷದ ಮುಖ್ಯಸ್ಥ ಗುಲಾಂ ನಬಿ ಆಜಾದ್ ಭಾಗವಹಿಸಿದರು –ಪಿಟಿಐ ಚಿತ್ರ

ಸೂರತ್: ಬಿಜೆಪಿ ಅಭ್ಯರ್ಥಿ ಅವಿರೋಧ ಆಯ್ಕೆ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಸೂಚಕರ ಸಹಿಯಲ್ಲಿ ಲೋಪಗಳು ಇದ್ದ ಕಾರಣಕ್ಕೆ ಸೂರತ್‌ನ ಕಾಂಗ್ರೆಸ್ ಅಭ್ಯರ್ಥಿ ಹಾಗೂ ಅವರ ಬದಲಿ ಅಭ್ಯರ್ಥಿಯ ನಾಮಪತ್ರವು ಅಸಿಂಧುವಾಗಿದ್ದ ಮಾರನೆಯ ದಿನ ಎಂಟು ಮಂದಿ ಇತರ ಅಭ್ಯರ್ಥಿಗಳು ಕೂಡ ತಮ್ಮ ನಾಮಪತ್ರ ಹಿಂಪಡೆದರು. ಇದರ ಪರಿಣಾಮವಾಗಿ ಬಿಜೆಪಿ ಅಭ್ಯರ್ಥಿಯು ಈ ಕ್ಷೇತ್ರದಲ್ಲಿ ಅವಿರೋಧವಾಗಿ ಆಯ್ಕೆಯಾದರು. ಸೋಮವಾರ ನಾಮಪತ್ರ ಹಿಂಪಡೆದವರಲ್ಲಿ ಬಿಎಸ್‌ಪಿ ಅಭ್ಯರ್ಥಿಯೂ ಇದ್ದಾರೆ.

ಸೋಮವಾರ ಆರಂಭದಲ್ಲಿ ಒಟ್ಟು ಏಳು ಮಂದಿ ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ಹಿಂದಕ್ಕೆ ಪಡೆದರು. ಕೊನೆಯಲ್ಲಿ ಬಿಎಸ್‌ಪಿ ಅಭ್ಯರ್ಥಿ ಪ್ಯಾರೇಲಾಲ್ ಭಾರತಿ ಕೂಡ ನಾಮಪತ್ರ ಹಿಂದಕ್ಕೆ ಪಡೆದುಕೊಂಡರು. ಇದರ ಪರಿಣಾಮವಾಗಿ ಬಿಜೆಪಿ ಅಭ್ಯರ್ಥಿ ಮುಕೇಶ್ ದಲಾಲ್ ಅವರು ಮಾತ್ರ ಚುನಾವಣಾ ಕಣದಲ್ಲಿ ಉಳಿದುಕೊಂಡಂತೆ ಆಯಿತು.

ಸೂರತ್ ಲೋಕಸಭಾ ಕ್ಷೇತ್ರದಲ್ಲಿ ಒಟ್ಟು 17.67 ಲಕ್ಷಕ್ಕಿಂತ ಹೆಚ್ಚು ಮತದಾರರು ಇದ್ದಾರೆ. ಇದು ಬಿಜೆಪಿಯ ಭದ್ರಕೋಟೆ. 1984ರಲ್ಲಿ ಇಲ್ಲಿ ಕಾಂಗ್ರೆಸ್ ಕಡೆಯ ಬಾರಿಗೆ ಗೆಲುವು ಸಾಧಿಸಿತ್ತು.

ಚುನಾವಣಾ ಅಧಿಕಾರಿ ಸೌರಭ್ ಪರ್ಧಿ ಅವರು ದಲಾಲ್ ಅವರಿಗೆ ಚುನಾಯಿತರಾದ ಬಗ್ಗೆ ಪ್ರಮಾಣಪತ್ರ ಹಸ್ತಾಂತರಿಸಿದ್ದಾರೆ. ಈ ವಿಚಾರವಾಗಿ 'ಎಕ್ಸ್' ಮೂಲಕ ಸಂತಸ ಹಂಚಿಕೊಂಡಿರುವ ಗುಜರಾತ್ ಬಿಜೆಪಿ ಘಟಕದ ಅಧ್ಯಕ್ಷ ಸಿ.ಆರ್. ಪಾಟೀಲ್, 'ಪ್ರಧಾನಿ ನರೇಂದ್ರಭಾಯ್ ಮೋದಿ ಅವರಿಗೆ ಸೂರತ್ ಮೊದಲ ಕಮಲವನ್ನು ನೀಡಿದೆ. ಅವಿರೋಧವಾಗಿ ಆಯ್ಕೆ ಆಗಿರುವುದಕ್ಕೆ ಸೂರತ್ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಮುಕೇಶ್‌ಭಾಯ್ ದಲಾಲ್ ಅವರಿಗೆ ಅಭಿನಂದನೆಗಳು' ಎಂದು ಹೇಳಿದ್ದಾರೆ.

ಇಡೀ ಪ್ರಸಂಗವು ಪ್ರಜಾತಂತ್ರದ ಕೊಲೆ ಎಂದು ಕಾಂಗ್ರೆಸ್ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿರುವ ಪಾಟೀಲ್ ಅವರು, 'ಅವರು ಇದುವರೆಗೆ ಪ್ರಜಾತಂತ್ರವನ್ನು ಕೊಲ್ಲುತ್ತಿದ್ದರು. ಅವರಿಗೆ ನ್ಯಾಯಸಮ್ಮತ ಚುನಾವಣೆಯಲ್ಲಿ ಸ್ಪರ್ಧಿಸಲು ಆಗುವುದಿಲ್ಲ. ಆಡಳಿತ ಯಂತ್ರದ ಮೇಲೆ ಒತ್ತಡ ಇದೆ, ಸೂಚಕರನ್ನು ಅಪಹರಿಸುವ ಕೆಲಸದಲ್ಲಿ ಬಿಜೆಪಿ ಭಾಗಿಯಾಗಿದೆ ಎಂದು ಕಾಂಗ್ರೆಸ್ ಹೇಳುತ್ತಿದೆ. ಆದರೆ ನಾಮಪತ್ರಕ್ಕೆ ತಾವು ಸಹಿಯನ್ನೇ ಮಾಡಿಲ್ಲ ಎಂದು ಕಾಂಗ್ರೆಸ್ ಅಭ್ಯರ್ಥಿಯ ಸೂಚಕರು ಹೇಳುತ್ತಿದ್ದಾರೆ' ಎಂದರು.

ಇಡೀ ಭಾರತದಲ್ಲಿ ಬಿಜೆಪಿಯ ಐತಿಹಾಸಿಕ ಗೆಲುವಿಗೆ ಇದು ಆರಂಭ ಎಂದು ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಹೇಳಿದ್ದಾರೆ.

ಬಂಧನಗಳ ಟೀಕೆಯಲ್ಲೇ ಮಾತಿನ ಅಬ್ಬರ • ಆಮ್ ಆದ್ಮಿ ಪಕ್ಷದ ಪ್ರಚಾರಕ್ಕೆ ಗರ

ಎಎಪಿ: ಸದ್ದು ಮಾಡದ ಮಾತಿನ ಮಲ್ಲರು

• ಮಂಜುನಾಥ ಹೆಬ್ಬಾರ್

ನವದೆಹಲಿ: ಲೋಕಸಭಾ ಚುನಾವಣೆಗೆ ಮೊತ್ತಮೊದಲು ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿದ್ದ ಪಕ್ಷ 'ಆಮ್ ಆದ್ಮಿ ಪಕ್ಷ' (ಎಎಪಿ) ಎಂದರೆ ತಪ್ಪಾಗಲಾರದು. ಉಳಿದ ಪಕ್ಷಗಳು ಸೀಟು ಹಂಚಿಕೆ ಹಾಗೂ ಅಭ್ಯರ್ಥಿಗಳ ಹೆಸರು ಅಂತಿಮಗೊಳಿಸಲು ತಿಣುಕಾಡುತ್ತಿರುವಾಗ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹಾಗೂ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಗುಜರಾತ್ ಹಾಗೂ ಗೋವಾ ರಾಜ್ಯಗಳಲ್ಲಿ ಒಂದು ಸುತ್ತಿನ ಪ್ರಚಾರ ಪೂರ್ಣಗೊಳಿಸಿದ್ದರು. ಕೇಜ್ರಿವಾಲ್ ಬಂಧನದ ಬಳಿಕ ಪಕ್ಷದ ಚುನಾವಣಾ ಪ್ರಚಾರಕ್ಕೆ ಗರ ಬಡಿದಂತಾಗಿದೆ.



ಸಂಜಯ್ ಸಿಂಗ್

ಕೇಜ್ರಿವಾಲ್ ಬಂಧನದ ಬಳಿಕ ಪಕ್ಷದ ಕಾರ್ಯ ತಂತ್ರ, ಪ್ರತಿಭಟನೆ, 'ಇಂಡಿಯಾ' ಮೈತ್ರಿಕೂಟದ ಜತೆ ಸಂವಹನ ನಡೆಸುವ ಕಾರ್ಯಗಳ ಜವಾಬ್ದಾರಿ ಎರಡನೇ ಸಾಲಿನ ನಾಯಕರ ಮೇಲೆ ಬಿದ್ದಿದೆ. ಮಾನ್, ಜೈಲಿನಿಂದ ಈಚೆಗಷ್ಟೇ ಬಿಡುಗಡೆಗೊಂಡಿರುವ ಪಕ್ಷದ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್, ಸಚಿವರಾದ ಅತಿಶಿ, ಸೌರಭ್ ಭಾರದ್ವಾಜ್, ಪಕ್ಷದ ದೆಹಲಿ ಘಟಕದ ಸಂಚಾಲಕ ಗೋಪಾಲ್ ರಾಯ್ ಹಾಗೂ ಕೇಜ್ರಿವಾಲ್ ಪತ್ನಿ ಸುನಿತಾ ಅವರ ಮೇಲೆ ಹೆಚ್ಚಿನ ಹೊರೆ ಬಿದ್ದಿದೆ. ಸುನಿತಾ ಅವರು ಇಂಡಿಯಾ ಮೈತ್ರಿಕೂಟದ ದೆಹಲಿ ಹಾಗೂ ರಾಂಚಿ ರ್‍ಯಾಲಿಗಳಲ್ಲಿ ಭಾಗಿಯಾಗಿದ್ದಾರೆ. ಮಾನ್ ಅವರು ಪಂಜಾಬ್ ಪ್ರಚಾರಕ್ಕೆ ಸೀಮಿತರಾಗಿದ್ದಾರೆ. 'ವಾಚಾಳಿ'ಗಳೆಂದೇ ಪ್ರಖ್ಯಾತರಾದ ಅತಿಶಿ ಹಾಗೂ ಸೌರಭ್ ಅವರು ಚುನಾವಣಾ ಪ್ರಚಾರಕ್ಕಿಂತ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿಗೆ ಹೆಚ್ಚಿನ ಒತ್ತು ನೀಡುತ್ತಿದ್ದಾರೆ. ಸಂಜಯ್ ಸಿಂಗ್ ಅವರೇ ಈಗ ಪಕ್ಷದ ತಾರಾ ಪ್ರಚಾರಕರು.

ಪಕ್ಷ 10 ರಾಜ್ಯಸಭಾ ಸದಸ್ಯರನ್ನು ಹೊಂದಿದೆ. ಮೂವರು ದೆಹಲಿಯಿಂದ ಹಾಗೂ ಏಳು ಮಂದಿ ಪಂಜಾಬ್‌ನಿಂದ ಆಯ್ಕೆಯಾಗಿದ್ದಾರೆ. ಅವರಲ್ಲಿ ಕ್ರಿಕೆಟಿಗ ಹರ್ಭಜನ್ ಸಿಂಗ್ ಅವರೂ ಒಬ್ಬರು. ಸಿಂಗ್ ಅವರು ಪಕ್ಷದ ಚಟುವಟಿಕೆಗಳಲ್ಲಿ ಕಾಣಿಸಿಕೊಂಡಿದ್ದು ಕಡಿಮೆ. ಅವರ ಸಾಮಾಜಿಕ ಜಾಲತಾಣಗಳಲ್ಲಿ ಐಪಿಎಲ್ ಹಾಗೂ ಧಾರ್ಮಿಕ ಕಾರ್ಯಕ್ರಮಗಳ ಕುರಿತ ಪೋಸ್ಟ್‌ಗಳನ್ನು ಕಾಣಬಹುದು. ರಾಜ್ಯಸಭಾ ಸದಸ್ಯರಲ್ಲಿ ಸದ್ಯ ಹೆಚ್ಚು ಸಕ್ರಿಯರಾಗಿರುವವರು ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಯಾಗಿರುವ ಸಂದೀಪ್ ಪಾಠಕ್ ಒಬ್ಬರೇ. ಅವರು ಪಕ್ಷದ ಪ್ರತಿಭಟನೆಗಳಲ್ಲಿ ಮುಂಚೂಣಿಯಲ್ಲಿದ್ದಾರೆ. ಕೇಜ್ರಿವಾಲ್ ಬಂಧನದ ಬಳಿಕ ಹಲವು ಸದಸ್ಯರು ಸುನಿತಾ ಅವರನ್ನು ಭೇಟಿಯಾಗಿ ಸಾಂತ್ವನ ಹೇಳಿದ್ದಾರೆ. ಆ ಬಳಿಕ ಮೌನಕ್ಕೆ ಶರಣಾಗಿದ್ದಾರೆ. ಬಿಕ್ಕಟ್ಟಿನ ಸಮಯದಲ್ಲಿ ಹಿರಿಯ ನಾಯಕರ ಈ ಧೋರಣೆಗೆ ಪಕ್ಷದಲ್ಲೇ ಅಸಮಾಧಾನ ವ್ಯಕ್ತವಾಗಿದೆ.


ಮುಖಂಡರುಗಳು ಜೈಲಿನಲ್ಲಿ



• ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮಾರ್ಚ್ 21ರಂದು ಬಂಧನ. ಈಗ ಜೈಲಿನಲ್ಲಿ



• ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಎಎಪಿ ಸಚಿವರಾಗಿದ್ದ ಸತ್ಯೇಂದ್ರ ಜೈನ್ 2022ರ ಮೇ 30ಗಳಲ್ಲಿ ಬಂಧನ. ಅನಾರೋಗ್ಯದ ಕಾರಣಕ್ಕೆ ಕಳೆದ ವರ್ಷ ಮೇ 30ಗಳಲ್ಲಿ ಮಧ್ಯಂತರ ಜಾಮೀನು. ವಿಶೇಷ ನ್ಯಾಯಾಲಯದ ಮುಂದೆ ಹಾಜರಾಗಲು ಜೈನ್ ಅವರಿಗೆ ಸುಪ್ರೀಂ ಕೋರ್ಟ್ ಕಳೆದ 30ಗಳು ಸೂಚನೆ. ಜೈನ್ ಮತ್ತೆ ಜೈಲಿಗೆ



• ಅಬಕಾರಿ ನೀತಿ ಹಗರಣದಲ್ಲಿ ಉಪಮುಖ್ಯಮಂತ್ರಿಯಾಗಿದ್ದ ಮನೀಷ್ ಸಿಸೋಡಿಯಾ ಅವರನ್ನು 2023ರ ಫೆಬ್ರುವರಿ 26ರಂದು ಬಂಧಿಸಲಾಗಿತ್ತು. ಆಗಿನಿಂದ ಅವರು ಜೈಲಿನಲ್ಲಿದ್ದಾರೆ

ಚುನಾವಣೆ ಹೊತ್ತಲ್ಲಿ ಹೊರ ನಡೆದವರು

ಲೋಕಸಭಾ ಚುನಾವಣೆ ವೇಳಾಪಟ್ಟಿ ಪ್ರಕಟ ಹಾಗೂ ಅರವಿಂದ ಕೇಜ್ರಿವಾಲ್ ಬಂಧನದ ಬೆನ್ನಲ್ಲೇ ಮೂವರು ನಾಯಕರು ಪಕ್ಷವನ್ನು ತ್ಯಜಿಸಿದ್ದಾರೆ.

ದೆಹಲಿ ಸಚಿವ ರಾಜಕುಮಾರ್ ಆನಂದ್ ಅವರು ತಮ್ಮ ಹುದ್ದೆಗೆ ಹಾಗೂ ಎಎಪಿ ಪ್ರಾಥಮಿಕ ಸದಸ್ಯತ್ವಕ್ಕೆ ಇತ್ತೀಚೆಗೆ ರಾಜೀನಾಮೆ ನೀಡಿದ್ದಾರೆ. 'ಪಕ್ಷವು ಭ್ರಷ್ಟಾಚಾರದಲ್ಲಿ ಮುಳುಗಿದೆ ಹಾಗೂ ದಲಿತರನ್ನು ಕಡೆಗಣಿಸುತ್ತಿದೆ' ಎಂಬುದು ಅವರ ಆರೋಪ.

ಎಎಪಿಯ ಪಂಜಾಬ್‌ನ ಏಕೈಕ ಸಂಸದ ಸುಶೀಲ್ ಕುಮಾರ್ ರಿಂಕು ಅವರು ಪಕ್ಷದ ಶಾಸಕ ಶೀತಲ್ ಅಂಗುರಲ್ ಜತೆ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ರಿಂಕು ಅವರು ಜಲಂಧರ್ ಕ್ಷೇತ್ರದ ಸಂಸದ. ಶೀತಲ್ ಅವರು ಜಲಂಧರ್ ಪಶ್ಚಿಮ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದರು.

ಛಡ್ಡಾ, ಸ್ವಾತಿ ವಿದೇಶಕ್ಕೆ

ಎಎಪಿಯಲ್ಲಿ ಅತ್ಯಂತ ಸಕ್ರಿಯರಾಗಿರುವ ನಾಯಕರಲ್ಲಿ ರಾಜ್ಯಸಭಾ ಸದಸ್ಯ ರಾಘವ ಛಡ್ಡಾ ಅವರೂ ಒಬ್ಬರು. ಅವರು ಕೇಜ್ರಿವಾಲ್ ಅವರ ಪರಮಾಪ್ತ. ಕಣ್ಣಿನ ಶಸ್ತ್ರ ಚಿಕಿತ್ಸೆ ಕಾರಣಕ್ಕೆ ಅವರು ಕಳೆದ ತಿಂಗಳು ವಿದೇಶಕ್ಕೆ ತೆರಳಿದ್ದಾರೆ. ಹೀಗಾಗಿ, ಚುನಾವಣಾ ಕಣದಲ್ಲಿ ಅವರ ಅನುಪಸ್ಥಿತಿ ಕಾಡುತ್ತಿದೆ. ಆದರೆ, ಅವರು ಸಾಮಾಜಿಕ ಜಾಲತಾಣದಲ್ಲಿ ಸಕ್ರಿಯರಾಗಿದ್ದಾರೆ. ಕೇಜ್ರಿವಾಲ್ ಬಂಧನ ವಿರೋಧಿಸಿ ಆಗಾಗ ಪೋಸ್ಟ್ ಮಾಡುತ್ತಲೇ ಇರುತ್ತಾರೆ. ಸದ್ಯ ವಿದೇಶದಲ್ಲಿರುವ ಪಕ್ಷದ ಇನ್ನೊಬ್ಬ ಪ್ರಮುಖ ನಾಯಕಿಯೆಂದರೆ ಸ್ವಾತಿ ಮಲಿವಾಲ್. ದೆಹಲಿ ಮಹಿಳಾ ಆಯೋಗದ ಅಧ್ಯಕ್ಷೆಯಾಗಿದ್ದ ಸ್ವಾತಿ ಅವರು ಹೋರಾಟಗಾರ್ತಿಯೆಂದು ಗುರುತಿಸಿಕೊಂಡವರು. ಅವರು ಈಗ ಪಕ್ಷದ ರಾಜ್ಯಸಭಾ ಸದಸ್ಯರು. ಸಹೋದರಿಯ ಅನಾರೋಗ್ಯದ ಹಿನ್ನೆಲೆಯಲ್ಲಿ ಅವರು ವಿದೇಶಕ್ಕೆ ಹೋಗಿದ್ದಾರೆ. ಕೇಂದ್ರ ಸರ್ಕಾರದ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ನಿರಂತರ ವಾಗ್ದಾಳಿ ನಡೆಸುತ್ತಿದ್ದಾರೆ.

ಪಂಜಾಬ್‌ನಲ್ಲಿ ಸಂದಿಗ್ಧ

ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಿ ನೆಲೆ ವಿಸ್ತರಿಸಿಕೊಂಡ ಪಕ್ಷ ಎಎಪಿ. ಪಂಜಾಬ್‌ನಲ್ಲಿ ಕಾಂಗ್ರೆಸ್ ಸರ್ಕಾರ ವ್ಯಾಪಕ ಭ್ರಷ್ಟಾಚಾರ ನಡೆಸಿದೆ ಎಂಬುದು ಎಎಪಿಯ ಆರೋಪವಾಗಿತ್ತು. ರಾಜ್ಯದಲ್ಲಿ ಪಕ್ಷದ ಅಭೂತಪೂರ್ವ ಜಯಕ್ಕೆ ಇದು ಒಂದೂ ಕಾರಣ. ಅಬಕಾರಿ ನೀತಿ ಹಗರಣವನ್ನು ಮುಂದಿಟ್ಟುಕೊಂಡು ರಾಜ್ಯದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ವಾಗ್ದಾಳಿ ನಡೆಸುತ್ತಿವೆ. ಜತೆಗೆ, ಪಂಜಾಬ್‌ನ ಅಬಕಾರಿ ನೀತಿಯ ಬಗ್ಗೆಯೂ ತನಿಖೆ ನಡೆಸಬೇಕೆಂದು ಪಟ್ಟು ಹಿಡಿದಿವೆ. ಇದರಿಂದ, ರಾಜ್ಯದ ಎಎಪಿ ನಾಯಕರು ಸಂದಿಗ್ಧಕ್ಕೆ ಸಿಲುಕಿದ್ದಾರೆ.

ಚುಟುಕು

ಬಿಜೆಪಿ ಅಭ್ಯರ್ಥಿ ಆಸ್ತಿ ₹4,568 ಕೋಟಿ!

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತೆಲಂಗಾಣದ ಚೆವೆಳ್ಳ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೊಂಡಾ ವಿಶ್ವೇಶ್ವರ ರೆಡ್ಡಿ (ಕೆವಿಆರ್) ಅವರು ಲೋಕಸಭಾ ಚುನಾವಣೆ ಕಣದಲ್ಲಿರುವ ದೇಶದ ಅತ್ಯಂತ ಶ್ರೀಮಂತ ಅಭ್ಯರ್ಥಿಗಳಲ್ಲಿ ಒಬ್ಬರೆನಿಸಿದ್ದಾರೆ.

ಕೆವಿಆರ್ ಎಂದೇ ಜನಪ್ರಿಯರಾಗಿರುವ ವಿಶ್ವೇಶ್ವರ ರೆಡ್ಡಿ ಅವರು ಸೋಮವಾರ ನಾಮಪತ್ರ ಸಲ್ಲಿಸಿದ್ದು, ತಮ್ಮ ಕುಟುಂಬದ ಬಳಿ ₹ 4,568 ಕೋಟಿ ಆಸ್ತಿ ಇರುವುದಾಗಿ ಘೋಷಿಸಿಕೊಂಡಿದ್ದಾರೆ.

ಕೆವಿಆರ್ ಬಳಿ ₹1,240 ಕೋಟಿ, ಪತ್ನಿ ಸಂಗೀತಾ ರೆಡ್ಡಿ ಬಳಿ ₹3,208 ಕೋಟಿ ಹಾಗೂ ಪುತ್ರನ ಬಳಿ ₹ 108 ಕೋಟಿ ಆಸ್ತಿ ಇರುವುದಾಗಿ ಪ್ರಮಾಣಪತ್ರದಲ್ಲಿ ಹೇಳಿದ್ದಾರೆ. ದಂಪತಿಯು ಅಪೋಲೊ ಹಾಸ್ಪಿಟಲ್ಸ್ ಎಂಟರ್‌ಪ್ರೈಸಸ್ ಲಿಮಿಟೆಡ್, ಪಿಸಿಆರ್ ಇನ್‌ವೆಸ್ಟ್‌ಮೆಂಟ್ಸ್, ಸೇಫ್ರನ್ ಸೊಲ್ಯೂಷನ್ಸ್ ಒಳಗೊಂಡಂತೆ ವಿವಿಧ ಕಂಪನಿಗಳ ಷೇರುಗಳನ್ನು ಹೊಂದಿದ್ದಾರೆ. ಇವರ ಬಳಿ ₹ 11 ಕೋಟಿ ಮೌಲ್ಯದ ರತ್ನ ಹಾಗೂ ಚಿನ್ನ ಇದೆ. ಸಂಗೀತಾ ಅವರು ಅಪೋಲೊ ಹೆಲ್ತ್‌ಕೇರ್ ಸಮೂಹದ ಸ್ಥಾಪಕ ಡಾ.ಪ್ರತಾಪ್ ಸಿ.ರೆಡ್ಡಿ ಅವರ ಪುತ್ರಿ.

ಐಟಿ ಉದ್ಯಮಿಯಾಗಿರುವ ಕೆವಿಆರ್ ಅಮೆರಿಕದಲ್ಲಿ ವ್ಯಾಸಂಗ ಮಾಡಿ ಅಲ್ಲೇ ಉದ್ಯೋಗದಲ್ಲಿದ್ದರು. 2013 ರಲ್ಲಿ ಭಾರತಕ್ಕೆ ಮರಳಿ, ರಾಜಕೀಯ ಪ್ರವೇಶ ಮಾಡಿದ್ದರು. 2014 ರಲ್ಲಿ ಚೆವೆಳ್ಳ ಕ್ಷೇತ್ರದಿಂದ ಬಿಆರ್‌ಎಸ್ ಟಿಕೆಟ್‌ನಿಂದ ಸ್ಪರ್ಧಿಸಿ ಗೆದ್ದಿದ್ದರು. 2019 ರಲ್ಲಿ ಅದೇ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್‌ನಿಂದ ಸ್ಪರ್ಧಿಸಿ, ಬಿಆರ್‌ಎಸ್‌ನ ಡಾ.ಜಿ. ರಂಜಿತ್ ರೆಡ್ಡಿ ಎದುರು ಸೋತಿದ್ದರು. ಈ ಬಾರಿ ಬಿಜೆಪಿ ಟಿಕೆಟ್‌ನಿಂದ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ.

ಜಗನ್ ಆಸ್ತಿ ₹529 ಕೋಟಿ


ಅಮರಾವತಿ (ಆಂಧ್ರಪ್ರದೇಶ) (ಪಿಟಿಐ): ಆಂಧ್ರ ಪ್ರದೇಶ ಮುಖ್ಯಮಂತ್ರಿ ವೈ.ಎಸ್.ಜಗನ್‌ಮೋಹನ್ ರೆಡ್ಡಿ ಅವರು ₹ 529.50 ಕೋಟಿ ಆಸ್ತಿ ಇರುವುದಾಗಿ ಘೋಷಿಸಿಕೊಂಡಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಅವರ ಆಸ್ತಿ ಪ್ರಮಾಣ ಶೇ 41 ರಷ್ಟು ಹೆಚ್ಚಳವಾಗಿದೆ.



ಜಗನ್ ಮೋಹನ್ ರೆಡ್ಡಿ

2019ರ ಚುನಾವಣೆ ವೇಳೆ ಜಗನ್, ₹375.20 ಕೋಟಿ ಆಸ್ತಿ ಘೋಷಿಸಿಕೊಂಡಿದ್ದರು. ಜಗನ್ ಅವರು ಆಂಧ್ರಪ್ರದೇಶ ವಿಧಾನಸಭಾ ಚುನಾವಣೆಗೆ ಪುಲಿವೆಂದುಲ ಕ್ಷೇತ್ರದಿಂದ ಸೋಮವಾರ ನಾಮಪತ್ರ ಸಲ್ಲಿಸಿದರು.

ಎಂಥಾ ಮಾತು!



ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ 10 ವರ್ಷಗಳ ಆಡಳಿತದಲ್ಲಿ ಭಯೋತ್ಪಾದನೆಯನ್ನು ನಿರ್ಮೂಲನೆ ಮಾಡಿದ್ದಾರೆ. ನಕ್ಸಲಿಸಂ ಕೂಡಾ ಅವನತಿಯ ಹಾದಿ ಹಿಡಿದಿದೆ. ಛತ್ತೀಸ್‌ಗಢದಲ್ಲಿ ಹಿಂದಿನ ಕಾಂಗ್ರೆಸ್ ಸರ್ಕಾರ ನಕ್ಸಲರ ವಿರುದ್ಧ ಯಾವುದೇ ಕಠಿಣ ಕ್ರಮ ತೆಗೆದುಕೊಂಡಿರಲಿಲ್ಲ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕದ ನಾಲ್ಕು ತಿಂಗಳುಗಳಲ್ಲಿ ಭದ್ರತಾ ಪಡೆಗಳು 90 ನಕ್ಸಲರನ್ನು ಕೊಂದಿದೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ



ಮೊದಲ ಹಂತದ ಮತದಾನ ನಡೆದ ಕ್ಷೇತ್ರಗಳಲ್ಲಿ ಹಿನ್ನಡೆ ಆಗಿರುವುದನ್ನು ಮನಗಂಡಿರುವ ಬಿಜೆಪಿ ಆತಂಕಕ್ಕೆ ಒಳಗಾಗಿದೆ. ಆದ್ದರಿಂದ ಆ ಪಕ್ಷದ ನಾಯಕರು ಇಲ್ಲಸಲ್ಲದ ಹೇಳಿಕೆ ನೀಡುತ್ತಿದ್ದಾರೆ. ಕೇಸರಿ ಪಡೆಯ ಪತನ ಸನ್ನಿಹಿತವಾಗಿದೆ. ಸಂದೇಶ್‌ಖಾಲಿ ಘಟನೆಯು ಬಂಗಾಳ ಸರ್ಕಾರದ ಹೆಸರು ಕೆಡಿಸಲು ಬಿಜೆಪಿ ನಡೆಸಿರುವ 'ಪೂರ್ವಯೋಜಿತ ತಂತ್ರ'

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಕ್ಷೇತ್ರ ಮಹಾತ್ಮೆ



ಮಹಾರಾಷ್ಟ್ರದ ಪರ್ಭಣಿ ಲೋಕಸಭಾ ಕ್ಷೇತ್ರವು ಸಂಜಯ್ ಜಾಧವ್ ಮತ್ತು ಮಹಾದೇವ್ ಜಾನ್ಕರ್ ನಡುವಣ ನೇರ ಹಣಾಹಣಿಯಿಂದ ಗಮನ ಸೆಳೆದಿದೆ. ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾದಲ್ಲಿರುವ (ಯುಬಿಟಿ) ಜಾಧವ್ ಅವರು ಇಲ್ಲಿ ಎರಡು ಬಾರಿ ಗೆದ್ದಿದ್ದಾರೆ. ಈ ಸಲ ಅವರು ಮಹಾ ವಿಕಾಸ್ ಆಘಾಡಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಧನ್‌ಗರ್ ಸಮುದಾಯದ ಮುಖಂಡ, ರಾಷ್ಟ್ರೀಯ ಸಮಾಜ ಪಕ್ಷದ ಸ್ಥಾಪಕ ಮಹಾದೇವ್ ಅವರನ್ನು ಆಡಳಿತಾರೂಢ 'ಮಹಾಯುತಿ' ಮೈತ್ರಿಕೂಟವು ಅಖಾಡಕ್ಕಿಳಿಸಿದೆ. ಈ ಕ್ಷೇತ್ರವು ಅವಿಭಜಿತ ಶಿವಸೇನಾದ ಭದ್ರಕೋಟೆಯಾಗಿದೆ. ಕಳೆದ ಚುನಾವಣೆಯಲ್ಲಿ ಶಿವಸೇನಾದಿಂದ ಸ್ಪರ್ಧಿಸಿದ್ದ ಜಾಧವ್ ಅವರು 42,199 ಮತಗಳಿಂದ ಸಮೀಪದ ಪ್ರತಿಸ್ಪರ್ಧಿ ಎನ್‌ಸಿಪಿಯ ರಾಜೇಶ್ ವಿಟೆಕರ್ ಅವರನ್ನು ಪರಾಭವಗೊಳಿಸಿದ್ದರು. ಆದರೆ ಶಿವಸೇನಾ ವಿಭಜನೆಯಾಗಿರುವುದರಿಂದ ಮತ್ತು 'ಮಹಾಯುತಿ' ಮೈತ್ರಿಕೂಟವು ಪ್ರಬಲ ಅಭ್ಯರ್ಥಿಯನ್ನೇ ಕಣಕ್ಕಿಳಿಸಿರುವುದರಿಂದ ಈ ಬಾರಿ ತುರುಸಿನ ಹೋರಾಟ ನಿರೀಕ್ಷಿಸಲಾಗಿದೆ. ಧನ್‌ಗರ್ ಸಮುದಾಯದವರು ಮಹಾರಾಷ್ಟ್ರದ ಒಟ್ಟು ಜನಸಂಖ್ಯೆಯಲ್ಲಿ ಶೇ 9 ರಷ್ಟಿದ್ದು, ಪರ್ಭಣಿ ಕ್ಷೇತ್ರದಲ್ಲೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ಜಾನ್ಕರ್ ಅವರು ಪರ್ಭಣಿ ಕ್ಷೇತ್ರಕ್ಕೆ ಸೇರಿದವರಲ್ಲ. ಇದರಿಂದ ಚುನಾವಣಾ ಕಣದಲ್ಲಿ 'ಹೊರಗಿನವರು– ಒಳಗಿನವರು' ಎಂಬ ಚರ್ಚೆಯೂ ನಡೆಯುತ್ತಿದೆ. 'ನಾನು ಪಾಕಿಸ್ತಾನದಿಂದ ಬಂದಿಲ್ಲ. ಮಹಾರಾಷ್ಟ್ರದವನೇ ಆಗಿದ್ದೇನೆ. ಹೊರ ರಾಜ್ಯದಿಂದ ಬಂದು ಮಹಾರಾಷ್ಟ್ರದಲ್ಲಿ ಸ್ಪರ್ಧಿಸಿದ್ದ ಹಲವರು ಈ ಹಿಂದೆ ಗೆದ್ದಿಲ್ಲವೇ' ಎಂಬುದು ಜಾನ್ಕರ್ ಅವರ ಪ್ರಶ್ನೆ. ಮತ್ತೊಂದೆಡೆ ಜಾಧವ್, 'ಕೆಲವು ದ್ರೋಹಿಗಳು ನಮ್ಮ ಪಕ್ಷ ಹಾಗೂ ಚಿಹ್ನೆಯನ್ನು ಕಸಿದುಕೊಂಡಿದ್ದಾರೆ. ಅವರಿಗೆ ಪಾಠ ಕಲಿಸಬೇಕು' ಎನ್ನುತ್ತಾ ಮತದಾರರ ಬಳಿ ಹೋಗುತ್ತಿದ್ದಾರೆ.

ಮುಖಾಮುಖಿ

ಸಾರಣ್, (ಬಿಹಾರ)



ರಾಜೀವ್ ಪ್ರತಾಪ್ ರೂಡಿ
(ಬಿಜೆಪಿ)

ಬಿಹಾರದ ಸಾರಣ್ ಲೋಕಸಭಾ ಕ್ಷೇತ್ರದಿಂದ ಬಿಜೆಪಿಯು ಕೇಂದ್ರದ ಮಾಜಿ ಸಚಿವ, ಹಿರಿಯ ಮುಖಂಡ ರಾಜೀವ್ ಪ್ರತಾಪ್ ರೂಡಿ ಅವರನ್ನು ಮತ್ತೆ ಕಣಕ್ಕಿಳಿಸಿದೆ. 2014 ಮತ್ತು 2019ರಲ್ಲಿ ಇಲ್ಲಿಂದ ಜಯಿಸಿದ್ದ ಅವರು 'ಹ್ಯಾಟ್ರಿಕ್' ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. ರಾಜಕೀಯ ಅನುಭವ ಮತ್ತು ಕ್ಷೇತ್ರದಲ್ಲಿ ಹೊಂದಿರುವ ಪ್ರಭಾವದಿಂದ ರೂಡಿ ಮತ್ತೊಮ್ಮೆ ಗೆಲ್ಲಬಹುದು ಎಂಬುದು ಬಿಜೆಪಿ ನಾಯಕರ ಲೆಕ್ಕಾಚಾರ. ಕಳೆದ ಚುನಾವಣೆಯಲ್ಲಿ ಅವರು ಆರ್‌ಜೆಡಿಯ ಚಂದ್ರಿಕಾ ರಾಯ್ ವಿರುದ್ಧ 1,38,429 ಮತಗಳ ಅಂತರದಿಂದ ಗೆದ್ದಿದ್ದರು. 2014ರಲ್ಲಿ ಲಾಲು ಪ್ರಸಾದ್ ಪತ್ನಿ, ರಾಬ್ಡಿ ದೇವಿ ಅವರನ್ನು ಮಣಿಸಿದ್ದ ರೂಡಿ ಇದೀಗ ಮತ್ತೆ ಲಾಲು ಕುಟುಂಬದ ಸವಾಲು ಎದುರಿಸುತ್ತಿದ್ದಾರೆ. ಅಟಲ್ ಬಿಹಾರಿ ವಾಜಪೇಯಿ ಸರ್ಕಾರದಲ್ಲಿ ಸಚಿವರಾಗಿದ್ದ ಅವರು ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಮೊದಲ ಅವಧಿಯಲ್ಲಿ ಕೌಶಲಾಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿದ್ದರು.

v/s




ರೋಹಿಣಿ ಆಚಾರ್ಯ
(ಆರ್‌ಜೆಡಿ)

ಸಾರಣ್ ಕ್ಷೇತ್ರದಿಂದ 'ಇಂಡಿಯಾ' ಒಕ್ಕೂಟದ ಅಭ್ಯರ್ಥಿಯಾಗಿ ಆರ್‌ಜೆಡಿಯ ರೋಹಿಣಿ ಆಚಾರ್ಯ ಅಖಾಡಕ್ಕಿಳಿದಿದ್ದಾರೆ. ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರ ಕಿರಿಯ ಪುತ್ರಿಯಾಗಿರುವ ರೋಹಿಣಿ ಅವರು ಸಿಂಗಪುರದಲ್ಲಿ ನೆಲೆಸಿರುವರಾದರೂ, ಚುನಾವಣೆಯಲ್ಲಿ ಸ್ಪರ್ಧಿಸಲು ತವರಿಗೆ ಬಂದಿದ್ದಾರೆ. ಲಾಲು ಪ್ರಸಾದ್ ಅವರು 1977ರಲ್ಲಿ ಮೊದಲ ಬಾರಿ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದ ಅದೇ ಕ್ಷೇತ್ರದಿಂದ ರೋಹಿಣಿ ಕೂಡಾ ಚುನಾವಣಾ ರಾಜಕೀಯಕ್ಕೆ ಪದಾರ್ಪಣೆ ಮಾಡಲಿದ್ದಾರೆ. ಆಗ ಸಾರಣ್ ಲೋಕಸಭಾ ಕ್ಷೇತ್ರಕ್ಕೆ ಛಪ್ರಾ ಎಂಬ ಹೆಸರಿತ್ತು. 2009ರ ಕ್ಷೇತ್ರ ಮರುವಿಂಗಡಣೆ ಬಳಿಕ ಸಾರಣ್ ಎಂಬ ಹೆಸರು ಪಡೆದುಕೊಂಡಿತು. ರೋಹಿಣಿ ಅವರು 2022ರಲ್ಲಿ ತಮ್ಮ ಒಂದು ಕಿಡ್ನಿಯನ್ನು ತಂದೆಗೆ ದಾನವಾಗಿ ನೀಡಿದ್ದರು. ಲಾಲು ಅವರು ಮಗಳಿಗೆ ಟಿಕೆಟ್ ನೀಡಿ 'ಕುಟುಂಬ ರಾಜಕಾರಣ' ಪ್ರೋತ್ಸಾಹಿಸುತ್ತಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

ಷೇರುಪೇಟೆ ವಹಿವಾಟು

560



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,147
ಇಂದಿನ ಅಂತ್ಯ	22,336
▲	189
ದಿನದ ಗರಿಷ್ಠ	22,375

ವಿನಿಮಯ ದರ

$ ಡಾಲರ್	83.36
£ ಪೌಂಡ್	102.90
€ ಯುರೊ	88.79
¥ ಯೆನ್ (100ಕ್ಕೆ)	54

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹460
12 ಕ್ಕೆ	₹60
ಮೈಸೂರು	
100ಕ್ಕೆ	₹460

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಶನಿವಾರದ ದರ)

ಶೇಂಗಾ (ರಿಫೈನ್ಡ್)	₹1500 (1490)
ಸೋಯಾ (ರಿಫೈನ್ಡ್)	₹930 (945)
ಸೂರ್ಯಕಾಂತಿ (ರಿಫೈನ್ಡ್)	₹930 (930)
ಪಾಮೋಲಿನ್	₹930 (932)

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹290-462
ದ್ವಿತಳಿ (ಬಿ.ವಿ)	₹285-573

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹177
ಆರ್‌ಎಸ್‌ಎಸ್-5	₹171
ಗುಡ್ ಲಾಟ್	₹161

(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹7500-9700
ಕೆ.ಆರ್.ಪೇಟೆ	₹9450-9450
ಮಧುಗಿರಿ	₹7450-8000
ಪುತ್ತೂರು	₹5500-8600

ಮಾರುಕಟ್ಟೆ ಧಾರಣೆ

ಅಡಿಕೆ (ಬಂಟ್ವಾಳ)	
ಕೋಕ	18000-28500
ಹೊಸತು	28500-36500
ಹಳತು	36500-44500
ಕಾರ್ಕಳ	
ಹೊಸತು	25000-36500
ಹಳತು	30000-43500
ಕುಮಟ	
ಚಿಪ್ಪು	25499-28189
ಕೋಕ	12519-24609
ಫ್ಯಾಕ್ಟರಿ	11269-21429
ಹಳೆಚಾಲಿ	36509-39000
ಹೊಸಚಾಲಿ	31509-34409
ಸಾಗರ	
ಬಿಳಿಗೋಟು	15010-27666
ಚಾಲಿ	24989-34299
ಕೋಕ	11989-29099
ಕೆಂಪುಗೋಟು	22899-34299
ರಾಶಿ	35599-52749
ಸಿಪ್ಪೆಗೋಟು	9815-19299
ಪುತ್ತೂರು	
ಹೊಸತು	26500-36500
ಶಿವಮೊಗ್ಗ	
ಬೆಟ್ಟೆ	30069-56119
ಗೊರಬಲು	16959-35679
ರಾಶಿ	25050-52599
ಸರಕು	52599-80510
ಸಿದ್ದಾಪುರ	
ಬಿಳಿಗೋಟು	26219-30699
ಚಾಲಿ	33299-35099
ಕೋಕ	25149-28399
ಹಳೆಚಾಲಿ	34899-35599
ಕೆಂಪುಗೋಟು	28880-33699
ರಾಶಿ	43099-48989
ತಟ್ಟಿಬೆಟ್ಟೆ	35600-40000
ಶಿರಸಿ	
ಬೆಟ್ಟೆ	38210-46099
ಬಿಳಿಗೋಟು	24699-29209
ಚಾಲಿ	32109-36001
ಕೆಂಪುಗೋಟು	25200-32699
ರಾಶಿ	44019-50699
ಯಲ್ಲಾಪುರ	
ಅಪಿ	56879-59635
ಬಿಳಿಗೋಟು	22899-31499
ಕೋಕ	12212-28899
ಹಳೆಚಾಲಿ	37731-38222
ಹೊಸಚಾಲಿ	31609-35863

ಮುಂಬೈ ಧಾರಣೆ

ಶೇಂಗಾ

22-4-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1500)
ಒಂದು ವಾರದ ಡೆಲಿವರಿ	1505 (1495)
ಸೋಯಾ ಕಚ್ಚಾ	897 (905)
ಪಾಮ್ ವಾರದ ಡೆಲಿವರಿ	928 (932)
ಸೂರ್ಯಕಾಂತಿ ಎಣ್ಣೆ ಕಚ್ಚಾ	865(865)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹**72,500** (73,500)

ಬೆಳ್ಳಿ ಕೆ.ಜಿ ₹**81,500** (83,100)

ಆವರಣದಲ್ಲಿ ಶನಿವಾರದ ಧಾರಣೆ

ಚಿನ್ನ, ಬೆಳ್ಳಿ ದರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ 10 ಗ್ರಾಂ ಚಿನ್ನದ ದರವು ₹450 ಇಳಿಕೆಯಾಗಿ ₹73,650ಕ್ಕೆ ಮಾರಾಟವಾಯಿತು. ಬೆಳ್ಳಿಯು ಕೆ.ಜಿಗೆ ₹1,100 ಹೆಚ್ಚಳವಾಗಿ, ₹85,500ಕ್ಕೆ ಮುಟ್ಟಿದೆ.

ಮಧ್ಯಪ್ರಾಚ್ಯದ ಬಿಕ್ಕಟ್ಟಿನ ತೀವ್ರತೆ ಕಡಿಮೆಯಾಗಿರುವ ಬೆನ್ನಲ್ಲೇ ಲಾಭ ಗಳಿಕೆಗಾಗಿ ಹೂಡಿಕೆದಾರರು ಹಳದಿ ಲೋಹದ ಮಾರಾಟಕ್ಕೆ ಮುಂದಾಗಿದ್ದಾರೆ. ಹಾಗಾಗಿ, ಚಿನ್ನದ ಬೆಲೆಯಲ್ಲಿ ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ. ಬೆಂಗಳೂರಿನಲ್ಲಿ 10 ಗ್ರಾಂ ಚಿನ್ನವು ₹75,580ಕ್ಕೆ ಮಾರಾಟವಾಯಿತು. ಕೆ.ಜಿ ಬೆಳ್ಳಿಯು ₹84,900ಕ್ಕೆ ಮುಟ್ಟಿದೆ.

ಎರಡು ದಿನದಲ್ಲಿ ಹೂಡಿಕೆದಾರರ ಸಂಪತ್ತು ₹4.97 ಲಕ್ಷ ಕೋಟಿ ಏರಿಕೆ

ಷೇರುಪೇಟೆಯಲ್ಲಿ ಗೂಳಿ ಓಟ

ಮುಂಬೈ (ಪಿಟಿಐ): ಇಸ್ರೇಲ್–ಇರಾನ್ ನಡುವೆ ತಲೆದೋರಿದ್ದ ಉದ್ವಿಗ್ನತೆಯು ತುಸು ಕಡಿಮೆಯಾಗಿರುವುದರಿಂದ ದೇಶದ ಷೇರುಪೇಟೆಗಳಲ್ಲಿ ಸೋಮವಾರ ಸಕಾರಾತ್ಮಕ ವಹಿವಾಟು ನಡೆಯಿತು.

ಏಷ್ಯಾ ಹಾಗೂ ಯುರೋಪ್ ಮಾರುಕಟ್ಟೆಗಳು ಏರಿಕೆ ದಾಖಲಿಸಿವೆ. ಬ್ರೆಂಟ್ ಕಚ್ಚಾ ತೈಲ ದರವು ಇಳಿಕೆಯಾಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರುಗಳ ಖರೀದಿಯೂ ಹೆಚ್ಚಿದೆ. ಇದರಿಂದ ಸೂಚ್ಯಂಕಗಳು ಶೇ 1ರಷ್ಟು ಏರಿಕೆ ಕಂಡಿವೆ.

ಎರಡು ದಿನಗಳಲ್ಲಿ ಗೂಳಿಯ ಓಟದಿಂದಾಗಿ ಹೂಡಿಕೆದಾರರ ಸಂಪತ್ತು ₹4.97 ಲಕ್ಷ ಕೋಟಿ ಏರಿಕೆಯಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 560 ಅಂಶ (ಶೇ 0.77ರಷ್ಟು) ಏರಿಕೆ ಕಂಡು, 73,648 ಅಂಶಗಳಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು. ದಿನದ ವಹಿವಾಟಿನಲ್ಲಿ 679 ಅಂಶ ಏರಿಕೆ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 189 ಅಂಶ ಏರಿಕೆ ಕಂಡು, 22,336 ಅಂಶಗಳಲ್ಲಿ ವಹಿವಾಟು ಸ್ಥಿರಗೊಂಡಿತು.



ಸೆನ್ಸೆಕ್ಸ್ ಗುಚ್ಛದಲ್ಲಿನ ಎಲ್ ಆ್ಯಂಡ್ ಟಿ, ಬಜಾಜ್ ಫಿನ್‌ಸರ್ವ್, ಎಕ್ಸಿಸ್ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಅಲ್ಟ್ರಾಟೆಕ್ ಸಿಮೆಂಟ್, ವಿಪ್ರೊ, ಐಸಿಐಸಿಐ ಬ್ಯಾಂಕ್, ಇನ್ಫೊಸಿಸ್, ಎಚ್‌ಸಿಎಲ್ ಟೆಕ್ನಾಲಜೀಸ್ ಮತ್ತು ಏಷಿಯನ್ ಪೇಂಟ್ಸ್ ಷೇರುಗಳು ಏರಿಕೆ ಕಂಡಿವೆ. ಎನ್‌ಟಿಪಿಸಿ, ಜೆಎಸ್‌ಡಬ್ಲ್ಯು ಸ್ಟೀಲ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರಿನ ಮೌಲ್ಯ ಇಳಿಕೆಯಾಗಿದೆ.

ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.80ರಷ್ಟು ಇಳಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ 86.59 ಡಾಲರ್ ಆಗಿದೆ.

‘ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಕೊಂಚ ವಿರಾಮ ಪಡೆದಿದ್ದರೂ ಪರಿಸ್ಥಿತಿಯ ಅಸ್ಥಿರವಾಗಿದೆ. ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಚೇತರಿಕೆ ಕಂಡಿವೆ. ಕಚ್ಚಾ ತೈಲದ ಬೆಲೆ ಇಳಿಕೆಯಾದರೂ ಬೆಲೆಯು ಎತ್ತರದ ಮಟ್ಟದಲ್ಲಿಯೇ ಇದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯಸ್ಥ (ಸಂಶೋಧನೆ) ವಿನೋದ್ ನಾಯರ್ ತಿಳಿಸಿದ್ದಾರೆ.

ಜಿಯೊ ಫೈನಾನ್ಶಿಯಲ್ ಷೇರು ಏರಿಕೆ

ನವದೆಹಲಿ (ಪಿಟಿಐ): ಕೊನೆಯ ತ್ರೈಮಾಸಿಕದಲ್ಲಿ ಜಿಯೊ ಫೈನಾನ್ಶಿಯಲ್‌ನ ನಿವ್ವಳ ಲಾಭದಲ್ಲಿ ಏರಿಕೆಯಾಗಿದೆ. ಇದರಿಂದ ಕಂಪನಿಯ ಷೇರಿನ ಮೌಲ್ಯವು ಶೇ 3ರಷ್ಟಕ್ಕೂ ಹೆಚ್ಚು ಏರಿಕೆಯಾಗಿದ್ದು, 52 ವಾರಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ.

ಬಿಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 4ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹385ಕ್ಕೆ ಮುಟ್ಟಿದೆ.

ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯವು ಶೇ 3.98ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ 384.85ಕ್ಕೆ ತಲುಪಿದೆ. ಒಂದೇ ದಿನ ಎಂ–ಕ್ಯಾಪ್‌ಗೆ ₹8,100 ಕೋಟಿ ಸೇರ್ಪಡೆಯಾಗಿದೆ. ಒಟ್ಟು ಎಂ–ಕ್ಯಾಪ್ ₹2.43 ಲಕ್ಷ ಕೋಟಿಗೆ ತಲುಪಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ ₹14 ಸಾವಿರ ಕೋಟಿ ನಷ್ಟ

ಮುಂಬೈ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರಿನ ಮೌಲ್ಯ ಶೇ 1ರಷ್ಟು ಕುಸಿದಿದ್ದರಿಂದ, ಬ್ಯಾಂಕ್‌ನ ಮಾರುಕಟ್ಟೆ ಮೌಲ್ಯವು (ಎಂ–ಕ್ಯಾಪ್) ₹14,434 ಕೋಟಿ ಕರಗಿದೆ.

2023–24ನೇ ಆರ್ಥಿಕ ವರ್ಷದ ಕೊನೆಯ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ನಿವ್ವಳ ಲಾಭದಲ್ಲಿ ಏರಿಕೆಯಾಗಿದೆ. ಇದರ ಹೊರತಾಗಿಯೂ ಷೇರುಗಳು ಇಳಿಕೆ ಕಂಡಿವೆ. ಬಿಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 1.24ರಷ್ಟು ಇಳಿಕೆ ಕಂಡು, ಪ್ರತಿ ಷೇರಿನ ಬೆಲೆ ₹1,512.30 ಆಗಿದೆ. ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 1.10ರಷ್ಟು ಇಳಿಕೆ ಕಂಡಿದ್ದು, ಪ್ರತಿ ಷೇರಿನ ಬೆಲೆ ₹1,514.35 ಆಗಿದೆ.

ಬ್ಯಾಂಕ್‌ನ ಒಟ್ಟು ಎಂ–ಕ್ಯಾಪ್ ₹11.48 ಲಕ್ಷ ಆಗಿದೆ.

ಸುದ್ದಿ 2 ನಿಮಿಷ

ಜೊಮಾಟೊ ಆಹಾರ ಶುಲ್ಕ ದುಬಾರಿ

ನವದೆಹಲಿ (ಪಿಟಿಐ): ಆನ್‌ಲೈನ್‌ನಲ್ಲಿ ಆಹಾರ ಪದಾರ್ಥ ಪೂರೈಸುವ ಜೊಮಾಟೊ ಕಂಪನಿಯು ತನ್ನ ಪ್ರತಿ ಆರ್ಡರ್ ಮೇಲೆ ವಿಧಿಸುವ ಶುಲ್ಕವನ್ನು (ಪ್ಲಾಟ್‌ಫಾರ್ಮ್ ಫೀ) ₹4ರಿಂದ ₹5ಕ್ಕೆ ಹೆಚ್ಚಿಸಿದೆ.

ನವದೆಹಲಿ, ಬೆಂಗಳೂರು, ಮುಂಬೈ ಹಾಗೂ ಹೈದರಾಬಾದ್ ಸೇರಿ ಪ್ರಮುಖ ನಗರಗಳಲ್ಲಿ ಈ ಶುಲ್ಕ ಏರಿಕೆಯು ಜಾರಿಗೆ ಬರಲಿದೆ ಎಂದು ಮೂಲಗಳು ತಿಳಿಸಿವೆ.

ಅಲ್ಲದೆ, ಪ್ರಮುಖ ನಗರಗಳ ಪ್ರಸಿದ್ಧ ರೆಸ್ಟೋರೆಂಟ್‌ಗಳಿಂದ ಇತರೆ ನಗರಗಳಿಗೆ ಆಹಾರ ಪೂರೈಸುತ್ತಿದ್ದ ‘ಇಂಟರ್‌ಸಿಟಿ ಲೆಜೆಂಡ್ಸ್’ ಸೇವೆಯನ್ನು ರದ್ದುಪಡಿಸಿದೆ.



2023–24ನೇ ಆರ್ಥಿಕ ವರ್ಷದ ಕೊನೆಯ ತ್ರೈಮಾಸಿಕದ ಫಲಿತಾಂಶವನ್ನು ಪ್ರಕಟಿಸುವುದಕ್ಕೂ ಮೊದಲೇ ಶುಲ್ಕ ಹೆಚ್ಚಿಸಿದೆ.

‘ಕಂಪನಿಯ ಲಾಭ ಮತ್ತು ವರಮಾನ ಹೆಚ್ಚಳಕ್ಕಾಗಿ ಕಾಲಕಾಲಕ್ಕೆ ಇಂತಹ ನಿರ್ಧಾರ ಕೈಗೊಳ್ಳುವುದು ಅನಿವಾರ್ಯವಾಗಿದೆ’ ಎಂದು ಜೊಮಾಟೊ ವಕ್ತಾರರು, ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಕಳೆದ ವರ್ಷದ ಆಗಸ್ಟ್‌ನಲ್ಲಿ ಕಂಪನಿಯು ಪ್ಲಾಟ್‌ಫಾರ್ಮ್ ಶುಲ್ಕವನ್ನು ಜಾರಿಗೊಳಿಸಿತ್ತು. ಆರಂಭದಲ್ಲಿ ₹2 ನಿಗದಿಪಡಿಸಿತ್ತು. ನಂತರ ಇದನ್ನು ಹಂತ ಹಂತವಾಗಿ ಏರಿಕೆ ಮಾಡಿದೆ. ಪ್ರತಿಸ್ಪರ್ಧಿಯಾದ ಸ್ವಿಗ್ಗಿ ಕಂಪನಿಯು ₹5 ಪ್ಲಾಟ್‌ಫಾರ್ಮ್ ಶುಲ್ಕ ವಿಧಿಸುತ್ತಿದೆ.

ಮೇ 1ರಿಂದ ನ್ಯಾನೊ ಯೂರಿಯಾ ಪ್ಲಸ್ ಲಭ್ಯ

ನವದೆಹಲಿ (ಪಿಟಿಐ): ಈ ವಾರದಿಂದಲೇ ದ್ರವರೂಪದ ನ್ಯಾನೊ ಯೂರಿಯಾ ಪ್ಲಸ್ ತಯಾರಿಕೆ ಆರಂಭವಾಗಲಿದ್ದು, ಮೇ 1ರಿಂದ ಮಾರುಕಟ್ಟೆಯಲ್ಲಿ ಈ ರಸಗೊಬ್ಬರವು ರೈತರಿಗೆ ದೊರೆಯಲಿದೆ ಎಂದು ಇಫ್ಕೊ ಸಂಸ್ಥೆ ತಿಳಿಸಿದೆ.

ದ್ರವರೂಪದ ನ್ಯಾನೊ ಯೂರಿಯಾದಲ್ಲಿ ಶೇ 1ರಿಂದ 5ರಷ್ಟು ಸಾರಜನಕ ಅಂಶವಿದೆ. ಇದರ ಸುಧಾರಿತ ಮಾದರಿಯಾದ ನ್ಯಾನೊ ಯೂರಿಯಾ ಪ್ಲಸ್‌ನಲ್ಲಿ ಶೇ 16ರಷ್ಟು ಸಾರಜನಕ ಅಂಶವಿದೆ. ಇದು ಫಸಲಿಗೆ ನಿರ್ಣಾಯಕ ಹಂತದಲ್ಲಿ ಬೇಕಾದ ಅಗತ್ಯ ಪೋಷಕಾಂಶವನ್ನು ಒದಗಿಸುತ್ತದೆ ಎಂದು ತಿಳಿಸಿದೆ.

ಸಂಸ್ಥೆಯ ಒಡೆತನಕ್ಕೆ ಸೇರಿರುವ ಮೂರು ಘಟಕಗಳಲ್ಲಿ ಉತ್ಪಾದನೆ ಆರಂಭವಾಗಲಿದೆ. ಪ್ರತಿದಿನ 2 ಲಕ್ಷ ಬಾಟಲಿಗಳನ್ನು ತಯಾರಿಸಲಾಗುತ್ತದೆ ಎಂದು ಇಫ್ಕೊದ ಹಿರಿಯ ಅಧಿಕಾರಿಯೊಬ್ಬರು ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮುಂದಿನ ಮೂರು ವರ್ಷಗಳ ಕಾಲ ಇಫ್ಕೊ ಈ ಗೊಬ್ಬರವನ್ನು ಉತ್ಪಾದಿಸಲಿದೆ ಎಂದು ಈಗಾಗಲೇ ಕೇಂದ್ರ ಸರ್ಕಾರ ಪ್ರಕಟಿಸಿದೆ.

2021ರಲ್ಲಿ ನ್ಯಾನೊ ಯೂರಿಯಾ ತಯಾರಿಕೆಗೆ ಚಾಲನೆ ನೀಡಲಾಗಿದ್ದು, ಇಲ್ಲಿಯವರೆಗೆ 7.5 ಕೋಟಿ ಬಾಟಲಿಗಳು ಮಾರಾಟವಾಗಿವೆ. 2023ರಲ್ಲಿ ನ್ಯಾನೊ ಡಿಎಪಿ ಉತ್ಪಾದನೆ ಆರಂಭಿಸಲಾಗಿದ್ದು, ಇಲ್ಲಿಯತನಕ 45 ಲಕ್ಷ ಬಾಟಲಿಗಳನ್ನು ಮಾರಾಟ ಮಾಡಲಾಗಿದೆ.

ಗುರಿ ತಲುಪದ ಉತ್ಪಾದನೆ: ದೊರಕದ ಪಿಎಲ್‌ಐಬಿ

ಹಟ್ಟಿ: ಗಣಿ ಕಾರ್ಮಿಕರಿಗಿಲ್ಲ ಉತ್ಪಾದನಾ ಪ್ರೋತ್ಸಾಹ ಧನ

ಪ್ರಜಾವಾಣಿ ವಾರ್ತೆ

ಹಟ್ಟಿ ಚಿನ್ನದ ಗಣಿ (ರಾಯಚೂರು ಜಿಲ್ಲೆ): ಇಲ್ಲಿನ ಚಿನ್ನದ ಗಣಿ ಆಡಳಿತ ಮಂಡಳಿಯೊಂದಿಗೆ ಕಾರ್ಮಿಕ ಸಂಘ ಮಾಡಿಕೊಂಡಿರುವ ಒಪ್ಪಂದದಂತೆ 1,580 ಕೆ.ಜಿ ಚಿನ್ನ ಉತ್ಪಾದನೆಯ ಗುರಿ ತಲುಪದೆ ಇರುವುದರಿಂದ ಈ ಬಾರಿಯೂ ಉತ್ಪಾದನಾ ಪ್ರೋತ್ಸಾಹ ಧನದಿಂದ (ಪಿಎಲ್‌ಐಬಿ) ವಂಚಿತರಾಗುವ ಆತಂಕ ಕಾರ್ಮಿಕರನ್ನು ಕಾಡುತ್ತಿದೆ.

2023–24ನೇ ಆರ್ಥಿಕ ವರ್ಷದಲ್ಲಿ 1,553 ಕೆ.ಜಿ ಚಿನ್ನ ಉತ್ಪಾದನೆಯಾಗಿದೆ. ಒಪ್ಪಂದದ ಪ್ರಕಾರ ಚಿನ್ನ ಉತ್ಪಾದನೆ ಗುರಿ ತಲುಪದ ಕಾರಣ ಪಿಎಲ್‌ಐಬಿ ಸಿಗುವುದು ಕಷ್ಟ. 2020–21ನೇ ಸಾಲಿನಲ್ಲಿ 1,115 ಕೆ.ಜಿ, 2021–22ನೇ ಸಾಲಿನಲ್ಲಿ 1,238 ಕೆ.ಜಿ, 2022–23ನೇ ಸಾಲಿನಲ್ಲಿ 1,411 ಕೆ.ಜಿ. ಚಿನ್ನ ಉತ್ಪಾದನೆಯಾದ ಕಾರಣ ಕಳೆದ ಮೂರು ಆರ್ಥಿಕ ವರ್ಷಗಳಿಂದ ಕಾರ್ಮಿಕರಿಗೆ ಪಿಎಲ್‌ಐಬಿ ನೀಡಿಲ್ಲ.

ಪಿಎಲ್‌ಐಬಿ ಕುರಿತು 2018–19ನೇ ಸಾಲಿನಲ್ಲಿ ಒಪ್ಪಂದ ಮಾಡಿಕೊಳ್ಳುವ ಮೊದಲು, ಗಣಿ ಕಂಪನಿ ಗಳಿಸಿದ ಲಾಭಾಂಶದ ಆಧಾರದ ಮೇಲೆ ಉತ್ಪಾದನಾ ಪ್ರೋತ್ಸಾಹ ಧನ ನೀಡಲಾಗುತ್ತಿತ್ತು. ಒಪ್ಪಂದದ ನಂತರ ಪಿಎಲ್‌ಐಬಿ ಪಡೆಯುವುದು ಕಷ್ಟವಾಗಿದೆ ಎನ್ನುತ್ತಾರೆ ಕಾರ್ಮಿಕರು.



ಹಟ್ಟಿ ಚಿನ್ನದ ಗಣಿ ಕಂಪನಿಯ ಹೊರನೋಟ

‘ಚಿನ್ನ ಉತ್ಪಾದನೆ ಬದಲಿಗೆ ಅದಿರು ಉತ್ಪಾದನೆ ಆಧಾರದಲ್ಲಿ ಪಿಎಲ್‌ಐಬಿ ನೀಡಬೇಕು ಎಂದು ಗಣಿ ಆಡಳಿತ ಮಂಡಳಿಯನ್ನು ಒತ್ತಾಯಿಸಿದ್ದೇವೆ. ವ್ಯವಸ್ಥಾಪಕ ನಿರ್ದೇಶಕರೂ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ನಿರ್ದೇಶಕರ ಮಂಡಳಿ ಸಭೆಯಲ್ಲಿ ಅಂತಿಮ ತೀರ್ಮಾನ ಕೈಗೊಳ್ಳಲಾಗುತ್ತದೆ’ ಎಂದು ಹಟ್ಟಿ ಚಿನ್ನದ ಗಣಿ ಕಾರ್ಮಿಕ ಸಂಘದ (ಎಐಟಿಯುಸಿ) ಅಧ್ಯಕ್ಷ ಎಸ್.ಎಂ. ಶಫಿ ‘ಪ್ರಜಾವಾಣಿ’ಗೆ ತಿಳಿಸಿದರು.

₹10 ಲಕ್ಷ ಕೋಟಿ ದಾಟಿದ ರಿಲಯನ್ಸ್ ವಹಿವಾಟು

ನವದೆಹಲಿ (ಪಿಟಿಐ): 2023–24ನೇ ಆರ್ಥಿಕ ವರ್ಷದಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ವಹಿವಾಟು ₹10 ಲಕ್ಷ ಕೋಟಿ ದಾಟಿದೆ. ಈ ಸಾಧನೆ ಮಾಡಿದ ದೇಶದ ಮೊದಲ ಕಂಪನಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

2022–23ನೇ ಆರ್ಥಿಕ ವರ್ಷದಲ್ಲಿ ₹9.74 ಲಕ್ಷ ಕೋಟಿ ವಹಿವಾಟು ನಡೆಸಿತ್ತು. ಇದಕ್ಕೆ ಹೋಲಿಸಿದರೆ ವಹಿವಾಟಿನಲ್ಲಿ ಶೇ 2.6ರಷ್ಟು ಏರಿಕೆಯಾಗಿದೆ.

ಹೆಚ್ಚಿನ ತೈಲ ಬೆಲೆಯಿಂದಾಗಿ ವರಮಾನದಲ್ಲೂ ಶೇ 11ರಷ್ಟು ಏರಿಕೆಯಾಗಿದ್ದು, ₹2.64 ಲಕ್ಷ ಕೋಟಿ ಗಳಿಸಿದೆ. 2023–24ನೇ ಪೂರ್ಣ ಹಣಕಾಸು ವರ್ಷದಲ್ಲಿ ನಿವ್ವಳ ಲಾಭವು ₹69,621 ಕೋಟಿಯಾಗಿದೆ.

ತೆರಿಗೆ ಪೂರ್ವದ ಲಾಭವು ₹1 ಲಕ್ಷ ಕೋಟಿ ಆಗಿದ್ದು, ಈ ಸಾಧನೆ ಮಾಡಿದ ರಾಷ್ಟ್ರದ ಪ್ರಥಮ ಕಂಪನಿಯಾಗಿದೆ.

ಆದರೆ, ಕೊನೆಯ ತ್ರೈಮಾಸಿಕದಲ್ಲಿ (ಜನವರಿ–ಮಾರ್ಚ್) ಕಂಪನಿಯ ನಿವ್ವಳ ಲಾಭವು ಸ್ಥಿರವಾಗಿದೆ. ಒಟ್ಟು ₹18,951 ಕೋಟಿ ನಿವ್ವಳ ಲಾಭಗಳಿಸಿದೆ. 2022–23ರ ಇದೇ ಅವಧಿಯಲ್ಲಿ ₹19,299 ಕೋಟಿ ಲಾಭ ಗಳಿಸಿತ್ತು.

ಜಿಯೊಗೆ ₹5,337 ಕೋಟಿ ಲಾಭ: ರಿಲಯನ್ಸ್ ಜಿಯೊ ಇನ್ಫೋಕಾಮ್ ಕೊನೆಯ ತ್ರೈಮಾಸಿಕದಲ್ಲಿ ₹5,337 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಇದೇ ಅವಧಿಯಲ್ಲಿ ₹4,716 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಶೇ 13ರಷ್ಟು ಹೆಚ್ಚಳವಾಗಿದೆ. ವರಮಾನವು ಶೇ 11ರಷ್ಟು ಏರಿಕೆಯಾಗಿದ್ದು, ಒಟ್ಟು ₹25,959 ಕೋಟಿಗೆ ಮುಟ್ಟಿದೆ ಎಂದು ಕಂಪನಿ ತಿಳಿಸಿದೆ.

2023–24ನೇ ಆರ್ಥಿಕ ವರ್ಷದಲ್ಲಿ ಒಟ್ಟು ನಿವ್ವಳ ಲಾಭವು ₹20,466 ಕೋಟಿ ಆಗಿದೆ. ಹಿಂದಿನ ಅವಧಿಗಿಂತ ಶೇ 12ರಷ್ಟು ಹೆಚ್ಚಳವಾಗಿದೆ. ವರಮಾನದಲ್ಲಿ ಶೇ 10ರಷ್ಟು ಏರಿಕೆಯಾಗಿ, ₹1 ಲಕ್ಷ ಕೋಟಿಗೆ ಮುಟ್ಟಿದೆ ಎಂದು ಕಂಪನಿ ತಿಳಿಸಿದೆ.

ಜಿಯೊ ಫೈನಾನ್ಶಿಯಲ್‌ಗೆ ಲಾಭ: 2023–24ನೇ ಪೂರ್ಣ ಆರ್ಥಿಕ ವರ್ಷದಲ್ಲಿ ಜಿಯೊ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್‌ನ ನಿವ್ವಳ ಲಾಭವು ₹1,605 ಕೋಟಿಯಾಗಿದೆ. ಹಿಂದಿನ ಹಣಕಾಸು ವರ್ಷದಲ್ಲಿ ₹31 ಕೋಟಿ ಮಾತ್ರ ಲಾಭ ಗಳಿಸಿತ್ತು. ಕೊನೆಯ ತ್ರೈಮಾಸಿಕದಲ್ಲಿ ₹311 ಕೋಟಿ ಲಾಭ ಗಳಿಸಿದೆ.

₹2,698 ಕೋಟಿ ರಿಟೇಲ್ ಲಾಭ: ರಿಲಯನ್ಸ್ ರೀಟೇಲ್ ವೆಂಚರ್ಸ್ ಲಿಮಿಟೆಡ್ (ಆರ್‌ಆರ್‌ವಿಎಲ್) ನಿವ್ವಳ ಲಾಭವು ಮಾರ್ಚ್ ತ್ರೈಮಾಸಿಕದಲ್ಲಿ ಶೇ 11.7ರಷ್ಟು ಏರಿಕೆಯಾಗಿದೆ. ₹2,698 ಕೋಟಿ ಗಳಿಸಿದೆ. ಹಿಂದಿನ ಇದೇ ಅವಧಿಯಲ್ಲಿ ₹2,415 ಕೋಟಿ ಲಾಭ ದಾಖಲಾಗಿತ್ತು.

ಒಂದೇ ದಿನ 4.71 ಲಕ್ಷ ಜನ ವಿಮಾನದಲ್ಲಿ ಸಂಚಾರ

ನವದೆಹಲಿ (ಪಿಟಿಐ): ದೇಶೀಯ ಮಾರ್ಗದಲ್ಲಿ ಭಾನುವಾರದಂದು 6,128 ವಿಮಾನಗಳು ಹಾರಾಟ ನಡೆಸಿದ್ದು, ಒಟ್ಟು 4,71,751 ಪ್ರಯಾಣಿಕರು ಸಂಚರಿಸಿದ್ದಾರೆ. ಇಷ್ಟು ಮಂದಿ ಒಂದು ದಿನದಲ್ಲಿ ಪ್ರಯಾಣಿಸಿರುವುದು ದಾಖಲಾಗಿದೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯವು ತಿಳಿಸಿದೆ. ಕೋವಿಡ್ ಪೂರ್ವದಲ್ಲಿ ದಿನವೊಂದಕ್ಕೆ ಸರಾಸರಿ 3,98,598 ಮಂದಿ ಪ್ರಯಾಣಿಸಿದ್ದರು. ಇದಕ್ಕೆ ಹೋಲಿಸಿದರೆ ಪ್ರಯಾಣಿಕರ ಸಂಖ್ಯೆಯಲ್ಲಿ ಶೇ 14ರಷ್ಟು ಹೆಚ್ಚಳವಾಗಿದೆ.

ಕಳೆದ ವರ್ಷದ ಏಪ್ರಿಲ್ 21ರಂದು 5,899 ವಿಮಾನಗಳು ಹಾರಾಟ ನಡೆಸಿದ್ದು, 4,28,389 ಪ್ರಯಾಣಿಕರು ಸಂಚರಿಸಿದ್ದರು. ಪ್ರತಿ ದಿನವೂ ದೇಶೀಯ ವಿಮಾನಯಾನ ವಲಯದ ಬೆಳವಣಿಗೆಯು ಹೊಸ ಎತ್ತರಕ್ಕೆ ತಲುಪುತ್ತಿದೆ ಎಂದು ಸಚಿವಾಲಯವು ‘ಎಕ್ಸ್’ನಲ್ಲಿ ತಿಳಿಸಿದೆ.

ಎಂಡಿಎಚ್, ಎವರೆಸ್ಟ್‌ನಲ್ಲಿ ಕೀಟನಾಶಕ ಅಂಶ ಪತ್ತೆ

ಹಾಂಗ್‌ಕಾಂಗ್, ಸಿಂಗಪುರದಲ್ಲಿ ಉತ್ಪನ್ನಕ್ಕೆ ನಿಷೇಧ

ನವದೆಹಲಿ (ಪಿಟಿಐ): ಎಂಡಿಎಚ್ ಹಾಗೂ ಎವರೆಸ್ಟ್ ಬ್ರ್ಯಾಂಡ್‌ನ ನಾಲ್ಕು ಮಸಾಲೆ ಉತ್ಪನ್ನಗಳಲ್ಲಿ ಎಥಿಲೀನ್ ಆಕ್ಸೈಡ್ ಎಂಬ ಕೀಟನಾಶಕ ಅಂಶ ಪತ್ತೆಯಾಗಿದ್ದು, ಹಾಂಗ್‌ಕಾಂಗ್ ಹಾಗೂ ಸಿಂಗಪುರದಲ್ಲಿ ಈ ಪದಾರ್ಥಗಳ ಮಾರಾಟಕ್ಕೆ ನಿಷೇಧ ಹೇರಲಾಗಿದೆ.

ಗ್ರಾಹಕರು ಈ ಉತ್ಪನ್ನಗಳನ್ನು ಖರೀದಿಸಬಾರದು. ವ್ಯಾಪಾರಿಗಳು ಇವುಗಳನ್ನು ಮಾರಾಟ ಮಾಡಬಾರದು ಎಂದು ಹಾಂಗ್‌ಕಾಂಗ್‌ನ ಆಹಾರ ಸುರಕ್ಷತೆ ಕೇಂದ್ರವು ಸೂಚಿಸಿದೆ. ಸಿಂಗಪುರದಲ್ಲಿಯೂ ಅಲ್ಲಿನ ಆಹಾರ ಏಜೆನ್ಸಿಯು ಈ ಆದೇಶ ಹೊರಡಿಸಿದೆ.

ಎಂಡಿಎಚ್‌ನ ಮದ್ರಾಸ್ ಕರ್ರಿ ಪೌಡರ್, ಎವರೆಸ್ಟ್ ಫಿಶ್ ಕರ್ರಿ ಮಸಾಲೆ, ಎಂಡಿಎಚ್ ಸಾಂಬಾರ್ ಮಸಾಲೆ ಮಿಕ್ಸ್ಡ್ ಪೌಡರ್ ಹಾಗೂ ಎಂಡಿಎಚ್ ಕರ್ರಿ ಪೌಡರ್ ಮಿಕ್ಸ್ಡ್ ಮಸಾಲೆ ಪೌಡರ್‌ನಲ್ಲಿ ಕೀಟನಾಶಕ ಅಂಶ ಪತ್ತೆಯಾಗಿದೆ.

ಈ ಬಗ್ಗೆ ತನಿಖೆ ಮುಂದುವರಿದಿದೆ ಎಂದು ಹಾಂಗ್‌ಕಾಂಗ್‌ನ ಆಹಾರ ಸುರಕ್ಷತೆ ಕೇಂದ್ರ ತಿಳಿಸಿದೆ. ಆದರೆ, ಈ ಬಗ್ಗೆ ಕಂಪನಿಗಳು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

‘ಭಾರತದ ಮಸಾಲೆ ಪದಾರ್ಥಗಳ ಮಾರಾಟಕ್ಕೆ ನಿಷೇಧ ಹೇರಿರುವ ವಿಷಯವು ಗಮನಕ್ಕೆ ಬಂದಿದೆ. ಈ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಭಾರತೀಯ ಮಸಾಲೆ ಮಂಡಳಿಯ ನಿರ್ದೇಶಕರಾದ ಎ.ಬಿ. ರೆಮಾ ಶ್ರೀ ಅವರು, ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಪರೀಕ್ಷೆಗೆ ಮುಂದಾದ ಎಫ್‌ಎಸ್‌ಎಸ್‌ಎಐ: ಕೀಟನಾಶಕ ಅಂಶ ಇದೆ ಎಂಬ ಆರೋಪದ ಬೆನ್ನಲ್ಲೇ ಈ ಎರಡೂ ಬ್ರ್ಯಾಂಡ್‌ಗಳ ಮಸಾಲೆ ಪದಾರ್ಥಗಳ ಗುಣಮಟ್ಟದ ಪರೀಕ್ಷೆಗೆ ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

ಬರ: ರಾಜ್ಯಕ್ಕೆ ‘ಸುಪ್ರೀಂ’ ನ್ಯಾಯ

ಒಂದನೇ ಪುಟದಿಂದ...

ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಿಂದ (ಎನ್‌ಡಿಆರ್‌ಎಫ್) ಬರ ಪರಿಹಾರವಾಗಿ ₹18,171 ಕೋಟಿಯನ್ನು ತಕ್ಷಣ ಹಣ ಬಿಡುಗಡೆಗೊಳಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಏಪ್ರಿಲ್ 8ರಂದು ನಡೆಸಿದ್ದ ಬಿ.ಆರ್.ಗವಾಯಿ ಹಾಗೂ ಸಂದೀಪ್ ಮೆಹ್ತಾ ಅವರಿದ್ದ ಪೀಠ, ‘ಅನುದಾನ ಬಿಡುಗಡೆ ಸೇರಿದಂತೆ ಯಾವುದೇ ವಿಷಯದಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಸಂಘರ್ಷ ಸಲ್ಲದು’ ಎಂದು ಕಿವಿಮಾತು ಹೇಳಿತ್ತು. ರಾಜ್ಯದ ಬೇಡಿಕೆ ಬಗ್ಗೆ ಎರಡು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸುವುದಾಗಿ ಕೇಂದ್ರ ತಿಳಿಸಿತ್ತು.

ಸೋಮವಾರ ವಿಚಾರಣಾ ಪೀಠದ ಮುಂದೆ ಹಾಜರಾದ ಕೇಂದ್ರ ಸರ್ಕಾರದ ಅಟಾರ್ನಿ ಜನರಲ್ ಆರ್.ವೆಂಕಟರಮಣಿ, ‘ಇದಕ್ಕೆ ಚುನಾವಣಾ ಆಯೋಗ ಅನುಮತಿ ನೀಡಿದೆ. ಪೀಠದ ಮುಂದೆ ಈ ವಿಷಯದ ಬಗ್ಗೆ ವಾದದ ಅಗತ್ಯವಿಲ್ಲ. ತ್ವರಿತವಾಗಿ ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದರು. ಈ ವಿಷಯವನ್ನು ಮುಂದಿನ ಸೋಮವಾರ ಪರಿಗಣಿಸುವಂತೆ ಪೀಠವನ್ನು ಕೋರಿದರು. ಕರ್ನಾಟಕ ಸರ್ಕಾರದ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು ಅಟಾರ್ನಿ ಜನರಲ್ ಅವರ ಸಲಹೆಗೆ ಒಪ್ಪಿಗೆ ಸೂಚಿಸಿದರು.

> **ಕೇಂದ್ರ ತಂಡ ವರದಿ ನೀಡಿದ ಒಂದು ತಿಂಗಳಲ್ಲಿ ಪರಿಹಾರ ನೀಡಬೇಕೆಂಬ ನಿಯಮ ಇದೆ. ಆದರೆ, ಕೇಂದ್ರ ಸರ್ಕಾರ ಅನ್ಯಾಯ ಮಾಡಿತ್ತು. ಇದೀಗ ರಾಜ್ಯದ ಜನತೆಗೆ ನ್ಯಾಯ ಸಿಕ್ಕಿದೆ.**
> **ಕೃಷ್ಣ ಬೈರೇಗೌಡ,** ಕಂದಾಯ ಸಚಿವ

ರಾಜ್ಯ ಸರ್ಕಾರದ ಅರ್ಜಿಯಲ್ಲಿ ಏನಿತ್ತು?: ‘ರಾಜ್ಯದ 223 ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸಲಾಗಿದೆ. 48 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆ ನಷ್ಟ ಆಗಿದೆ. ಮೂರು ಬಾರಿ ಸತತವಾಗಿ ಕೇಂದ್ರಕ್ಕೆ ಮನವಿ ಪತ್ರ ಸಲ್ಲಿಸಲಾಗಿದೆ. ಆದರೆ, ಕಾನೂನುಬದ್ಧವಾಗಿ ರಾಜ್ಯಕ್ಕೆ ಬರಬೇಕಾದ ಹಣದಲ್ಲಿ ನಯಾಪೈಸೆಯನ್ನೂ ಕೇಂದ್ರ ಸರ್ಕಾರ ಕೊಟ್ಟಿಲ್ಲ. ಈ ಬಗ್ಗೆ ಕೇಂದ್ರಕ್ಕೆ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿ ರಾಜ್ಯವು ಸುಪ್ರೀಂ ಕೋರ್ಟ್‌ನ ಕದ ತಟ್ಟಿತ್ತು.

‘ಎನ್‌ಡಿಆರ್‌ಎಫ್ ನಿಯಮಾವಳಿ ಪ್ರಕಾರ ರಾಜ್ಯ ಸರ್ಕಾರ ಮನವಿ ಮಾಡಿದ ವಾರದಲ್ಲಿ ಕೇಂದ್ರದ ತಂಡ ಬರಬೇಕು. ಆದರೆ, ಕಳೆದ ಅಕ್ಟೋಬರ್‌ನಲ್ಲಿ ಕೇಂದ್ರ ತಂಡವು ರಾಜ್ಯದಲ್ಲಿ ಪರಿಶೀಲನೆ ನಡೆಸಿ ವರದಿ ನೀಡಿದೆ. ಈ ವರದಿ ನೀಡಿದ ಒಂದು ತಿಂಗಳಲ್ಲಿ ಬರ ಪರಿಹಾರ ಕೊಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು ಎನ್ನುವುದು ನಿಯಮ. ಆದರೆ, ಇದುವರೆಗೂ ರಾಜ್ಯದ ಜನರಿಗೆ ಸ್ಪಂದಿಸಿಲ್ಲ’ ಎಂದು ರಾಜ್ಯ ಆರೋಪಿಸಿತ್ತು.

ವರ್ತಕ–ಉದ್ಯಮಿ ಸ್ನೇಹಿ ವಾತಾವರಣಕ್ಕೆ ಒತ್ತು: ನಿರ್ಮಲಾ ಭರವಸೆ

ಜಿಎಸ್‌ಟಿಗೆ ಹೊಸ ಸ್ವರೂಪ: ಸಚಿವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಕುರಿತು ರಾಜ್ಯವಾರು ಇರುವ ಎಲ್ಲ ಗೊಂದಲಗಳು ಶೀಘ್ರವೇ ಬಗೆಹರಿಯಲಿದ್ದು, ವರ್ತಕ–ಉದ್ಯಮಿ ಸ್ನೇಹಿ ತೆರಿಗೆಯ ಸ್ವರೂಪ ಪಡೆಯಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

‘ದಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ’ ಸೋಮವಾರ ಹಮ್ಮಿಕೊಂಡಿದ್ದ ‘ಅಮೃತ ಕಾಲ–2047’ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಿಎಸ್‌ಟಿಯ ಲೋಪಗಳನ್ನು ಹಂತ ಹಂತವಾಗಿ ಸರಿಪಡಿಸಲಾಗಿದೆ. ಒಂದು ರಾಜ್ಯಕ್ಕೂ ಮತ್ತೊಂದರ ಮಧ್ಯೆ ಭಿನ್ನತೆಗಳಿವೆ. ಎಲ್ಲ ಸಮಸ್ಯೆಗಳಿಗೂ ಸೂಕ್ತ ಪರಿಹಾರ ಕಂಡುಕೊಳ್ಳಲಾಗಿದೆ ಎಂದರು.

‘ಭಾರತದ ಇದುವರೆಗಿನ ನೀತಿಗಳ ಫಲವಾಗಿ ದೇಶದ ಸಂಪನ್ಮೂಲ, ಪ್ರತಿಭೆ ವಿದೇಶಗಳ ಪಾಲಾಗುತ್ತಿತ್ತು. ಮೋದಿ ಅವರ ಆರ್ಥಿಕ ನೀತಿಗಳ ಫಲವಾಗಿ ವಿದೇಶಿ ಹೂಡಿಕೆ, ಪ್ರತಿಭೆಗಳೂ ಭಾರತ ಪ್ರವೇಶಿಸುತ್ತಿವೆ’ ಎಂದು ಹೇಳಿದರು.



ಬೆಂಗಳೂರಿನ ದಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾದಲ್ಲಿ ಸೋಮವಾರ ‘ಅಮೃತ ಕಾಲ–2047’ ಕುರಿತು ನಡೆದ ಸಂವಾದದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಾತನಾಡಿದರು. ಬೆಂಗಳೂರು ಶಾಖೆಯ ಕಾರ್ಯದರ್ಶಿ ಕವಿತಾ ಪರಮೇಶ್ ಮತ್ತು ಅಧ್ಯಕ್ಷ ಪ್ರಮೋದ್ ಆರ್. ಹೆಗಡೆ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

‘ಇಂದು ಭಾರತ ಸ್ವಾತಂತ್ರ್ಯೋತ್ಸವದ ಅಮೃತ ಕಾಲಘಟ್ಟದಲ್ಲಿದೆ. ಅಂದು ವಕೀಲರು, ಚಾರ್ಟರ್ಡ್ ಅಕೌಂಟೆಂಟ್‌ಗಳು ಸೇರಿದಂತೆ ಬಹುತೇಕರು ತಮ್ಮ ಉದ್ಯೋಗ ತೊರೆದು ಚಳವಳಿಯಲ್ಲಿ ತೊಡಗಿಸಿಕೊಂಡಿದ್ದರು. ಮುಂದಿನ 25 ವರ್ಷಗಳ ವಿಕಸಿತ ಭಾರತದ ಕನಸು ನನಸು ಮಾಡಲು ಯಾರೂ ಉದ್ಯೋಗ ತೊರೆಯುವ ಅಗತ್ಯವಿಲ್ಲ. ಮಾಡುವ ಕೆಲಸಗಳ ಮೂಲಕವೇ ಕೊಡುಗೆ ನೀಡಬಹುದು. ಆ ಮೂಲಕ ಮುಂದಿನ ಪೀಳಿಗೆಗೆ ಉತ್ತಮ ಅರ್ಥ ವ್ಯವಸ್ಥೆ ನೀಡಬಹುದು’ ಎಂದು ಹೇಳಿದರು.

> **ಚಹಾ, ತರಕಾರಿ ಮಾರಾಟಗಾರರು ಸೇರಿ ಸಣ್ಣ ವ್ಯಾಪಾರಿಗಳು ತೆರಿಗೆ ವ್ಯವಸ್ಥೆಯನ್ನು ಅರ್ಥ ಮಾಡಿಕೊಂಡು ವಹಿವಾಟು ನಡೆಸಿದರೆ ಸಾಕಷ್ಟು ಲಾಭ ಸಿಗಲಿದೆ**
> **ನಿರ್ಮಲಾ ಸೀತಾರಾಮನ್,** ಹಣಕಾಸು ಸಚಿವೆ

‘ಜಾಗತಿಕ ಹೂಡಿಕೆಗೆ ಭಾರತ ತೆರೆದುಕೊಂಡಿದೆ. ಭಾರತವು ಜಾಗತಿಕ ಮಟ್ಟದಲ್ಲಿ ಅಮೆರಿಕ, ಚೀನಾ, ಜಪಾನ್ ಮತ್ತು ಜರ್ಮನಿ ಬಳಿಕ ಐದನೇ ಅತಿದೊಡ್ಡ ಆರ್ಥಿಕತೆಯ ದೇಶವಾಗಿದೆ’ ಎಂದು ಹೇಳಿದರು.

ದೇಶದ ಜಿಡಿಪಿ ಗಾತ್ರವು 2027–28ನೇ ಹಣಕಾಸು ವರ್ಷಕ್ಕೆ ₹415 ಲಕ್ಷ ಕೋಟಿಗೆ (5 ಟ್ರಿಲಿಯನ್ ಡಾಲರ್) ತಲುಪಲಿದ್ದು, ಚೀನಾ, ಅಮೆರಿಕದ ಬಳಿಕ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಲಿದೆ. 2047ರ ವೇಳೆಗೆ ದೇಶದ ಆರ್ಥಿಕತೆಯ ಗಾತ್ರವು ₹2,490 ಲಕ್ಷ ಕೋಟಿಗೆ (30 ಟ್ರಿಲಿಯನ್ ಡಾಲರ್) ತಲುಪುವ ನಿರೀಕ್ಷೆಯಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬೈಜುಸ್ ಸಿಬ್ಬಂದಿ ವೇತನಕ್ಕೆ ಸಾಲ ಮಾಡಿದ ರವೀಂದ್ರನ್

ನವದೆಹಲಿ (ಪಿಟಿಐ): ಬೈಜುಸ್ ಸಿಬ್ಬಂದಿಗೆ ಮಾರ್ಚ್ ತಿಂಗಳಿನಲ್ಲಿ ಭಾಗಶಃ ವೇತನ ಪಾವತಿಸಲು ಸಿಇಒ ಬೈಜು ರವೀಂದ್ರನ್ ಅವರು, ಸಾಲ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರವೀಂದ್ರನ್ ತನ್ನ ವೈಯಕ್ತಿಕ ಸಾಮರ್ಥ್ಯದ ಮೇಲೆ ಸಾಲ ಪಡೆದು ಸಿಬ್ಬಂದಿಯ ಬ್ಯಾಂಕ್ ಖಾತೆಗಳಿಗೆ ಏಪ್ರಿಲ್ 20ರಂದು ವೇತನ ಜಮೆ ಮಾಡಿದ್ದಾರೆ. ಈ ಸಾಲದ ಮೊತ್ತವು ₹25 ಕೋಟಿಯಿಂದ ₹30 ಕೋಟಿ ಆಗಿದೆ ಎಂದು ತಿಳಿಸಿವೆ. ಶಿಕ್ಷಕರು ಮತ್ತು ಕೆಳ ಹಂತದ ಸಿಬ್ಬಂದಿಗೆ ಪೂರ್ಣ ವೇತನ ಪಾವತಿಸಲಾಗಿದೆ. ಉಳಿದವರಿಗೆ ಶೇ 50ರಿಂದ ಶೇ 100ರಷ್ಟು ವೇತನ ಪಾವತಿಸಿದ್ದಾರೆ. ಸಾಲದ ಮೂಲಕ ವೇತನ ಪಾವತಿ ಮಾಡುವುದು ಕಂಪನಿಯ ಸುಸ್ಥಿರ ಬೆಳವಣಿಗೆಗೆ ಸಹಕಾರಿಯಾಗುವುದಿಲ್ಲ. ಇದು ಮತ್ತಷ್ಟು ಸಂಕೀರ್ಣತೆ ಸೃಷ್ಟಿಗೆ ನಾಂದಿ ಹಾಡಲಿದೆ ಎಂದು ತಿಳಿಸಿವೆ. ಕಂಪನಿಯ ಕಾರ್ಯಾಚರಣೆ, ಸಿಬ್ಬಂದಿಯ ವೇತನ ಪಾವತಿಗೆ ಕಂಪನಿಯು ಅಂದಾಜು ₹1,667 ಕೋಟಿಯನ್ನು (200 ಮಿಲಿಯನ್ ಅಮೆರಿಕನ್ ಡಾಲರ್) ಷೇರು ಹಂಚಿಕೆಯ ಮೂಲಕ ಬಂಡವಾಳ ಸಂಗ್ರಹಿಸಿದೆ. ಆದರೆ, ಹೂಡಿಕೆದಾರರು ನ್ಯಾಯಾಲಯದ ಮೊರೆ ಹೋಗಿರುವುದರಿಂದ ಆ ಹಣವನ್ನು ತಡೆಹಿಡಿಯಲಾಗಿದೆ. ಏ.23ರಂದು ಕೋರ್ಟ್ ಇದರ ವಿಚಾರಣೆ ನಡೆಸಲಿದೆ.

ಮಾಲ್ದೀವ್ಸ್ ಸಂಸತ್ ಚುನಾವಣೆ ಮುಯಿಝು ಪಕ್ಷಕ್ಕೆ ಸ್ಪಷ್ಟ ಬಹುಮತ

ಮಾಲೆ (ಪಿಟಿಐ): ಮಾಲ್ದೀವ್ಸ್ ಸಂಸತ್ ಚುನಾವಣೆಯಲ್ಲಿ ಅಧ್ಯಕ್ಷ ಮೊಹಮದ್ ಮುಯಿಝು ನೇತೃತ್ವದ ಪೀಪಲ್ಸ್ ನ್ಯಾಷನಲ್ ಕಾಂಗ್ರೆಸ್ (ಪಿಎನ್‌ಸಿ) ಪಕ್ಷವು 71 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಮೂಲಕ ಸ್ಪಷ್ಟ ಬಹುಮತ ಪಡೆದಿದೆ.

ಮಾಲ್ದೀವ್ಸ್‌ನ 93 ಕ್ಷೇತ್ರಗಳಿಗೆ ಭಾನುವಾರ ಚುನಾವಣೆ ನಡೆದಿತ್ತು. ಮುಯಿಝು ನೇತೃತ್ವದ ಸರ್ಕಾರಕ್ಕೆ ಬಹುಮತ ಸಿಕ್ಕಿರುವುದರಿಂದ, ಅವರ ಚೀನಾ ಪರ ವಿದೇಶಾಂಗ ನೀತಿಗೆ ಮತ್ತಷ್ಟು ಬಲ ಬಂದಂತಾಗಿದೆ ಎಂದು ವಿಶ್ಲೇಷಿಸಲಾಗಿದೆ. ‘ತಮ್ಮ ಪಕ್ಷಕ್ಕೆ ಪ್ರಚಂಡ ಜಯ ಸಿಕ್ಕ ಬೆನ್ನಲ್ಲೇ ಇಲ್ಲಿನ ಕೃತಕ ಬೀಚ್‌ನಲ್ಲಿ ಸೋಮವಾರ ರಾತ್ರಿ ಪಿಎನ್‌ಸಿ ಸಂಭ್ರಮವನ್ನು ಆಚರಿಸಲು ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ’ ಎಂದು ಮಿಹಾರು ಸುದ್ದಿಸಂಸ್ಥೆ ತಿಳಿಸಿದೆ.

‘ಮಾಜಿ ಪ್ರಧಾನಿ ಇಬ್ರಾಹಿಂ ಸೋಲಿಹ್ ನೇತೃತ್ವದ ದಿ ಮಾಲ್ದೀವಿಯನ್ ಡೆಮಾಕ್ರಟಿಕ್ ಪಕ್ಷವು (ಎಂಡಿಪಿ) ಕಳೆದ ಸಂಸತ್ ಚುನಾವಣೆಯಲ್ಲಿ 65 ಸ್ಥಾನಗಳನ್ನು ಗೆದ್ದಿತ್ತು. ಆದರೆ ಈ ಬಾರಿ 15 ಸ್ಥಾನಗಳಲ್ಲಿ ಗೆಲ್ಲಲಷ್ಟೇ ಶಕ್ತವಾಗಿದೆ’ ಎಂದೂ ಅದು ಹೇಳಿದೆ.



ರಾಜಸ್ಥಾನ ರಾಯಲ್ಸ್‌ಗೆ ಏಳನೇ ಜಯ • ಮುಂಬೈ ಇಂಡಿಯನ್ಸ್‌ಗೆ ಮುಖಭಂಗ

ಮಿಂಚಿದ ಸಂದೀಪ್, ಜೈಸ್ವಾಲ್ ಶತಕ

ಜೈಪುರ (ಪಿಟಿಐ): ಈ ಆವೃತ್ತಿಯಲ್ಲಿ ಪರದಾಡುತ್ತಿದ್ದ ಯಶಸ್ವಿ ಜೈಸ್ವಾಲ್ ಅಮೋಘ ಶತಕದ (ಔಟಾಗದೇ 104, 60ಎ) ಮೂಲಕ ಲಯಕ್ಕೆ ಮರಳಿದರು. ಮೊದಲು ಸಂದೀಪ್ ಶರ್ಮಾ (18ಕ್ಕೆ5) ಅವರು ಮುಂಬೈ ಇಂಡಿಯನ್ಸ್ ತಂಡವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಲು ನೆರವಾದ ಬಳಿಕ ಜೈಸ್ವಾಲ್ ಅವರು ರಾಜಸ್ಥಾನ ರಾಯಲ್ಸ್ ತಂಡ ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ 9 ವಿಕೆಟ್‌ಗಳ ಸುಲಭ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಮುಂಬೈ 9 ವಿಕೆಟ್‌ಗೆ 179 ರನ್ ಗಳಿಸಿತು. ಉತ್ತರವಾಗಿ ರಾಜಸ್ಥಾನ ರಾಯಲ್ಸ್ ಎಂಟು ಎಸೆತಗಳು ಉಳಿದಿರುವಂತೆ 1 ವಿಕೆಟ್‌ಗೆ 183 ರನ್ ಹೊಡೆಯಿತು. ಯಶಸ್ವಿ ಅವರು 9 ಬೌಂಡರಿಗಳ ಜೊತೆ ಏಳು ಸಿಕ್ಸರ್‌ಗಳನ್ನು ಸಿಡಿಸಿದರು.



ಯಶಸ್ವಿ ಜೈಸ್ವಾಲ್ –ಎಎಫ್‌ಪಿ ಚಿತ್ರ



ಮುಂಬೈ ಇಂಡಿಯನ್ಸ್ ತಂಡದ ಸೂರ್ಯಕುಮಾರ್ ಯಾದವ್ ವಿಕೆಟ್ ಪಡೆದ ರಾಜಸ್ಥಾನ ರಾಯಲ್ಸ್ ತಂಡದ ಸಂದೀಪ್ ಶರ್ಮಾ ಅವರನ್ನು ಸಹ ಆಟಗಾರರು ಅಭಿನಂದಿಸಿದರು. ಎಎಫ್‌ಪಿ ಚಿತ್ರ

ಪವರ್ ಪ್ಲೇ ಆಟದಲ್ಲಿ ವಿಕೆಟ್ ನಷ್ಟವಿಲ್ಲದೇ 61 ರನ್ ಗಳಿಸಿ ಒಳ್ಳೆಯ ಅಡಿಪಾಯ ಪಡೆದಿತ್ತು. ಈ ವೇಳೆ ಮಳೆಯಿಂದ ಅರ್ಧ ಹೊತ್ತು ಆಟಕ್ಕೆ ಅಡ್ಡಿಯಾಯಿತು. ಎರಡು ಓವರುಗಳ ನಂತರ ನಂತರ ಜೋಸ್ ಬಟ್ಲರ್ (35, 25ಎ) ಅವರು ಪೀಯೂಷ್ ಚಾವ್ಲಾ ಅವರ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ಆಗ ಮೊತ್ತ 74. ಯಶಸ್ವಿ ಜೊತೆಗೂಡಿದ ನಾಯಕ ಸಂಜು ಸ್ಯಾಮ್ಸನ್ (ಔಟಾಗದೇ 38, 28ಎ) ಅವರು ಮುರಿಯದ ಎರಡನೇ ವಿಕೆಟ್‌ಗೆ 109 ರನ್ ಸೇರಿಸಿದರು.

ಇಬ್ಬರಿಗೂ ಒಂದೊಂದು ಜೀವದಾನ ದೊರೆಯಿತು. ಇದಕ್ಕೆ ಮೊದಲು, ಗಾಯದ ವಿರಾಮದ ನಂತರ ತಂಡಕ್ಕೆ ಪುನರಾಗಮನ ಮಾಡಿದ ಮಧ್ಯಮ ವೇಗಿ ಸಂದೀಪ್ ಶರ್ಮಾ ಮೊದಲ ಸಲ ಐಪಿಎಲ್‌ನಲ್ಲಿ 5 ವಿಕೆಟ್ ಗೊಂಚಲು ಪಡೆದು ಮಿಂಚಿದರು.

ಸಂದೀಪ್, ಎರಡನೇ ಸ್ಪೆಲ್‌ನ ಅಂತಿಮ ಓವರ್‌ನಲ್ಲಿ 3 ವಿಕೆಟ್ ಪಡೆದರು. ಇದರಲ್ಲಿ ಅರ್ಧ ಶತಕ ಗಳಿಸಿದ್ದ ತಿಲಕ್ ವರ್ಮಾ ಅವರ ವಿಕೆಟ್ ಒಳಗೊಂಡಿತ್ತು.

ಒಂದು ಹಂತದಲ್ಲಿ 4 ವಿಕೆಟ್‌ಗೆ 52 ರನ್ ಗಳಿಸಿ ಇಕ್ಕಟ್ಟಿಗೆ ಸಿಲುಕಿದ್ದ ಮುಂಬೈ ತಂಡ, ಎಡಗೈ ಬ್ಯಾಟರ್ ತಿಲಕ್ (65, 45ಎ, 4x4, 6x3) ಮತ್ತು ನೇಹಲ್ ವಢೇರಾ (49, 24, 4x3, 6x4) ಅವರ 99 ರನ್‌ಗಳ ಜೊತೆಯಾಟದಿಂದ ಜೀವಕಳೆ ಪಡೆಯಿತು.

ಚಾಹಲ್‌ಗೆ 200 ವಿಕೆಟ್: ಈ ಪಂದ್ಯದಲ್ಲಿ ಯಜುವೇಂದ್ರ ಚಾಹಲ್ ಅವರು ಮೊಹಮ್ಮದ್ ನಬಿ (23) ಅವರ ವಿಕೆಟ್ ಪಡೆಯುವ ಮೂಲಕ ಐಪಿಎಲ್‌ನಲ್ಲಿ 200 ವಿಕೆಟ್‌ಗಳ ಮೈಲಿಗಲ್ಲು ದಾಟಿ ದಾಖಲೆ ಸ್ಥಾಪಿಸಿದರು.

ಆರಂಭಿಕ ಕುಸಿತ: ವೇಗದ ಬೌಲರ್ ಟ್ರೆಂಟ್ ಬೌಲ್ಟ್ ಆರಂಭದಲ್ಲೇ ರೋಹಿತ್ ಶರ್ಮಾ (6) ವಿಕೆಟ್ ಪಡೆದು ಮುಂಬೈ ಕುಸಿತಕ್ಕೆ ನಾಂದಿ ಹಾಡಿದ್ದರು.

ಇಶಾನ್ ಕಿಶನ್ ಹೆಚ್ಚು ಹೊತ್ತು ನಿಲ್ಲದೇ, ಸಂದೀಪ್ ಶರ್ಮಾ ಬೌಲಿಂಗ್‌ನಲ್ಲಿ ವಿಕೆಟ್ ಕೀಪರ್ ಸಂಜು ಸ್ಯಾಮ್ಸನ್ ಅವರಿಗೆ ಕ್ಯಾಚ್ ನೀಡಿದರು. ಪ್ರಮುಖ ಬ್ಯಾಟರ್ ಸೂರ್ಯಕುಮಾರ್ ಯಾದವ್ (10) ಅವರ ವಿಕೆಟ್ ಕೂಡ ಪಡೆದ ಸಂದೀಪ್ ಮುಂಬೈಗೆ ದೊಡ್ಡ ಪೆಟ್ಟು ನೀಡಿದರು. ಅವರು ಮಿಡ್ ಆನ್‌ನಲ್ಲಿ ರೋವ್ಮನ್ ಪೊವೆಲ್ ಅವರಿಗೆ ಕ್ಯಾಚಿತ್ತರು.

ಸಂಕ್ಷಿಪ್ತ ಸ್ಕೋರ್: ಮುಂಬೈ ಇಂಡಿಯನ್ಸ್ 20 ಓವರ್‌ಗಳಲ್ಲಿ 9ಕ್ಕೆ 179 (ತಿಲಕ್ ವರ್ಮಾ 65, ಮೊಹಮ್ಮದ್ ನಬಿ 23, ನೇಹಾಲ್ ವಢೇರಾ 49; ಸಂದೀಪ್ ಶರ್ಮಾ 18ಕ್ಕೆ 5, ಟ್ರೆಂಟ್ ಬೌಲ್ಟ್ 32ಕ್ಕೆ2 ರಾಜಸ್ಥಾನ ರಾಯಲ್ಸ್: 18.4 ಓವರುಗಳಲ್ಲಿ 1 ವಿಕೆಟ್‌ಗೆ 183 (ಯಶಸ್ವಿ ಜೈಸ್ವಾಲ್ ಔಟಾಗದೇ 104, ಜೋಸ್ ಬಟ್ಲರ್ 35, ಸಂಜು ಸ್ಯಾಮ್ಸನ್ ಔಟಾಗದೇ 38). **ಪಂದ್ಯದ ಆಟಗಾರ:** ಸಂದೀಪ್ ಶರ್ಮಾ.

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	8	7	1	14	0.698
ಕೋಲ್ಕತ್ತ ನೈಟ್ ರೈಡರ್ಸ್	7	5	2	10	1.206
ಸನ್‌ರೈಸರ್ಸ್ ಹೈದರಾಬಾದ್	7	5	2	10	1.914
ಚೆನ್ನೈ ಸೂಪರ್ ಕಿಂಗ್ಸ್	7	4	3	8	0.529
ಲಖನೌ ಸೂಪರ್ ಜೈಂಟ್ಸ್	7	4	3	8	0.123
ಗುಜರಾತ್ ಟೈಟನ್ಸ್	8	4	4	8	-1.055
ಮುಂಬೈ ಇಂಡಿಯನ್ಸ್	8	3	5	6	-0.277
ಡೆಲ್ಲಿ ಕ್ಯಾಪಿಟಲ್ಸ್	8	3	5	6	-0.477
ಪಂಜಾಬ್ ಕಿಂಗ್ಸ್	8	2	6	4	-0.292
ಆರ್‌ಸಿಬಿ (ಬೆಂಗಳೂರು)	8	1	7	2	-1.046

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (379 ರನ್)

ಪರ್ಪಲ್ ಕ್ಯಾಪ್: ಜಸ್‌ಪ್ರೀತ್ ಬೂಮ್ರಾ, ಯಜುವೇಂದ್ರ ಚಾಹಲ್, ಹರ್ಷ ಪಟೇಲ್ (13 ವಿಕೆಟ್)

ಅಂಪೈರ್ ನಿರ್ಧಾರಕ್ಕೆ ಅಸಮ್ಮತಿ: ಕೊಹ್ಲಿಗೆ ದಂಡ

ನವದೆಹಲಿ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧದ ಪಂದ್ಯದ ವೇಳೆ ಅಂಪೈರ್ ನಿರ್ಧಾರದ ವಿರುದ್ಧ ಅಸಮ್ಮತಿ ವ್ಯಕ್ತಪಡಿಸಿ, ಐಪಿಎಲ್ ನೀತಿ–ನಿಯಮ ಉಲ್ಲಂಘಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಅವರಿಗೆ ಪಂದ್ಯ ಶುಲ್ಕದ ಶೇ 50ರಷ್ಟು ದಂಡ ವಿಧಿಸಲಾಗಿದೆ.

ಭಾನುವಾರ ಈಡನ್ ಗಾರ್ಡನ್‌ನಲ್ಲಿ ನಡೆದ ಪಂದ್ಯದಲ್ಲಿ ಆರ್‌ಸಿಬಿ ತಂಡವು ಕೆಕೆಆರ್ ವಿರುದ್ಧ 1 ರನ್‌ಗಳಿಂದ ಸೋತಿತ್ತು. 18 ರನ್ ಗಳಿಸಿದ್ದ ವಿರಾಟ್, ಮೂರನೇ ಓವರ್‌ನಲ್ಲಿ ಹರ್ಷಿತ್ ರಾಣಾ ಎಸೆತದಲ್ಲಿ ಬೌಲರ್‌ಗೇ ಕ್ಯಾಚ್ ಇತ್ತರು. ಆದರೆ, ಆ ಎಸೆತವು ಸ್ಲೋವರ್ ಫುಲ್‌ಟಾಸ್ ಇತ್ತು. ಅದು ನೋಬಾಲ್ ಆಗಬಹುದೆಂಬ ಅಂದಾಜಿನಲ್ಲಿ ವಿರಾಟ್ ಆಡಿದ್ದರು. ಆದರೆ, ಅಂಪೈರ್ ಔಟ್ ನೀಡಿದ್ದರಿಂದ ಇನ್ನೊಂದು ಬದಿಯಲ್ಲಿದ್ದ ಫಫ್ ಡುಪ್ಲೆಸಿ ಮತ್ತು ವಿರಾಟ್ ಅವರು ಡಿಆರ್‌ಎಸ್ ಮೊರೆ ಹೋದರು. ಟಿವಿ ಅಂಪೈರ್ ಮೈಕೆಲ್ ಗಾಫ್ ಕೂಡ ಚೆಂಡೆಸೆತದ ಎತ್ತರವನ್ನು ಪರಿಶೀಲಿಸಿ ಅದು ನೋಬಾಲ್ ಅಲ್ಲ, ವಿರಾಟ್ ಔಟ್ ಎಂದು ನಿರ್ಣಯ ನೀಡಿದ್ದರು. ಹಾಕ್ ಐ ಟ್ರ್ಯಾಕಿಂಗ್ ಪ್ರಕಾರ ಕೊಹ್ಲಿ ಅವರು ಕ್ರೀಸ್‌ನಲ್ಲಿ ನಿಂತಿದ್ದರೆ ಚೆಂಡು 0.92 ಮೀಟರ್ ಎತ್ತರದಲ್ಲಿ ಅವರ ಸೊಂಟದ ಮಟ್ಟ ಹಾದು ಹೋಗುತ್ತಿತ್ತು. ಹತಾಶರಾದ ಕೊಹ್ಲಿ, ಸಿಟ್ಟಿನ ಭರದಲ್ಲಿ ಬ್ಯಾಟನ್ನು ನೆಲಕ್ಕೆ ಕುಕ್ಕಿದರಲ್ಲದೇ, ಡ್ರೆಸಿಂಗ್ ರೂಮ್ ಬಳಿಯಿದ್ದ ಕಸದ ತೊಟ್ಟಿಯನ್ನು ಕೈಯಿಂದ ಬೀಳಿಸಿದ್ದರು.

ವೃತ್ತಿಪರ ಸ್ಕ್ವಾಷ್‌ಗೆ ಸೌರವ್ ವಿದಾಯ

ನವದೆಹಲಿ (ಪಿಟಿಐ): ಭಾರತದ ಅನುಭವಿ ಸ್ಕ್ವಾಷ್ ಆಟಗಾರ ಸೌರವ್ ಘೋಷಾಲ್ ಅವರು ವೃತ್ತಿಪರ ಸ್ಕ್ವಾಷ್‌ಗೆ ಸೋಮವಾರ ನಿವೃತ್ತಿ ಘೋಷಿಸಿದರು. ಆದರೆ, ಇನ್ನೂ ಕೆಲವು ವರ್ಷ ದೇಶವನ್ನು ಪ್ರತಿನಿಧಿಸಲಿದ್ದಾರೆ.

‘22 ವರ್ಷಗಳ ಹಿಂದೆ ಪ್ರಯಾಣವನ್ನು ಆರಂಭಿಸಿದೆ. ವೃತ್ತಿಪರ ಸ್ಕ್ವಾಷ್ ಅನ್ನು ನಾನು ಇಷ್ಟು ದೀರ್ಘಕಾಲ ಆಡುತ್ತೇನೆ ಎಂದು ಯೋಚಿಸಿರಲಿಲ್ಲ’ ಎಂದು 37 ವರ್ಷದ ಸೌರವ್ ಪ್ರತಿಕ್ರಿಯಿಸಿದ್ದಾರೆ.



ಸೌರವ್ ಘೋಷಾಲ್

ಇಂಚೆಯಾನ್ ಮತ್ತು ಹಾಂಗ್‌ಝೌ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದ ಭಾರತ ತಂಡದಲ್ಲಿ ಸೌರವ್ ಘೋಷಾಲ್ ಸ್ಥಾನ ಪಡೆದಿದ್ದರು.

2022ರ ವಿಶ್ವ ಡಬಲ್ಸ್ ಚಾಂಪಿಯನ್‌ಷಿಪ್‌ನ ಮಿಕ್ಸೆಲ್ ಡಬಲ್ಸ್‌ನಲ್ಲಿ ಅವರು ಚಿನ್ನದ ಸಾಧನೆ ಮಾಡಿದ್ದರು.

ಸೂಪರ್ ಕಿಂಗ್ಸ್‌ಗೆ ಸೇಡಿನ ತವಕ


ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಪಂದ್ಯ ಇಂದು

ಚೆನ್ನೈ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್ ತಂಡ, ಈಗ ದ್ವಿತೀಯಾರ್ಧಕ್ಕೆ ಕಾಲಿಟ್ಟಿರುವ ಐಪಿಎಲ್ ಟೂರ್ನಿಯಲ್ಲಿ ಮಂಗಳವಾರ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಎದುರಿಸಲಿದೆ. ಈ ಹಿಂದಿನ ಸುತ್ತಿನಲ್ಲಿ ಎದುರಾಗಿದ್ದ ಸೋಲಿಗೆ ಆತಿಥೇಯ ತಂಡ ಸೇಡು ತೀರಿಸಿಕೊಳ್ಳುವ ಹವಣಿಕೆಯಲ್ಲಿದೆ.

ಎರಡೂ ತಂಡಗಳು ಅಂಕಪಟ್ಟಿಯ ಮಧ್ಯ ಭಾಗದಲ್ಲಿದ್ದು, ಗೆಲುವಿನೊಡನೆ ಬಡ್ತಿಯ ತವಕದಲ್ಲಿವೆ. ಕಳೆದ ವಾರ ಏಕನಾ ಕ್ರೀಡಾಂಗಣದಲ್ಲಿ ಮುಖಾಮುಖಿಯಾಗಿದ್ದಾಗ, ಕಪ್ತಾನ ಕೆ.ಎಲ್. ರಾಹುಲ್ ಮತ್ತು ವಿಕೆಟ್ ಕೀಪರ್ ಕ್ವಿಂಟನ್ ಡಿಕಾಕ್ ಅವರ ಶತಕದ ಜೊತೆಯಾಟದ ನೆರವಿನಿಂದ ಲಖನೌ ತಂಡ ತವರಿನಲ್ಲಿ ಋತುರಾಜ್ ಗಾಯಕವಾಡ ಬಳಗವನ್ನು ಸೋಲಿಸಿತ್ತು.

ಹೊರಗೆ ಸೋಲು ಅನುಭವಿಸಿರುವ ಚೆನ್ನೈ, ತವರಿನಲ್ಲಿ ನಡೆಯಲಿರುವ ತನ್ನ ಮುಂದಿನ ಮೂರು ಪಂದ್ಯಗಳನ್ನು ಗೆದ್ದು ಪ್ಲೇಆಫ್‌ಗೆ ಸ್ಥಾನ ಖಾತರಿಪಡಿಸಿಕೊಳ್ಳುವ ಲೆಕ್ಕಾಚಾರ ಹೊಂದಿದೆ.

ಸಿಎಸ್‌ಕೆ ಪರ ಋತುರಾಜ್ ಮತ್ತು ಶಿವಂ ದುಬೆ ಉತ್ತಮ ಲಯದಲ್ಲಿದ್ದು ಹೆಚ್ಚು ರನ್ ಗಳಿಸಿದ್ದಾರೆ. ಆದರೆ ಎಲ್‌ಎಸ್‌ಜಿ ಎದುರು ಕಳೆದ ಪಂದ್ಯದಲ್ಲಿ ವಿಫಲರಾದ ಕಾರಣ ತಂಡ ಉತ್ತಮ ಆರಂಭ ಪಡೆಯಲು ಆಗಿರಲಿಲ್ಲ. ಆರಂಭದಲ್ಲಿ ಕೆಲವು ಉತ್ತಮ ಇನಿಂಗ್ಸ್ ಆಡಿದ್ದ ರಚಿನ್ ರವೀಂದ್ರ ನಂತರ ವಿಫಲರಾಗಿರುವುದು ಕಳವಳ ಮೂಡಿಸಿದೆ.



ಕೆ.ಎಲ್.ರಾಹುಲ್ ಪಿಟಿಐ ಚಿತ್ರ



ಎಂ.ಎಸ್.ಧೋನಿ ಎಎಫ್‌ಪಿ ಚಿತ್ರ

ಮುಖಾಮುಖಿ ಪಂದ್ಯಗಳು 4

ಲಖನೌ ಗೆಲುವು	2
ಚೆನ್ನೈ ಗೆಲುವು	1
ಫಲಿತಾಂಶವಿಲ್ಲ	1

ಚೆನ್ನೈ ಬೌಲಿಂಗ್ ಪಡೆ ಸಾಧಾರಣ ಪ್ರದರ್ಶನ ನೀಡಿತ್ತು. ಯುವ ಬೌಲರ್ ಮಥೀಶ ಪಥಿರಾಣ ಮಾತ್ರ ಪರಿಣಾಮಕಾರಿ ಆಗುತ್ತಿದ್ದಾರೆ. ಇತರ ವೇಗಿಗಳಾದ ದೀಪಕ್ ಚಾಹರ್, ತುಷಾರ್ ದೇಶಪಾಂಡೆ, ಮುಸ್ತಫಿಝುರ್ ರಹಮಾನ್ ಅವರಿಂದ ನಿರೀಕ್ಷಿತ ಪ್ರದರ್ಶನ ಬರುತ್ತಿಲ್ಲ.

ಈ ಹಿಂದಿನ ಮುಖಾಮುಖಿ ವೇಳೆ ರಾಹುಲ್ ಮತ್ತು ಡಿಕಾಕ್ ಅವರನ್ನು ನಿಯಂತ್ರಿಸಲು ಇವರಿಗೆ ಆಗಿರಲಿಲ್ಲ. ಪ್ರಮುಖ ಸ್ಪಿನ್ನರ್ ಜಡೇಜ ಸಹ ಪರಿಣಾಮಕಾರಿ ಆಗಿರಲಿಲ್ಲ.

ಅಗ್ರ ಆಟಗಾರರು ಸ್ಥಿರ ಪ್ರದರ್ಶನ ನೀಡದಿರುವುದು ಲಖನೌ ತಂಡದ ದೌರ್ಬಲ್ಯ. ಆದರೆ ರಾಹುಲ್, ಕ್ವಿಂಟನ್, ಪೂರನ್, ಸ್ಟೊಯಿನಿಸ್ ಅವರು ಸ್ಫೋಟಕ ಆಟವಾಡಬಲ್ಲ ಸಮರ್ಥರೇ ಎಂಬುದು ಈ ಹಿಂದಿನ ಕೆಲ ಪಂದ್ಯಗಳಲ್ಲಿ ಸಾಬೀತಾಗಿದೆ.

ಹೊಟ್ಟೆನೋವಿನಿಂದ ಕೆಲವು ಪಂದ್ಯ ಕಳೆದುಕೊಂಡಿದ್ದ ಯುವ ವೇಗಿ ಮಯಂಕ್ ಯಾದವ್ ಈ ಪಂದ್ಯಕ್ಕೆ ಹಿಂತಿರುವ ವಿಶ್ವಾಸವನ್ನು ಲಖನೌ ಹೊಂದಿದೆ.

ಮೊಹ್ಸಿನ್ ಖಾನ್, ಯಶ್ ಠಾಕೂರ್ ತಂಡದ ಪ್ರಮುಖ ವೇಗಿಗಳು. ಸ್ಪಿನ್ ವಿಭಾಗದ ಯಶಸ್ಸು ಕೃಣಾಲ್ ಪಾಂಡ್ಯ ಮತ್ತು ರವಿ ಬಿಷ್ಣೋಯಿ ಅವರನ್ನು ಅವಲಂಬಿಸಿದೆ.

ಪಂದ್ಯ ಆರಂಭ: ರಾತ್ರಿ 7.30.

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೊ ಸಿನಿಮಾ ಆ್ಯಪ್.



ನವದೆಹಲಿಯಲ್ಲಿ ಸೋಮವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಟೆನಿಸ್ ಆಟಗಾರ ರೋಹನ್ ಬೋಪಣ್ಣ ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ಪ್ರದಾನ ಮಾಡಿದರು –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ರಾಹುಲ್ ವಿರುದ್ಧದ ಪ್ರಕರಣ: ವಿಚಾರಣೆ ಮುಂದೂಡಿಕೆ



ರಾಹುಲ್ ಗಾಂಧಿ

ಸುಲ್ತಾನ್‌ಪುರ (ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ್ದ ಆರೋಪದ ಸಂಬಂಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ದಾಖಲಾಗಿದ್ದ ಮಾನಹಾನಿ ಪ್ರಕರಣದ ವಿಚಾರಣೆಯನ್ನು ಇಲ್ಲಿನ ಜನಪ್ರತಿನಿಧಿಗಳ ನ್ಯಾಯಾಲಯವು ಮೇ 2ಕ್ಕೆ ಮುಂದೂಡಿತು.

ರಾಹುಲ್ ಗಾಂಧಿ ಅವರ ಪರ ವಕೀಲ ಕಾಶಿ ಪ್ರಸಾದ್ ಶುಕ್ಲಾ ಅವರ ಪ್ರಕಾರ, ‘ಇಂದು ವಿಚಾರಣೆ ನಿಗದಿ ಆಗಿತ್ತು. ಆದರೆ, ನ್ಯಾಯಾಧೀಶರ ನಿಯೋಜನೆ ಆಗದ ಕಾರಣ ವಿಚಾರಣೆ ನಡೆಯಲಿಲ್ಲ’ ಎಂದರು.

ಬಿಜೆಪಿ ನಾಯಕ ವಿಜಯ್ ಮಿಶ್ರಾ ಅವರು 2018ರ ಆಗಸ್ಟ್ 4ರಂದು ಈ ಮೊಕದ್ದಮೆ ದಾಖಲಿಸಿದ್ದರು. ಕಳೆದ ಡಿಸೆಂಬರ್‌ನಲ್ಲಿ ಕೋರ್ಟ್ ರಾಹುಲ್ ಗಾಂಧಿ ಅವರಿಗೆ ವಾರಂಟ್ ನೀಡಿತ್ತು. ಕೋರ್ಟ್‌ಗೆ ಹಾಜರಾಗಿದ್ದ ಅವರಿಗೆ ಬಳಿಕ ಜಾಮೀನು ಮಂಜೂರು ಮಾಡಿತ್ತು.

ನ್ಯಾಯಾಲಯಕ್ಕೆ ಸೆಂಥಿಲ್ ಹಾಜರು

ಚೆನ್ನೈ (ಪಿಟಿಐ): ಅಕ್ರಮವಾಗಿ ಹಣ ವರ್ಗಾವಣೆ ಮಾಡಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಬಂಧನದಲ್ಲಿರುವ ತಮಿಳುನಾಡು ಮಾಜಿ ಸಚಿವ ವಿ.ಸೆಂಥಿಲ್ ಬಾಲಾಜಿ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಸೋಮವಾರ ಸ್ಥಳೀಯ ಸೆಷನ್ಸ್ ನ್ಯಾಯಾಲಯಕ್ಕೆ ಹಾಜರುಪಡಿಸಿತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ದಾಖಲೆಗಳನ್ನು ಪಡೆಯಲು ಸೆಂಥಿಲ್ ಅವರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು.

ಎರಡು ಬ್ಯಾಂಕ್ ಚಲನ್‌ಗಳೂ ಸೇರಿದಂತೆ ಇನ್ನಿತರೆ ಕೆಲವು ದಾಖಲೆಗಳನ್ನು ಸೆಂಥಿಲ್ ಅವರಿಗೆ ನೀಡಿದ ನ್ಯಾಯಾಧೀಶ ಎಸ್.ಅಲ್ಲಿ, ವಿಚಾರಣೆಯನ್ನು ಇದೇ 25ಕ್ಕೆ ಮುಂದೂಡಿದರು. ಅಂತೆಯೇ, ಸೆಂಥಿಲ್ ಅವರ ನ್ಯಾಯಾಂಗ ಬಂಧನವನ್ನು ಇದೇ 25ರವರೆಗೆ ವಿಸ್ತರಿಸಿ ಆದೇಶಿಸಿದರು.

ನಕ್ಸಲರು ಇರಿಸಿದ್ದ ಸ್ಫೋಟಕಕ್ಕೆ ವ್ಯಕ್ತಿ ಬಲಿ

ಬಿಜಾಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ನಕ್ಸಲರು ಇರಿಸಿದ್ದ ಸ್ಫೋಟಕ ವಸ್ತುವಿಗೆ(ಐಇಡಿ) ವ್ಯಕ್ತಿಯೊಬ್ಬ ಬಲಿಯಾಗಿದ್ದಾನೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಮುತವೆಂಡಿ ಗ್ರಾಮದ ಬಳಿ ಶನಿವಾರ ಘಟನೆ ಸಂಭವಿಸಿದ್ದು, ಸ್ಫೋಟಕ ವಸ್ತುವಿನ ಮೇಲೆ ಕಾಲಿಟ್ಟ ಸ್ಥಳೀಯ ನಿವಾಸಿ ಗಡಿಯಾ ಎಂಬುವವರು ಮೃತಪಟ್ಟಿದ್ದಾರೆ. ಈ ಬಗ್ಗೆ ಪೊಲೀಸರಿಗೆ ಸೋಮವಾರ ಮಾಹಿತಿ ದೊರಕಿದೆ.

ಶ್ರೀನಗರದ 9 ಕಡೆ ಎನ್‌ಐಎ ಕಾರ್ಯಾಚರಣೆ

ಶ್ರೀನಗರ (ಪಿಟಿಐ): ಭಯೋತ್ಪಾದನೆ ಚಟುವಟಿಕೆಗಳ ಪ್ರಕರಣಕ್ಕೆ ಸಂಬಂಧಿಸಿ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಸೋಮವಾರ ಜಮ್ಮು–ಕಾಶ್ಮೀರದ ಶ್ರೀನಗರದ ಒಂಬತ್ತು ಕಡೆಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ದಾಳಿಯಲ್ಲಿ ಸ್ಥಳೀಯ ಪೊಲೀಸರು ಮತ್ತು ಸಿಆರ್‌ಪಿಎಫ್ ಸಿಬ್ಬಂದಿಯೂ ಪಾಲ್ಗೊಂಡಿದ್ದರು.

2022ರಲ್ಲಿ ಎನ್‌ಐಎ ದಾಖಲಿಸಿಕೊಂಡ ಪ್ರಕರಣದ ಪ್ರಕಾರ ಭಯೋತ್ಪಾದನೆಯಲ್ಲಿ ಭಾಗಿಯಾಗಿರುವ ಶಂಕಿತರು ‘ದಿ ರೆಸಿಸ್ಟಂಟ್ ಫ್ರಂಟ್’ (ಟಿಆರ್‌ಎಫ್) ಮತ್ತು ‘ಲಷ್ಕರ್–ಎ–ತಯಬಾ’ ಸಂಘಟನೆಗಳ ಜೊತೆ ನಂಟು ಹೊಂದಿದ್ದಾರೆ. ಹೀಗಾಗಿ ಪ್ರಕರಣದಲ್ಲಿ ಭಾಗಿಯಾಗಿದ್ದವರ ಮನೆಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅರುಣಾಚಲದ 8 ಮತಗಟ್ಟೆಗಳಲ್ಲಿ ಮರುಮತದಾನ

ಇಟಾನಗರ (ಪಿಟಿಐ): ಅರುಣಾಚಲ ಪ್ರದೇಶದ ಎಂಟು ಮತಗಟ್ಟೆಗಳಲ್ಲಿ ಮರು ಮತದಾನಕ್ಕೆ ಕೇಂದ್ರ ಚುನಾವಣಾ ಆಯೋಗವು ಸೋಮವಾರ ಆದೇಶಿಸಿದೆ.

ಏಪ್ರಿಲ್ 19ರಂದು ಏಕಕಾಲದಲ್ಲಿ ನಡೆದ ಲೋಕಸಭೆ ಹಾಗೂ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಇವಿಎಂ ಹಾನಿ ಮತ್ತು ಹಿಂಸಾಚಾರ ಪ್ರಕರಣಗಳು ಈ ಮತಗಟ್ಟೆಗಳಲ್ಲಿ ವರದಿಯಾಗಿದ್ದವು. ಈ ಮತಗಟ್ಟೆಗಳಲ್ಲಿ ಬುಧವಾರ (ಏಪ್ರಿಲ್ 24) ಮರುಮತದಾನ ನಡೆಯಲಿದೆ.

ಮಣಿಪುರದಲ್ಲಿ ಶೇ 81ರಷ್ಟು ಮತದಾನ (ಗುವಾಹಟಿ ವರದಿ): ಏಪ್ರಿಲ್ 19ರಂದು ಲೋಕಸಭಾ ಚುನಾವಣೆಗೆ ಮೊದಲ ಹಂತದ ಮತದಾನ ನಡೆದ ಸಂದರ್ಭದಲ್ಲಿ ಹಿಂಸಾಚಾರಕ್ಕೆ ಸಾಕ್ಷಿಯಾಗಿದ್ದ ಮಣಿಪುರದಲ್ಲಿ ಸೋಮವಾರ 11 ಮತಗಟ್ಟೆಗಳಲ್ಲಿ ಮರು ಮತದಾನ ನಡೆಯಿತು. ಸಂಜೆ 5 ಗಂಟೆಯವರೆಗಿನ ಚುನಾವಣಾ ಆಯೋಗದ ಮಾಹಿತಿ ಪ್ರಕಾರ ಶೇ 81.6ರಷ್ಟು ಪ್ರಮಾಣದಲ್ಲಿ ಇಲ್ಲಿ ಮತ ಚಲಾವಣೆ ಆಗಿದೆ. ಆರು ಅಭ್ಯರ್ಥಿಗಳ ಭವಿಷ್ಯವನ್ನು ಈ ಮತದಾನವು ನಿರ್ಧರಿಸಲಿದೆ.



ರಕ್ಷಣಾ ಸಚಿವ ರಾಜನಾಥ ಸಿಂಗ್ ಮತ್ತು ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರು ಲಡಾಖ್‌ನಲ್ಲಿಯ ಸಿಯಾಚಿನ್ ಸೇನಾ ಶಿಬಿರಕ್ಕೆ ಸೋಮವಾರ ಭೇಟಿ ನೀಡಿದ್ದರು –ಪಿಟಿಐ ಚಿತ್ರ

ಸಿಯಾಚಿನ್‌ಗೆ ರಕ್ಷಣಾ ಸಚಿವ ಭೇಟಿ

ನವದೆಹಲಿ (ಪಿಟಿಐ): ಜಗತ್ತಿನ ಅತಿ ಎತ್ತರದ ಯುದ್ಧಭೂಮಿಯಾದ ಸಿಯಾಚಿನ್‌ಗೆ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಸೋಮವಾರ ಭೇಟಿ ನೀಡಿ, ದೇಶದ ಸಮಗ್ರ ಸೇನಾ ಸಿದ್ಧತೆ ಕುರಿತು ಪರಿಶೀಲನೆ ನಡೆಸಿದರು. ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರೂ ಈ ವೇಳೆ ರಾಜನಾಥ್ ಜೊತೆಗೂಡಿದ್ದರು.

ಸಿಯಾಚಿನ್‌ನಲ್ಲಿ ಭಾರತೀಯ ಸೇನೆ ನಿಯೋಜಿಸಿ 40 ವರ್ಷಗಳು ತುಂಬಿ ಕೆಲವೇ ದಿನಗಳು ಕಳೆದಿದ್ದು, ಈ ಸಂದರ್ಭದಲ್ಲಿ ರಾಜನಾಥ ಸಿಂಗ್ ಅಲ್ಲಿಗೆ ಭೇಟಿ ನೀಡಿದ್ದಾರೆ. ಈ ವೇಳೆ ಅವರು ಅಲ್ಲಿ ನಿಯೋಜನೆಗೊಂಡ ಸೈನಿಕರ ಜೊತೆ ಮಾತುಕತೆ ನಡೆಸಿದ್ದಾರೆ.

ಕಾರಾಕೋರಂ ಪರ್ವತ ಶ್ರೇಣಿಯಲ್ಲಿ ಸುಮಾರು 20,000 ಅಡಿ ಎತ್ತರದಲ್ಲಿರುವ ಸಿಯಾಚಿನ್ ನೀರ್ಗಲ್ಲಿನಲ್ಲಿ 1984ರ ಏಪ್ರಿಲ್‌ನಲ್ಲಿ ‘ಆಪರೇಷನ್ ಮೇಘದೂತ್’ ಸೇನಾ ಕಾರ್ಯಾಚರಣೆಯ ಭಾಗವಾಗಿ ಸೇನೆಯನ್ನು ನಿಯೋಜಿಸಲಾಗಿತ್ತು.

ಶಿಕ್ಷಕರ ನೇಮಕ ರದ್ದು, ಮಮತಾಗೆ ಹಿನ್ನಡೆ

25 ಸಾವಿರ ಅಭ್ಯರ್ಥಿಗಳ ಸ್ಥಿತಿ ಅತಂತ್ರ • ಬಡ್ಡಿ ಸಹಿತ ವೇತನ ಮರಳಿಸಲು ಕೋರ್ಟ್ ಆದೇಶ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಸರ್ಕಾರ ರಾಜ್ಯಮಟ್ಟದ ಆಯ್ಕೆ ಪರೀಕ್ಷೆಯ ಮೂಲಕ 2016ರಲ್ಲಿ ನಡೆಸಿದ್ದ ಸುಮಾರು 25 ಸಾವಿರ ಶಿಕ್ಷಕರ ನೇಮಕಾತಿಯನ್ನು ಕಲ್ಕತ್ತ ಹೈಕೋರ್ಟ್ ರದ್ದುಪಡಿಸಿದೆ.

ಸರ್ಕಾರಿ, ಅನುದಾನಿತ ಶಾಲೆಗಳ ಶಿಕ್ಷಕ ಹುದ್ದೆಗಳ ಭರ್ತಿಗೆ ನಡೆಸಿದ್ದ ಈ ನೇಮಕಾತಿ ಪ್ರಕ್ರಿಯೆಯನ್ನು ಅಸಿಂಧು ಎಂದು ಕೋರ್ಟ್ ಘೋಷಿಸಿತು. ಈ ಹುದ್ದೆಗಳ ಭರ್ತಿಗಾಗಿ ಮತ್ತೆ ಪ್ರಕ್ರಿಯೆ ಆರಂಭಿಸಬೇಕು ಎಂದೂ ಪಶ್ಚಿಮ ಬಂಗಾಳ ರಾಜ್ಯ ಶಾಲಾ ಸೇವಾ ಪ್ರಾಧಿಕಾರಕ್ಕೆ (ಎಸ್‌ಎಸ್‌ಸಿ) ಆದೇಶಿಸಿದೆ.

ಅಲ್ಲದೆ, ಆಗ ಈ ಹುದ್ದೆಗಳಿಗೆ ನೇಮಕವಾಗಿದ್ದವರು ಇದುವರೆಗೆ ಪಡೆದಿರುವ ವೇತನದ ಮೊತ್ತವನ್ನು ವಾರ್ಷಿಕ ಶೇ 12ರ ಬಡ್ಡಿಯೊಂದಿಗೆ ಹಿಂದಿರುಗಿಸಬೇಕು ಎಂದೂ ಪೀಠವು ಆದೇಶಿಸಿತು.

ಹೈಕೋರ್ಟ್‌ನ ವಿಭಾಗೀಯ ಪೀಠದ ಈ ಆದೇಶವು ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಪಕ್ಷದ ರಾಜ್ಯ ಸರ್ಕಾರಕ್ಕೆ ಭಾರಿ ಹಿನ್ನಡೆ ಎಂದೇ ವ್ಯಾಖ್ಯಾನಿಸಲಾಗಿದೆ.

ನ್ಯಾಯಮೂರ್ತಿಗಳಾದ ದೇಬಾಂಶು ಬಸಾಕ್, ಮೊಹಮ್ಮದ್ ಶಬ್ಬರ್ ರಶೀದಿ ಅವರಿದ್ದ ಪೀಠ ಈ ಆದೇಶ ನೀಡಿತು. ತನಿಖೆ ನಡೆಸಿ, 3 ವಾರಗಳಲ್ಲಿ ವರದಿ ಸಲ್ಲಿಸಬೇಕು ಎಂದು ಸಿಬಿಐಗೆ ಆದೇಶಿಸಿತು.

ಮುಖ್ಯಮಂತ್ರಿ ರಾಜೀನಾಮೆಗೆ ಒತ್ತಾಯ

ತಮ್ಲುಕ್, ಪಶ್ಚಿಮ ಬಂಗಾಳ (ಪಿಟಿಐ): ಶಿಕ್ಷಕರ ನೇಮಕಾತಿ ಕುರಿತ ಹೈಕೋರ್ಟ್ ತೀರ್ಪು ‘ಸೂಕ್ತವಾಗಿದೆ’ ಎಂದು ಮಾಜಿ ನ್ಯಾಯಮೂರ್ತಿ ಅಭಿಜಿತ್ ಗಂಗೋಪಾಧ್ಯಾಯ ಹೇಳಿದ್ದಾರೆ. ಮಮತಾ ಬ್ಯಾನರ್ಜಿ ಅವರು ತಕ್ಷಣವೇ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದೂ ಆಗ್ರಹಿಸಿದ್ದಾರೆ.

ಈ ಹಿಂದೆ, ಸೇವೆಯಲ್ಲಿದ್ದಾಗ ನೇಮಕಾತಿಯಲ್ಲಿ ಅಕ್ರಮ ಆರೋಪ ಕುರಿತಂತೆ ಸಿಬಿಐ ತನಿಖೆಗೆ ಗಂಗೋಪಾಧ್ಯಾಯ ಆದೇಶಿಸಿದ್ದರು. ‘ಅಕ್ರಮದಲ್ಲಿ ಭಾಗಿಯಾಗಿರುವ ರಾಜ್ಯ ಸರ್ಕಾರದ ಎಲ್ಲ ವಂಚಕರನ್ನು ನೇಣಿಗೆ ಹಾಕಬೇಕು’ ಎಂದೂ ಅಭಿಪ್ರಾಯಪಟ್ಟಿದ್ದರು. ನ್ಯಾಯಮೂರ್ತಿ ಹುದ್ದೆಗೆ ಈಚೆಗೆ ರಾಜೀನಾಮೆ ನೀಡಿದ್ದ ಗಂಗೋಪಾಧ್ಯಾಯ, ಬಳಿಕ ಬಿಜೆಪಿಗೆ ಸೇರಿದ್ದರು. ಸದ್ಯ ತಮ್ಲುಕ್ ಕ್ಷೇತ್ರದಿಂದ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿದ್ದಾರೆ.

ರದ್ದು ಆದೇಶಕ್ಕೆ ತಡೆ ನೀಡಬೇಕು ಎಂಬ ಕೆಲ ಅರ್ಜಿದಾರರ ಮನವಿಯನ್ನು ಪೀಠವು ಇದೇ ವೇಳೆ ತಳ್ಳಿಹಾಕಿತು.

24,640 ಹುದ್ದೆಗಳ ಭರ್ತಿಗೆ 2016ರಲ್ಲಿ ಪರೀಕ್ಷೆ ನಡೆದಿತ್ತು. 25,753 ಜನರಿಗೆ ನೇಮಕಾತಿ ಆದೇಶ ನೀಡಲಾಗಿತ್ತು ಎಂದು ಕೆಲ ಅರ್ಜಿದಾರರನ್ನು ಪ್ರತಿನಿಧಿಸಿದ್ದ ವಕೀಲ ಫಿರ್ದೌಸ್ ಶಮೀಮ್ ತಿಳಿಸಿದರು. ಕೋರ್ಟ್‌ ಆದೇಶ ಹೊರಬೀಳುತ್ತಿದ್ದಂತೆ ಶಿಕ್ಷಕ ಹುದ್ದೆಯ ನೂರಾರು ಆಕಾಂಕ್ಷಿಗಳು ಸಂಭ್ರಮ ವ್ಯಕ್ತಪಡಿಸಿದರೆ, ಕೆಲಸ ಕಳೆದಕೊಂಡವರು ಕಣ್ಣೀರು ಹಾಕಿದರು.

‘ಈ ದಿನಕ್ಕಾಗಿ ನಾವು ಕಾಯುತ್ತಿದ್ದೆವು. ಹಲವು ವರ್ಷಗಳ ಕಾಲ ರಸ್ತೆಗಳಲ್ಲಿ ನಡೆಸಿದ ಹೋರಾಟಕ್ಕೆ ಕಡೆಗೂ ಈಗ ನ್ಯಾಯ ಸಿಕ್ಕಿದೆ’ ಎಂದು ಆಕಾಂಕ್ಷಿಯೊಬ್ಬರು ಸಂತಸ ವ್ಯಕ್ತಪಡಿಸಿದರು.

ಸುಪ್ರೀಂ ಕೋರ್ಟ್‌ನ ನಿರ್ದೇಶನದಂತೆ ಈ ಪ್ರಕರಣದ ವಿಚಾರಣೆಗಾಗಿ ರಚನೆಯಾಗಿದ್ದ ವಿಭಾಗೀಯ ಪೀಠವು, ಶಿಕ್ಷಕರ ಆಯ್ಕೆಗೆ ಸಂಬಂಧಿಸಿ ಹಲವು ಅರ್ಜಿಗಳು, ಮನವಿ ಆಧರಿಸಿ ವಿಚಾರಣೆಯನ್ನು ನಡೆಸಿತ್ತು. ಈ ವಿಚಾರಣೆಯು ಮಾರ್ಚ್ 20ರಂದು ಮುಗಿದಿದ್ದು, ಅಂತಿಮ ತೀರ್ಪು ಕಾಯ್ದಿರಿಸಲಾಗಿತ್ತು.

ಬೋಧಕ ಮತ್ತು ಬೋಧಕೇತರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ಸಾಬೀತಾಗಿರುವ ಹಿನ್ನೆಲೆಯಲ್ಲಿ ಈಗ ಪೀಠವು ನೇಮಕಾತಿ ಆದೇಶವನ್ನೇ ರದ್ದುಪಡಿಸಿದೆ.

9, 10, 11, 12ನೇ ತರಗತಿಗಳ ಶಿಕ್ಷಕರು ಮತ್ತು ಗ್ರೂಪ್ ‘ಸಿ’ ಮತ್ತು ‘ಡಿ’ ದರ್ಜೆಯ ಹುದ್ದೆಗಳ ಭರ್ತಿಗಾಗಿ ಎಸ್‌ಎಲ್‌ಎಸ್‌ಟಿ–2016ಡಿ ನೇಮಕಾತಿ ಪ್ರಕ್ರಿಯೆ ನಡೆದಿತ್ತು.

ಪರೀಕ್ಷೆ ಬರೆದು, ಹುದ್ದೆ ವಂಚಿತರಾಗಿದ್ದ ಆಕಾಂಕ್ಷಿಗಳು ಸಲ್ಲಿಸಿದ್ದ ಅರ್ಜಿ ಆಧರಿಸಿ, ನ್ಯಾಯಮೂರ್ತಿ ಅಭಿಜಿತ್ ಗಂಗೋಪಾಧ್ಯಾಯ ಅವರಿದ್ದ ಪೀಠ ಈ ಹಿಂದೆ ಸಿಬಿಐ ತನಿಖೆಗೆ ಆದೇಶಿಸಿತ್ತು. ತನಿಖೆ ನಡೆಸಿದ್ದ ಸಿಬಿಐ ಸುಪ್ರೀಂ ಕೋರ್ಟ್ ಆದೇಶದಂತೆ ಎರಡು ತಿಂಗಳಲ್ಲೇ ಹೈಕೋರ್ಟ್‌ಗೆ ವರದಿ ಸಲ್ಲಿಸಿತ್ತು.

ತನಿಖೆ ಕೈಗೊಂಡಿದ್ದ ಸಿಬಿಐ, ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ ಮಾಜಿ ಶಿಕ್ಷಣ ಸಚಿವ ಪಾರ್ಥ ಚಟರ್ಜಿ ಮತ್ತು ಹಿಂದೆ ಕರ್ತವ್ಯದಲ್ಲಿದ್ದ ರಾಜ್ಯ ಶಾಲಾಸೇವಾಪ್ರಾಧಿಕಾರದ (ಎಸ್‌ಎಸ್‌ಸಿ) ಕೆಲ ಸಿಬ್ಬಂದಿಯನ್ನು ಬಂಧಿಸಿತ್ತು.

ಆದೇಶ ‘ಕಾನೂನುಬಾಹಿರ’–ಸಿ.ಎಂ

ರೈಗಾನಿ (ಪಿಟಿಐ): ಶಿಕ್ಷಕರ ನೇಮಕಾತಿ ರದ್ದುಪಡಿಸಿದ ಹೈಕೋರ್ಟ್‌ನ ಆದೇಶವು ಕಾನೂನುಬಾಹಿರವಾಗಿದೆ. ಸರ್ಕಾರ ಇದನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಲಿದೆ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತಿಳಿಸಿದ್ದಾರೆ.

ರಾಯಗಂಜ್‌ನಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ನ್ಯಾಯಾಂಗದ ಕೆಲವರ ಮೇಲೆ ಬಿಜೆಪಿ ನಾಯಕರು ಪ್ರಭಾವ ಬೀರಿದ್ದರಿಂದ ಈ ರೀತಿ ತೀರ್ಪು ಬಂದಿದೆ’ ಎಂದು ಆರೋಪ ಮಾಡಿದ್ದರು. ‘ಎಲ್ಲ ನೇಮಕಾತಿ ರದ್ದುಪಡಿಸುವ ಆದೇಶ ಕಾನೂನುಬಾಹಿರ. ಉದ್ಯೋಗ ಕಳೆದುಕೊಂಡವರ ಪರವಾಗಿ ಸರ್ಕಾರ ಇದೆ. ಅವರಿಗೆ ನ್ಯಾಯ ಸಿಗುವಂತೆ ಮಾಡುತ್ತೇವೆ. ಈ ಆದೇಶವನ್ನು ಪ್ರಶ್ನಿಸಲಿದ್ದೇವೆ’ ಎಂದು ಹೇಳಿದರು.

> ಶಿಕ್ಷಕರ ನೇಮಕಾತಿ ಪರೀಕ್ಷೆ ರದ್ದು ಕುರಿತ ಹೈಕೋರ್ಟ್‌ನ ಆದೇಶದ ಪರಿಶೀಲನೆ ಬಳಿಕ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುವುದು
>
> **ಸಿದ್ಧಾರ್ಥ ಮಜುಂದಾರ್,** ಅಧ್ಯಕ್ಷ ರಾಜ್ಯ ಶಾಲಾ ಸೇವಾ ಪ್ರಾಧಿಕಾರ (ಎಸ್‌ಎಸ್‌ಸಿ)

ಶಾಹಿ ಈದ್ಗಾ ವಕ್ಫ್ ಆಸ್ತಿಯಲ್ಲ ಹಿಂದೂಗಳ ವಾದ

ಪ್ರಯಾಗರಾಜ್ (ಪಿಟಿಐ): ಮಥುರಾದಲ್ಲಿನ ಕೃಷ್ಣ ಜನ್ಮಭೂಮಿ ಮತ್ತು ಶಾಹಿ ಈದ್ಗಾ ಪ್ರದೇಶವು ವಕ್ಫ್ ಆಸ್ತಿಗೆ ಸಂಬಂಧಿಸಿದೆ ಎಂದು ಮುಸ್ಲಿಂ ಸಮುದಾಯದವರ ವಾದವನ್ನು ಹಿಂದೂಗಳ ಪರ ವಕೀಲರು ಸೋಮವಾರ ಅಲ್ಲಗಳೆದರು.

‘ವಿವಾದಿತ ಆಸ್ತಿಯು ಹಿಂದೆ ದೇವಸ್ಥಾನವಾಗಿತ್ತು. ಅದನ್ನು ಬಲವಂತದಿಂದ ಸ್ವಾಧೀನಕ್ಕೆ ಪಡೆದ ನಂತರ ಅವರು ನಮಾಜ್ ಮಾಡಲು ಆರಂಭಿಸಿದರು. ಹೀಗೆ ಮಾಡುವುದರಿಂದ ಈ ಸ್ಥಳದ ಸ್ವರೂಪವನ್ನು ಬದಲಿಸಲು ಆಗುವುದಿಲ್ಲ’ ಎಂದು ಹಿಂದೂಗಳ ಪರ ವಕೀಲರು ಅಲಹಾಬಾದ್ ಹೈಕೋರ್ಟ್‌ನಲ್ಲಿ ವಾದಿಸಿದರು. ಆ ಜಾಗವು ವಕ್ಫ್ ಆಸ್ತಿ ಆಗಿರಲಿಲ್ಲ, ಹೀಗಾಗಿ ವಕ್ಫ್ ಕಾಯ್ದೆಯು ಅದಕ್ಕೆ ಅನ್ವಯವಾಗುವುದಿಲ್ಲ ಎಂದರು.

ಇದು ವಕ್ಫ್ ಆಸ್ತಿ ಅಲ್ಲದಿರುವ ಕಾರಣ, ಇದರ ಬಗ್ಗೆ ವಿಚಾರಣೆ ನಡೆಸಲು ನ್ಯಾಯಾಲಯಕ್ಕೆ ಅಧಿಕಾರವಿದೆ ಎಂದು ಅವರು ವಾದಿಸಿದರು. ‘ವಿವಾದಿತ ಶಾಹಿ ಈದ್ಗಾ ಮಸೀದಿಯು ವಕ್ಫ್ ಆಸ್ತಿಯಾಗಿರುವ ಕಾರಣ, ವಕ್ಫ್ ನ್ಯಾಯಮಂಡಳಿ ಮಾತ್ರವೇ ಇದಕ್ಕೆ ಸಂಬಂಧಿಸಿದ ತಕರಾರುಗಳನ್ನು ಆಲಿಸಬಹುದು’ ಎಂದು ಮುಸ್ಲಿಮರ ಪರ ವಕೀಲರು ವಾದಿಸಿದ್ದರು.

30 ವಾರಗಳ ಗರ್ಭಿಣಿಯಾಗಿದ್ದ 14 ವರ್ಷದ ಸಂತ್ರಸ್ತೆ

ಗರ್ಭಪಾತಕ್ಕೆ ಸುಪ್ರೀಂ ಕೋರ್ಟ್ ಅನುಮತಿ

ನವದೆಹಲಿ (ಪಿಟಿಐ): 30 ವಾರಗಳ ಗರ್ಭಿಣಿಯಾಗಿದ್ದ 14 ವರ್ಷ ವಯಸ್ಸಿನ ಅತ್ಯಾಚಾರ ಸಂತ್ರಸ್ತೆಗೆ ಗರ್ಭಪಾತ ಮಾಡಿಸಲು ಸುಪ್ರೀಂ ಕೋರ್ಟ್ ಸೋಮವಾರ ಅನುಮತಿ ನೀಡಿದೆ.

ಬಾಲಕಿಗೆ ಗರ್ಭಪಾತ ಮಾಡಿಸಲು ಕೂಡಲೇ ವೈದ್ಯಕೀಯ ತಂಡವನ್ನು ನಿಯೋಜಿಸುವಂತೆ ಮುಂಬೈನ ಲೋಕಮಾನ್ಯ ತಿಲಕ್ ಪುರಸಭೆ ವೈದ್ಯಕೀಯ ಕಾಲೇಜು ಮತ್ತು ಸಾರ್ವಜನಿಕ ಆಸ್ಪತ್ರೆಗೆ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ನ್ಯಾಯಪೀಠವು ನಿರ್ದೇಶನ ನೀಡಿದೆ.

ಯಾವುದೇ ಪ್ರಕರಣದಲ್ಲಿ ಸಂಪೂರ್ಣ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಅಗತ್ಯ ಆದೇಶ ಹೊರಡಿಸಲು ಸಂವಿಧಾನದ 142ನೇ ವಿಧಿ ಅಡಿ ಸುಪ್ರೀಂ ಕೋರ್ಟ್‌ಗೆ ಸಂಪೂರ್ಣ ಅಧಿಕಾರ ನೀಡಲಾಗಿದೆ. ಈ ಅಧಿಕಾರವನ್ನು ಬಳಸಿಕೊಂಡು ನ್ಯಾಯಪೀಠ ಈ ಆದೇಶ ನೀಡಿದೆ. ವೈದ್ಯಕೀಯ ಗರ್ಭಪಾತ (ಎಂಟಿಪಿ) ಕಾಯ್ದೆಯ ಅನ್ವಯ 24 ವಾರಗಳ ಗರ್ಭಿಣಿಗೆ ಗರ್ಭಪಾತ ಮಾಡಿಸಲು ಅನುಮತಿ ಇದೆ.



ಗರ್ಭಪಾತಕ್ಕೆ ಅನುಮತಿ ಕೋರಿ ಬಾಲಕಿಯ ತಂದೆ ಸಲ್ಲಿಸಿದ್ದ ಅರ್ಜಿಯನ್ನು ನಿರಾಕರಿಸಿ ಬಾಂಬೆ ಹೈಕೋರ್ಟ್ ಈ ಹಿಂದೆ ಆದೇಶ ನೀಡಿತ್ತು. ಬಳಿಕ ಬಾಲಕಿಯ ತಂದೆ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಕೋರ್ಟ್, ಬಾಲಕಿಯನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿ, ಈಗ ಆಕೆಗೆ ಗರ್ಭಪಾತ ಮಾಡಿಸಿದರೆ ಯಾವುದೇ ದೈಹಿಕ ಅಥವಾ ಮಾನಸಿಕ ಸಮಸ್ಯೆಯಾಗುವುದಿಲ್ಲವಷ್ಟೆ ಎನ್ನುವುದನ್ನು ಸ್ಪಷ್ಟಪಡಿಸಿಕೊಳ್ಳುವಂತೆ ಏಪ್ರಿಲ್ 19ರಂದು ಲೋಕಮಾನ್ಯ ತಿಲಕ್ ಆಸ್ಪತ್ರೆಗೆ ಸೂಚಿಸಿತ್ತು.

ಅರ್ಜಿಗೆ ಉತ್ತರಿಸುವಂತೆ ಸೂಚನೆ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆಯು ಅಂಗೀಕರಿಸಿದ ವಿಶ್ವವಿದ್ಯಾಲಯಗಳ ತಿದ್ದುಪಡಿ ಮಸೂದೆ–2022 ವಿಚಾರ ಸಂಬಂಧ ರಾಜ್ಯಪಾಲರು ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿ ಸಲ್ಲಿಕೆಯಾದ ಅರ್ಜಿ ಸಂಬಂಧ ಉತ್ತರಿಸುವಂತೆ ರಾಜ್ಯಪಾಲರ ಕಚೇರಿಗೆ ಸುಪ್ರೀಂ ಕೋರ್ಟ್ ಸೂಚಿಸಿದೆ.

ಈ ಕುರಿತು ಸೋಮವಾರ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾ. ಜೆ.ಬಿ. ಪಾರ್ದೀವಾಲಾ ಅವರಿದ್ದ ಪೀಠವು, ರಾಜ್ಯಪಾಲರ ಮುಖ್ಯ ಕಾರ್ಯದರ್ಶಿ ಮತ್ತು ಕೇಂದ್ರ ಸರ್ಕಾರಗಳಿಗೆ ನೋಟಿಸ್ ನೀಡಿದ್ದು, ನಾಲ್ಕು ವಾರಗಳಲ್ಲಿ ಉತ್ತರಿಸಲು ಹೇಳಿದೆ.

ರಾಜ್ಯದ ಸರ್ಕಾರಿ ವಿಶ್ವವಿದ್ಯಾಲಯಗಳ ಕುಲಪತಿ ರಾಜ್ಯಪಾಲರೇ ಆಗಿರುತ್ತಾರೆ. ಆದರೆ, ಈ ಸ್ಥಾನವನ್ನು ಮುಖ್ಯಮಂತ್ರಿಗೆ ವರ್ಗಾಯಿಸುವ ಮಸೂದೆಯನ್ನು 2022ರ ಜೂನ್‌ನಲ್ಲಿ ಪಶ್ಚಿಮ ಬಂಗಾಳ ವಿಧಾನಸಭೆ ಅಂಗೀಕರಿಸಿತ್ತು.

ಕವಿತಾ ಜಾಮೀನು ಅರ್ಜಿ: ತೀರ್ಪು ಕಾಯ್ದಿರಿಸಿದ ಕೋರ್ಟ್

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಭ್ರಷ್ಟಾಚಾರ ಪ್ರಕರಣದಲ್ಲಿ ಜಾಮೀನು ಕೋರಿ ಬಿಆರ್‌ಎಸ್ ನಾಯಕಿ ಕೆ.ಕವಿತಾ ಅವರು ಸಲ್ಲಿಸಿದ್ದ ಅರ್ಜಿ ಕುರಿತ ತೀರ್ಪನ್ನು ದೆಹಲಿಯ ಕೋರ್ಟ್ ಕಾಯ್ದಿರಿಸಿದೆ.

ಆರೋಪಿ ಮತ್ತು ಪ್ರಕರಣದ ತನಿಖೆ ನಡೆಸುತ್ತಿರುವ ಸಿಬಿಐ ಪರ ವಕೀಲರ ವಾದವನ್ನು ಸಿಬಿಐ ಮತ್ತು ಜಾರಿ ನಿರ್ದೇಶನಾಲಯದ (ಇ.ಡಿ) ವಿಶೇಷ ನ್ಯಾಯಾಧೀಶರು ಸೋಮವಾರ ಆಲಿಸಿದರು. ನಂತರ ತೀರ್ಪನ್ನು ಮೇ 2ರವರೆಗೆ ಕಾಯ್ದಿಸಿದರು.

ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿ ಗೆದ್ದ ಅತಿ ಕಿರಿಯ ಆಟಗಾರ • ಭಾರತದ ಎರಡನೇ ಚೆಸ್ ಪಟು

ಇತಿಹಾಸ ನಿರ್ಮಿಸಿದ ಡಿ. ಗುಕೇಶ್

ಟೊರಾಂಟೊ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಅವರು ಕ್ಯಾಂಡಿಡೇಟ್ಸ್ ಟೂರ್ನಿ ಗೆದ್ದು, ವಿಶ್ವ ಚಾಂಪಿಯನ್‌ಗೆ ಸವಾಲು ಹಾಕುವ ಅರ್ಹತೆ ಪಡೆದ ಅತಿ ಕಿರಿಯ ಆಟಗಾರ ಎಂಬ ದಾಖಲೆ ಸ್ಥಾಪಿಸಿದರು. 40 ವರ್ಷಗಳ ಹಿಂದೆ ಗ್ಯಾರಿ ಕ್ಯಾಸ್ಪರೋವ್ ಸ್ಥಾಪಿಸಿದ್ದ ದಾಖಲೆ ಮುರಿದರು.

ಭಾನುವಾರ ಸಂಜೆ ನಡೆದ 14ನೇ ಹಾಗೂ ಅಂತಿಮ ಸುತ್ತಿನಲ್ಲಿ 17 ವರ್ಷದ ಆಟಗಾರ, ಅಮೆರಿಕದ ಹಿಕಾರು ನಕಾಮುರಾ ಜೊತೆ ಅಂತಿಮ ಸುತ್ತಿನ ಪಂದ್ಯವನ್ನು 'ಡ್ರಾ' ಮಾಡಿಕೊಂಡರು. ಇದರೊಂದಿಗೆ 14 ಸುತ್ತುಗಳಿಂದ 9 ಪಾಯಿಂಟ್ಸ್ ಸಂಪಾದಿಸಿದರು. 1984ರಲ್ಲಿ ರಷ್ಯದ ಗ್ಯಾರಿ ಕ್ಯಾಸ್ಪರೋವ್ ಅವರು ಆಗಿನ ವಿಶ್ವ ಚಾಂಪಿಯನ್, ಸ್ವದೇಶದ ಅನತೋಲಿ ಕಾರ್ಪೋವ್ ಅವರೊಡನೆ ಸೆಣಸಾಡುವ ಅರ್ಹತೆ ಪಡೆದಾಗ ಅವರಿಗೆ 22 ವರ್ಷ ವಯಸ್ಸಾಗಿತ್ತು. ಆ ದಾಖಲೆಯನ್ನು ಗುಕೇಶ್ ಮುರಿದರು.

ವಿಶ್ವ ಚಾಂಪಿಯನ್ ಪಟ್ಟಕ್ಕಾಗಿ ಗುಕೇಶ್, ಈ ವರ್ಷದ ಕೊನೆಗೆ ಹಾಲಿ ಚಾಂಪಿಯನ್ ಚೀನಾದ ಡಿಂಗ್ ಲಿರೆನ್ ಜೊತೆ ಹಣಾಹಣಿ ನಡೆಸಲಿದ್ದಾರೆ.

ಇದರ ದಿನಾಂಕ ಮತ್ತು ಸ್ಥಳ ಇನ್ನೂ ನಿಗದಿಯಾಗಿಲ್ಲ. 'ತುಂಬಾ ನಿರಾಳನಾಗಿದ್ದೇನೆ. ಸಂತಸವಾಗಿದೆ' ಎಂದು ಪ್ರಶಸ್ತಿ ಖಚಿತವಾದ ನಂತರ ಗುಕೇಶ್ ಪ್ರತಿಕ್ರಿಯಿಸಿದರು.

ಈ ಗೆಲುವಿಗೆ ಗುಕೇಶ್ ಅವರು 88,500 ಯೂರೊ (ಸುಮಾರು ₹78.50 ಲಕ್ಷ) ಬಹುಮಾನ ಪಡೆದರು.

ಭಾರತದ ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಬಿಟ್ಟರೆ, ಕ್ಯಾಂಡಿಡೇಟ್ಸ್ ಗೆದ್ದ ಭಾರತದ ಎರಡನೇ ಆಟಗಾರ ಎಂಬ ಶ್ರೇಯ ಅವರದಾಯಿತು. ಆನಂದ್ 2014ರಲ್ಲಿ ಕೊನೆಯ ಬಾರಿ ಕ್ಯಾಂಡಿಡೇಟ್ಸ್‌ನಲ್ಲಿ ಜಯಶಾಲಿಯಾಗಿದ್ದರು. ಆ ವರ್ಷ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ಸೋತಿದ್ದರು.

'ಅತಿ ಕಿರಿಯ ಚಾಲೆಂಜರ್ ಆಗಿದ್ದಕ್ಕೆ ಅಭಿನಂದನೆಗಳು ಗುಕೇಶ್. ನಿನ್ನ ಸಾಧನೆಯಿಂದ ವೆಸ್ಟ್‌ಬ್ರಿಜ್ ಆನಂದ್ ಚೆಸ್ ಅಕಾಡೆಮಿಗೆ ಹೆಮ್ಮೆ ಎನಿಸಿದೆ' ಎಂದು ಆನಂದ್ 'ಎಕ್ಸ್'ನಲ್ಲಿ ಪೋಸ್ಟ್ ಹಾಕಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ,ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಸೇರಿದಂತೆ ಅನೇಕ ಗಣ್ಯರು ಅಭಿನಂದನೆ ಸಲ್ಲಿಸಿದ್ದಾರೆ.

ಕೊನೆಯ ಸುತ್ತಿನಲ್ಲಿ ಕಪ್ಪುಕಾಯಿಗಳಲ್ಲಿ ಆಡಿದ ಗುಕೇಶ್ ಅವರಿಗೆ ನಕಾಮುರಾ ಎದುರು ಕನಿಷ್ಠ 'ಡ್ರಾ' ಅಗತ್ಯವಿತ್ತು. ಆದರೆ ಎದುರಾಳಿಗೆ ಮೇಲುಗೈ ಸಾಧಿಸುವ ಯಾವ ಅವಕಾಶವನ್ನೂ ಗುಕೇಶ್ ನೀಡಲಿಲ್ಲ. ಗುಕೇಶ್ ಒಂದು ಕಾಲಾಳನ್ನು ಪಡೆದ ನಂತರ ಪರಿಸ್ಥಿತಿ ಸಮಮಾಡಿಕೊಳ್ಳಲು ನಕಾಮುರಾ ಸಮಯ ತೆಗೆದುಕೊಂಡರು. ಕೊನೆಯಲ್ಲಿ ವಿರುದ್ಧ ವರ್ಣಗಳ ಬಿಷಪ್‌ಗಳ ಜೊತೆ, ಕೆಲ ಕಾಲಾಳುಗಳು, ರೂಕ್‌ಗಳು ಉಳಿದಿದ್ದವು. 71 ನಡೆಗಳ ನಂತರ ಇಬ್ಬರೂ 'ಡ್ರಾ'ಕ್ಕೆ ಒಪ್ಪಿಕೊಂಡರು.

ಗುಕೇಶ್ 9 ಪಾಯಿಂಟ್ಸ್ ಗಳಿಸಿದ್ದರೂ, ಎಲ್ಲರ ಕಣ್ಣುಗಳು, ಅಮೆರಿಕದ ಫ್ಯಾಬಿಯಾನೊ ಕರುವಾನಾ ಮತ್ತು ರಷ್ಯಾದ ಇಯಾನ್ ನೆಪೊಮ್‌ನಿಷಿ ಪಂದ್ಯದ ಮೇಲೆ ನೆಟ್ಟಿದ್ದವು. ಈ ಪಂದ್ಯ ಗೆದ್ದ ಆಟಗಾರನಿಗೂ ಪ್ರಶಸ್ತಿಗೆ ಅವಕಾಶವಿತ್ತು.

ಕರುವಾನಾ, ಆಕ್ರಮಣದ ಆಟವಾಡಿ ನೆಪೊಮ್‌ನಿಷಿ ವಿರುದ್ಧ ಗೆಲ್ಲುವ ಅವಕಾಶವನ್ನೂ ಪಡೆದಿದ್ದರು. ಆದರೆ 39ನೇ ನಡೆಯಲ್ಲಿ ಅವರು ಎಡವಿದ್ದರಿಂದ ನೆಪೊಮ್‌ನಿಷಿ ಅವರಿಗೆ ಹೋದಜೀವ ಬಂದಂತಾಯಿತು. ಅವರಿಗೆ ಸಂಕಷ್ಟದಿಂದ ತಪ್ಪಿಸಿಕೊಳ್ಳಲು ಅವಕಾಶವಾಯಿತು. ಮತ್ತೊಂದು ಸಲವೂ ಕರುವಾನಾ ಅವರಿಗೆ ಸ್ಪಷ್ಟ ಮೇಲುಗೈ ದೊರಕಿತ್ತು.

ಆದರೆ ಅಲ್ಲೂ ಅವರು ತಪ್ಪು ಮಾಡಿದ್ದರಿಂದ ಅಂತಿಮವಾಗಿ 'ಡ್ರಾ'ಕ್ಕೆ ಒಪ್ಪಿಕೊಂಡರು.

'ನನ್ನ ನೆರವು ತಂಡದ ಎಲ್ಲರ ಹೆಸರನ್ನು ಬಹಿರಂಗಪಡಿಸಲಾರೆ. ಆದರೆ ನಾನೆಷ್ಟು ಆಭಾರಿಯಾಗಿದ್ದೇನೆಂದು ಅವರಿಗೆ ಗೊತ್ತೇ ಇದೆ' ಎಂದು ಗುಕೇಶ್ ಪಂದ್ಯದ ನಂತರ ಹೇಳಿದರು.

ಈ ಪಂದ್ಯದಲ್ಲಿ ಯಾರಾದರೊಬ್ಬರು ಗೆಲ್ಲುತ್ತಿದ್ದಲ್ಲಿ ಅವರು ಗುಕೇಶ್ ಜೊತೆ ಸಮನಾದ ಪಾಯಿಂಟ್ಸ್ ಪಡೆಯುತ್ತಿದ್ದರು. ಜಂಟಿ ಅಗ್ರಸ್ಥಾನವಾದಲ್ಲಿ ಟೈಬ್ರೇಕ್ ಮೂಲಕ ವಿಜೇತರ ನಿರ್ಧಾರವಾಗುತಿತ್ತು. ವಿದಿತ್ ಗುಜರಾತಿ ಮತ್ತು ಫ್ರಾನ್ಸ್‌ನ ಅಲಿರೇಝಾ ಫಿರೋಜ್ ಅಂತಿಮ ಸುತ್ತಿನಲ್ಲಿ ಬೇಗನೇ 'ಡ್ರಾ'ಕ್ಕೆ ಸಹಿಹಾಕಿದರು. ಭಾರತದ ಆರ್. ಪ್ರಜ್ಞಾನಂದ (7) ಅಂತಿಮ ಸುತ್ತಿನಲ್ಲಿ ಅಬಸೋವ್ ಅವರನ್ನು ಸೋಲಿಸಿ ಐದನೇ ಸ್ಥಾನ ಪಡೆದರು.

12ನೇ ವಯಸ್ಸಿನಲ್ಲೇ ಗ್ರ್ಯಾಂಡ್ ಮಾಸ್ಟರ್ ಆಗುವ ಮೂಲಕ ಚೆಸ್ ಇತಿಹಾಸದಲ್ಲಿ ಈ ಬಿರುದು ಪಡೆದ ಮೂರನೇ ಅತಿ ಕಿರಿಯ ಆಟಗಾರ ಎಂಬ ಹಿರಿಮೆ ಗುಕೇಶ್ ಅವರದು.

ಕಳೆದ ವರ್ಷ ಏಷ್ಯನ್ ಗೇಮ್ಸ್‌ನಲ್ಲಿ ಅವರು ಬೆಳ್ಳಿ ಪದಕ ಗಳಿಸಿದ್ದರು.


ಕ್ಯಾಂಡಿಡೇಟ್ಸ್ ಟೂರ್ನಿ ಪಂದ್ಯದಲ್ಲಿ ಹಿಕಾರು ನಕಾಮುರಾ ಅವರು ಡಿ.ಗುಕೇಶ್‌ಗೆ ಹಸ್ತಲಾಘವ ನೀಡಿದರು. ಪಿಟಿಐ ಚಿತ್ರ

ಓಪನ್ ವಿಭಾಗದ ಅಂತಿಮ ಸ್ಥಾನ

1. ಡಿ.ಗುಕೇಶ್ (9 ಪಾಯಿಂಟ್), 2. ನಕಾಮುರಾ, 3. ನಿಪೊಮ್‌ನಿಷಿ, 4. ಕರುವಾನ (ತಲಾ 8.5 ಪಾಯಿಂಟ್), 5. ಪ್ರಜ್ಞಾನಂದ (7), 6. ವಿದಿತ್ ಗುಜರಾತಿ (6), 7. ಅಲಿರೇಝಾ ಫಿರೋಜ್ (5), 8. ಅಬಸೋವ್ (3.5)

ಮಹಿಳಾ ವಿಭಾಗದ ಅಂತಿಮ ಸ್ಥಾನ: 1. ಝೊಂಗ್‌ಯಿ ತಾನ್, 2. ಕೋನೇರು ಹಂಪಿ. 3. ಟಿಂಗ್ಜೀ ಲೀ, 4. ವೈಶಾಲಿ ಆರ್., 5. ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ, 6. ಕ್ಯಾಥೆರಿನಾ ಲಾಗ್ನೊ, 7. ಸಲಿಮೋವಾ 8. ಅನ್ನಾ ಮುಝಿಚುಕ್.

'ಗಟ್ಟಿ ಮನೋಬಲದ ಆಟಗಾರ...'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಣ್ಣ ವಯಸ್ಸಿನಲ್ಲೇ ಗಟ್ಟಿ ಮನೋಬಲ ಹೊಂದಿರುವ ಆಟಗಾರ ಡಿ.ಗುಕೇಶ್. ಬರೇ 17ರ ವಯಸ್ಸಿನಲ್ಲಿ ಅವರು ಇಂಥ ಮಾನಸಿಕ ದೃಢತೆ ಹೊಂದಿರುವುದು ವಿಶೇಷ. ಜೊತೆಗೆ ಪಂದ್ಯದಲ್ಲಿ ಅವರು ಎಷ್ಟೇ ಹಿನ್ನಡೆಯಲ್ಲಿರಲಿ, ಗೆಲುವಿಗೆ ದಾರಿ ಕಂಡುಕೊಳ್ಳುವ ಪ್ರಯತ್ನದಲ್ಲಂತೂ ಚಾಣಾಕ್ಷ....'

ಭಾನುವಾರ ಮುಕ್ತಾಯಗೊಂಡ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಟ್ರೋಫಿ ಗೆದ್ದ ಗುಕೇಶ್ ಅವರ ಸಾಮರ್ಥ್ಯವನ್ನು ಹೀಗೆ ಬಣ್ಣಿಸಿದವರು ಗ್ರ್ಯಾಂಡ್ ಮಾಸ್ಟರ್ ಜಿ.ಎ.ಸ್ಟ್ಯಾನಿ.

'ಕೋವಿಡ್ ಸಮಯದಲ್ಲಿ ಅವರೊಡನೆ ಕೆಲವು ಆನ್‌ಲೈನ್ ಪಂದ್ಯಗಳನ್ನು ಆಡಿದ್ದೆ. ಅವರು ಸೋಲುವ ಸ್ಥಿತಿಯಲ್ಲಿದ್ದರೂ ಬಿಟ್ಟುಕೊಡುವುದಿಲ್ಲ. ತಂತ್ರಗಾರಿಕೆ ರೂಪಿಸುವ ಸಣ್ಣ ಎಳೆಯಿದ್ದರೂ ಹುಡುಕಿ ಗೆಲುವಿಗೆ ಯತ್ನಿಸುತ್ತಾರೆ. ಸಮಯದ ಒತ್ತಡದಲ್ಲೂ ವೇಗವಾಗಿ ಆಟವಾಡುವ ಚಾಣಾಕ್ಷ. ಬೇರೆ ಪ್ರಬಲ ಆಟಗಾರರು ಅಂಥ ಸ್ಥಿತಿಯಲ್ಲಿದ್ದರೆ ರಕ್ಷಣೆಗೆ ಹೋಗಿ, ಡ್ರಾಕ್ಕೆ ಯತ್ನಿಸುತ್ತಾರಷ್ಟೇ' ಎಂದು ಅವರು ಶಿವಮೊಗ್ಗದಿಂದ 'ಪ್ರಜಾವಾಣಿ'ಗೆ ತಿಳಿಸಿದರು.


ಸ್ಟ್ಯಾನಿ

'ಮೊದಲ ಸುತ್ತಿನಲ್ಲಿ ಅಲಿರೇಝಾ ಫಿರೋಜ್ ವಿರುದ್ಧ ಅವರು ಗೆಲುವಿನ ಅವಕಾಶ ವ್ಯರ್ಥಪಡಿಸಿಕೊಂಡರು. ಮರುದಿನ ವಿಶ್ರಾಂತಿ ದಿನವಾಗಿತ್ತು. ಆ ಪಂದ್ಯದ ನಂತರವೇ ತಮಗೆ ಗೆಲ್ಲುವ ವಿಶ್ವಾಸ ಮೂಡಿತ್ತು ಎಂದು ಪ್ರಶಸ್ತಿ ಗೆಲುವಿನ ನಂತರ ಗುಕೇಶ್ ಹೇಳಿದ್ದು ಅಕ್ಷರಶಃ ನಿಜ. ನಂತರ ಅವರು ಟೂರ್ನಿಯಲ್ಲಿ ಹಿನ್ನಡೆ ಅನುಭವಿಸಲಿಲ್ಲ. ಬಹುತೇಕ ಸುತ್ತುಗಳಲ್ಲಿ ಅಗ್ರಸ್ಥಾನ ಹಂಚಿಕೊಂಡಿದ್ದರು' ಎಂದರು.

ಹಾಲಿ ವಿಶ್ವ ಚಾಂಪಿಯನ್ ಡಿಂಗ್ ಲಿರೆನ್ ಮೊದಲಿನ ಲಯದಲ್ಲಿ ಇಲ್ಲ. ಈ ವರ್ಷ ಕೆಲವು ಟೂರ್ನಿಗಳಲ್ಲಿ ನಿರಾಸೆ ಕಂಡಿದ್ದಾರೆ. ಹೀಗಾಗಿ ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲೂ ಗುಕೇಶ್ ಅವರಿಗೆ ಚಾಂಪಿಯನ್ ಆಗಲು ಉತ್ತಮ ಅವಕಾಶವಿದೆ.

ವಿಶ್ವನಾಥನ್ ಆನಂದ್, ತಮ್ಮ ಮತ್ತು ಮುಂದಿನ ತಲೆಮಾರನ್ನು ಪ್ರಭಾವಿಸಿದಂತೆ, ಗುಕೇಶ್ ಅವರ ಗೆಲುವು ಸಹ ಎಳೆಯ ಆಟಗಾರರಿಗೆ ಪ್ರೇರಣೆ ಮೂಡಿಸಬಲ್ಲದು. ಭಾರತದಲ್ಲಿ ಚೆಸ್ ಕ್ರಾಂತಿ ಮುಂದುವರಿಯಲು ಈ ಗೆಲುವು ನೆರವಾಗಲಿದೆ ಎಂದು ಹೇಳಿದರು.

ಫ್ಯಾಬಿಯಾನೊ ಕರುವಾನಾ ಅವರು ಗೆಲುವಿನ ಸ್ಥಿತಿಯಲ್ಲಿದ್ದು 2–3 ಸಲ ತಪ್ಪೆಸಗಿ ಕೊನೆಗೆ ಡ್ರಾ ಮಾಡಿಕೊಂಡಿದ್ದೂ ಗುಕೇಶ್‌ಗೆ ನೆರವಾಯಿತು. ದುರದೃಷ್ಟವಶಾತ್ ಅವರಿಗೆ ಕೊನೆಯ ಸುತ್ತಿನಲ್ಲಿ ಹೀಗಾಯಿತು ಎಂದರು. 'ಈ ಸಲದ ಕ್ಯಾಂಡಿಡೇಟ್ಸ್ ಟೂರ್ನಿ ಅತಿ ಪ್ರಬಲವಾಗಿತ್ತು. ಕೊನೆಯ ಸುತ್ತು ಇದ್ದಾಗ ನಾಲ್ಕು ಮಂದಿಗೆ (ಗುಕೇಶ್, ನೆಪೊಮ್‌ನಿಷಿ, ಕರುವಾನಾ, ನಕಾಮುರಾ) ಗೆಲ್ಲುವ ಅವಕಾಶವಿತ್ತು. ಸಾಮಾನ್ಯವಾಗಿ ಇಂಥ ದೊಡ್ಡ ಟೂರ್ನಿಯಲ್ಲಿ ಕೊನೆಯ ಕೆಲವು ಸುತ್ತುಗಳಿದ್ದಾಗ ಒಬ್ಬಿಬ್ಬರ ನಡುವೆ ಪೈಪೋಟಿ ಇರುತ್ತದೆ' ಎಂದರು.

ಗುಕೇಶ್‌ಗೆ ಪ್ರೇರಣೆ

ಚೆನ್ನೈ (ಪಿಟಿಐ): ವಿಶ್ವ ಚಾಂಪಿಯನ್ ಪಟ್ಟಕ್ಕಾಗಿ ಮ್ಯಾಗ್ನಸ್ ಕಾರ್ಲ್‌ಸನ್ ಮತ್ತು ವಿಶ್ವನಾಥನ್ ಆನಂದ್ ನಡುವಣ 2013ರಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್ ಫೈನಲ್ ಪಂದ್ಯವು, ಚೆಸ್ ಆಟದಲ್ಲಿ ಆಸಕ್ತಿ ತಳೆಯಲು ಡಿ.ಗುಕೇಶ್ ಅವರಿಗೆ ಪ್ರೇರಣೆ ನೀಡಿತು.

ಅವರ ತಂದೆ ಡಾ.ರಜನೀಕಾಂತ್ ಅವರು ಇಎನ್‌ಟಿ ತಜ್ಞ. ತಾಯಿ ಪದ್ಮಾ ಕುಮಾರಿ ಅವರು ಮೈಕ್ರೊಬಯಾಲಜಿಸ್ಟ್.

'ಅವನು (ಗುಕೇಶ್) ವಿಶ್ವ ಚಾಂಪಿಯನ್‌ಷಿಪ್‌ಗಾಗಿ ಎದುರುನೋಡುತ್ತಿದ್ದೇವೆ. ಚೆಸ್‌ನಲ್ಲೇ ಅತಿ ದೊಡ್ಡ ಸ್ಪರ್ಧೆ. ಆದರೆ ಈಗಲೇ ಆ ಬಗ್ಗೆ ಯೋಚಿಸುವುದಿಲ್ಲ' ಎಂದು ಸೋಮವಾರ ಬೆಳಗಿನ ಜಾವ ವಿಷಯ ತಿಳಿದ ತಕ್ಷಣ ಪದ್ಮಾ ಪ್ರತಿಕ್ರಿಯಿಸಿದರು.

ಚೆಸ್‌ಗಾಗಿ ಗುಕೇಶ್ 4ನೇ ತರಗತಿ ನಂತರ ಶಾಲೆಗೆ ಹೋಗುವುದನ್ನೇ ಬಿಟ್ಟರು.

ಹಂಪಿಗೆ ಎರಡನೇ ಸ್ಥಾನ; ವೈಶಾಲಿಗೆ ಐದನೇ ಜಯ

ಟೊರಾಂಟೊ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ ಅವರು ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಮಹಿಳಾ ವಿಭಾಗದಲ್ಲಿ ಎರಡನೇ ಸ್ಥಾನ ಪಡೆದರು. ಹಂಪಿ, ಈ ಟೂರ್ನಿಯಲ್ಲಿ ಬಹುತೇಕ ಅವಧಿಯಲ್ಲಿ ಜಂಟಿ ಅಗ್ರಸ್ಥಾನ ಹಂಚಿಕೊಂಡಿದ್ದ ಚೀನಾದ ಟಿಂಗ್ಜೀ ಲೀ ಅವರನ್ನು ಕೊನೆ (14ನೇ) ಸುತ್ತಿನಲ್ಲಿ ಸೋಲಿಸಿದರು.

ನಿರೀಕ್ಷೆಯಂತೆ ಝೊಂಗ್‌ಯಿ ತಾನ್ (ಚೀನಾ) ಅವರು ಅಂತಿಮ ಸುತ್ತಿನಲ್ಲಿ ಉಕ್ರೇನ್‌ನ ಅನ್ನಾ ಮುಝಿಚುಕ್ ಜೊತೆ 'ಡ್ರಾ' ಮಾಡಿಕೊಂಡು ಪ್ರಶಸ್ತಿ ಗೆದ್ದುಕೊಂಡರು. ಅವರು 9 ಪಾಯಿಂಟ್ಸ್ ಸಂಗ್ರಹಿಸಿದರು. ಹಂಪಿ, ಟಿಂಗ್ಜೀ ಮತ್ತು ವೈಶಾಲಿ ಅವರು ತಲಾ 8.5 ಪಾಯಿಂಟ್ಸ್ ಸಂಗ್ರಹಿಸಿದರೂ ಟೈಬ್ರೇಕ್ ಆಧಾರದಲ್ಲಿ ಹಂಪಿ ಎರಡನೇ ಸ್ಥಾನಕ್ಕೇರಿದರು. ಟಿಂಗ್ಜೀ ಮೂರನೇ, ವೈಶಾಲಿ ನಾಲ್ಕನೇ ಸ್ಥಾನ ಪಡೆದರು. ಇಲ್ಲಿ ಗೆಲ್ಲುವ ಮೂಲಕ ಝೊಂಗ್‌ಯಿ ಅವರು ವಿಶ್ವಚಾಂಪಿಯನ್, ಸ್ವದೇಶದ ಜು ವೆನ್‌ಜುನ್ ಅವರಿಗೆ ಸವಾಲು ಹಾಕುವ ಅರ್ಹತೆ ಗಿಟ್ಟಿಸಿಕೊಂಡರು.


ಕೋನೇರು ಹಂಪಿ

ವೈಶಾಲಿಗೆ ಐದನೇ ಜಯ: ಭಾರತದ ಆರ್. ವೈಶಾಲಿ ಟೂರ್ನಿಯಲ್ಲಿ ಸತತ ಐದನೇ ಗೆಲುವು ದಾಖಲಿಸಿದರು. ಅಂತಿಮ ಸುತ್ತಿನಲ್ಲಿ ಅವರು ರಷ್ಯಾದ ಕ್ಯಾಥೆರಿನಾ ಲಾಗ್ನೊ ಅವರನ್ನು ಸೋಲಿಸಿದರು. ಇನ್ನೊಂದು ಪಂದ್ಯದಲ್ಲಿ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ (7) ಅವರು ಬಲ್ಗೇರಿಯಾದ ನುರ್ಗ್ಯುಲ್ ಸಲಿಮೋವಾ ಜೊತೆ ಡ್ರಾ ಮಾಡಿಕೊಂಡರು.